PEER - REVIEWED JOURNAL
ISSN: 2320-9941

ಸಂಪುಟ - 9, ಸಂಚಿಕೆ - 2

VOLUME: 09, ISSUE: 02

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

Photo credit: thebookerprizes.com

ಕನ್ನಡದ ಲೇಖಕಿ ಎಸ್.ಕೆ. ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು(೧೨ ಕತೆಗಳು) ಕೃತಿಯನ್ನು ದೀಪಾ ಭಸ್ತಿ ಅವರು Heart Lamp ಎಂದು ಅನುವಾದಿಸಿದ ಕೃತಿಗೆ ೨೦೨೫ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರೆತಿದೆ.

HTTPS://PRATHISPANDHA.WORDPRESS.COM/

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 01

ಸಂಪುಟ: 09, ಸಂಚಿಕೆ 02, ಜೂನ್ 2025

VOLUME: 09, ISSUE: 02, JUNE 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
Govt. First Grade College, Tipatur
Tumkur District, Karnataka

ಡಾ. ದತ್ತಾತ್ರೆಯ ಎಂ
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ ಜಿಲ್ಲೆ, ಕರ್ನಾಟಕ

Dr. Dattatreya M.
Associate Professor, English Department
Kuvempu University, Jnanasahyadri,
Shankaraghatta
Shivamogga Dist, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti College Autonomous, K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಅಭಿನಂದನೆಗಳು

ಪೃಥ್ವಿ ಸೂರಿಯವರು ಇದುವರೆಗೂ ನಮ್ಮ ಪತ್ರಿಕೆಯನ್ನು ತಾಂತ್ರಿಕವಾಗಿ ನಿರ್ವಹಿಸಿದವರು. ಇವರಿಗೆ ಪತ್ರಿಕೆಯ ಕಡೆಯಿಂದ ಧನ್ಯವಾದಗಳನ್ನು ಸಲ್ಲಿಸುತ್ತಾ, ಈ ಪತ್ರಿಕೆಯಲ್ಲಿ ಕಾನೂನು ಸಲಹೆಗಾರರಾಗಿ ಮುಂದುವರೆಯುತ್ತಾರೆಂದು ತಿಳಿಸುತ್ತಾ ಶ್ರೀಯುತರಿಗೆ ಗೌರವ ಪೂರ್ವಕ ಅಭಿನಂದನೆಗಳನ್ನು ಪತ್ರಿಕೆಯ ವತಿಯಿಂದ ಸಲ್ಲಿಸಲಾಗುತ್ತಿದೆ.

ಸಂಪಾದಕೀಯ...

ಮಾನವ ಜೀವ ಸದಾ ತನ್ನನ್ನು ತಾನು ಅಮರವಾಗಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತದೆ. ಆದಿ ಮಾನವರು ತಾವು ಬಾಳಿದ ಬದುಕಿದ ಚಿತ್ರಣಗಳನ್ನು ಬೆಟ್ಟ, ಗುಹೆ, ಗುಡ್ಡಗಳ ಮೇಲೆ ದಾಖಲಿಸಿರುತ್ತಾರೆ.

ಕಾಗದದ ಮೇಲೆ ಅಕ್ಷರಗಳನ್ನು ಮೂಡಿಸುವುದು ನಂತರದ ಪ್ರಯತ್ನ. ನೆನಪುಗಳು ಕಲಾ ಸ್ಪಂದನದ ಮೂಲಾಧಾರ. ಕವಿಗಳು ಕತೆಗಾರರು ನೆನಪುಗಳನ್ನು ದಾಖಲಿಸಲು ಸೃಜನಶೀಲ ಮಾರ್ಗಗಳನ್ನು ಅನ್ವೇಷಿಸುತ್ತಲೇ ಇರುತ್ತಾರೆ. ಶೇಕ್ಸ್‌ಪಿಯರ್ ತನ್ನ ಪ್ರಿಯತಮೆಯ ಸೌಂದರ್ಯವನ್ನಾಗಲೀ, ಗೆಳೆಯನ ಸ್ನೇಹವನ್ನಾಗಲೀ ಅಮರವಾಗಿಸಲು ಕಾವ್ಯದ ಆಸರೆ ಪಡೆಯುತ್ತಾನೆ.

ಸಾವನ್ನು ನಿರಾಕರಿಸುವ ಮತ್ತು ಅದನ್ನು ಗೆಲ್ಲುವ ಪ್ರಯತ್ನವಾಗಿ ಬಾಳ್ವೆಯ ನೆನಪುಗಳು, ಚಿತ್ರಗಳು, ಅಕ್ಷರಗಳೆಂಬ ಸಾಂಸ್ಕೃತಿಕ ಚಹರೆಗಳಾಗಿ ಜನಸಮೂಹದ ಪಟಲದಲ್ಲಿ ಅಚ್ಚಾಗುತ್ತವೆ. ಅಕ್ಷರದ ಮೂಲಕ ಪ್ರಸಾರವಾಗುವ ಈ ನೆನಪಿನ ಬೀಜಗಳು ನಮ್ಮ ನಾಳೆಗಳನ್ನು ರೂಪಿಸುತ್ತವೆ. ಸಮಾಜದ ಲೋಪದೋಷಗಳನ್ನು ಸ್ಥಿತ್ಯಂತರಗೊಳಿಸುತ್ತವೆ.

ಬಾನು ಮುಷ್ತಾಕ್ ಅವರ ಹಸೀನ ಮತ್ತು ಇತರ ಕತೆಗಳು ಸಂಕಲನವು Heart lamp ಎಂಬ ಹೆಸರಿನಲ್ಲಿ ದೀಪಾ ಭಾಸ್ತಿ ಅವರಿಂದ ಇಂಗ್ಲಿಷ್‌ಗೆ ಅನುವಾದಗೊಂಡಿದೆ. ಈ ಕೃತಿಯು ದಾಖಲು ಮಾಡುತ್ತಿರುವ ನೆನಪುಗಳು ಕ್ರಾಂತಿಕಾರಿಯಾಗಿವೆ. ಹಿಜಾಬ್ ಪ್ರಕರಣದಲ್ಲಿ ಸಮೂಹದ ಮನೋಭಿತ್ತಿಯಲ್ಲಿ ದಾಖಲಾದ ಮುಸ್ಲಿಂ ಹುಡುಗಿಯ ನೆನಪು ಆಶಾದಾಯಕವಾಗಿರಲಿಲ್ಲ. ವಸ್ತ್ರಸಂಹಿತೆಯ ಧಾರ್ಮಿಕ ಒತ್ತಡವನ್ನು ನಿಭಾಯಿಸಲಾಗದೆ, ಶಿಕ್ಷಣವನ್ನು ತೊರೆಯುವ, ಪ್ರಜೆಯಾಗಿ ಸಾಮಾಜಿಕ ಜವಾಬ್ದಾರಿಯನ್ನು ಹೊರಲು ಅಶಕ್ತಳೆಂಬಂತೆ ಬಿಂಬಿತವಾದ ಮುಸ್ಲಿಂ ಮಹಿಳೆಯ ನೆನಪು ಕ್ರಮೇಣ ಸಮಾಜಕ್ಕೆ ಕಂಟಕವಾಗಬಹುದಿತ್ತು. ಆದರೆ, ಬಾನು ಮುಷ್ತಾಕ್ ಅವರ Heart lamp ಕೃತಿಗೆ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ

ಮನ್ನಣೆ ದೊರೆತಿರುವ ಹಿನ್ನೆಲೆಯು ಇಂತಹ ನಕಾರಾತ್ಮಕಗಳನ್ನು ಅಳಿಸುವಲ್ಲಿ ಯಶಸ್ವಿಯಾಗಿದೆ.

ಸಾಮೂಹಿಕ ಮಾಧ್ಯಮಗಳಲ್ಲಿ ಬುರ್ಖಾದ ಮುಚ್ಚಳವಿಲ್ಲದೆ, ಸಹಜವಾಗಿ ನಗುನಗುತ್ತಾ ಮಾತಾಡುವ ಬಾನು ಮುಷ್ತಾಕ್, ಇಂಗ್ಲಿಷ್ ಭಾಷೆಯ ನೆಲಗಳಲ್ಲಿ ಕನ್ನಡದ ಸಾಂಸ್ಕೃತಿಕ ಚಹರೆಗಳನ್ನು ಬಿತ್ತುತ್ತಾ ಸಾಗುತ್ತಿರುವ 'ಹಸೀನ ಮತ್ತು ಇತರ ಕತೆಗಳು' ಮುಸ್ಲಿಂ ಮಹಿಳೆಯ Socio - political narrative ಅನ್ನು ಬದಲಾಯಿಸುವಷ್ಟು ಶಕ್ತವಾಗಿದೆ.

ಮುಸ್ಲಿಂ ಹೆಣ್ಣು ಮಕ್ಕಳಿಗೆ ಬಾನು ಮುಷ್ತಾಕ್ ಒಂದು ಸಜೀವ, ಚೇತೋಹಾರಿ ಸಕಾರಾತ್ಮಕ ಮಾದರಿಯಾಗಿದ್ದಾರೆ. ಈ ಪುಸ್ತಕದ ಕತೆಗಳ ಓದು, ವ್ಯಾಖ್ಯಾನ ಮತ್ತು ಚರ್ಚೆಗಳು ನೆಲಹಂತದಲ್ಲಿ ಸಮುದಾಯಗಳೊಂದಿಗೆ ವಿಸ್ತರಿಸುವಂತಾದರೆ ಬೀಜ ಬಿತ್ತನೆಯ ಕಾರ್ಯ ಆರಂಭವಾದಂತೆ..

ಡಾ. ಸರಸ್ವತಿ ಕೆ. ಬಿ
ಸಂಪಾದಕರು

ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ

1. **ಎದೆಯ ಹಣತೆಗೆ ಒಲಿದ 'ಬೂಕರ್' ಬೆಳಕು**
~ ಡಾ. ರವಿಶಂಕರ್ ಎ.ಕೆ **1–15**

2. ಕವಿತೆ : ಮೋಕ್ಷದ ನಿರೀಕ್ಷೆಯಲ್ಲಿ ಅವಳು
~ ನಳಿನ **16–17**

3. ಹಟ್ಟಿಯಂಗಡಿ ನಾರಾಯಣರಾಯರ ಆಂಗ್ಲ ಕವಿತಾವಳಿ –
ಒಂದು ವಿಮರ್ಶಾತ್ಮಕ ನೋಟ
~ ಡಾ. ಜಯಲಲಿತಾ **18–36**

4. ಅಮರೇಶ ನುಗಡೋಣಿ ಅವರ ಕತೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು
~ ಡಾ. ಸುರೇಶ .ಎನ್ **37–44**

5. ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕ: ಒಂದು ಸಂಶೋಧನಾ ವರದಿ
~ ಡಾ. ವಿಜಯ ಯು. ಪಾಟೀಲ ~ ಡಾ. ಕೋಮಲಾ ಎಂ **45–54**

6. ಅನುವಾದದ ಅಗತ್ಯ
~ ಗಗನ .ಜೆ **55–63**

7. ಗತಕಾಲದ ಅಭಿಮಾನ ಮೋರಿಗೆರೆಯ ಶಾಸನ
~ ಶ್ರೀ ರಘುಪ್ರಸಾದ ಟಿ **64–73**

8. ತಲ್ಲಣಿಸುವ ಮನಸ್ಸಿಗೆ ಕನಕದಾಸರ ಭಕ್ತಿ–ಸಾಂತ್ವನ
~ ಡಾ. ರಂಗಸ್ವಾಮಿ ಹೆಚ್ **74–84**

9. ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು
ಒಂದು ಸಮಾಜಶಾಸ್ತ್ರೀಯ ಅಧ್ಯಯನ ~ ಸಂದೀಪ ಆರ್ **85–95**

10. ಕನ್ನಡ ಸಾಹಿತ್ಯದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಪರಿಕಲ್ಪನೆ
~ ಮಂಜುನಾಥ .ಬಿ **96–104**

11. ಕನ್ನಡ ಸಾಹಿತ್ಯದಲ್ಲಿ ದಾರ್ಶನಿಕತೆಯ ಒಳಹೊಕ್ಕಿರುವ ಕವಿ ಕುವೆಂಪು
~ ಕೆ.ಎನ್. ನಂದೀಶ **105–113**

12. ನಾಟ್ಯಮಯೂರಿ : ಹೊಯ್ಸಳೇಶ್ವರ ವಿಷ್ಣುವರ್ಧನನ ಪಟ್ಟದರಸಿ
ಶಾಂತಲೆಯ ಕಥನ ~ ಡಾ. ಕಿರಣ ವಲ್ಲೇಪುರೆ **106–119**

13. ಕನ್ನಡದ ವಿಶಿಷ್ಟ ಮಹಿಳಾ ಪತ್ರಿಕೆ ವೀರಮಾತೆ: ಒಂದು ವಿಶ್ಲೇಷಣೆ
~ ರೂಪ ಕೆ. ~ಪ್ರೊ. ನಿರಂಜನ **120–131**

14. 'ಯುಗ ಪ್ರವರ್ತಕ ಕವಿ ಹರಿಹರನ ರಗಳೆಗಳು ಮತ್ತು ಮಹಾಕವಿ ಸೇಕ್ಕಿಲಾರ್ ಅವರ ಪೆರಿಯ ಪುರಾಣಂ' – ಒಂದು ತೌಲನಿಕ ಅಧ್ಯಯನ

~ ಇಂದಿರಾ ಶರಣ ಜಮ್ಮಲದಿನ್ನಿ **132–138**

15. ತತ್ವಪದಗಳಲ್ಲಿ ಬಹುತ್ವ

~ ಡಾ. ಸಂಗನಗೌಡ ಹಿರೇಗೌಡ **139–147**

16. ChatGPT : A creative tool or a threat to creativity ?

~ Dr. Maithri Bhat 148-155

17. The Shifting Sands of Culture: Identity Formation in the Age of Globalization 156-178

~ Dr. Kudrathunissa Sheikh. ~ Ms. Farheen Sheikh

ವಿಶೇಷ ಲೇಖನ :

ಎದೆಯ ಹಣತೆಗೆ ಒಲಿದ 'ಬೂಕರ್' ಬೆಳಕು

¤ ಡಾ. ರವಿಶಂಕರ್ ಎ.ಕೆ.

ಒಂದು ಕಥೆಯು ಸಮಾಜದ ನೋವುಗಳನ್ನು ಪ್ರತಿನಿಧಿಸುತ್ತಿದ್ದರೆ, ಅದು ಕಾಲ–ದೇಶಗಳನ್ನು ಕಳಚಿ 'ನೋವುಗಳ ನಡುವೆ ನುಡಿಯುತ್ತದೆ.' ಸುಖವು ಏಕಮುಖವಾದುದಲ್ಲ, ನೋವು ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಪರಿಧಿಯಾಚೆಯ ಪರಿಣಾಮ.

ಭಾರತವು ಯುದ್ಧವನ್ನು ಕುರಿತು ಮಾತನಾಡುವಾಗ ದೇಶ ಮತ್ತು ಧರ್ಮಗಳು ನಿಧಾನವಾಗಿ ಬಿಸಿಯುಸಿರಂತೆ ಭಯಗೊಂಡಿವೆ. ಹಿಂದೂ – ಮುಸ್ಲಿಂ ಜೊತೆಗೆ ಭಾರತ – ಪಾಕಿಸ್ತಾನಗಳ ಗೋಡೆಗಳು ಯುದ್ಧವನ್ನು ಕುರಿತು ಮಾತನಾಡುತ್ತಿವೆ. ಈ ಸಂದರ್ಭದಲ್ಲಿ ಪಾಕಿಸ್ತಾನವು ಉಗ್ರರಿಗೆ ಬೆಂಬಲಿಸುತ್ತಿದೆ. ನಮ್ಮ ಭಾರತದ ಹೆಣ್ಣುಮಕ್ಕಳ ಸಿಂಧೂರವನ್ನೇ ಅಳಿಸಿದರು ಎಂಬ ಆತಂಕದಲ್ಲಿ ಭಾರತದಲ್ಲಿ ಪಾಕಿಸ್ತಾನದವರಿಗೆ ಅವಕಾಶವಿಲ್ಲವೆಂಬ ವಾಪಸ್ಸು ಹೋಗಲು ಸೂಚನೆ ಹೊರಡಿಸಿತು. ಈ ಸಂದರ್ಭದಲ್ಲಿ ಪಾಕಿಸ್ತಾನದಿಂದ ಮದುವೆಯಾಗಿ ಬಂದವರು ಪಾಕ್ ಪ್ರೀತಿಯನ್ನು ಕಳೆದುಕೊಳ್ಳಬೇಕಾಯಿತು. ಕೆಲವರು, ಪ್ರತಿನಿಧಿತ್ವವಿಲ್ಲದೆ ವಾಪಸ್ಸಾಗಬೇಕಾಯಿತು. ಇದೇ ಸಂದರ್ಭದಲ್ಲಿ ಭಾರತವು ಉಗ್ರ ನೆಲೆಗಳನ್ನು ಧ್ವಂಸಗೊಳಿಸಿತು. ಇದಕ್ಕೆ ಪಾಕಿಸ್ತಾನವು ಬೆಂಬಲ ನೀಡದೆ, ಉಗ್ರಪರ ಚಿಂತನೆಗಳ ಮೂಲಕ ವಿಶ್ವದ ಕೆಂಗಣ್ಣಿಗೆ ಗುರಿಯಾಯಿತು. ಈ ಸಂದರ್ಭದಲ್ಲಿ ಹಸನ್ ಮಂಟೋ ಅವರ ಕಥೆಗಳು ನೆನಪಾಗುತ್ತವೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಭಾರತ ಮತ್ತು ಪಾಕಿಸ್ತಾನಗಳ ವಿಭಾಗವು ಅತ್ಯಂತ ಗಂಭೀರವಾಗಿ ನಡೆಯಿತು. ಗಡಿಯಲ್ಲಿ ಪರಸ್ಪರ ತಮ್ಮ ದೇಶಗಳಿಗೆ ವಾಪಸ್ಸಾಗಲು ನಿರಾಕರಣೆ, ನೋವು, ಸಾವು ಬಹಳಷ್ಟು ನಡೆದವು. ಆದರೆ, ಇದೇ ಸಂದರ್ಭದಲ್ಲಿ ಇದನ್ನು ಸೂಕ್ಷ್ಮವಾಗಿ ಗಮನಿಸಿದ, ಅನುಭವಿಸಿದ ಲೇಖಕ ಮಂಟೋ ಕಥೆಗಳನ್ನು ನಿದರ್ಶನದಂತೆ

ಹಿಡಿದಿಟ್ಟರು.

ಈ ಮೇಲ್ಕಂಡ ವಿಚಾರವು ಈ ಲೇಖನಕ್ಕೆ ಸೂಕ್ತವಲ್ಲದಿದ್ದರೂ ಕಾರ್ಯಕಾರಣ ಸಂಬಂಧವಂತೂ ಇದೆ. ಯುದ್ಧ ಎಂದರೇನು? ಎಂದು ಯೋಚಿಸುವಾಗಲೇ ಇಂಗ್ಲೆಂಡ್‌ನಲ್ಲಿ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯೊಂದು ಘೋಷಣೆಯಾಗುತ್ತದೆ. ಇದು ವಿಶ್ವವೇ ತಿರುಗಿ ನೋಡುವ ಹಾಗೂ ಪ್ರಪಂಚಕ್ಕೆ ಮೌಲ್ಯಯುತ ಕಥೆಯೊಂದನ್ನು ನೀಡುವ ಸಾಹಿತ್ಯಕ್ಕೆ ನೀಡುವ ಗೌರವವಿದು. ನೊಬೆಲ್, ಜ್ಞಾನಪೀಠಗಳಿಗೆ ತೃಪ್ತಗೊಂಡ ಭಾರತಕ್ಕೆ ನಾಲ್ಕನೆಯ ಬಾರಿಗೆ ಬೂಕರ್ ಪ್ರಶಸ್ತಿ ಒಲಿಯುತ್ತದೆ. ಇದು ವಿಶೇಷವೇನಲ್ಲ. ನಮ್ಮಲ್ಲಿ ಅಂತಹ ಗಂಭೀರವಾದ ಸಾಹಿತ್ಯವೇ ಇದೆ. ಆದರೆ, ಮೊದಲ ಬಾರಿಗೆ ಕನ್ನಡ ಸಾಹಿತ್ಯಕ್ಕೆ ಒಲಿದ ಬೂಕರ್ ವಿಭಿನ್ನ ಆಲೋಚನೆಗಳಿಗೆ ಕಾರಣವಾಗಿದೆ. ಭಾರತದಲ್ಲಿ ಪಾಕಿಸ್ತಾನ ಹಾಗೂ ಮುಸ್ಲಿಂ ಕುರಿತು ವಿಭಿನ್ನವಾಗಿ ಆಲೋಚಿಸುವ ಸಂದರ್ಭದಲ್ಲಿಯೇ ಮುಸ್ಲಿಂ ಸಮುದಾಯದ ನೋವು–ತಲ್ಲಣಗಳನ್ನು, ಹೆಣ್ಣಿನ ಶೋಷಣೆಗಳನ್ನು ಭಾರತೀಯ ಸಂಸ್ಕೃತಿಯೊಂದಿಗೆ ಬಂಡಾಯಗೊಳಿಸಿದ ಬಾನು ಮುಸ್ತಾಕ್ ಅವರ 25 ವರ್ಷಗಳ ಹಿಂದಿನ ಕಥೆಗಳಿಗೆ ಗೌರವ ದೊರೆಯಿತು. ಹಸೀನಾ ಮತ್ತು ಇತರ ಕಥೆಗಳು ಎಂಬ 12 ಕಥೆಗಳನ್ನು 'ಎದೆಯ ಹಣತೆ' ಎಂಬುದಾಗಿ ದೀಪಾ ಭಾಸ್ತಿ ಅವರು ಇಂಗ್ಲಿಷ್‌ಗೆ ಅನುವಾದಿಸುತ್ತಾರೆ. ಈ ಅನುವಾದ ಕೃತಿಯು ಬೂಕರ್ ಪ್ರಶಸ್ತಿಗೆ ಸಲ್ಲಿಕೆಯಾಗಿ ಅಂತಿಮ ಸುತ್ತಿಗೆ ಬಂದಾಗ ಕನ್ನಡದಲ್ಲಿ ಮರು ಮುದ್ರಣ, ಮರು ಓದುಗಳು ಪ್ರಾರಂಭವಾಗಿದ್ದವು. ಯುದ್ಧದ ಬಿಸಿಯಲ್ಲಿಯೇ ಭಾರತವು ಮುಸ್ಲಿಂ ಸಮುದಾಯದ ಒಳ ತಲ್ಲಣಗಳನ್ನು ಅರಿಯುವ ಮತ್ತೊಂದು ವೇದಿಕೆ ಸಿದ್ಧವಾಯಿತು. ಇದು ಸರಳ ವಿಚಾರವಾದರೂ, ಭಾರತದಂತಹ ಬಹುಧರ್ಮೀಯ ದೇಶದಲ್ಲಿ ತಲ್ಲಣಗಳು ಮೂಡುವಾಗ ಧರ್ಮ ಚಿಕಿತ್ಸೆಯು ಹೀಗೂ ಇರಬಹುದೇ ಎನಿಸುತ್ತದೆ.

ಈಗ ಕೃತಿಯ ಮೂಲಕ, ಬೂಕರ್ ಎಂಬ ಅಂತಾರಾಷ್ಟ್ರೀಯ ಗೌರವದೊಂದಿಗೆ ಯುದ್ಧವನ್ನು ನೋಡುವ ಹೊಸ ಕ್ರಮಗಳು ಎರಡೂ ಧರ್ಮಕ್ಕೂ ಲಭಿಸುವ ಮಾರ್ಗವಾಗಿ ರೂಪುತಳೆಯುತ್ತವೆ. ಮೊದಲಿಗೆ ಬಾನು ಮುಸ್ತಾಕ್ ಅವರ ಕುರಿತು ಒಂದೆರಡು ವಿಚಾರಗಳನ್ನು ಗಮನಿಸೋಣ.

ಬಾನು ಮುಸ್ತಾಕ್ ಮೂಲತಃ ಕರ್ನಾಟಕದ ಹಾಸನದವರು. ಮುಸ್ಲಿಂ ಕುಟುಂಬದಲ್ಲಿ ಜನಿಸಿ, ಅಂದಿನ ಸಮಾಜದ ಎಲ್ಲ ಸಮಸ್ಯೆಗಳನ್ನು ಎದುರಿಸಿ, ತಂದೆಯ ಸಹಾಯದಿಂದ ವಿದ್ಯಾಭ್ಯಾಸ ಮುಂದುವರೆಸಿದವರು. ನ್ಯಾಯಾಧೀಶರಾಗಿ, ಬಂಡಾಯ ಚಳವಳಿಯ ಹೋರಾಟಗಾರ್ತಿಯಾಗಿ ಗುರ್ತಿಸಿಕೊಂಡವರು. ಲಂಕೇಶ್ ಪತ್ರಿಕೆಯ

ಮೂಲಕ ಹೊಸ ಚಿಂತನೆಯ ಬರಹಗಳ ಛಾಪು ಮೂಡಿಸಿದವರು. ಮೂಲಭೂತವಾದ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡುವ ಇವರ ಚಳುವಳಿಯು ಅತ್ಯಂತ ಗಂಭೀರವಾದುದು. ಆರು ಕಥಾ ಸಂಕಲನಗಳು, ಒಂದು ಕಾದಂಬರಿ, ಪ್ರಬಂಧ, ಕವನ ಸಂಕಲನದ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರ 'ಕರಿ ನಾಗರಗಳು' ಎಂಬ ಕಥೆಯನ್ನು 2003ರಲ್ಲಿ ಗಿರೀಶ್ ಕಾಸರವಳ್ಳಿಯವರು ಹಸೀನಾ ಎಂಬ ಹೆಸರಿನಲ್ಲಿ ಚಲನಚಿತ್ರವಾಗಿ ನಿರ್ದೇಶನ ಮಾಡಿದರು. ಈ ಚಿತ್ರದಲ್ಲಿ ಕನ್ನಡ ಚಲನಚಿತ್ರ ನಟಿ ತಾರಾ ಅವರ ಅಭಿನಯಕ್ಕೆ ಅತ್ಯುತ್ತಮ ನಟಿ ರಾಷ್ಟ್ರ ಪ್ರಶಸ್ತಿ ಲಭಿಸಿತು. ದಕ್ಷಿಣ ಭಾರತದ ಮುಸ್ಲಿಂ ಹೆಣ್ಣು ಮಕ್ಕಳ ಬದುಕನ್ನು ಕೇಂದ್ರೀಕರಿಸಿ ಬರೆದ ಇವರ ಈ ಕಥೆಗಳು ಭಾರತದ ಎಲ್ಲಾ ಹೆಣ್ಣು ಮಕ್ಕಳ ಶೋಷಣೆಯ ನೈಜ ಸ್ಥಿತಿಯನ್ನು ಅನಾವರಣ ಮಾಡುತ್ತವೆ.

ಬಾನು ಮುಷ್ತಾಕ್ ಅವರು "ನನ್ನ ಪಾಲಿಗೆ ಕಥೆ ಎಂದರೆ ಮನೋಲೋಕದ ಮಾಯಾನಗರಿ. ಸಪ್ತ ಸಾಗರದಾಳದಿಂದ ಹೆಕ್ಕುವ ಮುತ್ತು ರತ್ನ ಹವಳಗಳಂತೆ; ಮಿಡಿಯುವ ಭಾವಗಳ ಆಪ್ತ ಸಂವಾದ." ಎಂಬ ನಿಲುವಿನಿಂದ ಕಥೆಗಳನ್ನು ರಚಿಸುತ್ತಾ ಇಂದು ವಿಶ್ವಮಾನ್ಯ ಕಥನಕ್ಕೆ ಕಾರಣವಾಗಿರುವುದು ಇವರ ಯಶೋಗಾಥೆ ಎನ್ನಬಹುದು.

ಬಾನು ಮುಷ್ತಾಕ್ ಅವರು ಧೀಮಂತವಾಗಿ ಸೃಜಿಸಿದ ಕಥೆಗೆ ಈ ಬೂಕರ್ ಮನ್ನಣೆ ದೊರೆಯಲು ಅವುಗಳ ಅನುವಾದವೇ ಮೂಲ ಕಾರಣವಾಗಿದೆ. ಇವರೊಂದಿಗೆ ಅನುವಾದ ಕ್ಷೇತ್ರದಲ್ಲಿ ಕನ್ನಡದ ಅನುವಾದಕಿಯಾಗಿ ಮೊದಲ ಬೂಕರ್ ಪಡೆದ ಅನುವಾದಕಿ ದೀಪಾ ಭಾಸ್ತಿ ಅವರ ಕುರಿತು ಕೆಲವು ವಿಚಾರಗಳು ಹೀಗಿವೆ. ಇವರು ಮೂಲತಃ ಕರ್ನಾಟಕದವರಾಗಿ ಓದು, ಸಾಹಿತ್ಯ ಸಂಗ್ರಹ, ಅನುವಾದ ಇವೆಲ್ಲವೂ ಗಂಭೀರವಾದ ಹವ್ಯಾಸ ಉಳ್ಳವರು. ಇಂಡಿಯನ್ ಎಕ್ಸ್ ಪ್ರೆಸ್, ದಿ ಹಿಂದೂ ಪತ್ರಿಕೆಯಲ್ಲಿ ಕಲಾ ವಿಮರ್ಶೆ ಹಾಗೂ ವಿಶಿಷ್ಟ ಅಂಕಣಗಳನ್ನು ಬರೆದವರು. ಪತ್ರಕರ್ತೆಯಾಗಿ ವೃತ್ತಿ ಪ್ರಾರಂಭವಾದರೂ 'ದಿ ಫೋರೇಜರ್' ಎಂಬ ಆಹಾರ ರಾಜಕೀಯ ಸಂಬಂಧಿಸಿದ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಈಗ ಪೂರ್ಣವಾಗಿ ಬರವಣಿಗೆ, ಅನುವಾದ ಕಾರ್ಯದಲ್ಲಿ ತೊಡಗಿರುವ ಇವರು ಶಿವರಾಮ ಕಾರಂತ, ಕೊಡಗಿನ ಗೌರಮ್ಮ ಇವರ ಸಾಹಿತ್ಯ ಕೃತಿಗಳ ಅನುವಾದ ಕಾರ್ಯವನ್ನು ಅತ್ಯಂತ ಅರ್ಥಪೂರ್ಣವಾಗಿ ನಿರ್ವಹಿಸಿದ್ದಾರೆ. ಎರಡೂ ಸಾಹಿತ್ಯವನ್ನು ಗಂಭೀರವಾಗಿ ತಿಳಿದವರು ಮಾತ್ರ ಶ್ರೇಷ್ಠ ಅನುವಾದ ನಿರ್ವಹಿಸಲು ಸಾಧ್ಯವಾಗುತ್ತದೆ. ದೀಪಾ ಭಾಸ್ತಿ ಅವರು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ತಿಳಿದಿರುವುದು ಇವರ ಅನುವಾದದ ಯಶಸ್ಸಿಗೆ ಮೊದಲ ಕಾರಣ ಎನಿಸುತ್ತದೆ. ನಂತರ ಅನುವಾದಿಸಿದ

ಕೃತಿಗಳನ್ನು ಪ್ರಪಂಚಕ್ಕೆ ಸರಿಯಾಗಿ ಹಂಚುವ ಪ್ರಕಾಶನಗಳಲ್ಲಿ ಪ್ರಕಟಿಸುವುದು ಕೂಡ ಮುಖ್ಯವಾಗುತ್ತದೆ. ಈ ಕಥೆಗಳನ್ನು ಪ್ರಸಿದ್ಧ ಲಂಡನ್‌ನ ಅಂಡ್ ಅದರ್ ಸ್ಟೋರಿಸ್, ಪೆಂಗ್ವಿನ್ ರ್ಯಾಂಡಮ್ ಹೌಸ್ ಭಾರತ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ.



ಬಾನು ಮುಸ್ತಾಕ್ ಅವರ 1990ರಿಂದ 2023ರವರೆಗಿನ ಆರು ಕಥಾಸಂಕಲನಗಳ 'ವರ್ತಮಾನದ ಓದುವನ್ನು ಎಚ್ಚರಿಸುವ' 12 ಕಥೆಗಳನ್ನು ಆಯ್ದು **ಹಾರ್ಟ್ ಲ್ಯಾಂಪ್** ಎಂಬುದಾಗಿ ಅನುವಾದಿಸುತ್ತಾರೆ. ಅಧ್ಯಯನದ ದೃಷ್ಟಿಯಿಂದ ಆ ಕಥೆಗಳನ್ನು ಗಮನಿಸುವುದಾದರೆ **ಹೆಜ್ಜೆ ಮೂಡಿದ ಹಾದಿ(1990)** ಸಂಕಲನದ ಶಹಿಸ್ತ ಮಹಲ್‌ನ ಕಲ್ಲು ಚಪ್ಪಡಿಗಳು; **ಬೆಂಕಿಮಳೆ (1999)** ಸಂಕಲನದ ಬೆಂಕಿಮಳೆ, ಕರಿ ನಾಗರಗಳು, ಹೃದಯದ ತೀರ್ಮ, ಕೆಂಪು ಲುಂಗಿ; **ಎದೆಯ ಹಣತೆ (2004)** ಸಂಕಲನದ ಎದೆಯ ಹಣತೆ, ಹೈ ಹೀಲ್ಡ್ ಶೂ, ಒಮ್ಮೆ ಹೆಣ್ಣಾಗು ಪ್ರಭುವೆ !; **ಸಫೀರಾ (2007)** ಸಂಕಲನದಿಂದ ಮೆಲುದನಿಗಳು; **ಬಡವರ ಮಗಳು ಹೆಣ್ಣಲ್ಲ(2012)** ಸಂಕಲನದಿಂದ ಸ್ವರ್ಗವೆಂದರೆ; **ಹೆಣ್ಣು ಹದ್ದಿನ ಸ್ವಯಂವರ (2023)** ಸಂಕಲನದಿಂದ ಕಫನ್, ಅರಬ್ಬಿ ಮೇಷ್ಟ್ರು ಮತ್ತು ಗೋಬಿ ಮಂಚೂರಿ ಈ ಅನುವಾದಕ್ಕಾಗಿ **ಇಂಗ್ಲಿಷ್ ಪೆನ್ ಪ್ರಶಸ್ತಿ** ಕೂಡ ಲಭಿಸಿದೆ. ಈಗ ಇದೇ ಕೃತಿಯು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಗೌರವ ಪಡೆದು ಜಗತ್ತಿಗೆ ಹೊಸ ಓದುವನ್ನು ತೆರೆದಿಟ್ಟಿದೆ. ಬಾನು ಮುಸ್ತಾಕ್

ಅವರ ಜ್ಞಾನವನ್ನು ಅಷ್ಟೇ ಅರ್ಥಪೂರ್ಣವಾಗಿ ಅನುವಾದಿಸಿದ ಕಾರಣ, ಈ ಗೌರವವು ಕನ್ನಡ ಸಾಹಿತ್ಯಕ್ಕೆ 'ಮೊದಲು' ಎನಿಸಿದೆ. ಮೂಲ ಲೇಖಕಿಯೊಂದಿಗೆ ಗೌರವ ಪಡೆದ ಮೊದಲ ಅನುವಾದಕಿಯಾಗಿಯೂ ದೀಪಾ ಭಾಸ್ತಿ ಅವರು ಭಾಜನರಾಗಿದ್ದಾರೆ. **ಹಾರ್ಟ್ ಲ್ಯಾಂಪ್ ಕೃತಿಯ ಮೊದಲ ಕಥೆಯ ಮೂಲ ಮತ್ತು ಅನುವಾದ ಕ್ರಮವನ್ನು ಹೀಗೆ ಉಲ್ಲೇಖಿಸಬಹುದು.**

ಮೂಲ : ಕನ್ನಡ (ಹಸೀನಾ ಮತ್ತು ಇತರ ಕಥೆಗಳು ಕೃತಿಯಿಂದ)

ಶಾಯಿಸ್ತ ಮಹಲ್‌ನ ಕಲ್ಲು ಚಪ್ಪಡಿಗಳು

ಕಾಂಕ್ರೀಟಿನ ಕಾಡಿನಿಂದ, ಬೆಂಕಿ ಪೊಟ್ಟಣದಂತೆ ಪೇರಿಸಿಟ್ಟ ಗಗನಚುಂಬಿ ಸೌಧಗಳ ಅಟ್ಟಹಾಸದಿಂದ, ನಿರಂತರ ಚಲನೆಯೇ ಏಕಮೇವ ಗುರಿಯಂತೆ, ಹಗಲಿರುಳೂ ಹೊಗೆ ಕಾರುತ್ತ ಘೀಳಿಡುತ್ತ ಸಾಗುತ್ತಿದ್ದ ವಾಹನಗಳಿಂದ, ಜನ, ಜನ, ಜನ; ಒಂದು ಪ್ರೀತಿಯಿಲ್ಲ; ವಿಶ್ವಾಸವಿಲ್ಲ; ಸೌಹಾರ್ದತೆಯಿಲ್ಲ–ಕೊನೆಗೆ ಒಂದು ಪರಿಚಿತ ನಗು ಕೂಡ ಇಲ್ಲ – ಇಂತಹ ಉಸಿರುಗಟ್ಟಿಸುವ ವಾತಾವರಣದಿಂದ ಬಿಡುಗಡೆಯಾಗಲು ತವಕಿಸುತ್ತಿದ್ದ ನನಗೆ, ಮುಜಾಹಿದ್ ಟ್ರಾನ್ಸ್‌ಫರ್‌ನ ಸುದ್ದಿ ತಂದಾಗ ನಿಜಕ್ಕೂ ಅತ್ಯಂತ ಸಂತೋಷವಾಯಿತು.

ಅನುವಾದ : ಇಂಗ್ಲೀಷ್ (ಹಾರ್ಟ್ ಲ್ಯಾಂಪ್ ಅನುವಾದ ಕೃತಿಯಿಂದ)

STONE SLABS FOR SHAISTA MAHAL

From the concrete jungle, from the flamboyant apartment buildings stacked like matchboxes to the sky, from the smoke-spewing, horn-blaring vehicles that were always moving, day and night, as if constant movement was the only goal in life, then from people, people, people – people with no love for one another, no mutual trust, no harmony, no smiles of recognition even – I had desperately wanted to be free from such a suffocating environment. So, when Mujahid came with news of his transfer, I was very happy, truly.

ಈ ಕೃತಿಯ ಒಂದು ಕಥೆಯನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಭಾರತದ ಸಂವೇದನೆಗಳನ್ನು ಇಲ್ಲಿ ದಾಖಲಿಸಬಹುದು.

ಎದೆಯ ಹಣತೆ' ಕಥೆಯು ಇಂಗ್ಲೀಷ್ ಅನುವಾದಿತ ಕೃತಿಯ ಶೀರ್ಷಿಕೆಯಾಗಿರುವುದು ವಿಶೇಷ. ಈ ಕಥೆಯು ಮೊದಲಿಗೆ 'ಭಾವನಾ' ಎಂಬ

ಸುಮಧುರ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಪತ್ರಿಕೆಯ ಮೊದಲ ಸಂಚಿಕೆಯಲ್ಲಿಯೇ ಹಲವು ಪ್ರಸಿದ್ಧ ಕಥೆಗಾರರ ಪಂಕ್ತಿಯಲ್ಲಿ ಆಯ್ಕೆಗೊಂಡು 2000ನೇ ಇಸವಿಯ ಏಪ್ರಿಲ್‌ನ ಮೊದಲ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಈ ಸಂಚಿಕೆಯಲ್ಲಿ ಮೊದಲಿಗೆ ಉಲ್ಲೇಖಿಸಲಾದ ಬೇಂದ್ರೆ ಅವರ ಕಥೆ ಕುರಿತ ನುಡಿಗಳು ಇಲ್ಲಿಗೆ ಮುಖ್ಯ ಎನಿಸುತ್ತವೆ. "ಈ ಜಗದಲ್ಲಿ ಒಂದೇ ಕತೆ ಹಲವು ರೂಪ ತಾಳಿ ಆಟವಾಡುತ್ತದೆ. ಈ ಎಲ್ಲ ಕತೆಗಳ ಹಿಂದೆ ಒಂದು ಕತೆ ಇದೆ. ಅದು ಮಾಯಾ–ಕತೆ. ಅದರ ರೂಪಗಳು ಅನಂತ!" ಈ ನುಡಿಯು ಎದೆಯ ಹಣತೆಯ ಬಹು ಸೂಕ್ಷ್ಮತೆಗಳನ್ನು ಗಂಭೀರವಾಗಿ ಗ್ರಹಿಸಿದಾಗ, ಅದರ ಓದುಗಳು ಹೀಗೆ ವಿಶ್ವಮಾನ್ಯವಾಗುವ ಕತೆಯ ಪರಿಯು ಅನಂತಗೊಳ್ಳುತ್ತದೆ.

'ಎದೆಯ ಹಣತೆ'ಯ ಮೂಲಕ ಬಾನು ಮುಸ್ತಾಕ್ ಅವರ ಕಥೆಗಳ ಸಂವೇದನೆಯನ್ನು ಈ ರೀತಿಯಲ್ಲಿ ಗ್ರಹಿಸಬಹುದು. ಇವರ ಕತೆಗಳ ವಸ್ತು ಸಮಾಜ ಹಾಗೂ ಮನುಷ್ಯ. ಮುಸ್ಲಿಂ ಸಮುದಾಯದೊಳಗೆ ಜನಿಸಿ, ಆ ಪರಿಸರದಲ್ಲಿಯೇ ಬೆಳೆದು, ತಾನು ಕೂಡ ಹಲವು ನೋವು–ಸಂವೇದನೆಗಳ ಭಾಗವಾಗಿ ಗ್ರಹಿಸಿರುವುದು ಉತ್ತಮವಾಗಿದೆ. ಆದರೆ, ಈ ಅಧ್ಯಯನವು ಮುಸ್ಲಿಂ ಸಮುದಾಯದ ಸಂವೇದನೆಗಳನ್ನಷ್ಟೇ ಕೇಂದ್ರೀಕರಿಸಿದೆ, ಭಾರತೀಯ ಸಮಾಜವನ್ನೇ ನಿರೂಪಿಸುವ ಸ್ವರೂಪದಂತಿದೆ.

ಮೊದಲಿಗೆ ಸಂಕ್ಷಿಪ್ತವಾಗಿ ಕಥೆಯನ್ನು ಗ್ರಹಿಸೋಣ.

ಮೆಹರುನ್ ಕಥೆಯ ನಾಯಕಿ. ಈಕೆಗೆ ಇಬ್ಬರು ಅಣ್ಣಂದಿರು, ಇಬ್ಬರು ತಂಗಿಯರು, ಒಬ್ಬ ತಮ್ಮ. ಪದವಿ ಓದನ್ನು ತಪ್ಪಿಸಿ, ಇನಾಯತ್ ಎಂಬವನಿಗೆ ಈಕೆಯನ್ನು ಮದುವೆ ಮಾಡಿಕೊಡಲಾಗಿದೆ. ಇವರಿಗೆ ಐದು ಮಕ್ಕಳಿದ್ದರೂ, ಈಗ ಇನಾಯತ್ ಬೇರೆ ಹೆಣ್ಣಿನೊಂದಿಗೆ ಕೂಡ ಬದುಕುತ್ತಿದ್ದಾನೆ. ಊರೆಲ್ಲಾ ಇದೇ ವಿಚಾರ ಮಾತನಾಡುತ್ತಾ ಮೆಹರುನ್ ಬೇಸರಗೊಂಡು ತವರಿಗೆ ಪತ್ರ ಬರೆದಿದ್ದಾಳೆ. ಯಾವುದೇ ಪ್ರತಿಕ್ರಿಯೆ ಕೊಡದೇ ಇರುವ ಕಾರಣ, ತವರಿಗೆ ವಾಪಸ್ಸಾಗುತ್ತಾಳೆ. ತವರಲ್ಲಿ ಯಾರೂ ಕೂಡ ಇಷ್ಟಪಡುವುದಿಲ್ಲ. ತಾಯಿಯು ಹೊಂದಿಕೆಯ ಮಾತನಾಡಿದರೆ, ಅಣ್ಣನು ಮದುವೆ ಮಾಡಿಕೊಟ್ಟ ಮೇಲೆ ಗಂಡನ ಮನೆಯಲ್ಲೇ ಬದುಕಬೇಕು, ಇಲ್ಲವೇ ಸಾಯಬೇಕು ಎಂಬ ಸಲಹೆ ನೀಡುತ್ತಾನೆ. ಇನ್ನೊಬ್ಬ ಅಣ್ಣನು ಇವಳ ನೋವನ್ನು ಅಹಂಕಾರವೆಂದು ವಾದಿಸುತ್ತಾ ಒಂದು ವಾಹನ ತರಿಸಿ ಇಬ್ಬರು ಅಣ್ಣಂದಿರು ಆಕೆಯನ್ನು ವಾಪಸ್ಸು ಗಂಡನ ಮನೆಗೆ ಕರೆದು ತರುತ್ತಾರೆ. ಅಸಹಾಯಕಳಾದ ಮೆಹರುನ್ ನೋವಿನಲ್ಲಿಯೇ ಮಲಗುತ್ತಾಳೆ. ಆ ವೇಳೆಗೆ ಬಂದ ಇನಾಯತ್ ಮತ್ತು ಈಕೆಯ

ಅಣ್ಣಂದಿರು ಕುಶಲೋಪರಿ ಮಾತನಾಡುತ್ತಾರೆ. ಅಡುಗೆಗೆ ಮಾಂಸವನ್ನು ತಂದುಕೊಡುವ ಇನಾಯತ್ ಈಕೆಗೆ, ಅಣ್ಣಂದಿರನ್ನು ಕರೆಸಿ ಜಗಳ ಮಾಡುವ ಆಲೋಚನೆ ಇದ್ದರೆ ನಿನ್ನ ಬದುಕು ನೀನೆ ಹಾಳುಮಾಡಿಕೊಳ್ಳುವೆ ಎಂಬ ಎಚ್ಚರ ನೀಡುತ್ತಾನೆ. ನೋವಿನಲ್ಲೂ ಮೆಹರುನ್ ಅಡುಗೆ ಮಾಡಿ ಎಲ್ಲರಿಗೂ ಬಡಿಸುತ್ತಾಳೆ. ಅಣ್ಣಂದಿರು ಹೊಂದಿಕೆ ಮಾಡಿಕೊಂಡು ಬದುಕು ಈತ ಬದಲಾಗುತ್ತಾನೆ, ನಾವು ಮತ್ತೆ ಬರುತ್ತೇವೆ ಎಂದು ಹೊರಡುತ್ತಾರೆ. ಇನಾಯತ್ ಕೂಡ ಅವರ ಹಿಂದೆಯೇ ಅಲ್ಲಿಂದ ಹೊರಡುತ್ತಾನೆ. ಮೆಹರುನ್‌ಗೆ ಉಳಿದಿರುವುದು ಮಕ್ಕಳು ಮಾತ್ರ. ಅದರಲ್ಲೂ ಹಿರಿಯ ಮಗಳು ಸಲ್ಮಾ ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳುವ ಮಗು. ಮನೆಯ ಕೆಲಸವನ್ನೆಲ್ಲಾ ನಿಭಾಯಿಸುತ್ತಾ ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿರುತ್ತದೆ. ಅಂದಿನ ರಾತ್ರಿಯಲ್ಲಿ ಮೆಹರುನ್ ಸಾಯಬೇಕೆಂದು ನಿರ್ಧರಿಸುತ್ತಾಳೆ. ಸಲ್ಮಾ ಓದುತ್ತಾ ಓದುತ್ತಾ ಹಾಗೆ ಮಲಗಿದ್ದಾಳೆ. ಪುಟ್ಟ ಪುಟ್ಟ ಮಕ್ಕಳೆಲ್ಲಾ ನಿದ್ರಿಸುತ್ತಿವೆ. ಎಲ್ಲಾ ಮಕ್ಕಳನ್ನು ಭಾವ ತುಂಬಿ ನೋಡುತ್ತಾ ಆಚೆ ಬರುತ್ತಾಳೆ. ಪ್ರಕೃತಿಯು ಈಕೆಯೊಂದಿಗೆ ಸಂವಾದಿಸುತ್ತದೆ. ಸೀಮೆಎಣ್ಣೆ ಸುರಿದುಕೊಂಡು ಇನ್ನೇನು ಬೆಂಕಿ ಹಚ್ಚಬೇಕು ಎನ್ನುವ ವೇಳೆಗೆ ಈಕೆಯ ಹಸಿಗೂಸು ಮನೆಯೊಳಗೆ ಜೋರಾಗಿ ಅಳುತ್ತದೆ. ಎಚ್ಚರಗೊಂಡ ಸಲ್ಮಾಳು ಅಮ್ಮನನ್ನು ಹುಡುಕುತ್ತಾಳೆ. ಅಷ್ಟೇ ವೇಗವಾಗಿ ಆಚೆ ಬಂದು ನೋಡಿ, ತನ್ನ ತಾಯಿ ಬಿಗಿದಪ್ಪುತ್ತಾಳೆ. 'ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗೋಸ್ಕರ ಬದುಕಲು ಸಾಧ್ಯವಿಲ್ಲವಾ' ಎಂಬ ಆಕೆಯ ಬೇಡಿಕೆಯು ಮೆಹರುನ್‌ಳನ್ನು ಬದುಕಿಸುತ್ತದೆ. ಎದೆಯ ಹಣತೆಯು ಆರಿ ಹೋಗಿರುವ ಈಕೆಯಲ್ಲಿ ಮಗಳ ರೂಪವು ಭರವಸೆಯನ್ನು ತುಂಬುವುದೇ ಈ ಕಥೆಯ ಪೂರ್ಣ ಶಕ್ತಿ.

ಪುರುಷ ಸಂವೇದನೆಗಳಲ್ಲಿನ ಶೋಷಣೆಗಳು

ಬಾನು ಮುಷ್ತಾಕ್ ಅವರ ಕಥೆಗಳ ಕೇಂದ್ರ ಧ್ವನಿಯೇ ಪುರುಷ ಶೋಷಣೆ. ಪುರುಷರನ್ನು ಅರ್ಥಪೂರ್ಣವಾಗಿ ಗೌರವಿಸುತ್ತಲೇ, ಶೋಷಣೆ ಮಾಡುವ ಮುಖಗಳನ್ನು ಅನಾವರಣ ಮಾಡುತ್ತಾರೆ. ಆತ ಗಂಡನಿರಬಹುದು, ಅಣ್ಣನಿರಬಹುದು, ಮಸೀದಿಯ ಮೌಲ್ವಿಯೇ ಇರಬಹುದು ಆದರೆ, ಪುರುಷಾಳ್ವಿಕೆಯ ಮುಖಗಳು ಹೇಗಿರುತ್ತವೆ ಎಂಬುದರ ನೈಜತೆಯು ಇವರ ಕಥೆಗಳನ್ನು ಆವರಿಸಿವೆ.

ಎದೆಯ ಹಣತೆ ಕಥೆಯಲ್ಲಿ ಬರುವ ಮೆಹರುನ್‌ಳಿಗೆ ಸಂಬಂಧಿಸಿದ ದೊಡ್ಡ ಅಣ್ಣ, ಅಮಾನ್(ಎರಡನೇ ಅಣ್ಣ), ಇನಾಯತ್(ಗಂಡ) ಈ ಮೂರು ಪಾತ್ರಗಳು ಏಕಮುಖ ಚಿಂತನೆಯ ಸಂವೇದನೆಗಳು. ಪುರುಷನೆಂದರೆ ದುಡಿಯುವವನು,

ಮಹಿಳೆಯು ಮನೆಯೊಳಗೆ ಪುರುಷನು ಹೇಳಿದಂತೆ ಕೇಳುತ್ತಾ ಬದುಕುವ ಜೀವಿ ಎಂಬಂತೆ ವರ್ತಿಸುವವರು. ಆದ್ದರಿಂದಲೇ ಭರವಸೆಯಂತೆ ಬೆಳಕಾಗಿದ್ದ ಅಣ್ಣಂದಿರು ಕೂಡ ತಂಗಿಗೆ ಶಾಪ ನೀಡುವ ಸ್ಥಿತಿ ತಲುಪಿದ್ದಾರೆ.

ಮೆಹರುನ್‌ಳಿಗೆ ದೊಡ್ಡ ಅಣ್ಣನು ಒಂದು ಕಾಲದಲ್ಲಿ 'ನನ್ನ ಪರಿ'(ಗಂಧರ್ವಕನ್ಯೆ) ಎಂದು ಪ್ರೀತಿಸುವ ವ್ಯಕ್ತಿತ್ವದ ಹಂಬಲವೇ ಸದಾ ಇದೆ. ಆದರೆ, ಈಗ ಅವನು ದರ್ಪದ ಅಪರಾವತಾರವಾಗಿದ್ದಾನೆ. ಎರಡನೇ ಅಣ್ಣನೆಂದರೆ ಈಕೆಗೆ ನನ್ನ ಕಾಲೇಜು ದಿನಗಳಲ್ಲಿ ಈಕೆಯನ್ನು ಕಾಲೇಜಿಗೆ ಕಳಿಸಿ ಎಂದು ಬಂಡಾಯ ತೋರಿದ ವ್ಯಕ್ತಿ. ಆದರೆ, ಅವನು ತೋರಿದ ಬಂಡಾಯ ತನ್ನ ಪ್ರೀತಿಗೆ ಮೆಹರುನ್‌ಳಿಂದ ಸಹಾಯವಾಗಲೆಂದು ಎಂಬುದು ತಿಳಿಯುವುದು ತಡವಾಗಲಿಲ್ಲ. ಆದರೂ ಅವನ ಕುರಿತು ಈಕೆಗೆ ಬೇಸರವಿಲ್ಲ.

ದೊಡ್ಡ ಅಣ್ಣನ ಅಧಿಕಾರ ವಾಣಿಯಂತೂ ಒಂದು ಕಾಲದ ಪುರುಷ ಮೃಗತ್ವವನ್ನು ಕೇಂದ್ರೀಕರಿಸಿಯೇ ನುಡಿಯುತ್ತದೆ. ಇದು ಕೇವಲ ಮುಸ್ಲಿಂ ಸಮುದಾಯದ ಸಂವೇದನೆಯಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಪುರುಷಾಳ್ವಿಕೆಗಳು ಕಾಲ–ಸ್ಥಳಗಳ ಪರಿಧಿಯಿಲ್ಲದೆ ಹೆಣ್ಣನ್ನು ತನ್ನ ಹತೋಟಿಯಲ್ಲಿ ತಂದುಕೊಂಡ ಅಧಿಕಾರಗಳು. ಈಗಲೂ ಕಾಲ ಬದಲಾಗಿದೆ ಅಷ್ಟೇ, ಅದೆಷ್ಟೋ ಪುರುಷ ಆಳ್ವಿಕೆಯ ತನಗಳು ಇನ್ನೂ ಬದಲಾಗಿಲ್ಲ. ಇವರ ನುಡಿಗಳನ್ನು ಸಮಾಜದಲ್ಲಿ ಯಾರಿಗೂ ಹೇಳುವಂತಿಲ್ಲ. ಅಂದರೆ, ತನ್ನ ನುಡಿ ಅದೆಷ್ಟು ಕೆಡುಕಿನದು ಎಂಬುದು ಪುರುಷನಿಗೆ ತಿಳಿದಿದೆ. ಆದರೂ ತನ್ನ ಕೆಡುಕನ್ನು ಬೇಲಿ ಹಾಕುವ ಅಸ್ತ್ರವಾಗಿ ಬಳಸುತ್ತಲೇ ಇರುತ್ತಾನೆ.

ಮೆಹರುನ್‌ಳ ಮೊದಲ ಅಣ್ಣನ ನುಡಿಗಳು ಹೀಗಿವೆ. "ಅತಿಯಾಯ್ತು ಮೆಹರ್. ಸಾಯೋರ್ಯಾರು ಹೇಳ್ಕೊಂಡ್ ತಿರುಗಲ್ಲ. ವಂಶದ ಮಾರ್ಯಾದೆಯ ಪ್ರಜ್ಞೆ ಇದ್ದಿದ್ರೆ... ನೀನು ಇಲ್ಲಿಗೆ ಬರೋ ಬದ್ಲು ಅದ್ನೇ(ನನ್ನನ್ನ ಅಲ್ಲಿಗೆ ಕಂರ್ಕೊಂಡ್ ಹೋದ್ರೆ ನಾನ್ ಬೆಂಕಿ ಹಚ್ಕೊಂಡ್ ಸಾಯ್ತಿನಿ) ಮಾಡ್ತಿದ್ದೆ. ಯಾವ ಮನೆಗೆ ನಿನ್ನ ಡೋಲಿ(ವಧುವನ್ನು ಹೊತ್ತೊಯ್ಯುವ ಪಲ್ಲಕ್ಕಿ) ಹೋಯಿತೋ ಅದೇ ಮನೆಯಿಂದ ನಿನ್ನ ಡೋಲ(ಶವವಾಹಕ) ಹೊರಬರಬೇಕು. ಅದು ಮಾನವಂತ ಹೆಣ್ಣಿನ ಬದುಕು." ಇದೇ ಮಾತುಗಳು ಹಿಂದೂ ಧರ್ಮದಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಗಾದೆಯನ್ನು ಸೃಷ್ಟಿಸಿ, ತವರೆಂದರೆ ನೆಂಟರಾಗಿರಬೇಕು ಎಂಬಂತೆ ಸೂಚಿಸಿವೆ.

ನಾನು ಮತ್ತೆ ಗಂಡನ ಮನೆಗೆ ಹೋಗಲಾರೆ, ಅವನ ಯಾವುದೇ ತಪ್ಪುಗಳನ್ನು ನೀವು ಏಕೆ ಪ್ರಶ್ನಿಸುತ್ತಿಲ್ಲ ಎಂಬ ಮಾತಿಗೆ ಎರಡನೇ ಅಣ್ಣನ ನುಡಿಯು ಹೀಗಿದೆ. "ನಮ್ಮೆದುರಿಗೆ ಎಷ್ಟೊಂದು ಮಾತಾಡ್ತಿದಾಳೆ ನೋಡಿ, ಅವನೆದುರಿಗೂ ಹೀಗೆ ಬಾಯಿ

ಮಾಡಿರ್ಬೇಕು, ಅದಕ್ಕೇ ಅವನು ರೋಸಿಹೋಗಿರೋದು.." ಪುರುಷರ ಶೋಷಣೆಗಳನ್ನು ಪ್ರಶ್ನಿಸಲಾಗದ ಈ ಅಣ್ಣಂದಿರು ಹೊಂದಿಕೆಯ ಪಾಠಗಳನ್ನು ಹೇಳುತ್ತಾರೆ. ಮೆಹರುನ್‌ಳನ್ನು ವಾಪಸ್ಸು ಗಂಡನ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬರುವಾಗ ಬೇರೆ ಹೆಂಗಸರ ಕಷ್ಟಕ್ಕಿಂತ ನಿನ್ನದೇನು ಕಷ್ಟವಲ್ಲವೆಂಬ ಸಮಾಜ ಸೂಕ್ಷ್ಮಗಳನ್ನು ಪಠಿಸಿ ಅಲ್ಲಿಂದ ಹೊರಡುತ್ತಾರೆ.

ಅಧಿಕಾರವೆಂಬುದು ಯಾವಾಗಲೂ ಇರುವುದನ್ನು ಮುಂದುವರೆಸುವ, ಇಲ್ಲವೆ ಇರುವುದನ್ನು ನಾಶಮಾಡಿ ತನ್ನಾಸೆಗಳನ್ನು ನಿರ್ಮಿಸುವ ದರ್ಪ ದೀವಿಗೆಯೇ ಆಗಿರುತ್ತದೆ. ಅದು ಬೆಳಕೆಂದು ಭಾವಿಸುವ ಸಮಾಜವು ಯಾವಾಗಲೂ ಅಧಿಕಾರವನ್ನು ಪೂಜಿಸಲೇ ಬೇಕು. ಇಲ್ಲದಿದ್ದರೆ ಉಳಿವಾಗಲಿ, ಲಾಭವಾಗಲಿ ಲಭಿಸುವುದಿಲ್ಲ. ಈ ಕಥೆಯ ಇನಾಯತ್ ಕಾಣುವುದು 'ಶಹಿಸ್ತ ಮಹಲ್‌ನ ಕಲ್ಲು ಚಪ್ಪಡಿಗಳು' ಕಥೆಯ ಇಫ್ತಿಕಾರ್ ಅಹಮದ್ ರೀತಿಯಲ್ಲೇ, 'ಕರಿನಾಗರಗಳು' ಕಥೆಯ ಯಾಕೂಬ್ ಆಗಲಿ ಹೆಣ್ಣೆಂದರೆ ಮಕ್ಕಳನ್ನು ಸೃಷ್ಟಿಸುವ ಯಂತ್ರವೆಂದು ಭಾವಿಸಿದವರು. ಇವರ್ಯಾರು ಮಕ್ಕಳನ್ನು ಪಾಲಿಸಿದವರಲ್ಲ. ಯಾಕೂಬ್ ಅಂತೂ ಗಂಡು ಮಗು ಬೇಕು ಎಂದು ಹಸೀನಾಳನ್ನು ಬಿಟ್ಟು ಮರು ಮದುವೆಗೆ ತಾಯಿಯ ಬೆಂಬಲ ಪಡೆಯುತ್ತಾನೆ. ಇನಾಯತ್ ಕೂಡ ಐದು ಮಕ್ಕಳಿದ್ದರೂ ಹೊಸ ಸಂಬಂಧ ಹುಡುಕಿದ್ದಾನೆ. ಇಲ್ಲಿ ಅಭಿವ್ಯಕ್ತಗೊಳ್ಳುವ **ಪುರುಷ ಸಂವೇದನೆಗಳಲ್ಲಿನ ಶೋಷಣೆಗಳು** ಹಲವು ಮುಖಗಳನ್ನು ದರ್ಶನ ಮಾಡಿಸುತ್ತವೆ. ಹೆಣ್ಣು ಮಕ್ಕಳ ಎದೆಯ ಹಣತೆಯನ್ನು ಕೆಡಿಸಲೆಂದೇ ಹೊಂಚು ಹಾಕುತ್ತಾರೆ. ಈ ಸಮಾಜವು ಶಿಕ್ಷಣದ ಮೂಲಕ ಬದಲಾಗಬಹುದು ಎಂಬ ಬಯಕೆಯಿದ್ದರೂ ಅಲ್ಲಿಯೂ ಅಧಿಕಾರವನ್ನು ಪೂಜಿಸುವ, ಶೋಷಣೆಯೊಂದಿಗೆ ಹೊಂದಿಕೆ ಮಾಡಿಕೊಳ್ಳುವ 'ಗೌರವ'ಗಳನ್ನೇ ಕಲಿಸುತ್ತಿವೆ. ಇದರಾಚೆ ಆಲೋಚಿಸುವ ಮನೋಸ್ಥಿತಿಗಳು ಹೆಣ್ಣಾಗಲಿ, ಗಂಡಾಗಲಿ ಸಮಾಜ ವಿರೋಧಿಯಂತೆ ಕುಟುಂಬ ವ್ಯವಸ್ಥೆಯಿಂದಲೇ ಬಿಂಬಿಸುವ 'ಅನಾಗರೀಕತೆ' ಸೃಷ್ಟಿಯಾಗುತ್ತಿವೆ.

ಮಹಿಳಾ ಸಂವೇದನೆಯ ಪರಿಧಿ

'ನನ್ನ ಕೃತಿಗಳಲ್ಲಿ ಹೆಣ್ಣೆ ವಿರಾಜಮಾನಳಾಗಿದ್ದಾಳೆ' ಎಂಬ ಬಾನು ಮುಷ್ತಾಕ್ ಅವರ ನುಡಿಯು 'ನೋವುಗಳ ಅಸ್ಮಿತೆ'ಯಲ್ಲಿ ದಾಖಲಾಗುತ್ತದೆ. ಆದರೆ, ಪರುಷನ ಶೋಷಣೆಗಳ ಲೆಕ್ಕಾಚಾರದಲ್ಲಿ ಹೆಣ್ಣು ಮತ್ತೆ ಮತ್ತೆ ಒಂದು ಬಿಂದುವಾಗಿ ನಿಲ್ಲುತ್ತಾಳೆ. ಪುರುಷನ ಶೋಷಣೆಗಳನ್ನು ಕೇಂದ್ರವಾಗಿಸಿರುವ ಕತೆಗಾರ್ತಿಯು, ಮಹಿಳೆಯ ಶೋಷಣೆಗಳನ್ನು ಅಷ್ಟೇ ಮುಕ್ತವಾಗಿ ತಿಳಿಸುತ್ತಾರೆ. ಸಮುದಾಯದ ಶೋಷಣೆಗಳಲ್ಲಿ

ಮಹಿಳೆ ಎಲ್ಲಾ ಮುಖಗಳಿಂದಲೂ ನೋವುಗಳನ್ನು ಅನುಭವಿಸುತ್ತಾಳೆ. ಅವಳನ್ನು ಹಲವು ಸಂವೇದನೆಗಳ **ಪರಿಧಿ**ಯು ಆವರಿಸುತ್ತದೆ. ಆದರೂ ಆಕೆ ಸಹಿಸಬೇಕು, ನಗುತ್ತಲೇ ಇರಬೇಕು. ಎದೆಯ ಹಣತೆಯ ತಾಯಿಯ ಚಿಂತನೆಯು ಮುಗ್ಧವಾದ ನಿರಾಕರಣೆಯಾದರೆ, 'ಕರಿನಾಗರಗಳು' ಕತೆಯ ಹಸೀನಾ ಅವರ ಅತ್ತೆಯು ಸಂಪೂರ್ಣ ದ್ವೇಷದ ಕಿಡಿಯಾಗಿದ್ದಾಳೆ. ಆದರೆ, ಅದೇ ಸಮುದಾಯದಲ್ಲಿ ಮೌಲ್ವಿಯ ಹೆಂಡತಿಯಾಗಲಿ, ಮನೆಗೆಲಸ ನೀಡಿದ ಶ್ರೀಮಂತ ಹೆಣ್ಣಾದ ಜೂಲೇಕಾ ಬೇಗಂ ಆಗಲಿ ಹೃದಯವಂತಿಕೆಯ ಶ್ರೀಮಂತರು.

ಎದೆಯ ಹಣತೆ ಕತೆಯ ತಾಯಿಯ ಒಂದೆರಡು ಮಾತುಗಳ ಮೂಲಕ ಮಹಿಳಾ ಸಂವೇದನೆಗಳು ಶೋಷಣೆಯೊಂದಿಗೆ ಬೆರೆತು ತಮ್ಮ ಅಸ್ಮಿತೆಗಳನ್ನೆ ಕಳೆದುಕೊಂಡಿರುವ ಹೊಂದಿಕೆಯ ವರ್ತಮಾನವನ್ನು ಗ್ರಹಿಸಬಹುದು. "ಸಹನೆ ತಂದ್ಯೋ ಮಗಳೇ, ಪ್ರೀತಿಯಿಂದ ಅವನನ್ನ ಸರಿ ದಾರಿಗೆ ತರೋಕ್ಕೆ ಪ್ರಯತ್ನ ಪಡಬೇಕು" ಈ ಮಾತುಗಳೇ ಆಕೆಯ ಅಸಹಾಯಕತೆಯನ್ನು ನಿರೂಪಿಸುತ್ತದೆ. ಈ ಕಥೆಯಲ್ಲಿ ಮೆಹರುನ್ ಮಾತ್ರ ಪ್ರತಿಭಟಿಸುವ ಹೆಣ್ಣು ಉಳಿದಂತೆ ಎಲ್ಲವೂ ಆಶಾವಾದಗಳೇ.. ಇಡೀ ಕಥೆಯಲ್ಲಿ ಹೆಣ್ಣಿನ ಸಂವೇದನೆಗಳಿದ್ದರೂ ಪುರುಷನ ಮಾತುಗಳಿಂದಲೇ ಅಧಿಕಾರದ ಪರಿಧಿ ಸುತ್ತುವರೆಯುತ್ತದೆ. ಈ ಕಥೆಯನ್ನು 'ಕರಿನಾಗರಗಳು' ಕಥೆಯ ಪಾತ್ರಗಳೊಂದಿಗೆ ಹೋಲಿಸಿದಾಗ ಏಕಮುಖ ಚಳುವಳಿಯ ಬಂಡಾಯದ ದರ್ಶನವು ನಮಗೆ ಲಭಿಸುತ್ತದೆ.

ಮೆಹರುನ್ ಮತ್ತು ಹಸೀನಾ

ಈ ಪಾತ್ರಗಳು ಕೇಂದ್ರ ಪಾತ್ರಗಳಾಗಿ ಅತ್ಯಂತ ನಿಷ್ಠುರವಾಗಿ ಪ್ರತಿಭಟಿಸುತ್ತವೆ. ಭಾರತೀಯ ಸಮುದಾಯಗಳಲ್ಲಿ ಈ ಮಹಿಳೆಯರ ಧೈರ್ಯವೇನಾದರೂ ಆಯಾ ಕಾಲಘಟ್ಟದಲ್ಲಿಯೇ **ದೊರೆತಿದ್ದರೆ** ಮಹಿಳೆಯು ಸಮಾನತೆಯ ಸಹಜ ಸ್ಥಿತಿಗೆ ಜೊತೆಯಾಗುತ್ತಿದ್ದಳು.

'ಕರಿನಾಗರಗಳು' ಕಥೆಯ ಹಸೀನಾ 26 ವರ್ಷಗಳ ಹಿಂದಿನ ಅನಕ್ಷರಸ್ಥ ಹೆಣ್ಣು ಮಗಳು. ಗಂಡನೊಂದಿಗೆ ಪ್ರೀತಿಯಿಂದ ಬದುಕಬೇಕೆಂಬ ಕನಸುಳ್ಳವಳು. ಆದರೆ ನಾಲ್ಕನೆಯ ಮಗುವು ಹೆಣ್ಣೋ, ಗಂಡೋ ಎಂದು ಮೊದಲೇ ಪರೀಕ್ಷಿಸಿ ಕೊಂಡು ಹೆಣ್ಣಾದ ಕಾರಣ, ಅತ್ಯಂತ ಹೀನಾಯವಾಗಿ ಹೊಡೆಯುತ್ತಾನೆ. ಗಂಡು ಮಗುವಿನ ಹಂಬಲದವನು ಈಕೆಯನ್ನು ಬಿಟ್ಟು ಹೋದಾಗ ಹಸೀನ ತುಂಬು ಗರ್ಭಿಣಿ. ಇರುವ ಮಕ್ಕಳ ಹಸಿವು, ಮುನ್ನಿ ಎಂಬ ಹಿರಿಯ ಹೆಣ್ಣು ಮಗಳ ಕುರುಡು ವಾಸಿಮಾಡಬಹುದೆಂಬ ವೈದ್ಯರ ಮಾತಿಗೆ ಹಣ ಒದಗಿಸಿಕೊಳ್ಳಲು ಹೋರಾಡುತ್ತಾಳೆ. ಊದುಬತ್ತಿ ಹೊಸೆದು ಐದು ಸಾವಿರ ಸಂಪಾದಿಸುತ್ತಾಳೆ. ಅದನ್ನೂ ಯಾಕೂಬ್

ಕಸಿಯುತ್ತಾನೆ. ಅಷ್ಟೇ ಅಲ್ಲದೇ, ಶ್ರೀಮಂತರ ಮನೆಯಲ್ಲಿ ಮನೆ ಕೆಲಸ ಮಾಡುತ್ತಾಳೆ. ಮೊದಲಿಗೆ ಯಾಕೂಬ್ ಮತ್ತೆ ಸಿಗಲಿ ಎಂದು ಜೂಲೇಕಾ ಬೇಗಂ ಅವರಿಂದ ಪತ್ರ ಬರೆಸುವ ಹಸೀನಾ ಮಗಳ ಕಣ್ಣು ರಕ್ಷಿಸಲು ಮೆಹರ್ ಹಣಕ್ಕಾಗಿ ಹೋರಾಡುತ್ತಾಳೆ. ಜಮಾತ್ ಮುಂದೆ ಮುತವಲ್ಲಿ ಸಾಬ್ ಅವರನ್ನು ಬೇಡುತ್ತಾಳೆ. ಬೆಳಗ್ಗೆಯಿಂದ ಸಂಜೆಯವರೆಗೂ ಹಸಿವಿನಿಂದ ಪ್ರತಿಭಟಿಸುತ್ತಾಳೆ. ಯಾಕೂಬ್‌ನ ಹಿಂಸೆಯಿಂದ ಮುನ್ನಿ ತೀರಿಹೋದ ಮೇಲೆ ಯಾವ ಹಣವೂ ಬೇಡ, ಯಾವ ವ್ಯಕ್ತಿಯೂ ಬೇಡವೆಂದು ಏಕಾಂತಳಾಗುವ ಆಕೆಯ ಮನೋಸ್ಥಿತಿಯು ಹದಗೆಟ್ಟ ಧರ್ಮದ ಕಾನೂನು ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಎಲ್ಲಾ ಧರ್ಮದಲ್ಲಿಯೂ ಇದೇ ಮಾದರಿಯಲ್ಲಿ ಹೇಳುವ ಹಿರಿ ಸ್ಥಾನಗಳು ಲಾಭಕೋರತನದಿಂದ ಕೆಡುಕಿನ ಪರವಾದರೆ, ಅಸಹಾಯಕರು ಸದಾ ಶೋಷಣೆಗೆ ಒಳಗಾಗಲೇ ಬೇಕಾಗುತ್ತದೆ.

ಮೆಹರುನ್ 25 ವರ್ಷಗಳ ಹಿಂದೆ ದಾಖಲಾಗುವ ಮಹಿಳೆ. ಕಾಲೇಜು ಶಿಕ್ಷಣಕ್ಕೆ ಹಂಬಲಿಸಿದ ಮನಸ್ಸು. 'ತಲಾಕ್ ಅವರು ಕೊಡೋದಲ್ಲ; ನಾನೇ ತಗೋತಿನಿ' ಎಂಬ ಧೈರ್ಯದ ಹೆಣ್ಣು. ಇದಕ್ಕೆ ಸಹಾಯಕವಾಗಿ ತವರನ್ನು ಹಂಬಲಿಸುತ್ತಾಳೆ. ತವರು ಕೈ ಚೆಲ್ಲಿದಾಗ ಆತ್ಮಹತ್ಯೆಯ ಕಡೆ ಮನಸ್ಸು ಮಾಡುತ್ತಾಳೆ. ಆದರೆ, ಮಗಳು ಸಲ್ಮಾ ಹೊತ್ತಿಸುವ ಎದೆಯ ಹಣತೆಯ ಬೆಳಕಿನಿಂದ ಉಳಿಯುತ್ತಾಳೆ. ಅದು ಬರಿ ಬೆಳಕಲ್ಲ, ಭರವಸೆಯೂ ಹೌದು.

ಮೆಹರುನ್ ಶತಮಾನಗಳ ಭಾರತವನ್ನು ಪ್ರತಿನಿಧಿಸುತ್ತಿರುವ ಮಹಿಳೆಯಾದರೂ, ಶೋಷಣೆಯು ಇಂದಿಗೂ ಮುಂದುವರೆದಿರುವ ಮಹಿಳಾ 'ಸಂವಿಧಾನ ವಿರುದ್ಧ ನಡೆ'. ಇಂತಹ ಕೃತಿ ಬೂಕರ್ ಪ್ರಶಸ್ತಿ ಪಡೆಯಲು ಕಾರಣವೇ ಈ ಮಹಿಳೆಯರ ನೋವಿನ ಕುರಿತ ಬಿಡುಗಡೆ. ಈ ಕೃತಿಯನ್ನು ಪುರುಷ ಮನಸ್ಸುಗಳು ಸ್ವೀಕರಿಸಬೇಕಾದ ಹಲವು ದೃಷ್ಟಿಕೋನಗಳು ಧರ್ಮಾತೀತವಾಗಿ ಕೆಲಸಮಾಡಿವೆ.

ಸಲ್ಮಾ ಮತ್ತು ಮುನ್ನಿ

'ಕರಿನಾಗರಗಳು' ಕತೆಯ ಮುನ್ನಿ, 'ಎದೆಯ ಹಣತೆ'ಯ ಸಲ್ಮಾ ಇಬ್ಬರೂ ಭರವಸೆಯ 'ಎದೆಯ ಹಣತೆಗಳು'. ಆದರೆ, ಮುನ್ನಿ ಸೋಲನ್ನು ಅನುಭವಿಸುವುದು ಶೋಷಣೆಯ ಫಲಿತವಾಗಿ, ಮುಂದುವರೆದ ಸಲ್ಮಾ ಶೋಷಣೆಗೆ ಬೆಳಕಾಗಿ ಗೆಲ್ಲುತ್ತಾಳೆ. ಮುಂದೆ, ಹೆಣ್ಣು ಹದ್ದಿನ ಸ್ವಯಂವರದಲ್ಲಿ ಮುಸ್ಲಿಂ ಮಹಿಳೆ ನ್ಯಾಯವಾದಿಯಾಗುವ ರೂಪವು ಬದಲಾವಣೆಯ ಸಂಕೇತ ಹಾಗೂ ಎಚ್ಚರವಾಗಿದೆ. ಹಸೀನಾ ಹಂಬಲಿಸುವ ನ್ಯಾಯವಾಗಲೀ, ಸಲ್ಮಾ ಕಾಣುವ ಕನಸಾಗಲಿ ಹೀಡೆರುತ್ತದೆ ಎಂಬ ಭರವಸೆಯನ್ನು ಇತ್ತೀಚಿನ ಸಂಕಲನದಲ್ಲಿ ಮುಕ್ತವಾಗಿ ಪ್ರಕಟಿಸಿದ್ದಾರೆ. ಇಲ್ಲಿ ಬದಲಾಗುವುದು ಮುಸ್ಲಿಂ

ಮಹಿಳೆ ಮಾತ್ರವಲ್ಲ. ಭಾರತೀಯ ಮಹಿಳಾ ಮನೋಲೋಕ. ಅವರಿಗೆ ದೊರೆತಿರುವ ಅರ್ಥಪೂರ್ಣ ಶಿಕ್ಷಣದ ಬೆಳಕು. ಪುರುಷರಲ್ಲಿ ಉಂಟಾದ ಸಮತೆಯ ಸಂವಿಧಾನದ ಚಿಂತನೆಗಳು. ಇಂದು ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆಯು ಬಂಧನದ ಬೇಡಿಗಳನ್ನು ಕಳಚಿ, ಸ್ವತಂತ್ರವಾಗಿ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ಮಹಿಳೆಯರ ನ್ಯಾಯಕ್ಕಾಗಿ ಬದಲಾಗಬೇಕಾದುದು ಮನಸ್ಸೇ ಹೊರೆತು ಮನುಷ್ಯನಲ್ಲ ಎಂಬ ಪಾಠಗಳನ್ನು ಅಲ್ಲಲ್ಲೇ ಕತೆಗಾರ್ತಿ ನಿರೂಪಿಸುತ್ತಲೇ ಸಾಗುತ್ತಾರೆ.

ಕುಟುಂಬ 'ರಾಜಕಾರಣ'

ಕುಟುಂಬಗಳು ರಾಜಕಾರಣದ ಗೂಡುಗಳಾದರೆ, ಅಲ್ಲಿ ಅಧಿಕಾರ ಮತ್ತು ಶೋಷಣೆಗಳು ಸದಾ ಉಸಿರಾಡುತ್ತವೆ. ಎದೆಯ ಹಣತೆ ಕಥೆಯು ಇಂತಹ ಎರಡು ಗೂಡುಗಳ ನಡುವೆ ಮುಖಾಮುಖಿಯಾಗುವ ಹೆಣ್ಣಿನ ಅಸ್ಮಿತೆಯು ಕಂಡುಬರುತ್ತದೆ. ಮೆಹರುನ್ ಕೇವಲ ಆಶ್ರಯವನ್ನು ಅರಸುತ್ತಿಲ್ಲ. ನ್ಯಾಯವನ್ನು ಬೇಡುತ್ತಿದ್ದಾಳೆ. ಗಂಡನು ಗಂಡನಾಗಿಯೇ ಉಳಿಯದೆ, ವ್ಯಭಿಚಾರಿಯಾಗಿರುವ ವಿರುದ್ಧ ಪ್ರತಿಭಟಿಸುತ್ತಿದ್ದಾಳೆ. ಇದೇ ಹಾದಿಯಲ್ಲಿ ನೋವು ಪಡುವ ಹಸೀನಾಳಿಗೆ ಅಕ್ಷರ ಜ್ಞಾನ ಇಲ್ಲದಿದ್ದರೂ ಪುರುಷನ ಪರಹೆಣ್ಣು ಪ್ರಲೋಭ ಬೇಗ ತಿಳಿಯುತ್ತದೆ. ತನ್ನ ಮಗಳನ್ನು ಉಳಿಸಿಕೊಳ್ಳಲು ತುರ್ತು ಹಣ ಬೇಕಿರುವ ಕಾರಣ, ನ್ಯಾಯ ಕೇಳುತ್ತಿದ್ದಾಳೆ. ಮೆಹರುನ್ ನ್ಯಾಯವು ವಿಭಿನ್ನವಾಗಿದೆ. ಭವಿಷ್ಯದ ಚಿಂತನೆಯಾಗಿದೆ. ಕುಟುಂಬಗಳು ಕುಟುಂಬಗಳಾಗಿಯೇ ಉಳಿಯಬೇಕೆಂಬ ಹಂಬಲವಿದೆ. ತನ್ನ ತಾಯಿಯು ಸಹನೆ ಮತ್ತು ಪ್ರೀತಿಯಿಂದ ಗಂಡನನ್ನು ದಾರಿಗೆ ತರಬೇಕು ಎಂದಾಗ 'ಅಮ್ಮಾ... ಈ ಮಾತುಗಳು ಬೇರೆ, ಬದುಕು ಬೇರೆ. ನನಗೂ ಮನಸ್ಸು ಅನ್ನೋದಿಲ್ವೆ... ಭಾವನೆಗಳಿಲ್ವೆ... ನನ್ನನ್ನು ತೊರೆದು ಯಾವಳ ಹಿಂದೆನೋ ಅಲೆದ ಮನುಷ್ಯನ್ನ ನಾನು ಗಂಡ ಅಂತ ಗೌರವಿಸೋಕ್ಕೆ ಸಾಧ್ಯವಿಲ್ಲ. ಅವನನ್ನು ನೋಡಿದರೆ ಸಾಕು ನನ್ನ ಮೈಯೆಲ್ಲ ಉರಿಯುತ್ತೆ. ಇನ್ನು ಪ್ರೀತಿಸೋ ಮಾತು ದೂರವೇ ಉಳೀತು.'

ಮೆಹರುನ್‌ಳ ಈ ಮಾತುಗಳು ಕುಟುಂಬ ರಾಜಕಾರಣಕ್ಕೆ ಸವಾಲೊಡ್ಡುತ್ತವೆ. ಜೊತೆಗೆ ಶೋಷಣೆಯಿಂದ ಮುಕ್ತ ಬಿಡುಗಡೆಯನ್ನು ಹಂಬಲಿಸುತ್ತವೆ. ಹೊಂದಿಕೆಯ ಮಾತುಗಳು ಕುಟುಂಬದಿಂದಲೇ ಬಂದರೂ ಮುಲಾಜಿಲ್ಲದೆ ನಿರಾಕರಿಸುವ ಈಕೆಯ ಮನಸ್ಸು ರಾಜಿಯಾಗಲು ಬಯಸುವುದಿಲ್ಲ. ಅಕ್ಷರ ಕಲಿತ ಈಕೆಗೆ ಸರಿತಪ್ಪುಗಳ ಅರಿವಿದೆ. ಆ ಅರಿವಿನಲ್ಲಿ ನ್ಯಾಯವನ್ನು ಹಂಬಲಿಸುವ ಹಾಗೂ ಪುರುಷ ಪ್ರಧಾನತೆಯ, ಒಪ್ಪಿಸಲಾದ ಶೋಷಣೆಗಳ ವಿರುದ್ಧ ಈಕೆಯ ಧ್ವನಿ ಇದೆ. ಈ ಧ್ವನಿಯೇ ಸಮಾಜದ ಕುಟುಂಬ

ರಾಜಕಾರಣವನ್ನು ಪ್ರಶ್ನಿಸಿದ್ದು, ಹಾಗೂ ಬಿಡುಗಡೆಗಾಗಿ ಹಂಬಲಿಸಿದ ನೈತಿಕ ಹಕ್ಕಾಗಿದೆ. ಈಕೆಯಿಂದ ಪ್ರಾರಂಭವಾದ ಈ ಹೋರಾಟವು ಮುಂದಿನ ತಲೆಮಾರು ಸಲ್ಮಾಳ ಜಗತ್ತಿಗೆ ನ್ಯಾಯ ದೊರೆಯಬಹುದೆಂಬ ಹಂಬಲವಿದೆ. ಈ ಬಯಕೆಯ ಬೇರುಗಳು ಇಂದು ಸಾಕಷ್ಟು ಕಡೆ ಫಲ ನೀಡಿರುವ ಮಾದರಿಗಳು ಕಣ್ಣ ಮುಂದಿವೆ.

ಕಥೆಯು ನೀಡುವ ಕಸರತ್ತು

ಬಾನು ಮುಷ್ತಾಕ್ ಅವರ ಕಥೆಗಳಿಗೆ ಹಲವು ಆಯಾಮಗಳಿವೆ. ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ಕೌಟುಂಬಿಕ ನೋವುಗಳನ್ನು 'ಮಸೀದಿ ನ್ಯಾಯ'ಗಳ ಮೀರಿ, ಸಂವಿಧಾನದ ಕಾನೂನಿಗೆ ತಂದು ಗೆಲ್ಲಿಸುವ ಅಥವಾ ಸೋಲಿನಲ್ಲೂ ಗೆಲ್ಲಬೇಕಾದ ಭರವಸೆ ತುಂಬುವ ಜೀವಪರ ಕಾಳಜಿಗಳಿವೆ. ಈ ಕಥೆಗಳನ್ನು ಓದುತ್ತಿದ್ದರೆ, ಹಿಂದೂ ಧರ್ಮದಲ್ಲಿಯೂ, ಜೈನ, ಕ್ರೈಸ್ತರಲ್ಲಿಯೂ ಇದೇ ನೋವುಗಳನ್ನು ಪುರುಷಾಧಿಕಾರ ನಿರ್ವಹಿಸುತ್ತಿದೆಯಲ್ಲವೇ ಅನಿಸುತ್ತದೆ.

ಇವರ ಕಥೆಗಳು 'ಪ್ರತ್ಯೇಕತೆ'ಯನ್ನು ನಿರಾಕರಿಸಿ, ಸಮುದಾಯದಲ್ಲಿ ಧೈರ್ಯವಾಗಿ ಬಹುತ್ವ ನೆಲೆಯ ಬಂಡಾಯವೇಳುತ್ತವೆ. ಕಥೆಗಳಲ್ಲಿ ಹೌದದು ಎನ್ನುವುದಕ್ಕಿಂತ ಏಕೆ, ಹೀಗೆಲ್ಲಾ ಇದೆಯಾ ಎಂಬ ಹಲವು ಪ್ರಶ್ನೆಗಳೊಟ್ಟಿಗೆ ನಮ್ಮ ಓದುವಿನ ನಿರಂತರತೆಯು ಸಾಗುತ್ತದೆ. ಕಥೆಯಾಗುವ ಪ್ರತಿ ಜೀವವೂ ಹಲವು ನೋವುಗಳ ಚರಿತ್ರೆಯನ್ನು ದಾಖಲಿಸುತ್ತದೆ. ಶತಮಾನಗಳ ನೋವಲ್ಲಿ ಅಸಹಾಯಕರಾಗದೆ ಪುಟಿದೇಳುವ 'ನ್ಯಾಯಪರ'ವಾದಗಳು ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳಿಗೆ ಬಿಡುಗಡೆಯ ದಾರಿಯಂತೆ ಕಾಣಿಸಿದರೂ ಸಮಾಜದ ಎಲ್ಲಾ ಸಮುದಾಯಗಳಿಗೂ ಸಾಕಷ್ಟು ಶಕ್ತಿ ತುಂಬುತ್ತವೆ. ಹಸೀನಾ ಕಥೆಯು ನಿರೂಪಿಸುವ ಬಡವರು ಮತ್ತು ಶ್ರೀಮಂತರು ಎರಡೂ ವರ್ಗದಲ್ಲಿಯೂ ಮಹಿಳೆ 'ತನ್ನ ಉಳಿವಿನ' ನ್ಯಾಯಕ್ಕಾಗಿ ಹೋರಾಡುತ್ತಲೇ ಬದುಕುತ್ತಾಳೆ. ನಿರ್ಗತಿಕ ಹಸೀನಾ ಬದುಕಾಗಲಿ, ಶ್ರೀಮಂತ ಮಹಿಳೆಯಾದ ಮೌಲ್ವಿಯ ಹೆಂಡತಿಯಾಗಲಿ, ಮನೆಗೆಲಸ ನೀಡಿದ ಶ್ರೀಮಂತ ಹೆಣ್ಣಾದ ಜೂಲೇಕಾ ಬೇಗಂ ಆಗಲಿ ಒಂದಲ್ಲ ಒಂದು ರೀತಿಯಲ್ಲಿ ಪುರುಷರಿಂದ ಶೋಷಣೆಗೆ ಒಳಗಾದವರೇ ಆಗಿದ್ದಾರೆ. ಈ ಮಾರ್ಗದ ಕಥಾ ನಿರೂಪಣೆಯು ಸಮುದಾಯ ಮತ್ತು ಸಮಾಜದ ಸರ್ವರನ್ನು ಎಚ್ಚರಿಸುವಲ್ಲಿ ಸೂಕ್ಷ್ಮ ಸಂವೇದನೆಗಳಾಗಿವೆ.

ಬಾನು ಮುಷ್ತಾಕ್ ಅವರ ಕಥೆಗಳು 'ಸೋಲನ್ನು ಸರಳವಾಗಿ ನಿರೂಪಿಸಿದರೂ' ಗೆಲ್ಲುವ ನೂರು ದಾರಿಗಳನ್ನು ಹೇಳಿಕೊಡುತ್ತವೆ. ಆ **ದಾರಿಗಳು** ಬಿಡುಗಡೆಯನ್ನು

ಅಂತರಂಗದ ಅಸ್ಮಿತೆಯನ್ನಾಗಿಯೂ ಬೆಳಗಬಲ್ಲವು. ಇವರ ಕಥೆಗಳ ಆಯ್ಕೆಯು ಕನ್ನಡ ಮಣ್ಣಿನ 'ಹೆಣ್ಣು ನಿರೂಪಿಸುವ ಕಥನ' ಕುಸುಮಗಳು. ಬಾಡುವ ಸಂದರ್ಭದಲ್ಲೂ ಅರಳುವ ಇನ್ನೊಂದು ಚೈತನ್ಯಕ್ಕೆ ಕಾರಣವಾಗುವ ಧೀಶಕ್ತಿಗಳು. ಅವು ಸಂವಿಧಾನದ ಅಡಿಯಲ್ಲಿ ಮಾತನಾಡುತ್ತವೆ. ಇಲ್ಲಿ ಸೋತರೂ ಕೂಡ 'ಮೌನ ಮತ್ತು ಹೊಂದಿಕೆಗೆ' ಜಾಗವಿರುವುದಿಲ್ಲ.

ಫಲಿತಗಳು

1. ಎದೆಯ ಬೆಳಕು ಮೂಡುವ ಪ್ರತಿ ಸಮಯಗಳನ್ನು 'ತುಡಿತ'ದ ಹಂಗಿನಲ್ಲಿಯೇ ಬೀರುವ ಅನಂತತೆ ಇವರ ಕಥೆಗಳಿವೆ.
2. ವ್ಯವಸ್ಥೆಯ ಕ್ರೌರ್ಯವನ್ನು ಅನಾವರಣ ಮಾಡುತ್ತಲೇ, ಬದಲಾವಣೆಯಲ್ಲಿರುವ ಸುಖದ ಸಾಂತ್ವನವನ್ನು ತೆರೆದಿಡುತ್ತವೆ.
3. ವರ್ತಮಾನದ ಯುದ್ಧ ಮನೋ ಚಿಂತನೆಗಳಿಗೆ ಹಲವು ಕೀಲಿಕೈಗಳು ಇವರ ಕಥನ ಹಾಗೂ ಓದುಗಳ ಸೂಕ್ಷ್ಮಗಳಲ್ಲಿ ಲಭಿಸುತ್ತವೆ.
4. ಮುಸ್ಲಿಂ ಸಮುದಾಯ ವಿರೋಧಿ ಧೋರಣೆಗಳನ್ನು ಹತ್ತಿಕ್ಕುವ ಸಮಾಜದ ಬಿಸಿ ಮನೋವ್ಯಾಪಾರಕ್ಕೆ ಈ ಕಥೆಗಳು ಸಹನೆ, ತಾಳ್ಮೆ ಹಾಗೂ ಧರ್ಮ ರಹಿತ ಚಿಂತನೆಗಳನ್ನು ಬೆಳಸಿ ಮನುಷ್ಯತ್ವವನ್ನು ಮಧುರಗೊಳಿಸುತ್ತವೆ.
5. ವಿರೋಧಗಳು ಮನೋ ವೈಕಲ್ಯಗಳು. ಅವುಗಳು ಕುಟುಂಬದಿಂದಲೇ ಜನಿಸಿ, ವಿಶ್ವವ್ಯಾಪಾರದಲ್ಲಿ ಸದ್ದುಮಾಡುವ ಎಲ್ಲಾ ತಪ್ಪುಗಳನ್ನು ಕ್ಷಮಿಸಬಾರದೆಂಬ 'ಬಂಡಾಯ' ಧೋರಣೆಯನ್ನು ಹೇಳಿಕೊಡುತ್ತವೆ.
6. ಪಿತೃಪ್ರಧಾನ ವ್ಯವಸ್ಥೆಯನ್ನು ನಿರಾಕರಿಸುವ, ಪ್ರೇಮದ ಮೂಲಕ ಸಮತೆಯ ಸಂವಿಧಾನವನ್ನು ಉಸಿರಾಡುವ ಇವರ ಜೀವಪರ ಕಾಳಜಿಯು ಕಥನಗಳ ವಿಶೇಷತೆ.
7. ಪ್ರತಿ ಜೀವಕ್ಕೂ ಮತ್ತೊಂದು ಜೀವದ ಎದೆಯ ಹಣತೆಯ ಬೆಳಕು ಇದ್ದೇ ಇರುತ್ತದೆ. ಅದನ್ನು ಕಾಪಿಡುವ ಉದ್ದೇಶವು ನಮ್ಮ ಜೀವನದ ಸಾರ್ಥಕತೆ ಎಂಬುದನ್ನು ನಿರೂಪಿಸುತ್ತಾರೆ.
8. ಕಥೆಗಳು ಘಟನೆಗಳ ನಿರೂಪಣೆಗಳಲ್ಲ, ಚಳುವಳಿ, ಬಂಡಾಯವನ್ನು ಸರಳವಾಗಿಯೇ ನಿರೂಪಿಸುವ ಜೀವಂತ ಕಥನಗಳು.

ಹೀಗೆ ಒಂದು ಕಥೆಯ ಹಲವು ಓದುಗಳನ್ನು, ಬಿಡುಗಡೆಗಳನ್ನು ಹಂಬಲಿಸುವ ಕಾರಣದಿಂದಲೇ ವಿಶ್ವಮಾನ್ಯಗೊಳ್ಳುತ್ತವೆ. ಒಂದು ಪ್ರಶಸ್ತಿ ಲಭಿಸುವಾಗ ಅದು ಎಲ್ಲರನ್ನೂ

ಹಲವು ಕಾರಣಗಳಲ್ಲಿ 'ಒಳಗೊಳ್ಳುವ' ಶಕ್ತಿ ಪಡೆದಿದ್ದರೆ ಮಾತ್ರ ಅದು ಶ್ರೇಷ್ಠತೆಯ ಮೌಲ್ಯವನ್ನು ಪಡೆಯುತ್ತದೆ.

9. ಕುಟುಂಬ ರಾಜಕಾರಣವನ್ನು ಪ್ರಶ್ನಿಸುವ ಹಾಗೂ ಭವಿಷ್ಯಕ್ಕಾಗಿ ಹಂಬಲಿಸುವ ನೈತಿಕ ಹೋರಾಟದ ತುಣುಕು ಈ ಕಥೆಯಲ್ಲಿದೆ.

10. ಸಲ್ಮಾನಂತಹ ಪಾತ್ರಗಳು ಪ್ರತಿ ಮನೆಯಲ್ಲೂ ಸೃಷ್ಟಿಯಾಗುತ್ತವೆ. ಆದರೆ, ಅವುಗಳ ಬೆಳವಣಿಗೆಯನ್ನು ಮತ್ತೆ ಅಂಧಕಾರಕ್ಕೆ ತಳ್ಳುವ ಯಾವುದೇ ಧರ್ಮವು ಮನುಷ್ಯ ವಿರೋಧಿಯಾದುದು.

ಒಟ್ಟಾರೆ ಒಂದು ಕಥೆಯು ಈ ಸಮಾಜವನ್ನು, ಮನಸ್ಸುಗಳನ್ನು ವಿಶ್ವ ವ್ಯಾಪಿಸಿ ಓದುವುದಾದರೆ ಆ ಕಥೆಯು ಸಾರ್ವಕಾಲಿಕ ಸತ್ಯಗಳೊಂದಿಗೆ ಬೆಸೆದಿರುತ್ತದೆ. ಈ ಎಲ್ಲಾ ಸೂಕ್ಷ್ಮತೆಗಳನ್ನು ಕಥೆಗಾರರು ತಮ್ಮ ಬರಹದ ಶೈಲಿಯಲ್ಲಿ ಅರ್ಥಪೂರ್ಣವಾಗಿ ದುಡಿಸಿಕೊಂಡಿರುವುದು ಕನ್ನಡ ಭಾಷೆಯ ಶ್ರೀಮಂತಿಕೆ ಎನ್ನಬಹುದು.

ಅಧ್ಯಯನ ಕೃತಿಗಳು :

1. ಹಸೀನಾ ಮತ್ತು ಇತರ ಕಥೆಗಳು., ಬಾನು ಮುಷ್ತಾಕ್., 2025., ಅಭಿರುಚಿ ಪ್ರಕಾಶನ, ಮೈಸೂರು

2. ಭಾವನ., ಮೊದಲ ಸಂಚಿಕೆ., ಏಪ್ರಿಲ್ 2000., ಜಯಂತ ಕಾಯ್ಕಿಣಿ(ಸಂ)., ಎದೆಯ ಹಣತೆ, ಬಾನು ಮುಷ್ತಾಕ್., ವಿಜಯ ಸಂಕೇಶ್ವರ. ಆನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು. ಪುಟ ಸಂಖ್ಯೆ 116–137

3. Heart Lamp selected Stories., Banu Mushtaq., Deepa Bhasthi(T)., 2025., Sheffield, London, New york.

ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ
ಭಾಷೆ ಮತ್ತು ಸಮಾಜ ವಿಜ್ಞಾನ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ
ಬೆಂಗಳೂರು 560077
ravishankar@kristujayanti.com

¤ ಕವಿತೆ ¤

ಮೋಕ್ಷದ ನಿರೀಕ್ಷೆಯಲ್ಲಿ ಅವಳು

¤ ನಳಿನ

ಈ ಕಣ್ಣೀರ ಬಟ್ಟಲು ...
ಮೊಗೆಮೊಗೆದೊಡನೆ ಖಾಲಿಯಾಗುವ
ಬಹುದೊಡ್ಡ ಪಿಪಾಯಿಯಲ್ಲ,
ಸಣ್ಣದಾದರೂ ಅಕ್ಷಯಪಾತ್ರೆ !
ಈ ಕಣ್ಣೀರ ಬಟ್ಟಲ ಕಟ್ಟೆಯೊಡೆದರೂ
ಕಾಲುವೆಗಳು ಮಾತ್ರ ನೇರ, ನಿಶ್ಚಿತ,
ಯಾವುದೇ ಬಿರುಕಿಲ್ಲ !

ಅವಳೆದೆಯೊಳಗಿಂದ ಉಕ್ಕಿಬಂದ ಕಣ್ಣೀರ ಧಾರೆ
ಅವಳೆದೆಯ ಮೇಲಿಳಿದು
ಮಡಿಲ ಅಣೆಕಟ್ಟೆಯೊಡಲ ತುಂಬಿದರೂ
ಬೇಸಾಯಕ್ಕೆ ಬರುವುದಿಲ್ಲ !
ಅವಳ ಜನರ ಕಗ್ಗಲ್ಲ ಮನಸು ಕರಗುವುದಿಲ್ಲ !
ಕುಡಿಯಲೂ ಯೋಗ್ಯವಲ್ಲ !
ರಕ್ತಪಿಪಾಸುಗಳಿಗೆ ನೀರಡಿಸುವುದಿಲ್ಲ !
ಎದೆ ಬಿರಿದು ಛಿದ್ರವಾಗುವಂತಷ್ಟು ಅಬ್ಬರ
ಅವಳ ಜನರ ಕಿವಿಗಿಳಿವುದು ದುರ್ಬರ !
ಅವರಿಗೆ ಕಿವಿ ಕೇಳಿಸುವುದಿಲ್ಲವೆಂದಲ್ಲ,
ಕಿವಿಗಳೇ ಇಲ್ಲ ಅವರಲ್ಲಿ ನಲುಗುವ ದನಿಗೆ !

ಅತ್ತೂ ಕರೆದೂ ನೊಂದು ಬೆಂದು
ನಿಗಿನಿಗಿ ಕೆಂಡದಂತಾದ ಕಣ್ಣಾಲಿಗಳ ಬಿಸಿಗೆ
ಬಳಿಸಾರಿ ನಗುನಗುತ್ತಾ ಚಳಿಕಾಯಿಸುತ್ತಾರೆ
ವಾಸ್ತವದ ವಸಂತದಲ್ಲೂ !
ದುಷ್ಟತನದ ಶಿಶಿರನ ಹಿಡಿತಕೆ ಸಿಕ್ಕ ಅಂತರಂಗ
ಚಿಗುರಿಲ್ಲ, ಒಗರಿಲ್ಲ,
ಫಲಪುಷ್ಪ? ಕೇಳಬೇಡಿರೆಲ್ಲ !

ಮನದಲ್ಲಿ ಅಪೇಕ್ಷೆಗಳಿರುವವರೆಗೆ
ಭರವಸೆಯ ಆಸೆ ಹಸಿರಾಗಿರುವವರೆಗೆ
ನಿರಾಸೆಯ ಅವಕಾಶಗಳು
ಬೆನ್ನಟ್ಟಿ ಬರುತ್ತವಂತೆ !
ಆಸೆಗಳ ನಾಶವೇ ಮೋಕ್ಷವಂತೆ !!

ತಾನು ತನ್ನವರೊಳಗೊಂದಾಗಿ ಬದುಕುವ ಅಪೇಕ್ಷೆ,
ತನ್ನವರು ತನ್ನ ತಲೆನೇವರಿಸಿ ಸಂತೈಸುವರೆಂಬಾಸೆ,
ಅವಳಲ್ಲಿ ನಾಶವಾಗಿದೆಯಂತೆ !
ದಿನದಿನವೂ ಆಸೆ ಅಪೇಕ್ಷೆಗಳ ಕೊಲ್ಲುತ್ತಿದ್ದಾಳಂತೆ !
ಆಸೆಗಳ ನಾಶಕ್ಕೆ ಕಣ್ಣೀರ ಧಾರೆಯೇ ಸಾಕ್ಷಿಯಂತೆ !
ಆದರೂ,
ಮೋಕ್ಷವಿನ್ನೂ ಪ್ರಾಪ್ತವಾಗಿಲ್ಲವಂತೆ !!! ...

(ಬಾಂಧವ್ಯಕ್ಕೆ ಭಾವ ಸಿಂಚನ, ಭಾವನಾ)

ನಳಿನ, ಸಹಶಿಕ್ಷಕರು
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕೊಪ್ಪ, ಗುಬ್ಬಿ ತಾಲ್ಲೂಕು

ಸಂಶೋಧನ ಲೇಖನಗಳು

ಹಟ್ಟಿಯಂಗಡಿ ನಾರಾಯಣರಾಯರ ಆಂಗ್ಲ ಕವಿತಾವಳಿ – ಒಂದು ವಿಮರ್ಶಾತ್ಮಕ ನೋಟ

¤ ಡಾ. ಜಯಲಲಿತಾ

ಪ್ರತಿಯೊಂದು ಸಾಹಿತ್ಯವೂ ಆಯಾಕಾಲದ ಸಂಸ್ಕೃತಿಗಳ ಸ್ವರೂಪವನ್ನು ಒಂದಲ್ಲ ಒಂದು ರೀತಿ ಪ್ರತಿಬಿಂಬಿಸುತ್ತವೆ. ಆದರೆ ಅನುವಾದ ಸಾಹಿತ್ಯಕ್ಕೆ ಬೇರೆಯದೇ ಆದ ವಿಶೇಷತೆಯಿದೆ. ಅದು Source Languageನಲ್ಲಿ ಪ್ರತಿಬಿಂಬಿತವಾಗಿರುವ ವಿಭಿನ್ನ ಸಂಸ್ಕೃತಿಯನ್ನು Target Languageನ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ, ಮೂಲಕ್ಕೂ ಹೆಚ್ಚಿನ ಧಕ್ಕೆಯಾಗದಂತೆ ಅನುವಾದಿಸಬೇಕಾಗುತ್ತದೆ. ಹಾಗಾಗಿಯೇ ಅನುವಾದಕನ ಜವಾಬ್ದಾರಿ ಬಹಳ ಸೂಕ್ಷ್ಮ ಮತ್ತು ಮಹತ್ತಾದುದಾಗಿರುತ್ತದೆ. ಆತ ಸಾಂಸ್ಕೃತಿಕ ಮಧ್ಯಸ್ಥಿಕೆಯ ಕಾರ್ಯವನ್ನು ಮಾಡುತ್ತಿರುತ್ತಾನೆ. ಅನೇಕ ಅಂಶಗಳನ್ನು, ಮಾಹಿತಿಗಳನ್ನು ಸಂಸ್ಕೃತಿಯಿಂದ ಸಂಸ್ಕೃತಿಗೆ ವರ್ಗಾಯಿಸುವ ಪ್ರಕ್ರಿಯೆಯನ್ನು ನಿರ್ವಹಿಸುತ್ತಿರುತ್ತಾನೆ.

ಒಂದು ದೇಶದ ಸಂಸ್ಕೃತಿಯು ಇತರ ಸಂಸ್ಕೃತಿಗಳೊಂದಿಗೆ ಸಂವಹನ ನಡೆಸುವ ಮೂಲಕವೇ ಅಭಿವೃದ್ಧಿ ಹೊಂದುತ್ತದೆ. ಆ ನಿಟ್ಟಿನಲ್ಲಿ ಅನುವಾದಕನ ಪಾತ್ರ ಮಹತ್ವದ್ದು. ಸಂಸ್ಕೃತಿಯು ಎರಡು ಮಾನವ ಮನಸ್ಸುಗಳ ಸಂವಾದದ ಫಲ. ಎರಡು ಮನಸ್ಸುಗಳನ್ನು ಪರಸ್ಪರ ಮುಖಾಮುಖಿಯಾಗಿಸಿ ಸಂವಹನಕ್ಕೆ ಅನುವು ಮಾಡಿಕೊಡುವ ಗುರುತರವಾದ ಜವಾಬ್ದಾರಿ ಅನುವಾದಕನದ್ದು. ಅನುವಾದ ಸಾಹಿತ್ಯವು ಕೇವಲ ಎರಡು ಭಾಷೆಗಳ ನಡುವಿನ ಸಂವಹನ ಕಾರ್ಯ ಮಾತ್ರವಲ್ಲ ಅದು ಎರಡು ವಿಭಿನ್ನ ಸಂಸ್ಕೃತಿಗಳನ್ನು ಮುಖಾಮುಖಿಯಾಗಿಸುವ ಪ್ರಕ್ರಿಯೆಯೂ ಹೌದು. ಹಾಗಾಗಿಯೇ ಅನುವಾದಕನಿಗೆ ಎರಡು ಭಾಷೆಗಳು ಮಾತ್ರವಲ್ಲ ಎರಡು ಸಂಸ್ಕೃತಿಗಳ ಸೂಕ್ಷ್ಮ ಪರಿಚಯವೂ ಇರಬೇಕಾಗುತ್ತದೆ.

ಅನುವಾದ ಕಾರ್ಯಗಳು ಕನ್ನಡ ಸಾಹಿತ್ಯಕ್ಕೆ ಹೊಸದೇನಲ್ಲ. ಪ್ರಾಚೀನ

ಕಾಲಘಟ್ಟದಲ್ಲಿಯೇ ನಮ್ಮ ಕವಿಗಳು ಸಂಸ್ಕೃತ, ಪ್ರಾಕೃತ ಮೊದಲಾದ ಭಾಷೆಗಳ ಅನೇಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದರು. ಆದರೆ ಅವುಗಳನ್ನು ಅನುವಾದವೆನ್ನಲಾಗುವುದಿಲ್ಲ. ಪಂಪನ ಆದಿಪುರಾಣ ಜಿನಸೇನರ ಪೂರ್ವಪುರಾಣದ ಯಥಾವತ್ತು ಅನುವಾದವಲ್ಲ. ವಿಕ್ರಮಾರ್ಜುನ ವಿಜಯವನ್ನು ವ್ಯಾಸರ ಮಹಾಭಾರತದ ಅನುವಾದವೆನ್ನಲಾಗುವುದಿಲ್ಲ. ಇವೆಲ್ಲಾ ರೂಪಾಂತರ, ಸಂಗ್ರಹಾನುವಾದ, ಭಾವಾನುವಾದ, ಸಂಕ್ಷಿಪ್ತಾನುವಾದ ಮುಂತಾದ ಆಧುನಿಕ ಅನುವಾದದ ಬಗೆಗಳಿಗೆಲ್ಲಾ ಉದಾಹರಣೆಯಾಗಿ ನಿಲ್ಲುತ್ತವೆ.

ಇನ್ನು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅನುವಾದವು ಒಂದು ಪ್ರತ್ಯೇಕ ಶಾಖೆಯಾಗಿಯೇ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಕನ್ನಡ ಸಾಹಿತ್ಯವು ಬ್ರಿಟೀಷರ ವಸಾಹತುಶಾಹಿ ಪ್ರಭುತ್ವಕ್ಕೆ ವಿರೋಧ ತೋರುತ್ತಲೇ ಆ ಭಾಷೆಯ ಸತ್ವವನ್ನೆಲ್ಲಾ ತನ್ನ ಸಾಹಿತ್ಯಕ್ಕೆ ನೀಡುತ್ತಾ ಅನೇಕ ನೂತನ ಸಾಹಿತ್ಯ ಪ್ರಕಾರಗಳನ್ನೆಲ್ಲಾ ತನ್ನ ಒಡಲಿನೊಳಗೆ ಸೇರಿಸಿಕೊಂಡಿತು. ಪ್ರಾಚೀನ ಸಾಹಿತ್ಯವು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಸಮನ್ವಯಿಸಿ ಮಾರ್ಗ–ದೇಸಿ ರೂಪಿಸಿದಂತೆ, ನವೋದಯ ಪೂರ್ವ ಮತ್ತು ನವೋದಯದ ಕಾಲದಲ್ಲಿ ಪಾಶ್ಚಾತ್ಯ ಮತ್ತು ಪೌರಸ್ಯ ಸಂಸ್ಕೃತಿಗಳ ಸಮನ್ವಯದಲ್ಲೇ ಚೈತನ್ಯವನ್ನು ಕಂಡುಕೊಳ್ಳಲಾಯಿತು. ಈ ಸಂದರ್ಭದಲ್ಲಿ ಸಾಹಿತ್ಯಕ್ಕೆ ಹೊಸರೂಪ, ಹೊಸಭಾಷೆ, ಹೊಸವಸ್ತು, ಹೊಸಛಂದಸ್ಸು, ಹೊಸಚೈತನ್ಯ, ಹೊಸಶೈಲಿ ಹೀಗೆ ಅನೇಕ ಹೊಸತನಗಳು ಲಭ್ಯವಾದವು.

ಆರಂಭಘಟ್ಟದ ಅನುವಾದಕರಲ್ಲಿ ಎಸ್.ಜಿ. ನರಸಿಂಹಾಚಾರ್, ಪಂಜೆ ಮಂಗೇಶರಾಯ, ಗೋವಿಂದಪೈ, ಹಟ್ಟಿಯಂಗಡಿ ನಾರಾಯಣರಾಯರು ಪ್ರಮುಖರು ಅದರಲ್ಲಿಯೂ ಹಟ್ಟಿಯಂಗಡಿ ನಾರಾಯಣರಾಯರು ಆಂಗ್ಲ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಹೊಸಗನ್ನಡ ನವೋದಯಕ್ಕೆ ಅಡಿಗಲ್ಲು ಹಾಕಿಕೊಟ್ಟು, ಕನ್ನಡ ಕಾವ್ಯಮಾರ್ಗವು ಹೊಸಹೆಜ್ಜೆಯನ್ನಿಡುವಲ್ಲಿ ಸಹಕರಿಸಿದವರು. ಬೇರೆಯದೇ ಆದ ಪಾಶ್ಚಾತ್ಯ ಸಂಸ್ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಾಗ ಇವರು ಎದುರಿಸಿದ ಸವಾಲು, ಮಾಡಿಕೊಂಡ ಬದಲಾವಣೆ ಒಂದೆರಡಲ್ಲ. ಹೊಸ ಭಾಷೆ, ಹೊಸ ವಸ್ತು, ಹೊಸಭಾವಗಳನ್ನು ಪರಿಚಯಿಸಿದರೂ ಛಂದಸ್ಸಿನಲ್ಲಿ ಮಾತ್ರ ಹೊಸತನದ ಕೊರತೆ ಕಾಣುತ್ತಿತ್ತು. ಪ್ರಾಸವನ್ನು ಮೀರದೆ ಹಿಂದಿನವರಂತೆ ಅದನ್ನೊಂದು ಸಂಪ್ರದಾಯವಾಗಿ ಬಳಸಿದ್ದು ಹಟ್ಟಿಯಂಗಡಿ ನಾರಾಯಣರಾಯರ ಗುಣವೂ ಹೌದು, ಮಿತಿಯೂ ಹೌದು. ಇದರ ನಡುವೆಯೂ ಹೊಸ ಕಾವ್ಯಮಾರ್ಗಕ್ಕೆ ಬೇಕಾದ ಹಲಕೆಲವು ಬದಲಾವಣೆಗಳನ್ನು ಅಲ್ಲಲ್ಲಿ ಅನುಸರಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ಆರಂಭಕಾಲವನ್ನು ಕುರಿತು ಮಾತನಾಡುವವರೆಲ್ಲರೂ 1921ರಲ್ಲಿ ಪ್ರಕಟವಾದ ಬಿ.ಎಂ.ಶ್ರೀ ಅವರ 'ಇಂಗ್ಲೀಷ್ ಗೀತೆ'ಗಳೇ ಆಧುನಿಕ ಸಾಹಿತ್ಯದ ಹೆದ್ದಾರಿಯನ್ನು ತೆರೆಯಿತೆಂದು ಅಭಿಪ್ರಾಯಪಡುತ್ತಾರೆ. ಆದರೆ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ' ಎಂಬ ಕೃತಿಯೇ ಇಂಗ್ಲೀಷ್ ಕವಿತೆಗಳ ಅನುವಾದದ ಮೊದಲನೇ ಪ್ರಯತ್ನವಾಗಿದೆ. ಹಾಗಿದ್ದರೂ ಇದು ಹೆಚ್ಚು ಚರ್ಚೆಗೆ ಒಳಗಾಗಲಿಲ್ಲ. ಆಧುನಿಕ ಸಾಹಿತ್ಯದ ಹೆದ್ದಾರಿ ರೂಪುಗೊಳ್ಳುವುದಕ್ಕೆ ಮೊದಲೇ ಕಾಲುದಾರಿಯೂ ಇಲ್ಲದ ಮಾರ್ಗದಲ್ಲಿ ಸಾಗಿ, ಹೆದ್ದಾರಿ ರೂಪಿಸಲು ಸಹಕರಿಸಿದವರು ಎಸ್. ಜಿ. ನರಸಿಂಹಾಚಾರ್, ಪಂಜೆ ಮಂಗೇಶರಾಯರು, ಗೋವಿಂದಪೈ, ಹಟ್ಟಿಯಂಗಡಿ ನಾರಾಯಣರಾಯರು ಮೊದಲಾದವರು. ಇವರೆಲ್ಲರೂ ಸಾಂಸ್ಕೃತಿಕ ಮಧ್ಯವರ್ತಿಗಳಾಗಿ ತಮ್ಮ ಪಾತ್ರದ ಮಹತ್ವವನ್ನು ಅರಿತವರೇ ಆಗಿದ್ದಾರೆ. ಅನುವಾದದಲ್ಲಿ ಸಾಂಸ್ಕೃತಿಕ ವರ್ಗಾವಣೆ ಎನ್ನುವುದು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ'ಯಲ್ಲಿ ಈ ಬಗೆಯ ಸಾಂಸ್ಕೃತಿಕ ಅನುಸಂಧಾನವನ್ನು ಕಾಣಬಹುದು. ತಮ್ಮ ಸೃಜನಶೀಲತೆಯಿಂದ ನಮ್ಮ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಅದನ್ನು ಮರುಸೃಷ್ಟಿಸುವಂತಹ ಪ್ರಯತ್ನವನ್ನು ಹನಾ ಅವರ ಬಹುಪಾಲು ಕವಿತೆಗಳಲ್ಲಿ ಗಮನಿಸಬಹುದು. ಇದಕ್ಕೆ ಅವರಿಗಿದ್ದ ಅನುಭವದ ನೆಲೆಗಟ್ಟು ಕೂಡಾ ಮುಖ್ಯವಾಗುತ್ತದೆ. ಹನಾ ಅವರು ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ಬಗ್ಗೆ ಜ್ಞಾನ ಮತ್ತು ಒಲವನ್ನು ಹೊಂದಿದ್ದರು. ಇದನ್ನು ಅವರ ಕವನಗಳಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು.

ಹನಾ ಅವರ ಇಂಗ್ಲೀಷ್ ಕವಿತೆಗಳ ಅನುವಾದ ಕೃತಿಯ ಬಗ್ಗೆ ಸಾಕಷ್ಟು ಗೊಂದಲಗಳಿವೆ. "ವಾಗ್ಭೂಷಣ ಪತ್ರಿಕೆಯಲ್ಲಿ ಆಂಗ್ಲ ಕವಿತಾಸಾರ ಎಂಬ ಹೆಸರಲ್ಲಿ ಪ್ರಕಟವಾಗುತ್ತಿದ್ದ ಅನುವಾದಿತ ಕವನಗಳೇ ನಂತರ 1919ರಲ್ಲಿ ಆಂಗ್ಲ ಕವಿತಾವಳಿ ಎಂಬ ಹೆಸರಿನ ಪುಸ್ತಕವಾಗಿ ಪ್ರಕಟವಾದವು" ಎಂದು ಗಿರಡ್ಡಿ ಗೋವಿಂದರಾಜು ಅವರು ತಮ್ಮ ಪ್ರಮಾಣು ಎಂಬ ಅವರ ಕೃತಿಯಲ್ಲಿ ಬರೆಯುತ್ತಾರೆ. "ಇವರ ಆಂಗ್ಲಕವಿತಾವಳಿಯ ಪ್ರತಿ ಪಂಜೆಯವರಿಗೆ ಸಿಕ್ಕಿರಲಿಲ್ಲ ಕೊನೆಗೆ ರಟ್ಟು ಹರಿದ 'ಆಂಗ್ಲ ಕವಿತಾವಳಿ' ಎಂಬ ಹೆಸರಿನ ಪುಸ್ತಕದ ಪ್ರತಿಯನ್ನು ಪಂಜೆಯವರೋ ಅಥವಾ ಬೇರೆ ಯಾರೋ 'ಆಂಗ್ಲ ಕವಿತಾಸಾರದ'ದ ಪ್ರತಿ ಎಂದು ಭಾವಿಸಿದ ಕಾರಣ ಮುಂದೆ ಹಲವು ವರ್ಷಗಳ ಕಾಲ ಆಂಗ್ಲ ಕವಿತಾಸಾರ ಮತ್ತು ಆಂಗ್ಲ ಕವಿತಾವಳಿ ಎರಡೂ ಬೇರೆ ಬೇರೆ ಪುಸ್ತಕಗಳೆಂದು ತಪ್ಪು ಅಭಿಪ್ರಾಯ ಚಾಲ್ತಿಯಲ್ಲಿತ್ತು." ಎಂದು ಕೆಂಡಸಂಪಿಗೆ ಬ್ಲಾಗ್‌ನಲ್ಲಿ ಡಾ. ಜನಾರ್ಧನ್ ಭಟ್ ಸ್ಪಷ್ಟೀಕರಣ ನೀಡುತ್ತಾರೆ. ಇವೆಲ್ಲವನ್ನೂ

ಗಮನದಲ್ಲಿಟ್ಟುಕೊಂಡು ನೋಡಿದರೆ 'ಆಂಗ್ಲ ಕವಿತಾವಳಿ' ಎಂಬ ಕೃತಿಯೊಂದೇ ನವೋದಯ ಪೂರ್ವದ ಇಂಗ್ಲೀಷ್ ಕವಿತೆಗಳ ಅನುವಾದ ಕೃತಿ ಎಂಬುದು ನಿರ್ವಿವಾದವೆನಿಸುತ್ತದೆ. ಏಕೆಂದರೆ ಇದರ ರಚನಾಕಾರ್ಯ 1899ರ ಸುಮಾರಿನಲ್ಲೇ ಪ್ರಾರಂಭವಾದುದಾಗಿ ತೀನಂಶ್ರೀ ಅವರೇ 'ಸಮಾಲೋಕನ' ಎಂಬ ಕೃತಿಯಲ್ಲಿ ಹೇಳುತ್ತಾರೆ.

ಹೊಸಮಾರ್ಗ ಕಟ್ಟಿಕೊಡುವ ನಿಟ್ಟಿನಲ್ಲಿ ಯಶಸ್ವಿಯಾಗದ ಕಾರಣಕ್ಕೋ, ಹಳೆಯ ಕಾವ್ಯ ಪದ್ಧತಿಯನ್ನೇ ಅನುಸರಿಸಿದ್ದಕ್ಕೋ ಅಥವಾ ಸರಳವಾದ ಅರ್ಥೈಸುವಿಕೆಗೆ ಕಷ್ಟವಾದ ಕಾರಣಕ್ಕೋ ಇದು ಅಷ್ಟು ಮಟ್ಟಿಗೆ ಪ್ರಸಿದ್ಧಿಯಾಗಲಿಲ್ಲ. ಆದರೂ ಇಂಗ್ಲೀಷ್ ಕವಿತೆಗಳನ್ನು ಕನ್ನಡಕ್ಕೆ ತರುವಲ್ಲಿ ಮಾಡಿದ ಮೊದಲ ಪ್ರಯತ್ನವೆಂಬುದನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಈ ಕೃತಿ ಮಹತ್ತಾದುದೆಂದೆನಿಸುತ್ತದೆ.

ರಂ.ಶ್ರೀ ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 1820ರಿಂದ 1920ರ ಅವಧಿಯನ್ನು ಹೊಸ ಸಾಹಿತ್ಯದ ಮೊದಲ ಕಾಲ ಎಂದು ಕರೆದಿದ್ದಾರೆ. ಈ ನಿಟ್ಟಿನಲ್ಲಿ ನೋಡುವುದಾದರೆ ಹನಾ ಅವರು ಹೊಸಸಾಹಿತ್ಯದ ಆರಂಭದ ಹಂತಕ್ಕೆ ಸೇರಿದವರಾಗುತ್ತಾರೆ. ಬಿ.ಎಂ.ಶ್ರೀ ಅವರು ಎರಡನೇ ಹಂತದ ಕಾಲಘಟ್ಟಕ್ಕೆ ಸೇರುತ್ತಾರೆ. ಹಾಗಾಗಿ ಬಿ.ಎಂ.ಶ್ರೀ ಅವರ ಇಂಗ್ಲೀಷ್ ಗೀತೆಗಳಲ್ಲಿರುವ ಹೊಸ ಛಂದಸ್ಸು, ಸರಳಗನ್ನಡದ ಪದಗಳ ಬಳಕೆ, ಪ್ರಾಸದ ಮೀರುವಿಕೆ ಇವುಗಳನ್ನು ಮೊದಲ ಹಂತದ ಹನಾ ಅವರಲ್ಲಿ ನಿರೀಕ್ಷಿಸುವುದು ತಪ್ಪಾಗುತ್ತದೆ. ಯಾವಾಗಲೂ ಸಹ ಆರಂಭದ ಹೆಜ್ಜೆಗಳನ್ನಿಡುವವರು ಅಥವಾ ಹೊಸ ಮಾರ್ಗವೊಂದನ್ನು ಹುಡುಕಲು ಹೊರಟವರು ಬಹಳ ಜಾಗರೂಕರಾಗಿಯೇ ಇರಬೇಕಾಗುತ್ತದೆ. ಹಳೆಯದರ ಗುಂಗನ್ನು ಅಷ್ಟು ಬೇಗ ಕಿತ್ತು ಹೊರಬರಲಾಗುವುದಿಲ್ಲ. ಇವರು ಒಂದು ರೀತಿ ಹಳೆಯ ಮತ್ತು ಹೊಸಕಾಲಗಳ ಸಂಧಿಯುಗದಲ್ಲಿದ್ದಂತೆ. ಹಾಗಾಗಿಯೇ ಹನಾ ಅವರ ಕಾಲವನ್ನು, ಸಂದರ್ಭವನ್ನು ಮನಸ್ಸಿನಲ್ಲಿಟ್ಟುಕೊಂಡು ಅವರ ಕವಿತೆಗಳನ್ನು ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

ಹನಾ ಅವರ ಕವನಗಳು ಬಹುಪಾಲು 'ಕಾವ್ಯವೆಂದರೆ ಪ್ರೌಢಭಾಷೆ, ಪ್ರಾಸದ ಅನುಸರಣೆ, ಛಂದಸ್ಸಿನ ಬಳಕೆ ಅತ್ಯಗತ್ಯ' ಎಂಬ ಹಳೆಯ ಸಂಪ್ರದಾಯದ ಜಾಡಿನಲ್ಲೆ ಸಾಗುತ್ತಿವೆ. ಇದಕ್ಕೆ ಸ್ಪಷ್ಟ ಉದಾಹರಣೆಗಳು ನಮಗೆ ಅವರ ಕವನಗಳಲ್ಲಿ ಕಾಣಸಿಗುತ್ತವೆ. ಹಳೆಯ ಕನ್ನಡ ಛಂದಸ್ಸಿನ ಚೌಕಟ್ಟಿನೊಳಗೆ ಹೊಸತನವೊಂದನ್ನು ತರಲು ಯತ್ನಿಸುವ ವಿಶೇಷ ಪ್ರಯತ್ನವಿದ್ದರೂ ಹಳೆಯ ಛಂಧೋಬಂಧಗಳ ಲಯವೇ ಇಲ್ಲಿ ಮತ್ತೆ ಮತ್ತೆ ಕಿವಿಗೆ ಬೀಳುತ್ತದೆ. ಇಂಗ್ಲೀಷ್ ಕವನಗಳ ಪ್ರಭಾವವನ್ನೂ ದಾಟಿ, ಕನ್ನಡತನವನ್ನು

ಉಳಿಸಿಕೊಳ್ಳಬೇಕೆಂಬ ಮನೋಭಾವವೇ ಹನಾ ಅವರ ಅನುವಾದಗಳ ಸ್ವರೂಪವಾಗಿದೆ. ಇವರು ಅನುವಾದಕ್ಕೆ ಆಯ್ಕೆ ಮಾಡಿಕೊಂಡ ಕವನಗಳು ಜೀವನ ಧರ್ಮ, ಮನುಷ್ಯನ ಜೀವನಕ್ಕೆ ಮತ್ತು ರೀತಿನೀತಿಗೆ ಸಂಬಂಧಿಸಿದ್ದಾಗಿವೆ. ಇವಲ್ಲದೆ ತಾತ್ವಿಕ ಅಂಶಗಳಿಗೆ ಒತ್ತು ನೀಡುವ, ಪ್ರಾಕೃತಿಕ ವರ್ಣನೆಗೆ ಮಹತ್ವ ಕೊಡುವ ಕವನಗಳೂ ಸಹಾ ಇಲ್ಲಿವೆ. ಒಟ್ಟು 25 ಕವನಗಳಲ್ಲಿ ಮೊದಲ ಹತ್ತು ಷೇಕ್ಸ್‌ಪಿಯರ್‌ನ 'ಎಸ್ ಯು ಲೈಕ್ ಇಟ್', 'ಮರ್ಚೆಂಟ್ ಆಫ್ ವೆನೀಸ್', 'ಮಿಡ್ ಸಮ್ಮರ್ ನೈಟ್ ಡ್ರೀಮ್', 'ಮೆಷರ್ ಟು ಮೆಷರ್' ಮೊದಲಾದ ನಾಟಕಗಳ ಕೆಲವು ಭಾಗಗಗಳನ್ನು ಅನುವಾದಿಸಿದ್ದಾಗಿವೆ. ನಂತರದ 14 ಕವನಗಳು ಮಿಲ್ಟನ್, ಹೆನ್ರಿವೂಟನ್, ಜೇಮ್‌ಸ್ ಥಾಮ್ಸನ್, ವಿಲಿಯಂ ಕಾಲಿನ್‌ಸ್, ಥಾಮಸ್ ಗ್ರೇ, ಶೆಲ್ಲಿ, ಕೀಟ್ಸ್, ವರ್ಡ್ಸವರ್ತ್, ಲಾಂಗ್‌ಫೆಲೋ, ಜಾನ್ ವಿಟ್ಟಿಯರ್, ಎಮರ್ಸನ್‌ರ ಕವನಗಳ ಅನುವಾದವಾಗಿವೆ. ಕೊನೆಯ ಪದ್ಯವಾದ ಮಂಗಲ ಪದ್ಯವು ಹನಾ ಅವರ ಸ್ವರಚಿತ ಕವನವಾಗಿದೆ. ಹೀಗೆ ಸುಭಾಷಿತದಿಂದ ನಾಂದಿಯಾಗಿಸಿ ಮಂಗಳ ಪದ್ಯದೊಂದಿಗೆ ಸಾಂಪ್ರದಾಯಿಕವಾದ ಮುಕ್ತಾಯವನ್ನು ನೀಡಿದ್ದಾರೆ.

ಇವರೇ ಪೂರ್ವಪೀಠಿಕೆಯಲ್ಲಿ ಹೇಳಿರುವಂತೆ "ಪ್ರಾಸವನ್ನು ಅನುಸರಿಸಿದ್ದರೂ ಪೂರ್ವಕವಿಗಳ ನಿಯಮವನ್ನು ಸೂಕ್ಷ್ಮವಾಗಿ ಅನುಸರಿಸಿಲ್ಲ. ಆದ ಕಾರಣ ವೃತ್ತಗಳಿಗೆ ಹೆಸರು ಹಾಕಿಲ್ಲ. ಬೇಕಾದರೆ ಶಿಥಿಲ ಕಂದ, ಶಿಥಿಲ ರಗಳೆ ಎಂಬಂತೆ ಹೆಸರುಗಳನ್ನು ನಿರ್ಮಿಸಬಹುದು" (ಆಂಗ್ಲ ಕವಿತಾವಳಿ,ಪು–19)ಹಾಗಾಗಿ ಇಲ್ಲಿ ಅವರು ಕಂದ, ರಗಳೆಗಳನ್ನೇ ಅಲ್ಪಸ್ವಲ್ಪ ಮಾರ್ಪಡಿಸಿ ಬಳಸಿದ್ದಾರೆಂಬುದು ವ್ಯಕ್ತವಾಗುತ್ತದೆ. ಪದ್ಯರಚನೆ ಎಂಬ ಇವರದೇ ಲೇಖನದಲ್ಲಿ "ಈಗ ಪ್ರಚಲಿತವಾಗಿರುವ ಕಂದ, ರಗಳೆ, ಷಟ್ಪದಿ, ಸೀಸ, ಅಕ್ಕರಿಕೆ, ಮುಂತಾದ ಜಾತಿಗಳು ಸಾಕು; ಆದರೆ ಇವುಗಳಲ್ಲಿ ತಾಳಕ್ಕೆ ಬೇಕಾಗದಿರುವ ಕೆಲವು ನಿಯಮಗಳನ್ನು ತಿರಸ್ಕರಿಸಬಹುದು." ಎಂದು ಹೇಳುತ್ತಾ "ನನ್ನ ಆಂಗ್ಲ ಕವಿತಾವಳಿಯಲ್ಲಿ ತಾಳಕ್ಕೆ ಸರಿಯಾಗಿ ನಿಲ್ಲುವ ವಿಪರ್ಯಾಸಗಳನ್ನು ಉಪಯೋಗಿಸಿ ಕೆಲವು ಪ್ರಸಿದ್ಧ ಛಂದಸ್ಸುಗಳನ್ನೇ ಅನುಸರಿಸಿದೆ" ಎಂದು ಸ್ಪಷ್ಟಪಡಿಸಿದ್ದಾರೆ. ಈ ಮಾತು ಅವರು ಇನ್ನೂ ಪ್ರಾಚೀನ ಛಂಧೋಬಂಧಗಳಿಗೆ ಅಂಟಿಕೊಂಡಿದ್ದರು ಎಂಬುದನ್ನು ಸೂಚಿಸುತ್ತದೆ.

ಮೊದಲಿಗೆ ಷೇಕ್ಸ್‌ಪಿಯರ್‌ನ As you like it ನಾಟಕದ 7ನೇ ಅಂಕದ ಪುಟ್ಟ ಭಾಗವನ್ನು ಇವರ ಆಂಗ್ಲ ಕವಿತಾವಳಿಯ ಮೊದಲನೇ ಅನುವಾದಿತ ಭಾಗದಲ್ಲಿ ಕಾಣಬಹುದು. ಇದರಲ್ಲಿ ಆದಿಪ್ರಾಸವನ್ನು ತಪ್ಪದೆ ಪಾಲಿಸಿದ್ದಾರೆ. 'ಪ್ರಾಸ ಮುಂಡನಕ್ಕೆ ನನ್ನ ಕಿವಿ ಒಗ್ಗದು' ಎಂಬುದು ಅವರ ನೇರ ನುಡಿಯಾಗಿರುವುದರಿಂದ ಆದಿಪ್ರಾಸವಿಲ್ಲದ

ಅವರ ಪದ್ಯಗಳೊಂದೂ ಈ ಕವನ ಸಂಗ್ರಹದಲ್ಲಿ ಕಾಣಸಿಗುವುದಿಲ್ಲ. ಈ ಪದ್ಯವು ಇಪ್ಪತ್ತು ಸಾಲುಗಳಿಂದ ಕೂಡಿದ್ದು, ಸಮಪಾದಗಳಲ್ಲಿ ಹದಿನಾರು ಮಾತ್ರೆಗಳು ವಿಷಮ ಸಂಖ್ಯೆಯ ಪಾದಗಳಲ್ಲಿ ಇಪ್ಪತ್ತು ಮಾತ್ರೆಗಳಿವೆ. (ಡಿ.ಎಸ್.ಕರ್ಕಿಯವರು ಇದನ್ನು ಸೀಸಪದ್ಯ ಎನ್ನುತ್ತಾರೆ) ಇದನ್ನು ಮೂಲ ಅರ್ಥಕ್ಕೆ ಧಕ್ಕೆ ಬಾರದಂತೆ, ಪ್ರಾಸವನ್ನೂ ಕೈ ಬಿಡದೆ ಪಾಲಿಸುತ್ತಾ, ಮಾತ್ರೆಗಳನ್ನೂ ಸಮನಾಗಿ ಇಡುವುದು ಸರಳ ಕಾರ್ಯವೇನಲ್ಲ. ಅದನ್ನು ಹನಾ ಅವರು ಸಮರ್ಥವಾಗಿ ನಿಭಾಯಿಸಿದ್ದಾರೆ. ಇದು ಅವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

All the world's a stage
and all the men and women merely players;
they have their exits and their entrances
ನರಲೋಕವೆಲ್ಲ ನಾಟಕ ಶಾಲೆಯಂತಿರುತೆ
ಪುರುಷ ವನಿತೆಯರು ಬರಿಯಾಟದವರು
ಮೆರೆದವರು ನಿಷ್ಕ್ರಮಿಸಿ ಹೆರರು ಪ್ರವೇಶಿಸುತ
ಪರಿಪರಿಯ ವೇಷಗಳ ನಟಿಸುತಿಹರು (ಹಟ್ಟಿಯಂಗಡಿ ನಾರಾಯಣರಾವ್ ಸಾಹಿತ್ಯವಾಚಿಕೆ, ಪು.20)

'ಇಡೀ ಜಗವೇ ಒಂದು ವೇದಿಕೆ' ಎಂಬರ್ಥದ ಸಾಲನ್ನು ಹನಾ ಅವರು 'ನರಲೋಕವೆಲ್ಲಾ ನಾಟಕ ಶಾಲೆಯಂತಿರುತ' ಎಂದು ಪರಿಭಾವಿಸುತ್ತಾರೆ. ನರಲೋಕ ಮತ್ತು ನಾಟಕಶಾಲೆ ಇವೆರಡೂ ಮೂಲಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿವೆ.

They have their exits and their entrances 'ಅವರಿಗೆ ಅವರದ್ದೇ ಆದ ನಿರ್ಗಮನ ಪ್ರವೇಶಗಳಿವೆ' ಎಂದು ಸರಳವಾಗಿ ಅನುವಾದಿಸದೆ. 'ಮೆರೆದವರು ನಿಷ್ಕ್ರಮಿಸಿ ಹೆರರು ಪ್ರವೇಶಿಸುತ' ಎನ್ನುತ್ತಾರೆ. ಈ ಸಾಲಿನಲ್ಲಿ 'ಮೆರೆದವರು' ಎಂಬ ಪದದ ಪರ್ಯಾಯ ಪದ ಮೂಲದಲ್ಲಿಲ್ಲ. ಹನಾ ಅವರೇ ಸ್ವತಂತ್ರವಾಗಿ ಸೇರಿಸಿದ್ದಾಗಿದೆ. ಎಷ್ಟೇ ಮೆರೆದರೂ ಎಲ್ಲವನ್ನೂ ಬಿಟ್ಟು ಅನ್ಯರಿಗೆ ಜಾಗವನ್ನು ಬಿಟ್ಟು ಎಲ್ಲರೂ ನಿಷ್ಕ್ರಮಿಸಲೇಬೇಕೆಂಬ ತಾತ್ವಿಕ ಮತ್ತು ಶಾಶ್ವತ ಸತ್ಯವನ್ನು, ಮರೆಯಬಾರದೆಂಬ ನೀತಿಯನ್ನೂ ಈ ಸಾಲು ಮನಮುಟ್ಟುವಂತೆ ಅರ್ಥೈಸಿಸುತ್ತದೆ.

'His acts being seven ages' ಎಂಬ ಮೂಲ ಪದ್ಯದ ಐದನೇ ಸಾಲನ್ನು ಹನಾ ಅವರು ತಮ್ಮ ಕವನದ ಕೊನೆಯ ಸಾಲನ್ನಾಗಿಸಿ ಅದಕ್ಕೊಂದು ಅರ್ಥಪೂರ್ಣವಾದ ವಿರಾಮವನ್ನು ಕೊಡುತ್ತಾರೆ. 'ನರದಶಾಸಪ್ತಕ ಸಮಾಪ್ತವಹುದು' ಇಲ್ಲಿಗೆ ಇದು ಮಂಗಳಂ ಎನ್ನುವಂತಹ ಅರ್ಥಪೂರ್ಣ ಧ್ವನಿಯಲ್ಲಿ ಇದು

ಮುಕ್ತಾಯವಾಗುತ್ತದೆ.

ಷೇಕ್ಸ್‌ಪಿಯರ್, ಮಾನವನ ಮೊದಲನೇ ಹಂತ ಮಗು ಎಂಬುದನ್ನು ಹೇಳುತ್ತಾ At first the infant, mewling and puking in the nurse's arms; ಎನ್ನುತ್ತಾರೆ. ಹನಾ ಅವರಲ್ಲಿ ಇದು ಪಡೆದುಕೊಂಡ ಪರಿವರ್ತನೆಯನ್ನು ಗಮನಿಸಿದರೆ ಅನುವಾದಕ ಸಣ್ಣಪುಟ್ಟ ವಿಷಯಗಳನ್ನು ಹೇಗೆ ಸೂಕ್ಷ್ಮವಾಗಿ ಅವಲೋಕಿಸಬೇಕು ಎಂಬುದನ್ನು ಮನದಟ್ಟು ಮಾಡುತ್ತದೆ. 'ಆರಬ್ಧಿಯಲ್ಲಿ ಕೂಸು ತಾಯ ಕೈಯಲಿ ಮಲಗಿ' ಎಂದು ಬದಲಾಯಿಸಿದ್ದಾರೆ. ಮೂಲದ ನರ್ಸ್ ಇಲ್ಲಿನ ಸಂಸ್ಕೃತಿಗೆ ಬರುವಾಗ ತಾಯಿಯಾಗಿ ಪರಿವರ್ತನೆಯಾಗುತ್ತಾಳೆ. ಎರಡನೇ ಹಂತದ school boy. ಕನ್ನಡದಲ್ಲಿ 'ಮೋರೆ ತೊಳಕೊಂಡಳುತ ಮಠಕೆ ನಡೆವ ಹುಡುಗನಾಗುತ್ತಾನೆ. 3ನೇ ಹಂತದ lover ಹನಾ ಅವರಲ್ಲಿ ಕೇವಲ ಪ್ರೇಮಿಯಾಗದೆ 'ಅಂಗಜನ ತಾಪವ ಸಹಿಸುವ' ಯುವಕನಾಗುತ್ತಾನೆ. ಅಂಗಜ ಎಂಬ ಪದವನ್ನು ಹನಾ ಅವರು ಉದ್ದೇಶಪೂರ್ವಕವಾಗಿಯೇ ಬಳಸಿದ್ದಾರೆ. ಅಂಗಜ ಅಥವಾ ಮನ್ಮಥ ನಮ್ಮ ಸಂಸ್ಕೃತಿಯಲ್ಲಿ ಕಾಮವನ್ನು ಕೆರಳಿಸುವವನು ಹಾಗಾಗಿ ಈ ಪದದ ಮೂಲಕ ತರುಣಿಯ ಕೃಪೆಗೆ ಹಂಬಲಿಸುವ ಯುವಕನನ್ನು ಅಂಗಜನ ತಾಪದಿಂದ ಅಂದರೆ ವಿರಹದಿಂದ ಬಳಲುವ ವ್ಯಕ್ತಿಯಾಗಿ ಚಿತ್ರಿಸಿದ್ದಾರೆ. ಇವೇ ಅನುವಾದಕನೊಬ್ಬ ಸಾಂಸ್ಕೃತಿಕ ವಕ್ತಾರನಾಗಿ ಬದಲಾದಾಗ ಆಗುವ ಪರಿವರ್ತನೆಗಳಾಗಿವೆ.

ಇದೇ ಪ್ರಯೋಗವನ್ನು ಬಿ.ಎಂ.ಶ್ರೀ ಅವರಲ್ಲೂ ಗಮನಿಸಬಹುದು. ಕೋಲ್‌ರೀಜ್ ಕವಿಯ 'ಲವ್' ಗೀತೆಯನ್ನು 'ಕನಕಾಂಗಿ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ.(ಇಂಗ್ಲೀಷ್ ಗೀತಗಳು,ಪು.82) ಅದರಲ್ಲಿ All are but ministers of love and feed his sacred flame ಅನ್ನು 'ಕಾಮರಾಯಂಗೆಲ್ಲಾ ಕುಲಪುರೋಹಿತರಾಗಿ ಹೋಮಾಗ್ನಿಯನ್ನು ಬೀಸಿ ಕೆರಳಿಸುವುವು' ಎಂದು ಅನುವಾದಿಸಿದ್ದಾರೆ. ವಿರಹವನ್ನು ಕೆರಳಿಸುವವನು ಕಾಮ ಎಂಬರ್ಥ ಇಲ್ಲಿಯೂ ವ್ಯಕ್ತವಾಗಿದೆ. ಈ ರೀತಿಯ ಉದ್ದಿಷ್ಟ ಭಾಷೆಯ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗುವ ಪದವನ್ನು ಪರ್ಯಾಯವಾಗಿ ಇರಿಸುವ ಪ್ರಯೋಗ ಹನಾ ಅವರಲ್ಲಿಯೇ ಇದ್ದುದನ್ನು ಈಗಾಗಲೇ ಪ್ರಸ್ತಾಪಿಸಿದ 'ಅಂಗಜ' ಎಂಬ ಪದದಲ್ಲಿ ಕಾಣಬಹುದು. ಅದಲ್ಲದೆ ಇವರು ಕ್ಲಿಷ್ಟವೆನಿಸುವಂತಹ ಸಾಕಷ್ಟು ಪದಗಳನ್ನು ಕವನಗಳಲ್ಲಿ ಬಳಸಿದ್ದಾರೆ. ಉದಾಹರಣೆಗೆ 'ಯಶದಬುದ್ಬುದ, ಆರಬ್ಧಿ, ಖರದೃಶಿ, ಮೈಸುರ್ಕಿ, ಮರುಜೋಹ' ಮೊದಲಾದವು. ಇವರು ಪ್ರಾಸವನ್ನು ಮಾತ್ರವಲ್ಲ ಹಳಗನ್ನಡದ ವಿಶಿಷ್ಟ ಪದಗಳ ಬಳಕೆಯನ್ನೂ ಮೀರಲಿಲ್ಲ ಎಂಬುದನ್ನು ಈ ಪದಗಳು ಸಾಬೀತುಗೊಳಿಸುತ್ತವೆ.

ಐದು ನಾಟಕಗಳ ಹತ್ತು ಭಾಗಗಳ ಅನುವಾದವೂ ಒಂದೇ ಬಗೆಯ ಮಾತ್ರಾಗಣದ ಸಾಲುಗಳಾಗಿವೆ. ಮೂಲ ಕವನಗಳನ್ನು ಸಂಕ್ಷಿಪ್ತಗೊಳಿಸಿ ಅನುವಾದ ಮಾಡುವುದು ಇವರ ಅನುವಾದದ ಮತ್ತೊಂದು ತಂತ್ರವಾಗಿದೆ. ಕೆಲವು ಸಾಲುಗಳನ್ನು ಲೋಪಿಸುವುದು, ಸಂಕ್ಷಿಪ್ತಗೊಳಿಸುವುದು ಹೀಗೆ ಹಲವು ರೀತಿಗಳನ್ನು ಅವರು ಅನುಸರಿಸಿದ್ದಾರೆ. 'The lunatic, the lover and the poet are of Imagination' ಎಂಬ ಥೀಸಸ್ನ ಈ ಮಾತಿನಲ್ಲಿ ಹುಚ್ಚ, ಪ್ರೇಮಿ ಮತ್ತು ಕವಿ ಇವರು ಮೂವರೂ ಕಲ್ಪನೆಗಳಲ್ಲಿ ಸುಖ ಕಾಣುವವರು ಎಂಬುದು ವ್ಯಕ್ತವಾಗುತ್ತದೆ. ಇದನ್ನು ಹನಾ ಅವರು 'ಮರುಳನೋಪನು ಸುಕವಿ ಕಲ್ಪನೆಯ ಮೂರ್ತಿಗಳು' ಎಂದು ಕೆಲವೇ ಪದಗಳಲ್ಲಿ ಮೂಲದ ಅರ್ಥವನ್ನು ತರುತ್ತಾರೆ. 'ಓಪ' ಎಂಬುದು ನಲ್ಲ ಎಂಬುದರ ಹಳಗನ್ನಡದ ರೂಪವಾಗಿದೆ. ಮೂಲದಲ್ಲಿ 'good poet' ಎಂದೇನೂ ಇಲ್ಲದಿದ್ದರೂ ಹನಾ ಅವರು 'ಸುಕವಿ' ಎಂಬ ಪೂರ್ವ ವಿಶೇಷಣದ ಪದವನ್ನು ಬಳಸುತ್ತಾರೆ. ಬಹುಶಃ ನಮ್ಮಲ್ಲಿ ಕುಕವಿ ಮತ್ತು ಸುಕವಿ ಎಂದು ಎರಡು ಪರಿಕಲ್ಪನೆಗಳಿರುವುದರಿಂದ ಕಲ್ಪನೆಯ ಮೂರ್ತಿ ಸುಕವಿಯೇ ಹೊರತು ಕುಕವಿಯಾಗಲಾರ ಎಂದು ತೀರ್ಮಾನಿಸಿ ಈ ಪದವನ್ನು ವಿಶಿಷ್ಟವಾಗಿ ಬಳಸಿರಬಹುದು. ದೀರ್ಘ ಸಾಲುಗಳ ಭಾವಾರ್ಥವನ್ನು ಕೆಲವೇ ಪದಗಳಲ್ಲಿ ಪ್ರತಿಬಿಂಬಿಸುವ ಅವರ ಕುಶಲತೆಗೆ ಮತ್ತೊಂದು ಉದಾಹರಣೆಯೆಂದರೆ 'one sees more devils than vast hall can hold; that is the mad man' (ಮಿಡ್ಸಮರ್ ನೈಟ್ ಡ್ರೀಮ್)ಎಂಬುದನ್ನು? ಇರದಮಿತ ಛಾಯೆಗಳು ಹುಚ್ಚಗಿಹವು' ಎಂದು ಸಂಕ್ಷಿಪ್ತವಾಗಿ ಹುಚ್ಚನ ಮನಸ್ಥಿತಿಯನ್ನು ವಿವರಿಸಿಬಿಡುತ್ತಾರೆ. the lover all as frantic sees Helen's beauty in a brow of Egypt. ಇಲ್ಲಿ ಈಜಿಪ್ಟ್ ಹೆಲೆನ್, ಮೊದಲಾದ ಅನ್ಯ ನೆಲದ ಪದಗಳಿಗೆ ಪರ್ಯಾಯವಾಗಿ ರತಿ ಮತ್ತು ಬೇಡತಿಯರನ್ನು ಕುರಿತು ಪ್ರಸ್ತಾಪಿಸುತ್ತಾರೆ.

'ಗರವಟಗೆಯೋಪನಿಗೆ ಬೇಡತಿಯ ಮೋರೆಯಲಿ
ಸುರರನಿಳ್ಳಿಗೊಳುವ ರತಿಯ ಚೆಲುವು'

ಗರವಟಗೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತವಾದ ಪದವೇನಲ್ಲ (ಕಿಟೆಲ್ ಪದಕೋಶದಲ್ಲಿ ಕೂಡ ಈ ಪದವಿಲ್ಲ) ಹಳಗನ್ನಡ ಪದಸಂಪದದಲ್ಲಿ ಗರವಟಿಗೆವರ್/ ಗರಟಿಗೆ ಎಂಬ ಪದಕ್ಕೆ ಮನೋವಿಕಲತೆ: ಚಿತ್ತಕ್ಷೋಭೆ ಎಂಬರ್ಥವಿದೆ. ಮರ್ಚೆಂಟ್ ಆಫ್ ವೆನೀಸ್ ನಾಟಕದಲ್ಲಿ ಶೈಲಾಕ್ ತಾನು ಯಹೂದಿ ಎಂಬ ಕಾರಣಕ್ಕಾಗಿ ತನ್ನನ್ನು ಅವಮಾನಿಸಿದ್ದು, ನಷ್ಟವನ್ನು ನೋಡಿ ನಕ್ಕಿದ್ದು, ರಾಷ್ಟ್ರವನ್ನು

ಅಪಹಾಸ್ಯ ಮಾಡಿದ್ದು ಎಲ್ಲವನ್ನು ವಿವರಿಸುವ ಸಂದರ್ಭವಿದೆ. ಇಲ್ಲಿ ಆತ ಯಹೂದಿಗೆ ಕಂಗಳಿಲ್ಲವೆ, ಕೈಗಳಿಲ್ಲವೇ ಎಂದು ಪ್ರಶ್ನಿಸುವ ಸಾಲುಗಳಿವೆ. ಅವನ್ನು ಹನಾ ಅವರು ಮೂಲಕ್ಕಿಂತ ತೀರಾ ಭಿನ್ನವಾಗಿ ಆದರೆ ಅದೇ ಅರ್ಥವನ್ನು ಸ್ಫುರಿಸುವಂತೆ ಅನುವಾದಿಸಿದ್ದಾರೆ. ಇಲ್ಲಿ ಯಹೂದಿ ಎಂಬ ಪದವನ್ನು ತೆಗೆದು 'ಜಾತಿ ಮತ ಬೇರಾದರೇತಕ್ಕೆ ಶತ್ರುತ್ವ' ಎಂದು ಎಲ್ಲರಿಗೂ ಅನ್ವಯಿಸುವಂತೆ ಸಾಮಾನ್ಯೀಕರಿಸುತ್ತಾರೆ. ನಾಟಕದ ಭಾಗಗಳ ನಂತರ ಕವನಗಳನ್ನು ಕುರಿತು ಮಾತನಾಡುವುದಾದರೆ, ಮಿಲ್ಟನ್ ಕವಿಯ 'ಎಲ್ ಅಲೆಗ್ರೋ' (ಇಟಾಲಿಯನ್ ಭಾಷೆಯಲ್ಲಿ ಸಂತಸದ ಮನುಷ್ಯ ಎಂದರ್ಥ) ಎಂಬ ಕವನದಲ್ಲಿ ವಸಂತ ಕಾಲದ ಆರಂಭದ ದಿನಗಳಲ್ಲಿ ಮಾಂತ್ರಿಕತೆಯ ಶಕ್ತಿಯಿದೆ. ಆ ಮಾಂತ್ರಿಕತೆಯನ್ನು ಕವಿ ಇಲ್ಲಿ ವಿವರಿಸಿದ್ದಾರೆ. 152 ಸಾಲುಗಳ ಸುದೀರ್ಘವಾದ ಈ ಪದ್ಯವನ್ನು ಹನಾ ಅವರು ಕೇವಲ 44 ಸಾಲುಗಳಿಗೆ ಸಂಕ್ಷಿಪ್ತವಾಗಿಸಿ, ಮೂಲದ ಭಾವವನ್ನು ಸಮಗ್ರವಾಗಿ ಅನುವಾದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಲಲಿತ ರಗಳೆಯ ಸಾಮಾನ್ಯ ಲಕ್ಷಣವಾದ ಪ್ರತಿ ಪಾದಕ್ಕೆ ನಾಲ್ಕು ಪಂಚಮಾತ್ರಾ ಗಣದ ಲಯದಲ್ಲಿ ಈ ಪದ್ಯವು ಸಾಗುತ್ತದೆ. 'ನಿರ್ದೋಷ ಚಂದಗಳ ಸಿದ್ದಿಗೊಡು' ಎಂದು ಈ ಕವನದಲ್ಲಿ ಸ್ವಾಚ್ಛಂದ್ಯ ದೇವಿಯನು ಆರಾಧಿಸುವ ಹನಾ ಅವರು ಅದೇ ರೀತಿ ನಿರ್ದೋಷ ಛಂದಗಳನ್ನು ಇಲ್ಲಿ ಬಳಸಿದ್ದಾರೆ.

"ತೊಲಗು ಚಿಂತೆಯೆ ವಿಕಟ ಗುಹೆಯೊಂದು ನಿನಗಿರಲಿ ।
ಗೆಲವಿರದೆ ಬಲಿದ ಕತ್ತಲೆ ಅಲ್ಲಿ ಕವಿದಿರಲಿ
ತೊಂಗಿದರೆ ಗಲ್ಲುಗಳ ಮರೆಗೆ ಬೇಗನೆ ಹಾರು" (ನಂದನ)

ಇಲ್ಲಿ ಸಾಕಷ್ಟು ಲಘ್ವಕ್ಷರಗಳನ್ನೇ ಬಳಸಿರುವುದರಿಂದ ಪದ್ಯದ ನಡೆ ಸರಾಗವಾಗಿ ಸಾಗುತ್ತದೆ. ನಿರರ್ಗಳ ಓದುವಿಕೆಗೆ ಸಹಕಾರಿಯಾಗಿದೆ. ರಗಳೆಯ ಪ್ರಧಾನ ಲಕ್ಷಣವಾದ ಜೋಡಿ ಪಾದಗಳಿಗೊಂದು ಸಮನಾದ ಪ್ರಾಸಾಕ್ಷರ ಬರುವ ನಿಯಮವನ್ನು ಇಲ್ಲಿ ತಪ್ಪದೆ ಪಾಲಿಸಲಾಗಿದೆ. ಆದಿಪ್ರಾಸದ ಬಗೆಗಂತೂ ಹೇಳುವಂತೆಯೇ ಇಲ್ಲ ಅದು ಅಲಿಖಿತ ನಿಯಮದಂತೆ ಪಾಲಿತವಾಗಿಯೇ ಇದೆ. ಈ ಕವನದ ಬಂಧವನ್ನು ಶಿಥಿಲ ರಗಳೆಯೆಂದೇನೂ ಹೇಳಲಾಗದು, ಲಲಿತದ ಅಚ್ಚುಕಟ್ಟಾದ ಬಂಧ ಇಲ್ಲಿ ಚಾಚೂ ತಪ್ಪದೆ ಅನುಸರಿಸಲಾಗಿದೆ. ಹೀಗೆ ಇದು ಪ್ರಾಚೀನ ಛಂದೋಬಂಧಗಳ ಸಂಪ್ರದಾಯವನ್ನು ಪೂರ್ಣವಾಗಿ ಅನುಸರಿಸಿದೆ.

ಈ ಕವಿತೆಯ ಉದ್ದಕ್ಕೂ ಕವಿ ವಿವಿಧ ಗ್ರೀಕ್ ದೇವರು ಮತ್ತು ವ್ಯಕ್ತಿತ್ವಗಳನ್ನು ವರ್ಣಿಸುತ್ತಾ ವಸಂತದ ವರ್ಣನೆ ಮಾಡುತ್ತಾರೆ. ಯುಪ್ರೆಸಿ ಎಂಬ ಸಂತಸದ ದೇವಿಯನ್ನು ಆಹ್ವಾನಿಸುತ್ತಾರೆ. with two sisters graces more ಎಂಬುದು

zeμನ ಮಕ್ಕಳಾದ ಮೂವರು ದೇವತೆಗಳ ರೂಪಕವಾಗಿ ಮಿಲ್ಟನ್ ಬಳಸಿದ್ದಾನೆ. ಗ್ರೀಕ್ ಮಿಥಾಲಜಿಯಲ್ಲಿ Thaliaಗಾಡೆಸಸ್ ಆಪ್ ಕಾಮೆಡಿಯಾಗಿ ಚಿತ್ರಿತಳಾಗಿದ್ದಾಳೆ. ಂಂಟಚಿಚಿ ಯ ಉತ್ತಮ ನಡವಳಿಕೆಯ ದೇವತೆಯಾಗಿ Euphrosyneಸಂತಸದ ದೇವಿಯಾಗಿ ಹೆಸರಾಗಿದ್ದಾಳೆ. ಹನಾ ಅವರು ಈ ಮೂರೂ ದೇವತೆಗಳನ್ನು ಹಾಸ್ಯಬಾಲೆ. ಹದುಳಿನ ದೇವಿ, ಸ್ವಾಚ್ಛಂದ್ಯ ದೇವಿಯರಾಗಿ ಪರಿವರ್ತಿಸುತ್ತಾರೆ. ಉಳುವವನ ಸಂತಸದ ಶಿಳ್ಳೆಯನ್ನು ಹೊಲದಲ್ಲಿ ಉಳುವಾಗ ಹಾಡುವವರ ಹಾಡುಗಳಾಗಿ ದರ್ಶಿಸುತ್ತಾರೆ. ಇಲ್ಲಿ ಬಳಸಿರುವ ಒಂದೊಂದು ಪದಗಳು ಪ್ರೌಢತೆಯಿಂದ ಕೂಡಿದ್ದು ಪದ್ಯದ ಗಾಂಭಿರ್ಯವನ್ನು, ಗಹನವಾದ ಅರ್ಥವನ್ನು ಸೂಚಿಸಲು ಸೂಕ್ತವಾಗಿದೆ. Blackest midnight ಎಂಬುದು 'ಬಲಿತ ಕತ್ತಲ'ಯಾಗಿ ಕತ್ತಲ ದಟ್ಟತೆಯನ್ನು ಪದಗಳಲ್ಲಿಯೇ ಪರಿಭಾವಿಸುವಂತೆ ಮಾಡಿಬಿಡುತ್ತದೆ. ಮಬ್ಬಿನ ಗೂಗೆ, ವಿಕಟಗುಹೆ ಎಂಬೆಲ್ಲಾ ರೂಪಕಗಳು ಮೂಲದ ಅರ್ಥವನ್ನು ಸಶಕ್ತವಾಗಿ ಕಟ್ಟಿಕೊಡುತ್ತವೆ.

'Mountain on whose barren breast' ಸಾಲಿನಲ್ಲಿಯ barren breast ಅನ್ನು 'ಬಂಜರು ಎದೆ' ಎಂದು ಅನುವಾದಿಸದೆ 'ಹಾಯುವ ಬುದಗಳಿರುವ ಬರಿ ಮೈಯ ಬೆಟ್ಟಗಳು' ಎಂದು ಅದ್ಭುತವಾಗಿ ಅನುವಾದಿಸಿದ್ದಾರೆ. ಬಂಜರು ಎಂಬ ಪದ ಕೇಳಿದಾಕ್ಷಣ ಋಣಾತ್ಮಕ ಅರ್ಥವನ್ನು ಧ್ವನಿಸುತ್ತದೆ ಎಂಬ ಕಾರಣಕ್ಕೋ ಏನೋ ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲದಂತೆ ಅದನ್ನು ಬರಿ ಮೈಯ ಬೆಟ್ಟಗಳನ್ನಾಗಿಸಿದ್ದಾರೆ. ಇದೇ ಸ್ವರೂಪವನ್ನು ಮುಂದೆ ಬಿ.ಎಂ.ಶ್ರೀ ಅವರಲ್ಲೂ ಕಾಣಬಹುದು. ಶೆಲ್ಲಿಯವರ 'Music when soft voices die' ಎಂಬುದನ್ನು 'ಗಾನ ಮೆಲುಪಿನ ಕೊರಲು ಕುಗ್ಗಲು' (ಇಂಗ್ಲೀಷ್ ಗೀತಗಳು,ಪು.144)ಎಂದು ಮಾರ್ಪಡಿಸುತ್ತಾರೆ. dieಗೆ ಬದಲಾಗಿ ಕುಗ್ಗು ಎಂಬ ಪದವಿದೆ. Grave and stoneಗೆ ಬದಲು ಸಮಾಧಿ ಅಥವಾ ಗೋರಿ ಎನ್ನದೆ 'ಅಡವಿಯ ಮುಳ್ಳಲಿ' ಎಂದು ಅನುವಾದಿಸುತ್ತಾರೆ ಹೀಗೆ ಪರ್ಯಾಯವಾದ ಪ್ರತಿಮೆಗಳನ್ನು ಗಮನಿಸಿದರೆ ಅನುವಾದ ಎನ್ನುವುದು ಯಾಂತ್ರಿಕ ಕಾರ್ಯವಲ್ಲ ಮಹತ್ತರವಾದ ಸಾಂಸ್ಕೃತಿಕ ವಿನಿಮಯ ಎಂಬುದು ಅರ್ಥವಾಗುತ್ತದೆ. ಹನಾ ಅವರ 'ನಂದನ' ಕವನದ 'ವ್ಯಾಸ ವಾಲ್ಮೀಕಿಯರ ವರಕಥಾ ನಾಯಕರು' ಎಂಬ ಸಾಲು ಕೃಷ್ಣ ರಾಮರನ್ನು ನೆನಪಿಗೆ ತಂದು ಇದು ಇಂಗ್ಲೀಷ್‌ನ ಅನುವಾದ ಎಂಬುದನ್ನೇ ಮರೆಸಿ, ಮಹಾಭಾರತ ಮತ್ತು ರಾಮಾಯಣಗಳ ಸಾಂಸ್ಕೃತಿಕ ಲೋಕವನ್ನು ಆಚ್ಛಾದಿಸಿಕೊಂಡುಬಿಡುತ್ತದೆ. ಇದೇ ಮಿಲ್ಟನ್‌ನ 'ಇಲ್ ಪೆನ್ ಸೆರೋಸೋ' ಎಂಬ ಕವನವನ್ನು 'ಚಿಂತನ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಎಲ್ ಅಲೆಗ್ರೋ ಮತ್ತು ಇಲ್‌ಪೆನ್‌ಸೆರೋಸೋ

ಕವಿತೆಗಳ ಹಾಗೇ 'ನಂದನ' ಮತ್ತು 'ಚಿಂತನ' ಎರಡೂ ಸಹಾ ದ್ವಿವಿರೋಧವಾಗಿ ಕಾಣಿಸುತ್ತವೆ. ಒಂದು ಕವನ 'ತೊಲಗು ಚಿಂತೆಯೇ' ಎಂದು ಚಿಂತೆಯನ್ನೇ ದೂಡಿ ಸಂತಸದ ಆವರಣಕ್ಕೆ ಅಡಿಯಿಡಲು ಬಯಸಿದರೆ ಮತ್ತೊಂದು ಕವನವು 'ತೊಲಗು ಹೃದಯವ ಮರುಳು ಗೊಳಿಸುವಾ ಮೋದವೇ' ಎಂದು ಸಂತಸವನ್ನೇ ದೂರೀಕರಿಸುತ್ತದೆ.

ಕೆಲವು ಇಂಗ್ಲೀಷ್ ವಿಮರ್ಶಕರು ಒಬ್ಬ ವ್ಯಕ್ತಿಯ ಜೀವನದ ಯೌವನಾವಸ್ಥೆಯನ್ನು ಎಲ್ ಅಲೆಗ್ರೋ ಕವನವು, ಇಲ್ ಪೆನ್ ಸೆರೋಸೋ ಕವನವು ವೃದ್ಧಾಪ್ಯವನ್ನು ಪ್ರತಿಬಿಂಬಿಸುತ್ತದೆ ಎನ್ನುತ್ತಾರೆ. ಅಂದರೆ ಯೌವನದಿಂದ ವೃದ್ಧಾಪ್ಯದವರೆಗೆ ಸಾಗುವ ಜೀವನವನ್ನು ಇದು ಅನುಸರಿಸುತ್ತದೆಂದು ವಾದಿಸುತ್ತಾರೆ. ಹನಾ ಅವರ 'ಚಿಂತನ; ಕವನವು ಸಾಕಷ್ಟು ಕ್ಲಿಷ್ಟವಾದ ಪದಗಳಿಂದ ತುಂಬಿದ್ದು ಸರಳ ಅರ್ಥೈಸುವಿಕೆಗೆ ಇದು ಎಲ್ಲೋ ಒಂದೆಡೆ ತಡೆಯನ್ನೊಡುತ್ತದೆ' ಎನಿಸುತ್ತದೆ. ಉದಾ: 'ಸಂಸರ್ಗಬದ್ಧ, ಧರ್ಮವರ್ಧಕ ಭಿಕ್ಷು, ಘಂಟಾಸ್ವನಿತವೋಮದಾರಣ್ಯ, ಶ್ರುತಿಯಲುಪದಿಷ್ಟ ಆತ್ಮ ವಿಸ್ಮರಣ ಇತ್ಯಾದಿ.'

ಇವರ ಈ ಕವನ ಸಂಗ್ರಹವು ಮೊದಲ ಪ್ರಯೋಗವಾಗಿರುವುದರಿಂದ ಹಳೆಯ ಛಂದೋಬಂಧದೊಡನೆ ಸಂಸ್ಕೃತ ಮಿಶ್ರಿತ ಪದಗಳೂ ಸಹ ಬಳಕೆಯಲ್ಲಿರುವುದು ಈ ಪದ್ಯದಲ್ಲಿ ಢಾಳಾಗಿಯೇ ಕಾಣಿಸುತ್ತವೆ. 'ನಂದನ' ಎಂಬ ಹಿಂದಿನ ಪದ್ಯದಲ್ಲಿ ಹಾಸ್ಯದೇವಿ, ಹದುಳದೇವಿಯರಿದ್ದರೆ 'ಚಿಂತನ' ಕವನದಲ್ಲಿ ಜಯತು ಚಿಂತಾದೇವಿ, ಜಯತು ಗಂಭೀರಾ ಎಂಬ ಚಿಂತೆ ಮತ್ತು ಗಾಂಭೀರ್ಯದೇವಿಯರನ್ನು ಸ್ತುತಿಸಲಾಗಿದೆ. ಇದೊಂದು ರೀತಿ ವಾನಪ್ರಸ್ಥಾಶ್ರಮದ ವಿವರಣೆಯಂತೆಯೇ ತೋರುತ್ತದೆ.
ನಂದನದಲ್ಲಿ 'ಗರತಿಯರ ಸಂಗೀತ, ಹುಡುಗಿಯರ ಕೋಲಾಟದ ಆನಂದಗಳನ್ನು ಪಾಲಿಸು' ಎಂಬ ಮನವಿ ಇದ್ದರೆ ಚಿಂತನದಲ್ಲಿ 'ಯತಿ ನಿಲಯಗಳ ಕಡೆಗೆ ಸಾಗುವ ನಡಿಗೆ, ಮುದಿತನದಲ್ಲಿ ಬಯಸುವ ಮುನಿ ಪದವಿಗಳು' ಮುನ್ನೆಲೆಗೆ ಬರುತ್ತವೆ. ಬಹುಶಃ ಇವೆರಡನ್ನೂ ಮುಖಾಮುಖಿಯಾದ ಅವಳಿ ಕವನಗಳು ಎನ್ನಬಹುದೇನೋ. ಹನಾ ಅವರು ಬಹುಪಾಲು ಕವಿತೆಗಳನ್ನು ಈಗಾಗಲೇ ಹೇಳಿದಂತೆ ಮೂಲಕ್ಕಿಂತ ಪುಟ್ಟದ್ದಾಗಿ ಸಂಕ್ಷೇಪಿಸಿ ಅನುವಾದಿಸಿದ್ದಾರೆ. ಅದಕ್ಕೆ ಒಂದು ಉದಾಹರಣೆಯೆಂದರೆ ವಿಲಿಯಮ್ ಕಾಲಿನ್ಸ್‌ನ 'ದಿ ಪ್ಯಾಷನ್'. ಇದನ್ನು ಹನಾ ಅವರು 'ಭಾವಗಣ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಇಂಗ್ಲೀಷ್‌ನ ಮೊದಲ 16 ಸಾಲುಗಳ ಸಾರವನ್ನು ಕನ್ನಡದಲ್ಲಿ ಕೇವಲ 8 ಸಾಲುಗಳಲ್ಲಿ ಹಿಡಿದಿಟ್ಟಿದ್ದಾರೆ. ಇದರಲ್ಲೂ ಸಹಾ ಹಿಂದೆ ನಾಟಕಗಳ ಅನುವಾದಕ್ಕೆ ಬಳಸಿದಂತಹ ಗಣವನ್ನೇ ಬಳಸಿದ್ದಾರೆ. ಅಂದರೆ

ಸಮಪಾದಗಳಲ್ಲಿ 16 ಮಾತ್ರೆ, ವಿಷಮಪಾದಗಳಲ್ಲಿ 20 ಮಾತ್ರೆ. ಮೂಲದ ಇಂಗ್ಲೀಷ್‌ನಲ್ಲಿ When music heavenly maid early greece' ಎಂಬ ಸಾಲು ಗ್ರೀಸ್ ದೇಶವನ್ನು ನಿರ್ದೇಶಿಸುತ್ತದೆ. ಹನಾ ಅವರು ಅದನ್ನು ಚತುರ್ಯುಗಗಳಲ್ಲಿ ಆರಂಭಿಕ ಯುಗವಾದ ಕೃತಯುಗವನ್ನು ಪ್ರಸ್ತಾಪಿಸುತ್ತಾರೆ. ಇಂಗ್ಲೀಷ್‌ನ ಸ್ವರ್ಗದ ಸೇವಕಿಯನ್ನು ಇಲ್ಲಿ ಸಂಗೀತದದ ಅಧಿದೇವಿಯಾಗಿಸಿ ಆಕೆಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿದ್ದಾರೆ. ಅನೇಕ ಭಾವಮೂರ್ತಿಗಳು ಅವಳನ್ನು ಸುತ್ತುವರೆದು Exulting, trembling, raging, fainting ಹೀಗೆ ವಿವಿಧ ಭಾವಗಳನ್ನು ಹೊರ ಹಾಕುತ್ತಿರುತ್ತವೆ ಎಂದು ಭಾವಗಳ ಪುಟ್ಟ ಪಟ್ಟಿಯೊಂದನ್ನು ಇಂಗ್ಲೀಷ್ ಕವನವು ನೀಡುತ್ತದೆ. ಹನಾ ಅವರು ಅವೆಲ್ಲವನ್ನೂ ಬಿಡಿ ಬಿಡಿಯಾಗಿ ಹೆಸರಿಸದೆ 'ರೀತಿ ರೀತಿಯಲೊಡನೆ ಕಾಣಿಸಿದವು' ಎಂದು ಗೀತದಾವೇಶದ ಪರವಶತೆಯನ್ನು ಪದಕ್ಕೆ ಸೀಮೀತಗೊಳಿಸದೆ ಓದುಗನ ಸ್ವಯಂ ಕಲ್ಪನೆಗೆ ಬಿಟ್ಟುಬಿಡುತ್ತಾರೆ. ಹೀಗೆ ಒಟ್ಟು 115 ಸಾಲುಗಳ ಈ ಪ್ರಗಾಥವನ್ನು 52 ಸಾಲುಗಳಿಗೆ ಸಂಕ್ಷಿಪ್ತವಾಗಿಸಿ ಮೂಲದ ಭಾವವನ್ನು ಹಿಡಿದಿಟ್ಟಿದ್ದಾರೆ.
ಆ ಭಾವಮೂರ್ತಿಗಳು 'snatched her Instruments of sound' ಎಂದು ಕಸಿದುಕೊಳ್ಳುವ ಕ್ರಿಯೆಯನ್ನು ಕಾಲಿನ್ಸ್ ವರ್ಣಿಸಿದರೆ, ಹನಾ ಅವರು ?ಸುವಾದಿತ್ರಗಳ ಹಿಡಿದು ಆತುರಿಸಿ ಬಾಜಿಸಲು ಮುಂಬರಿದವು' ಎನ್ನುತ್ತಾರೆ.

'ರತಿಮಾತ್ಸರ್ಯ ಲಾವಣಿಯ ಬಾಜಿಸಿತು', 'ದೇವಿಯಾವೇಶ ಬಂದಂತೆ ಕಣ್ಣುಗಳೆತ್ತಿ' ಮೊದಲಾದ ವಾಕ್ಯಗಳು ಇಂಗ್ಲೀಷ್ ಕವಿತೆಯೊಂದನ್ನು ಭಾರತೀಯ ಸಂಸ್ಕೃತಿಯ ಚೌಕಟ್ಟಿನೊಳಗೆ ಕೂಡಿಸಲು ಮಾಡಿಕೊಂಡ ವ್ಯವಸ್ಥೆಗಳೆಂಬಂತೆ ತೋರುತ್ತವೆ. ಥಾಮಸ್‌ಗ್ರೇನ ಕವನ (country church yard) ಅನ್ನು 'ಸಮಾಧಿಗತ ಗ್ರಾಮಸ್ಥರು' ಎಂದು ಅನುವಾದಿಸಿದ್ದಾರೆ. ಇದರ ಆರಂಭದ ಸಾಲೇ 'ಗ್ರಾಮವೊಂದರ ಗುಡಿಯಲ್ಲಿನ ಘಂಟೆಯ ಶಬ್ದ ರವಿಯ ಉಗಮವನ್ನು ಸಾರುತ್ತದೆ' ಎಂಬ ಸಾಂಪ್ರದಾಯಿಕ ಮತ್ತು ದೈವೀಕ ವಾತಾವರಣದೊಡನೆ ಆರಂಭವಾಗುತ್ತದೆ. ಇದರ ಛಂದಸ್ಸನ್ನು ಡಿ. ಎಸ್. ಕರ್ಕಿಯವರು 'ಪರಿವರ್ಧಿನಿ ದೀರ್ಘ ದ್ವಿಪದಿ' ಎಂದು ಕರೆದಿದ್ದಾರೆ. ಈ ಬಂಧದ ಬಳಕೆಯನ್ನು ಬಿ.ಎಂ.ಶ್ರೀಯವರಲ್ಲೂ ಕಾಣಬಹುದಾಗಿದೆ.

ಶೆಲ್ಲಿ ರಚಿಸಿದ cloud ಕವನವು 'ಮುಗಿಲು' ಎಂಬ ಶೀರ್ಷಿಕೆಯಡಿಯಲ್ಲಿ ಆಂಗ್ಲ ಕವಿತಾವಳಿಯ ಕವನ ಸಂಗ್ರಹದಲ್ಲಿದೆ. ಮೂಲಪದ್ಯ 84 ಸಾಲುಗಳಷ್ಟು ವಿಸ್ತೃತವಾಗಿದ್ದರೆ ಹನಾ ಅವರು ಇದನ್ನು ನಲವತ್ತು ಸಾಲಿಗೆ ಸಂಕ್ಷಿಪ್ತಗೊಳಿಸಿದ್ದಾರೆ. ಇಲ್ಲಿನ ಛಂದೋಲಯ ಹಿಂದಿನ ಪದ್ಯಗಳ ಛಂದೋಲಯಕ್ಕಿಂತ ಭಿನ್ನವಾಗಿದೆ. ಪಾದವೊಂದಕ್ಕೆ ನಾಲ್ಕು ಚತುರ್ಮಾತ್ರ ಗಣಗಳನ್ನು ಸಂಯೋಜಿಸಿ ಮಂದಾನಿಲ

ರಗಳೆಯ ಲಯವನ್ನು ನೆನಪಿಗೆ ತರುತ್ತಾರೆ.

"ವಾರಿಧಿ/ ನದಿಗಳ/ಲೆದ್ದುಕು/ಸುಮಗಳ
ಆರಿದ/ಬಾಯಿಗೆ/ ಹೊಸಮಳೆ/ ಗರೆಯುವೆ
ನಡುಹಗ/ಲಲಿ ತೂ/ಕಡಿಸುವ/ ಕುಡಿಗಳ/
ಒಡಲಿನ/ಹೊದಕೆಗೆ/ ನೆಳಲನು/ ಕವಿಸುವೆ/"

ರಗಳೆಯಲ್ಲಿ ಜೋಡಿ ಪಾದಗಳಿಗೊಂದು ಸಮನಾದ ಅಂತ್ಯಪ್ರಾಸ ಬರಬೇಕೆಂಬ ನಿಯಮವಿದೆ. ಆದರೆ ಇಲ್ಲಿ ಆದಿಪ್ರಾಸಕ್ಕೆ ಮಾತ್ರ ಆ ನಿಯಮ ಅನ್ವಯವಾಗಿದ್ದು ಎರಡು ಸಾಲಿಗೊಂದು ಸಮನಾದ ಪ್ರಾಸಾಕ್ಷರ ಖಂಡಪ್ರಾಸದ ಸ್ಥಳದಲ್ಲಿ ಪಾಲಿತವಾಗಿದೆ. ಅಂತ್ಯಪ್ರಾಸದ ವಿಷಯಕ್ಕೆ ಬಂದಾಗ ಎ.ಬಿ ಎ.ಬಿ ಎಂಬಂತೆ ಒಂದು ಮತ್ತು ಮೂರನೇ ಸಾಲಿಗೆ ಸಮನಾದ ಅಂತ್ಯಪ್ರಾಸಾಕ್ಷರ, ಎರಡು ಮತ್ತು ನಾಲ್ಕನೇ ಸಾಲಿಗೆ ಸಮನಾದ ಅಂತ್ಯಪ್ರಾಸಾಕ್ಷರವನ್ನು ಬಳಸಿದ್ದಾರೆ.

"I bring fresh showers for the thirsting flowers
from the seas and the streams"

ಎಂಬ ಸಾಲಿನ ಪೂರ್ವಾರ್ಧದ ಸಾಲನ್ನು ಅಂದರೆ 'from the seas and the streams' ಎಂಬ ವಾಕ್ಯವನ್ನು ಆರಂಭಕ್ಕೆ ಪಲ್ಲಟಗೊಳಿಸುತ್ತಾರೆ.

ವಾರಿಧಿ ನದಿಗಳಲೆದ್ದು ಕುಸುಮಗಳ
ಆರಿದ ಬಾಯಿಗೆ ಹೊಸಮಳೆಗರೆಯುವೆ.

Thirsting flowers ಅನ್ನು ಬಾಯಾರಿದ ಕುಸುಮಗಳು ಎಂದೇ ನೇರವಾಗಿ ಅನುವಾದಿಸಬಹುದಿತ್ತು. ಆದರೆ 'ಕುಸುಮಗಳ ಆರಿದ ಬಾಯಿಗೆ' ಎಂಬಲ್ಲಿ ಕ್ರಿಯೆಗೆ ಹೆಚ್ಚು ಒತ್ತನ್ನು ನೀಡಿರುವುದರಿಂದ ಇದು ಮನಕ್ಕೆ ಬೇಗ ತಟ್ಟುವಂತಿದೆ. ಇದೇ ಕವನದಲ್ಲಿ 'noon day dreams' ಮಧ್ಯಾಹ್ನದ ಕನಸು ಅಥವಾ ಹಗಲುಗನಸು ಎಂಬ ಅರ್ಥದ ಪದಕ್ಕೆ ಹನಾ ಅವರು 'ತೂಕಡಿಸುವ' ಎಂಬ ಪದವನ್ನು ಬಳಸಿದ್ದಾರೆ. ಕನಸೆಂಬುದು ದೀರ್ಘ ನಿದ್ದೆಯಲ್ಲಿ ಬರುವುದು, ಮಧ್ಯಾಹ್ನವೇನಿದ್ದರೂ ಬರೀ ತೂಕಡಿಕೆಯಷ್ಟೇ. ಇಲ್ಲಿ ಮಧ್ಯಾಹ್ನದ ಕನಸು ಎಂಬ ಪದಕ್ಕಿಂತ ತೂಕಡಿಕೆ ಎಂಬುದು ಹೆಚ್ಚು ಸೂಕ್ತವಾಗಿ ಹೊಂದಿಕೊಳ್ಳುತ್ತದೆ.

ಮೂಲ ಇಂಗ್ಲೀಷ್ ಪದ್ಯದಲ್ಲಿ 'I' ಆಗಾಗ ಪುನರಾವರ್ತನೆಯಾಗುತ್ತಾ ಹೋಗುತ್ತದೆ. ಉದಾ: I bring, I bear, I wield ಹೀಗೆ ಆದರೆ ಕನ್ನಡದಲ್ಲಿ ಅನುವಾದವಾಗಿರುವ ಕವನದಲ್ಲಿ 'ನಾನು, ನಾನು' ಎಂಬುದನ್ನು ಬಳಸದೆ ಅದಕ್ಕೆ ಬದಲಾಗಿ 'ಮಳೆಗರೆಯುವೆ, ಕವಿಸುವೆ, ನಗಾಡುವೆ, ನೋಡುವೆ, ಹೂಡುವೆ'

ಎಂಬ ಕ್ರಿಯಾ ಪದಗಳಲ್ಲೇ 'ನಾನು' ಎಂಬ ಅರ್ಥವನ್ನು ಹೊರಡಿಸಿದ್ದಾರೆ. ಸಮುದ್ರ ಎಂಬ ಪದಕ್ಕೆ ಇದೇ ಕವನದಲ್ಲಿ ಒಂದು ಕಡೆ ವಾರಿಧಿ ಎಂದರೆ ಮತ್ತೊಂದೆಡೆ 'ಉದಮ' ಎಂಬ ಪದವನ್ನು ಬಳಸುತ್ತಾರೆ. ಇದು ಇವರ ಪದಭಂಡಾರದ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಆಲಿಕಲ್ಲ ಹೊಡೆತ ಎಂಬ ಸಾಮಾನ್ಯ ಪದಕ್ಕೆ 'ಕರಕಾಹತಿ' ಎಂಬ ವಿಶಿಷ್ಟ ಪದವನ್ನು ಬಳಸಿದ್ದಾರೆ.

An eagle alit one moment sit ಎಂಬ ಸಾಲನ್ನು 'ಗರುಡನೆರೆಗಿದಂತೆಸಕವಿರಿಸುವನು' ಎಂದು ಅನುವಾದಿಸುತ್ತಾರೆ. eagleಗೆ ಪರ್ಯಾಯವಾಗಿ ಬಂದಿರುವ 'ಗರುಡನ' ಪ್ರತಿಮೆಗೆ ಕಾರಣ ನಮ್ಮ ಸಂಸ್ಕೃತಿಯಲ್ಲಿ ಅಡಗಿರುವ ನಂಬಿಕೆಗಳು. ಗರುಡ ಪಕ್ಷಿಗಳ ರಾಜ ಅದರ ಶಕ್ತಿ ಮೆಚ್ಚಿ ಮಹಾವಿಷ್ಣು ಅದನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದ್ದಾನೆಂಬುದು ಭಾರತೀಯ ಸಂಸ್ಕೃತಿಯ ನಂಬಿಕೆಯಾಗಿದೆ. ಸಂಸ್ಕೃತಿಯ ಬೇರುಗಳು ಭೂತದಲ್ಲಿದ್ದರೂ ಸಾಂಸ್ಕೃತಿಕ ವಕ್ತಾರನಾದ ಅನುವಾದಕ ಅಥವಾ ಲೇಖಕನೊಬ್ಬ ಅದರ ರೆಂಬೆ–ಕೊಂಬೆಗಳನ್ನು ವರ್ತಮಾನಕ್ಕೂ ಊರ್ಧ್ವಮುಖವಾಗಿ ಸಾಗಿಸುತ್ತಾನೆಂಬುದನ್ನು ಇದು ಸಾಬೀತುಗೊಳಿಸುತ್ತದೆ.

'I rest one mine aery nest as still as a brooding dove' ಇಲ್ಲಿ ಪಾರಿವಾಳವು ವಿಶ್ರಾಂತಿ ತೆಗೆದುಕೊಳ್ಳುವ ವಿವರಣೆ ಇದೆ. ಆದರೆ ಹನಾ ಅವರು 'ಪಾರಿವಾಳ' ಅಂತಾಗಲೀ 'ಹಕ್ಕಿ' ಎಂತಾಗಲೀ ಹೆಸರಿಸದೆ. "ಇಕ್ಕೆಯ (ಬಿಡಾರ) ಸೇರಿದ ಕಲರವದಂದದಿ" ಎಂದು ಕಲರವದ ದನಿಯನ್ನೆ ಹಕ್ಕಿಗಳಿಗೆ ರೂಪಕವಾಗಿ ಬಳಸುತ್ತಾರೆ. ಇದೇ ತಂತ್ರವನ್ನು ಬೇಂದ್ರೆ ಅವರ 'ಗಿಡಗಂಟಿಗಳ ಕೊರಳೊಳಗಿಂದ ಹಕ್ಕಿಗಳಾ ಹಾಡು' ಎಂಬಲ್ಲಿ ಗಮನಿಸಬಹುದು. ಈ ಕವನದ ಕೊನೆಯ ನಾಲ್ಕು ಸಾಲುಗಳು ಹನಾ ಅವರ ಅದ್ಭುತ ರೂಪಾಂತರಕ್ಕೆ ಉದಾಹರಣೆಯಾಗಿವೆ.

'I am the daughter of earth and water' ಎಂದು ಮೋಡವು ಸ್ಪಷ್ಟೀಕರಣ ನೀಡುತ್ತದೆ. ಇಲ್ಲಿ ತಂದೆ ತಾಯಿ ಎಂಬ ಪ್ರತ್ಯೇಕ ಸಂಕೇತವಿಲ್ಲ. ಆದರೆ ಹನಾ ಅವರು ಇದನ್ನು ಸ್ಪಷ್ಟವಾದ ಧ್ವನಿಯಲ್ಲಿ ಸೂಚಿಸುತ್ತಾರೆ. 'ಧರೆ ಹುಟ್ಟಿಸುವುದು, ದಿವ ಪೋಷಿಸುವುದು' ಧರೆ ತಾಯಿ, ದಿವ ತಂದೆ ಎನ್ನುವ ಸ್ತ್ರೀ ಪುರುಷ ಕಲ್ಪನೆಗಳನ್ನು ಇಲ್ಲಿ ಬಳಸಿಕೊಂಡಿದ್ದಾರೆ. ನೆಲ ಹೆಣ್ಣು, ಆಕಾಶ ಗಂಡು ಎಂಬ ಈ ನೆಲದ ನಂಬಿಕೆಯ ಪಡಿ ನೆರಳೇ ಈ ಸಾಲುಗಳಲ್ಲಿ ಪ್ರತಿಬಿಂಬಿತವಾಗಿದೆ.

'I change but I cant die' ಎಂಬುದನ್ನು "ಅತಿಮಾಯಿಕ ಜೀವನ ಶಾಶ್ವತವಿದು ಕ್ಷಿತಿಯೊಳಗಿಂಗುತನಂತದಲೇರುವೆ" ಎಂದು ಅನುವಾದಿಸಿದ್ದಾರೆ. ಜೀವನ ನಶ್ವರ ಎನ್ನುವ ನಿರಾಶಾವಾದಕ್ಕೆ ಪ್ರತಿಯಾಗಿ 'ಜೀವನ ಶಾಶ್ವತ' ಎನ್ನುವ ಆಶಾವಾದವಿಲ್ಲಿದೆ.

ಪುನರಪಿ ಜನನಂ ಪುನರಪಿ ಮರಣಂ ಎಂಬ ತತ್ತ್ವದ ಸಾರವೇ ಈ ಕೊನೆಯ ಎರಡು ಸಾಲುಗಳಲ್ಲಿದೆ.

ಕೀಟ್ಸ್ ಕವಿಯ 'Fancy' ಕವನವು ರೋಮ್ಯಾಂಟಿಕ್ ಸಾಹಿತ್ಯದ ಒಂದು ಅದ್ಭುತ ಸೃಷ್ಟಿಯಾಗಿದೆ. ಕಲ್ಪನೆ, ಸೃಜನಶೀಲತೆ ಮತ್ತು ಪ್ರಕೃತಿ ಸೌಂದರ್ಯ ಈ ಮೂರರ ಸಮ್ಮಿಲನವಿಲ್ಲಿದೆ. ಈ ಮೂರೂ ಅಂಶಗಳನ್ನು ಹನಾ ಅವರು ಸಂಕ್ಷಿಪ್ತಾನುವಾದದಲ್ಲಿ ಸಮಗ್ರವಾಗಿ ಹಿಡಿದಿಟ್ಟಿದ್ದಾರೆ. ವಾಸ್ತವಿಕ ಜಗತ್ತು ಮತ್ತು ಕಾಲ್ಪನಿಕ ಜಗತ್ತಿನ ನಡುವಿನ ವ್ಯತ್ಯಾಸವನ್ನು ಈ ಕವನವು ಮನದಟ್ಟು ಮಾಡುತ್ತದೆ. ಇದು ಪಂಚಮಾತ್ರೆಯ ನಾಲ್ಕು ಗಣಗಳ ಬಂಧದಿಂದ ಕೂಡಿದೆ. ಮೂಲದಲ್ಲಿ Fancy ಯನ್ನು ಹೆಣ್ಣೆಂಬಂತೆ ಭಾವಿಸಿ 'her' ಎಂದು ನಿರ್ದೇಶಿಸುತ್ತಾರೆ. ಆದರೆ ಹನಾ ಅವರು ಭಾವನೆಗೆ ಯಾವುದೇ ಜೆಂಡರ್ ಅನ್ನು ಆರೋಪಿಸಿಲ್ಲ. ಮೊದಲ ಹತ್ತು ಸಾಲುಗಳಲ್ಲಿ ವಾಸ್ತವ ಗತ್ತಿನ ಕ್ಷಣಿಕತೆಯನ್ನು ವಿವರಿಸುವ ಈ ಕವನ ಹನ್ನೊಂದನೆಯ ಸಾಲಿನಿಂದ ಕಲ್ಪನೆಯನ್ನು ಹಾರಗೊಡುವುದರಿಂದ ಒದಗುವ ಸುಖವನ್ನು ವರ್ಣಿಸುತ್ತದೆ. "ಶಿಶಿರದೊಳಗೆ ಚೈತ್ರವನು ಬರಿಸುವುದು, ಕವಿದ ಕಾರ್ಮುಗಿಲ ಓಡಿಸಿ ರವಿಯ ಮೂಡಿಸುವುದು", ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

Lilies, daisy and the mary gold ಎಂಬ ಇಂಗ್ಲೀಷ್‌ನ ಸಾಲಿನಲ್ಲಿ ಮಾವಾಗಲೀ, ಮಲ್ಲಿಗೆಯಾಗಲೀ ಪ್ರಸ್ತಾಪವಾಗಿಲ್ಲ. ಆದರೆ ಹನಾ ಅವರು ಇದನ್ನು "ಸೇವಂತಿಗೆಯ ಸೊಬಗು, ಮಲ್ಲಿಗೆಯ ನರುಗಂಪು ಆವಾಗಲೂ ತಪ್ಪದದಕೆ ಮಾವಿನ ಸೊಂಪು" ಎಂದು ಹೇಳುವ ಮೂಲಕ ನಮ್ಮ ಪ್ರಾಚೀನ ಸಾಹಿತ್ಯದ ನಾಡಿನ ವರ್ಣನೆಯನ್ನು ನೆನಪಿಗೆ ತರುತ್ತಾರೆ. ಜನ್ನ ನನೆವೇಱಿದ ಮಾವು ಮೊಗ್ಗೆಯಿಂ ಪೇಱಿದ ಮಲ್ಲಿಕಾಲತೆ' ಎಂದು ವರ್ಣಿಸುವಉದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಹೀಗೆ ನಮ್ಮ ಹಳಗನ್ನಡ ಸಾಹಿತ್ಯದ ಕವಿಗಳು ಹೇಳುವ ಮಲ್ಲಿಗೆ ಮತ್ತು ಮಾವಿನಮರದ ಸಂಬಂಧವನ್ನು ಹನಾರವರು ಕಾಯ್ದಿರಿಸಿಕೊಂಡು ಬಂದಿದ್ದಾರೆ ಎಂದರೆ ತಪ್ಪಾಗಲಾರದು. ಇವೆಲ್ಲವೂ ಮುಗಿಲು ಕವನದ ವಿಶೇಷ ಅಂಶಗಳಾಗಿವೆ.

ವರ್ಡ್ಸ್‌ವರ್ತ್‌ನ Character of the happy warrior ಹನಾ ಅವರಲ್ಲಿ 'ಧನ್ಯವೀರ'ನಾಗಿದ್ದಾನೆ. ವೀರನೊಬ್ಬನಿಗೆ ತಾನು ಯುದ್ಧದಲ್ಲಿ ಜಯಗಳಿಸಿದಾಗ ಆನಂದಕ್ಕಿಂತ ತನ್ನ ವೀರನ ಬಾಳು ಧನ್ಯವಾಯಿತೆನ್ನಿಸುವುದೇ ಬಹುಶಃ ಇದಕ್ಕೆ ಕಾರಣವಿರಬಹುದು. ವರ್ಡ್ಸ್‌ವರ್ತ್ ಇದಕ್ಕೆ heroic couplet ಬಳಸಿದ್ದಾರೆ. ಇದು ಎರಡು ಸಾಲಿಗೆ ಒಂದು ಅಂತ್ಯಪ್ರಾಸವನ್ನು ಪಡೆದು ಬರುತ್ತದೆ. ಸಾಮಾನ್ಯವಾಗಿ ಇದನ್ನು ಸಾನೆಟ್‌ನಲ್ಲಿ ಬಳಸುತ್ತಾರೆ. ಇದೇ ಛಂದೋಬಂಧವನ್ನು ಹನಾ ಅವರು

ಅನುಸರಿಸಿದ್ದಾರೆ. ಪಂಚಮಾತ್ರಾಲಯದ ಈ ಕವನದಲ್ಲಿ ಎರಡು ಸಾಲಿಗೊಂದರಂತೆ ಸಮನಾದ ಅಂತ್ಯಪ್ರಾಸ ಮತ್ತು ಆದಿಪ್ರಾಸವನ್ನು ಬಳಸಿಕೊಂಡಿದೆ.

'who is the happy warrior who is he?' ಎಂದು ಪ್ರಶ್ನೆಯನ್ನು ಹಾಕಿ ನಂತರ ಅವನ ಗುಣಸ್ವಭಾವಗಳನ್ನು ವಿವರಿಸುತ್ತಾ ಹೋಗುತ್ತಾರೆ. ಕೊನೆಗೆ 'This is the happy warrior; this is he' ಎಂದು ವರ್ಡ್ಸ್‌ವರ್ತ್ ಘೋಷಿಸುತ್ತಾರೆ. ಆದರೆ ಹನಾ ಅವರು ಪ್ರಶ್ನೆಗಳಿಲ್ಲದೆ ನೇರವಾಗಿ ಧನ್ಯವೀರನ ಗುಣಗಳ ಪ್ರಸ್ತಾಪಕ್ಕಿಳಿಯುತ್ತಾರೆ.

"ಧನ್ಯವೀರನ ಗುಣಗಳೆಂತೆಂಬ ಮರ್ಮವನು
ಅನ್ಯ ಭಟರವನಂತೆ ಮೆರೆಯಲೆಂದೊರೆಯುವೆನು" ಎನ್ನುತ್ತಾರೆ.

ಈ ಮರ್ಮ ಅಥವಾ ರಹಸ್ಯ ಎನ್ನುವ ಅರ್ಥದ ಪದ ಇಂಗ್ಲೀಷ್ನಲ್ಲಿಲ್ಲ. ಹನಾ ಅವರ ಸ್ವಚ್ಛಂದದ ಸೇರ್ಪಡಿಕೆಯಾಗಿದೆ. ಒಬ್ಬ ವೀರ ಯುದ್ಧದಲ್ಲಿ ತನ್ನ ರಾಜನಿಗೆ ಗೆಲುವನ್ನು ತಂದುಕೊಡಲು ಹಲವಾರು ತಂತ್ರಗಳನ್ನು ಬಳಸಿರುತ್ತಾನೆ. ಅದು ಅವನಿಗೆ ಮಾತ್ರ ತಿಳಿದ ರಹಸ್ಯ ಆ ಮರ್ಮವನ್ನು ಅವನ ಗುಣವಿಶೇಷಗಳನ್ನು ಇಲ್ಲಿ ವಿವರಿಸುತ್ತಾ ಹಾಗೆ ವಿವರಿಸಲು ಕಾರಣವೇನೆಂಬುದನ್ನು ಇಲ್ಲಿ ಸ್ಪಷ್ಟಪಡಿಸುತ್ತಾರೆ. ಒಬ್ಬನೇ ವೀರ ಧನ್ಯನಾದರೆ ಸಾಲದು, ಎಲ್ಲಾ ಭಟರು ಅವನಂತೆ ಧನ್ಯನಾಗಿ ಮೆರೆಯಬೇಕು ಎಂಬ ಉದಾತ್ತ ಆಲೋಚನೆ ಇಲ್ಲಿದೆ. ಈ ಇಡೀ ಪದ್ಯವನ್ನು ಓದಿದ ನಂತರ ವ್ಯಕ್ತವಾಗುವ ಭಾವನೆ ಎಂದರೆ ಇದು ಕೇವಲ ಯುದ್ಧರಂಗದಲ್ಲಿ ಹೋರಾಡುವ ಒಬ್ಬ ವೀರನಿಗೆ ಮಾತ್ರ ಸಂಬಂಧಿಸಿದ್ದಲ್ಲ, ಜೀವನವೆಂಬ ರಣರಂಗದಲ್ಲಿ ಪ್ರತಿನಿತ್ಯ ಹೋರಾಡುವ ಪ್ರತಿ ವ್ಯಕ್ತಿಯಲ್ಲೂ ಇರಬೇಕಾದ ಗುಣಸ್ವಭಾವಗಳ ಪಟ್ಟಿಯನ್ನೇ ಇದು ಮುಂದಿಡುತ್ತದೆ.

ಎರಡು ಪದಗಳನ್ನು ಸೇರಿಸಿ ಹೊಸಪದವೊಂದನ್ನು ಸೃಷ್ಟಿಸುವ ಕಲಾತ್ಮಕತೆ ಹನಾ ಅವರ ಅನೇಕ ಕವನಗಳಲ್ಲಿ ಕಾಣಸಿಗುತ್ತದೆ. ಪ್ರಸ್ತುತ ಕವನದಲ್ಲೂ 'ಹೃತ್ತಲದಲನುಕಂಪ' ಎನ್ನುವ ಪದವನ್ನು ಕಾಣಬಹುದು. ಹೃದ್+ತಲದಲಿ+ಅನುಕಂಪ ಹೃತ್ತಲದಲನುಕಂಪ, ಹೃದಯದ ಆಳದಲ್ಲಿ ಅನುಕಂಪ ಎಂಬರ್ಥದಲ್ಲಿ ಇದನ್ನು ಬಳಸಿದ್ದಾರೆ. ಈ ಪದದ ಸ್ವರೂಪ ಕಿಟೆಲ್ ಕೋಶ ಮತ್ತು ಪಿ.ವಿ.ಎನ್ ರವರ ಹಳಗನ್ನಡ ಸಂಪದ ಎರಡರಲ್ಲೂ ಕಾಣಿಸಲಿಲ್ಲ. ಆದರೆ ಅದಕ್ಕೆ ಬದಲಾಗಿ ಹೃತ್ಕಮಲ, ಹೃತ್ಕುಮುದ, ಹೃತ್ಕೇಶ, ಹೃತ್ತಾಪ ಎಂಬ ಪದಗಳು ಸಿಕ್ಕವು. ಈ ಪದಗಳ ರೀತಿಯಲ್ಲೇ ಹೃತ್+ತಲ ಎಂಬುದನ್ನು ಸೇರಿಸಿ ಹೃತ್ತಲ ಎಂಬ ಪದವನ್ನು ರೂಪಿಸಿದ್ದಾರೆನ್ನಿಸುತ್ತದೆ. ಹನಾ ಅವರು ಇಂಗ್ಲೀಷ್ ಕವನಗಳನ್ನು ಇದುವರೆಗೂ ಯಾರೂ ಕನ್ನಡಕ್ಕೆ

ಅನುವಾದಿಸುವ ಪ್ರಯತ್ನವನ್ನೂ ಮಾಡದಿದ್ದಂತಹ ಸಂದರ್ಭದಲ್ಲಿ ಹೊಸ ಪ್ರಯತ್ನಕ್ಕೆ ಮುಂದಾದವರು. ಹಾಗಾಗಿ ಸಹಜವಾಗಿಯೇ ಹಳಗನ್ನಡದ ಪದಗಳು, ಹಳೆಯ ಛಂದೋಬಂಧಗಳು, ಖಂಡ ಪ್ರಾಸದ ಬಳಕೆ ಇವೆಲ್ಲಾ ಗೋಚರಿಸುತ್ತವೆ. ಇವರ ಅನುವಾದಕ್ಕೂ ಇವರ ನಂತರದ ಕವಿಗಳ ಅನುವಾದಕ್ಕೂ ಇರುವ ವ್ಯತಾಸಗಳನ್ನು ಗಮನಿಸಿದರೆ ಇವರ ಕವನಗಳ ಗಂಭೀರಭಾವ, ಸರಳ ಅರ್ಥಕ್ಕೆ ತೊಡಕಾಗಿರುವುದು ವ್ಯಕ್ತವಾಗುತ್ತದೆ. ಅದಕ್ಕೆ ಉತ್ತಮ ಉದಾಹರಣೆಯೆಂದರೆ ಹೆನ್ರಿ ವ್ಯಾಟನ್ ನ 'Character of a happy life' ಎಂಬುದನ್ನು ಅವರು 'ನಿತ್ಯ ಸುಖ' ಎಂಬ ಹೆಸರಲ್ಲಿ ಅನುವಾದಿಸಿದ್ದಾರೆ.

How happy is he born or taught that serveth not another will whose armour is his honest thought and silly truth. his highest skill ಎಂದು ಆರಂಭವಾಗುವ ಈ ಕವನದ ಸಾಲುಗಳನ್ನು ಮೂಲದೊಂದಿಗೆ ಇಟ್ಟು ಸಾಲಿನಿಂದ ಸಾಲಿಗೆ ಅರ್ಥವನ್ನು ತೆಗೆದುಕೊಳ್ಳಲಾಗುವುದಿಲ್ಲ.

"ಪರರ ತುಷ್ಟಿಗೆ ಮಣಿಯದವನ ಸುಖಕೆಣೆಯೆಲ್ಲಿ
ಸರಲ ಭಾವದ ಕವಚದಂತೆ ರಕ್ಷಣವಲ್ಲಿ.
ಸತ್ಯಶೀಲತೆ ನಿತ್ಯಸುಖಿಗೆ ಬಲು ಜಾಣತನ
ಭೃತ್ಯರಂತರ್ಪಿಸುವಿಂದ್ರೀಯಗಳಾಳುತನ" (ಹನಾ)

ಇಲ್ಲಿ How ಎಂಬ ಪ್ರಶ್ನೆಯಿಲ್ಲದೆ ನೇರವಾಗಿ ಆರಂಭವಾಗುವ ಕವನ ಪ್ರಶ್ನೆಯನ್ನು ಕೊನೆಯಲ್ಲಿ ಇಟ್ಟುಕೊಂಡಿದೆ. ಒಟ್ಟು ಭಾವವೇನೋ ಇದೆ. ಆದರೆ ಸರಳ ಅರ್ಥೈಸುವಿಕೆಗೆ ಇದು ಕಷ್ಟವೆನಿಸುತ್ತದೆ. ಇದೇ ಕವನವನ್ನು ಬಿ.ಎಂ.ಶ್ರೀ ಅವರು 'ಸುಖ ಜೀವನ' (ಇಂಗ್ಲೀಷ್ ಗೀತಗಳು, ಪು181) ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ನವೋದಯದ ಪೂರ್ವ ಕಾಲದ ಹನಾ ಅವರ ಅನುವಾದಕ್ಕೂ ನವೋದಯದ ಕಾಲಘಟ್ಟದ ಬಿ.ಎಂ.ಶ್ರೀ ಅವರ ಅನುವಾದಕ್ಕೂ ಇರುವ ವ್ಯತ್ಯಾಸ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

"ಏನು ಸುಖಿಯೋ ತಾನು ಹುಟ್ಟಿನಲ್ಲಿ ಕಲಿಕೆಯಲಿ
ಇನ್ನೊಬ್ಬನಿಚ್ಛೆಯನು ದುಡಿಯದಿರುವವನು
ಒಳಿತನು ಬಗೆವುದೇ ತನ್ನ ಕಾಯುವ ತಂತ್ರ
ನಿಜದ ನಡತೆಯೇ ತಂತ್ರ ತನಗೆನಿಸಿದವನು" (ಬಿ.ಎಂ.ಶ್ರೀ)

ಮೂಲ ಇಂಗ್ಲೀಷ್ ಕವನವು 24 ಸಾಲುಗಳಲ್ಲಿದೆ. ಬಿ.ಎಂ.ಶ್ರೀ ಅವರ ಅನುವಾದವೂ 24 ಸಾಲುಗಳಲ್ಲಿದೆ. ಹನಾ ಅವರು ಇದನ್ನು ಕೇವಲ 16 ಸಾಲುಗಳಾಗಿ

ಸಂಕ್ಷಿಪ್ತಗೊಳಿಸಿದ್ದಾರೆ. ಬಿ.ಎಂ.ಶ್ರೀ ಅವರ ಸಂದರ್ಭಕ್ಕಾಗಲೇ ಕಾವ್ಯದಲ್ಲಿ ಪ್ರಾಸದ ಮೀರುವಿಕೆ, ಛಂದಸ್ಸಿನಲ್ಲಿ ಹೊಸತನದ ಪ್ರಯೋಗ, ಹಳಗನ್ನಡ ಮತ್ತು ಕ್ಲಿಷ್ಟಪದಗಳನ್ನು ಬಿಟ್ಟು ಸರಳ ಪದಗಳನ್ನು ಬಳಸುವುದು ಇವೆಲ್ಲವೂ ಆರಂಭವಾಗಿತ್ತೆಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಇನ್ನೊಂದು ಉದಾಹರಣೆಯೆಂದರೆ ಜೇಮ್ಸ್ ಥಾಮ್ಸನ್ನ 'Rule Britania' ಬಿ.ಎಂ.ಶ್ರೀ ಇದನ್ನು 'ಆಳೌ ಬ್ರಿಟಾನಿಯಾ' ಎಂದು ಇಂಗ್ಲೀಷ್ ಪದವಾದ ಬ್ರಿಟಾನಿಯಾವನ್ನು ಹಾಗೆ ಬಳಸಿದ್ದಾರೆ. ಆದರೆ ಹನಾ ಅವರು ಇಂಗ್ಲೀಷ್ ಪದವನ್ನೇ ಬಳಸದೇ ಸಂಪೂರ್ಣವಾಗಿ ಕನ್ನಡೀಕರಿಸಬೇಕೆಂಬ ಧೋರಣೆಯಿಂದ 'ಆಳು ಬೀರತನೇ' ಎಂದು ಅನುವಾದಿಸುತ್ತಾರೆ.

"ಬೀರತನೆ ದಿವೌಶನಾಥನಾಜ್ಞೆಯಿಂದ ಮೊದಲಲೇ
ನೀರಧಿಯ ಸುನೀಲ ಕಾಯದಿಂದ ಹೊರಡುವಾಗಲೇ
ಅವಳ ರಾಷ್ಟ್ರ ಕಿತ್ತ ಶಾಸನೋಕ್ತಿಗಳನ್ನು ಹಾಡುವ
ದಿವಿಜರಿಂತು ಘೋಷಿಸಿದರು ಸದಯವಾಳಿ ನೋಡುತ"

ಈ ಸಾಲುಗಳ ಪದಗಳೇನೋ ಗಂಭೀರವಾಗಿ, ಪ್ರೌಢವಾಗಿ ಇದೆ ಎನಿಸಿದರೂ ಸುಲಭವಾಗಿ ಇದು ಅರ್ಥವಾಗುವುದಿಲ್ಲ. ಭಾವವು ಒಂದೇ ಸಾಲಿಗೆ ನಿಲ್ಲದೆ ಮುಂದಿನ ಸಾಲಿಗೂ ಹರಿಯುವುದನ್ನು ಇಲ್ಲಿ ಗಮನಿಸಬಹುದು. ಇದನ್ನೇ ಬಿ.ಎಂ.ಶ್ರೀ ಅವರು ಎಷ್ಟು ಸರಳವಾಗಿ ಅನುವಾದಿಸಿದ್ದಾರೆಂದರೆ,

"ಆದಿಯಲಿ ದೈವಾಜ್ಞೆಯಲಿ ಬ್ರಿಟನ್ ಭೂಮಾತೆ
ನೀಲ ಜಲರಾಶಿಯಿಂದ ಉದ್ಭವಿಸಿದಂದು
ಆಧರಿಸಿ, ಅಭಿಮಾನ ದೇವತೆಗಳೊಲಿದು ದಯ
ಪಾಲಿಸಿದರಾಕೆಗೀ ಶಾಸನವ ಹರಸಿ
ಆಳೌ ಬ್ರಿಟಾನಿಯಾ ! ಆಳು ತೆರೆಗಳನು!
ಎಂದಿಗೂ ಬ್ರಿಟನನಡಿಯಾಳೆನಿಸಿಕೊಳ್ಳನು" (ಇಂಗ್ಲೀಷ್ ಗೀತಗಳು, ಪು–50) ಇದರ ಅರ್ಥ ಒಂದೇ ಓದಿಗೆ ನಿಲುಕುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಇಂಗ್ಲೀಷ್ ಕಾವ್ಯದ ಪ್ರಭಾವವನ್ನು ಕನ್ನಡಕ್ಕೆ ಹೇಗೆ ತಂದುಕೊಳ್ಳಬೇಕೆಂದು ಸ್ಪಷ್ಟಮಾರ್ಗವೊಂದು ಸಿದ್ಧವಾಗದಿದ್ದ ಕಾಲದಲ್ಲೇ ಆರಂಭಿಕ ಅನುವಾದಕರಾದ ಹ.ನಾ ಅವರು ಇಂಗ್ಲೀಷ ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದರಿಂದ ಸಹಜವಾಗಿಯೇ ಅವರಿಗೆ ಭಾಷೆ, ಛಂದಸ್ಸು, ಅನ್ಯ ಸಂಸ್ಕೃತಿಯ ವಿಚಾರಗಳನ್ನು ಈ ನೆಲದ ಸಂಸ್ಕೃತಿಗೆ ಹೇಗೆ ಅಳವಡಿಸಬೇಕೆಂಬ ಪ್ರಶ್ನೆ, ಸವಾಲು, ಸಮಸ್ಯೆ

ಎದುರಾಗಿರಲೇಬೇಕು. ಅವೆಲ್ಲವುಗಳಿಗೂ ಅವರು ಕಂಡುಕೊಂಡ ಪರಿಹಾರ ಮಾರ್ಗಗಳು ಅವರ ಆಂಗ್ಲಕವಿತಾವಳಿ ಎಂಬ ಅನುವಾದಿತ ಕವನ ಸಂಗ್ರಹದಲ್ಲಿ ಗೋಚರಿಸುತ್ತವೆ.

ಪರಾಮರ್ಶನ ಗ್ರಂಥಗಳು :

1. ಹಟ್ಟಿಯಂಗಡಿ ನಾರಾಯಣರಾಯರು ಸಾಹಿತ್ಯವಾಚಿಕೆ, ಶ್ರೀನಿವಾಸಹಾವನೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
2. ಇಂಗ್ಲೀಷ್ ಗೀತಗಳು, ಬಿ.ಎಂ.ಶ್ರೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2011
3. ಕನ್ನಡ ಛಂದೋವಿಕಾಸ, ಡಿ.ಎಸ್. ಕರ್ಕಿ, ಭಾರತ್ ಪ್ರಕಾಶನ, 2016
4. ಹಳಗನ್ನಡ ಪದ ಸಂಪದ, ಪಿ.ವಿ. ನಾರಾಯಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2017

ಡಾ. ಜಯಲಲಿತಾ
ಪ್ರಾಧ್ಯಾಪಕರು,
ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

ಅಮರೇಶ ನುಗಡೋಣಿ ಅವರ ಕತೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು

¤ ಡಾ. ಸುರೇಶ.ಎನ್

ಕನ್ನಡ ಸಾಹಿತ್ಯ ಅನೇಕ ಕವಲುಗಳೊಂದಿಗೆ ಸಮೃದ್ಧತೆಯಿಂದ ಬೆಳೆದು ಬಂದಿದೆ. ಆದರೆ ಸಾಹಿತ್ಯಕ್ಕೆ ಆಂದೋಲನದ ರೂಪ ದೊರೆತದ್ದು ದಲಿತ ಬಂಡಾಯ ಸಾಹಿತ್ಯದಲ್ಲಿ. ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯ ಭಾಗವಾಗಿಯೇ ಮಹಿಳಾ ಸಾಹಿತ್ಯ ಬೆಳೆದು ತನ್ನ ಬಾಹುಗಳನ್ನು ಸೀಮಾತೀತವಾಗಿ ಹರಡಿದೆ. ಪರಂಪರಾನುಗತವಾಗಿ ಬೆಳೆದು ಬಂದ ಸಾಹಿತ್ಯ ಸಂಪ್ರದಾಯ ಆಚಾರ–ವಿಚಾರಗಳಲ್ಲಿ ಮಹಿಳೆಯ ಸ್ಥಾನಮಾನಗಳೇನು ಎಂಬುದನ್ನು ಕುರಿತು ವಿವೇಚನೆಗೂ ಒಳಪಡಿಸುತ್ತಿದೆ. ನಮ್ಮ ಸಾಂಸ್ಕೃತಿಕ ಜೀವನವನ್ನು ಮರು ಪರಿಶೀಲನೆಗೆ ಒಳಪಡಿಸಿ ಹೊಸ ವ್ಯಾಖ್ಯಾನವನ್ನು ಸೃಷ್ಟಿಸಲು ಹೊರಟಿವೆ. ಇವು ಹಿಂದಿನಿಂದಲೂ ರೂಢಿಯಲ್ಲಿರುವ ಸಂಪ್ರದಾಯಗಳು ಹೆಣ್ಣಿನ ಸ್ವಾತಂತ್ರವನ್ನು ಹೇಗೆ ಹರಣ ಮಾಡಿದವು ಎಂಬುದನ್ನು ವಿವೇಚನೆಗೆ ಒಳಗುಮಾಡಿ, ಸಂಕೋಲೆಗಳಿಂದ ಮುಕ್ತವಾಗಿ ಜೀವಿಸಲು ದಾರಿದೀಪವನ್ನು ಬೆಳಗಿಸುವ ಪ್ರಯತ್ನ ಮಾಡುತ್ತಿವೆ. ಪುರುಷ ಮಹಿಳೆಯ ಹಕ್ಕುಗಳ ಮೇಲೆ ಏರಿರುವ ಬಂಧನಗಳನ್ನು ಮರಿದು ಹಾಕುವ ಪ್ರಯತ್ನ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಮಹಿಳಾ ಶೋಷಣೆ, ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತುವ ಅನಿವಾರ್ಯ ಸಾಹಿತ್ಯಕ್ಕಿದೆ. ಅಂತ ಕಾರ್ಯವನ್ನು ನಾಡಿನ ಅನೇಕ ಸಾಹಿತಿಗಳು ಮಾಡುತ್ತಿದ್ದಾರೆ. ಅವರಲ್ಲಿ ಅಮರೇಶ ನುಗಡೋಣಿಯವರು ಒಬ್ಬರಾಗಿದ್ದಾರೆ. ಇವರ ಕತೆಗಳಲ್ಲಿ ಮಹಿಳಾ ಬದುಕಿನ ಚಿತ್ರಣಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಸಮಾಜದಲ್ಲಿ ಶೋಷಣೆಗೆ ಒಳಗಾದ ವರ್ಗಗಳ ಸಮಸ್ಯೆಗಳನ್ನು, ಅವರ ಪ್ರತಿಭಟನೆಯನ್ನು ಕುರಿತು ಚಿತ್ರಿಸುತ್ತಾ, ಸಮಾಜದಲ್ಲಿ ಆ ವರ್ಗಗಳಿಗೆ ಸಮಾನತೆ, ಸ್ವಾತಂತ್ರ ಬಯಸುವ ತುಡಿತವನ್ನು ನುಗಡೋಣಿಯವರ ಕತೆಗಳಲ್ಲಿ ಕಾಣಬಹುದು.

ಅನ್ಯಾಯಕ್ಕೆ ಒಳಗಾದ ಮಹಿಳೆಯರ ಸಮಸ್ಯೆಗಳು, ಅವರ ಮೇಲೆ ಪುರುಷ ವರ್ಗದ ದೌರ್ಜನ್ಯಗಳು ಮತ್ತು ಅಸಮಾನತೆಗಳನ್ನು ಅವರ ಕತೆ ಧ್ವನಿಸಿವೆ. ಇವುಗಳೊಂದಿಗೆ ಸ್ತ್ರೀಯರ ಭಿನ್ನ ವರ್ತನೆಗಳು, ಭಿನ್ನ ವ್ಯಕ್ತಿತ್ವಗಳು, ಸ್ತ್ರೀಯರ ಸಂಪ್ರದಾಯ ಆಚಾರ–ವಿಚಾರಗಳು ಯಾವ ರೀತಿ ನಿಯಂತ್ರಿಸುತ್ತವೆ, ಇವುಗಳಿಂದ ಆಗುವ ಅನಾನುಕೂಲಗಳೇನು ಮುಂತಾದ ಸಂಗತಿಗಳನ್ನು ನುಗಡೋಣಿಯವರ ಕತೆಗಳು ತಾತ್ವಿಕವಾಗಿ ಪರಿಭಾವಿಸಿವೆ.

ಅಮರೇಶ ನುಗಡೋಣಿ ಅವರ ಪ್ರಮುಖ ಸ್ತ್ರೀ ಸಂವೇದನೆಯನ್ನು ಒಳಗೊಂಡ ಕತೆಗಳಾದ ದಾರಿ ಮೂಡಿಸುವ ಹೆಜ್ಜೆಗಳು, ಕುಡಿ ಬಂದ ದೀಪಗಳು, ಧರೆ ಉರಿದರೆ, ಊರಮ್ಮ, ಮೂಡಲು ಹರಿಯಿತು, ಹೊತ್ತು ಮೂಡುವ ಸಮಯ, ಮಣ್ಣು ಸೇರಿತು ಬೀಜ, ಕಣ್ಣು ಮುಕ್ಕಾದ ಬೀಜಗಳು, ಉತ್ತಮಣ, ಏ ದಿಲ್ ಮಾಂಗೆ ಮೋರ್, ಒಡಲುಗೊಂಡವರು, ಚುಕ್ಕಿ ಮದುವೆ ಪ್ರಸಂಗ, ತುಳಸಿ ಮೊದಲಾದ ಕತೆಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ಗಮನಿಸಲಾಗಿದೆ.

ಹೊತ್ತು ಮೂಡುವ ಸಮಯ ಕತೆಯಲ್ಲಿ ಜಮೀನ್ದಾರಿ ವ್ಯವಸ್ಥೆಯಲ್ಲಿ ಮೇಲ್ವರ್ಗದ ಧೂರ್ತತೆ ಹಾಗೂ ದರ್ಪವನ್ನು ಮೈಗೂಡಿಸಿಕೊಂಡ ಕೆಲವರನ್ನು ಬಿಟ್ಟರೆ ಎಲ್ಲಾ ಹೆಂಗಸರು ದಮನಿತರೆ. ಲೈಂಗಿಕವಾಗಿ ಶೋಷಿತರೆ ಆಗಿದ್ದಾರೆ. ತನಗೆ ಇಷ್ಟವಾದ ಹೆಂಗಸರನ್ನು ಅದರಲ್ಲೂ ಪ್ರತಿಭಟಿಸಲಾಗದ ದಲಿತ ಹೆಂಗಸರನ್ನು ಭೋಗಿಸುವುದು ತನ್ನ ಸಹಜ ಹಕ್ಕು ಎಂದುಕೊಳ್ಳುವ ಗಂಡನ ಕಾರುಬಾರನ್ನು ಮೌನವಾಗಿ ಸಹಿಸಿಕೊಳ್ಳುವುದು ಅವರ ವಿಧಿಯಾಗಿದೆ.

ಈ ಕತೆಯಲ್ಲಿ ಗೌಡಶಾನಿಯಾದ ಅಕ್ಕಮ್ಮನ ಸ್ಥಿತಿ ಇದೇ ಆಗಿದೆ. ಶ್ರೀಮಂತಿಕೆ, ಅಧಿಕಾರ ಎಲ್ಲವೂ ಇದ್ದರೂ ಒಣ ಕೊರಡಿನಂತಿರುವ, ಸೊಂಟದಲ್ಲಿ ಸತುವು ಇಲ್ಲದ ದೊಡ್ಡನ ಗೌಡನನ್ನು ಮದುವೆಯಾಗಿ ಅವಳ ಬಾಳು ಅಸಹನೀಯವಾಗಿದೆ. ಗಂಡ ಷಂಡನೆಂದು ಗೊತ್ತಿದ್ದರೂ ಮಕ್ಕಳಿಲ್ಲದ ಕೊರಗು ಅವಳನ್ನು ಬಾಧಿಸುತ್ತದೆ. ತನ್ನ ಷಂಡತನವನ್ನು ಮರೆಮಾಚಲು ಗೌಡ ಕೇರಿಯ ಹೆಂಗಸರನ್ನು ಇಟ್ಟುಕೊಳ್ಳುತ್ತಾನೆ. "ನನ್ಗಂಡಂತೂ ಷಂಡ! ನನಮೇಲೆ ನನಗೆ ಭರವಸೆ ಐತೆ. ನನ್ನ ಹೊಟ್ಟಾಗ ಒಂದು ಜೀವ ಬೆಳಿಬೇಕು. ಆ ಚಿನಾಲಿ ಸಿದ್ಲಿಂಗಮ್ಮನ ಮಾತು ಸುಳ್ಳಾಗಬೇಕು. ಅದಕ್ಕೆ ಯಾರಾದ್ರೇನು? ಜಾತಿಗೇಡಿಯೇ ಆಗಲಿ ನನ್ನ ಸಂತಾನ ಬೇಕು." ಕೇರಿಯ ಆಳು ಲಿಂಗನನ್ನು ಅಕ್ಕಮ್ಮ ಬಯಸುತ್ತಾಳೆ. ಆದರೆ ಗೌಡ ಅವನನ್ನು ಕೊಲ್ಲಿಸುತ್ತಾನೆ. ಲಿಂಗ ಬದುಕಿದ್ದರೆ ಅವನಿಂದ ಮಕ್ಕಳನ್ನು ಪಡೆಯುತ್ತಿದ್ದೆ ಎಂಬ ಅಕ್ಕಮ್ಮ ಈಗಲೂ ಹಂಬಲಿಸುತ್ತಾಳೆ. ಇದೇ ಕನವರಿಕೆಯಲ್ಲಿದ್ದವಳು ಅಕಸ್ಮಾತ್ತಾಗಿ ಬಂದ

ಹುಡುಗನೊಬ್ಬನಿಂದ ಸುಖಿಸುತ್ತಾಳೆ. ಈ ಸಂಗತಿ ಗೊತ್ತಿರದ ಗೌಡ ಅಲ್ಲಿಗೆ ಬಂದಿರುವ ಅಪರಿಚಿತ ಹುಡುಗ ಲಿಂಗನ ಮಗ ಎಂದು ಗೊತ್ತಾಗಿ ಅವನನ್ನು ಹುಡುಕಿಸುತ್ತಾನೆ. ಕುಡಿ ಬಂದ ದೀಪಗಳು ಕತೆಯಲ್ಲಿ ಎರಡು ವಿಭಿನ್ನವಾದ ಸ್ತ್ರೀ ಸ್ವಭಾವಗಳನ್ನು ಕಾಣಬಹುದು. ಇಲ್ಲಿನ 'ಸಾವಿತ್ರಿ ಮತ್ತು ದೇವಿ' ಪಾತ್ರಗಳನ್ನು ಗಮನಿಸಬಹುದು. ಸಾವಿತ್ರಿ ವಿವಾಹವಾಗಿದ್ದು, ಸಂಸಾರದಲ್ಲಿ ಆಸಕ್ತಿ ಇಲ್ಲ, ಮೈಯಲ್ಲಿ ಶಕ್ತಿ ಇಲ್ಲ, ಮನಸ್ಸಿನಲ್ಲಿ ಬಯಕೆಯಾಗಲಿ, ಭಾವನೆಯಾಗಲಿ ಯಾವುದು ಇಲ್ಲದವಳಾಗಿ ಒಂದು ರೀತಿಯ ಬೊಂಬೆಯಂತೆ ಕಾಣುತ್ತಾಳೆ. ಆದರೆ ಇವಳಿಗೆ ವಿರುದ್ಧವಾಗಿ ಅಂಗವೈಫಲ್ಯದ, ಮಾತು ಬಾರದ ಹೆಣ್ಣಾದ ದೇವಿಯ ಬದುಕು ಸಹಜ ಲೈಂಗಿಕ ಬಯಕೆಯನ್ನು ವ್ಯಕ್ತಪಡಿಸುವ ಹೆಣ್ಣಾಗಿ ಕಂಡುಬರುತ್ತಾಳೆ. ಇತ್ತ ನಾರ್ಮಲ್ ಹುಡುಗಿಯೂ ಅಲ್ಲ, ಅತ್ತ ಪೂರ್ತಿ ಹುಚ್ಚಿಯೂ ಅಲ್ಲದ ದೇವಿಗೆ ಗೌರಿಶಂಕರನೊಡನೆ ಆತ್ಮೀಯತೆ ಬೆಳೆದು ಅದು ಕಾಮಕ್ಕೆ ತಿರುಗುತ್ತದೆ. ಇವನು ಸ್ನೇಹದಿಂದ, ಅನುಕಂಪ ಮನೋಭಾವದಿಂದ ನೋಡಿದರೆ, ಆಕೆ ಈತನಲ್ಲಿ ಲೈಂಗಿಕ ಆಸಕ್ತಿ ತಳೆದಿರುವ ವರ್ತನೆಯಿಂದ ತೊಂದರೆ ಅನುಭವಿಸುವುದನ್ನು ಕಾಣಬಹುದು. ಸಾವಿತ್ರಿಗೆ ಸಾಂಸಾರಿಕ ಬದುಕಿನ ಬಗ್ಗೆ ಇರುವ ನಿರುತ್ಸಾಹ ಕತೆಯ ಇನ್ನೊಂದು ಆಯಾಮವಾಗಿದೆ.

ಮಹಿಳೆ ಒಂದಿಲ್ಲೊಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ತನ್ನ ಸ್ವಂತ ಕುಟುಂಬದಿಂದ ಹಿಡಿದು, ತಾನು ವಾಸಿಸುವ ಸಮಾಜದಿಂದಲೂ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಆಕೆ ಅಬಲೆಯಾಗಿದ್ದು ಸಬಲ ಹಾಗೂ ಸಶಕ್ತಗೊಳ್ಳಲು ಹೆಣಗಾಡಿ ಕೊನೆಗೆ ವ್ಯವಸ್ಥೆಯಿಂದಲೇ ಶೋಷಿಸಲ್ಪಟ್ಟ ನಿರ್ಗತಿಕಳಾಗಿ ಬದುಕಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ. ಇಂತ ಪ್ರಸಂಗ ಕೆಳಗಿನ ಕೆಲವು ಕತೆಗಳಲ್ಲಿದೆ.

'ಧರೆ ಉರಿದರೆ' ಕತೆಯ ಮಲ್ಕರೆಡ್ಡಪ್ಪನ ಮನೆಯ ದನ ಕಾಯುವ ಕುರೂಪಿಯಾದ ಕಜ್ಜಿ ಚೆನ್ನಯ್ಯನ ಮಗಳು ಮೂಗಿ ಪರಕ್ಕಳನ್ನು ಬಸಿರು ಮಾಡಿದವರು ಯಾರು ಎಂಬುದೇ ಈ ಕತೆಯ ವಸ್ತುವಾಗಿದೆ. ಪರಕ್ಕ ಮಾತನಾಡಲು ಸಾಧ್ಯವಾಗದೆ ಹಿಂಸೆಯನ್ನು ಅನುಭವಿಸುತ್ತಾಳೆ. ಹೆತ್ತ ತಂದೆಯೆ ಮಗಳನ್ನು ಕಾಮುಕವಾಗಿ ಶೋಷಿಸಬಯಸುವ ಹಾಗೂ ಅದರಿಂದ ದಿಗ್ಭ್ರಮಿತಳಾದ ತಿಕ್ಕಲು ಮಗಳ ಸಂದರ್ಭ ಬರುತ್ತದೆ. "ಪರಕ್ಕ ಇದ್ದಕ್ಕಿದ್ದಂತೆ ಹೆತ್ತಪ್ಪ ಕಜ್ಜಿ ಚೆನ್ನಯ್ಯನ್ನ ನೋಡಿದ್ರೆ ಸಾಕು, ಹಾವು ಕಂಡವರಂಗ ಚೀರದು ಮಾಡಿತು. ಗುಡಿಸಲು ಬಿಟ್ಟು ಸುಲ್ತಾನಮ್ಮನಲ್ಲಿಗೆ ಬಂದು ಇರತೊಡಗಿತು." "ಜತೆಗೆ ಮಗಳು ಪರಕ್ಕಗ ಕುಡಿಸಿ, ಉಣಿಸಿ ಮಲಗಿಸುತ್ತಿದ್ದ. ಆಗೆಲ್ಲ ಅವನಿಗೆ ಹೆಣ್ತೆ ಮಾರೆಮ್ಮನ ನೆನ್ಪು ಒತ್ತಿ ಬರುತ್ತಿತ್ತು.!" ವಿಚಿತ್ರವೆಂದರೆ ಕಜ್ಜಿ ಚೆನ್ನಯ್ಯನೇ

ತನ್ನ ಮಗಳನ್ನು ಬಸಿರು ಮಾಡಿದ್ದ. ಆದರೆ ಈ ಸಂಗತಿ ಯಾರಿಗೂ ತಿಳಿದಿರುವುದಿಲ್ಲ. ಪರಕ್ಕಳಿದ್ದ ತನ್ನ ಗುಡಿಸಲಿಗೆ ಬೆಂಕಿಯನ್ನು ಹಚ್ಚಿ ಆಕೆಯನ್ನು ಸುಟ್ಟು ಕೊಂದು ಊರು ಬಿಟ್ಟು ಪರಾರಿಯಾಗುತ್ತಾನೆ. ಇದೊಂದು ಅಮಾನವೀಯ ಚಿತ್ರಣದ ವಸ್ತುವುಳ್ಳ ಕತೆ.

'ಮೂಡಲು ಹರಿಯಿತು' ಕತೆಯಲ್ಲಿ ರಕ್ಷಕರೇ ಭಕ್ಷಕರಾದರೆ ಮಹಿಳೆಗೆ ಸಮಾಜದಲ್ಲಿ ಜೀವಿಸಲು ಅಸಾಧ್ಯ. ಭಕ್ಷಕರ ವಿರುದ್ಧವಾಗಿ ಧೈರ್ಯದಿಂದ ಸಮಾಜದಲ್ಲಿ ಬದುಕುವ ಆತ್ಮಸ್ಥೈರ್ಯವನ್ನು ಹೆಣ್ಣು ಇಂದು ಪಡೆದುಕೊಳ್ಳಬೇಕಾಗಿದೆ. ಈ ಕತೆಯಲ್ಲಿ ತಂದೆಯೇ ಮಗಳ ಮೇಲೆ ಬೇರೊಬ್ಬನು ಎರಗುವಂತೆ ಮಾಡುತ್ತಾನೆ. ಕುಡಿತಕ್ಕೆ ದಾಸನಾಗಿ ತನ್ನ ಮಗಳು ದುರುಗಿಯನ್ನು ಊರಿನ ಕರಿಗೌಡನಿಗೆ ಒಪ್ಪಿಸುವ ಪ್ರಸಂಗ ಕಂಡುಬರುತ್ತದೆ. "ಮಾನಪ್ಪ ತನ್ನ ಮಗಳು ಜಲ್ದಿ ಮದಿವಿಯಾದ್ರ ಕರಿಗೌಡನಿಂದ ತನಗೆ ಬರುವ ದುಡ್ಡು ಕಮ್ಮಿಯಾತದ" ಎಂದು ಈ ಸಂಚನ್ನು ರೂಪಿಸಿದ್ದ. ಹಣದ ದುರಾಸೆಯಿಂದ ತಂದೆಯೇ ಮಗಳನ್ನು ಮಾರಲು ಮುಂದಾಗುತ್ತಾನೆ. ಹೆಣ್ಣು ಮಾರಾಟದ ವಸ್ತುವಾಗಿದ್ದಾಳೆ. ದುರುಗಿ ಕೆಳಜಾತಿಯ ಹೆಣ್ಣು, ಹಾಗೂ ಮನೆಯಲ್ಲಿನ ಬಡತನ, ನೋವು. ಇವೆಲ್ಲವೂ ಅವಳು ತನ್ನತನವನ್ನು ಕಳೆದುಕೊಳ್ಳುವಂತ ಪರಿಸ್ಥಿತಿಗೆ ದೂಡುತ್ತದೆ. ತಂದೆ ಮತ್ತು ಗೌಡನ ವಿರುದ್ಧ ಪ್ರತಿಭಟಿಸದೆ, ಸಿಟ್ಟಿಗೇಳದೆ ಮೌನವಾಗಿಯೇ ಅಸಹಾಯಕ ಪರಿಸ್ಥಿತಿ ಎದುರಾಗುವುದನ್ನು ಗುರುತಿಸಬಹುದು.

'ಮಣ್ಣು ಸೇರಿತು ಬೀಜ' ಕತೆಯಲ್ಲಿ ಅಣ್ಣ–ತಂಗಿಯರ ಬಾಂಧವ್ಯವನ್ನು ಚಿತ್ರಿಸುತ್ತಲೇ ಅವರ ಸಣ್ಣತನ, ಅಸೂಯೆ, ಅನುಮಾನ, ಜುಗ್ಗತನಗಳನ್ನೆಲ್ಲ ಕಾಣಿಸುವ ವಾಸ್ತವತೆ ಇದೆ. ನಾಗಮ್ಮ ಸತ್ತರೆ ಅವಳ ಆಸ್ತಿಯನ್ನು ವಶ ಮಾಡಿಕೊಳ್ಳಬೇಕೆಂಬ ಊರಿನವರ ಗುಂಪಿಗೆ ಭಾರಿ ಆಘಾತ ಬೀಳುತ್ತದೆ. ನಾಗಮ್ಮನ ಏಕೈಕ ಪುತ್ರ ಗಯ್ಯಪ್ಪ ಮಾತನಾಡಿದಾಗ, ಇದು ಮೂಕನಿಗೆ ಮಾತು ಬಂದಾಗ ಏನಾಗುತ್ತದೆ ಎಂಬುದನ್ನು ಕತೆ ಅನಾವರಣಗೊಳಿಸಿದೆ.

ಸಾವಿನ ಎದುರು ಮನುಷ್ಯನ ಸಣ್ಣತನಗಳು ಹೇಗೆ ರಾರಾಜಿಸುತ್ತವೆ ಎಂಬುದರ ಭೀಬತ್ಸ ಚಿತ್ರವಿದೆ. ಸಾಯುತ್ತಿರುವ ಮಹಿಳೆ (ನಾಗಮ್ಮ)ನ ಆಸ್ತಿಯ ಪಾಲುದಾರರಾಗಲು ಅನೇಕರು ಹಾತೊರೆಯುತ್ತಾರೆ. ಗಯ್ಯಪ್ಪನಿಗೆ ತೀವ್ರ ನೋವು ಮತ್ತು ಪರಿಸ್ಥಿತಿಯ ಒತ್ತಡದಿಂದ ಮಾತು ಬರುತ್ತದೆ. ಪ್ರತಿಭಟನೆಯ ಸಂಕೇತವಾಗಿ ಮಾತು ಇಲ್ಲಿ ಕಂಡು ಬಂದಿದೆ.

'ಊರಮ್ಮ' ಕತೆಯಲ್ಲಿ ತಂದೆ ಮತ್ತು ದೊಡ್ಡಮ್ಮ ಹಣದ ದಾಹಕ್ಕೆ ಊರಮ್ಮನನ್ನು ಬಸವಿ ಬಿಡುವುದು ಕಂಡುಬರುತ್ತದೆ. ಊರಮ್ಮ ತನ್ನ ಪ್ರೀತಿಯ

ಭೀಮನೊಂದಿಗೆ ಸೇರಲಾಗದೆ ಬಸವಿ ಬಿಟ್ಟ ನಂತರ ಆಕೆ ದೇವಪ್ಪನ ಮಂಚದ ತೊತ್ತಾಗಿ ನರಕಯಾತನೆ ಅನುಭವಿಸುತ್ತಾಳೆ. ಆನಂತರ ಊರಮ್ಮ ಸೀತಯ್ಯನ ವಶವಾಗುವಳು. ತನ್ನ ಪ್ರಿಯತಮ ಭೀಮನೊಂದಿಗೆ ಮಾತನಾಡುವುದನ್ನು ಕಂಡ ಸೀತಯ್ಯ ಅವಳಿಗೆ ಮತ್ತಷ್ಟು ಹಿಂಸೆಯನ್ನು ಕೊಡುವನು. ಆತನ ಹಿಂಸೆಯನ್ನು ತಾಳಲಾರದೆ ಅವನನ್ನು ಪ್ರತಿಭಟಿಸಿ, ಕಾಲಿನಿಂದ ಒದ್ದು ಊರಮ್ಮ ಭೀಮನನ್ನು ಕರೆದುಕೊಂಡು ಹೋಗುವಳು. ಹೆಣ್ಣು ಸಮಾಜದ ಅರ್ಥಹೀನ ಕಟ್ಟುಪಾಡುಗಳಿಗೆ ಒಳಗಾಗಿ ಯಾತನೆಯನ್ನು, ಸಂಕಟವನ್ನು ಅನುಭವಿಸಿದರೂ, ತನ್ನ ಅಸ್ತಿತ್ವ ತೋರುವ ಬಗೆ ಗಮನಾರ್ಹ.

ಇದಲ್ಲದೆ ತಳಸಮುದಾಯದ ದಲಿತ ಮಹಿಳೆಯರು ಸಮಾಜದಲ್ಲಿನ ಆಚರಣೆಗಳಾದ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಜಾತಿ ಪದ್ಧತಿ, ಅಸ್ಪೃಶ್ಯತೆ, ಜೋಗತಿ ಬಿಡುವುದು, ಒಡೆಯನಿಗೆ ಪ್ರತಿರೋಧ ತೋರುವಂತಿಲ್ಲ, ಪುರುಷರ ಎದುರು ಸರಿಸಮಾನವಾಗಿ ನಿಲ್ಲದಿರುವುದು, ಇತ್ಯಾದಿ ಅನಿಷ್ಟ ಆಚರಣೆಗಳಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅವಿದ್ಯಾವಂತರು ಮತ್ತು ಅಜ್ಞಾನಗಳು ಅವರನ್ನು ವಿಷವ್ಯೂಹದಿಂದ ಹೊರಬರದಂತೆ ಮಾಡಿವೆ.

'ಉತ್ತಮಣ' ಕತೆಯಲ್ಲಿ ಲೈಂಗಿಕ ಶೋಷಣೆಯನ್ನು ಪ್ರಶ್ನಿಸುವುದಲ್ಲದೇ, ಪರಿಹಾರವನ್ನು ಸೂಚಿಸುವಷ್ಟರ ಮಟ್ಟಿಗೆ ದಲಿತ ಸಮುದಾಯ ಬೆಳೆದಿರುವುದನ್ನು ಗಮನಿಸಬಹುದು. ಧೂಳಪ್ಪನ ಮಗಳಾದ ಗಂಗವ್ವಳನ್ನು ಬಯಸುವ ಗೌಡ ಅವರನ್ನು ತನ್ನ ಹೊಲದ ಮನೆಯಲ್ಲಿಟ್ಟು ಸಂಸಾರ ನಡೆಸುತ್ತಾನೆ. ಆದರೆ, ಅವಳನ್ನು ತನ್ನ ಹೆಂಡತಿಯಾಗಿ ಸ್ವೀಕರಿಸಲು ಸಮಾಜ ಒಪ್ಪುವುದಿಲ್ಲ. ಅಸ್ತ್ರ ಕಾಯಕದ ಜಂಗಮಯ್ಯ, ತೆಕ್ಕೆಕಾಯಕದ ಜಂಗಮಯ್ಯ ಹಾಗೂ ಮುಳ್ಳಿವಿಗೆ ಕಾಯಕದಯ್ಯರು, ಬಸವರಾಜಪ್ಪಗೌಡ ಗಂಗವ್ವಳ ಸಂಗ ತೊರೆಯುವಂತೆ ಧಾರ್ಮಿಕ ಒತ್ತಡ ತರುತ್ತಾರೆ. ಆದರೆ ಇವರ ಪ್ರೀತಿ ಅಚಲವಾಗಿರುವುದರಿಂದ ಯಾವುದೇ ಧಾರ್ಮಿಕ ಹಾಗೂ ಸಮಾಜಿಕ ಒತ್ತಡಗಳಿಗೆ ಮಣಿಯುವುದಿಲ್ಲ. ಆದಾಗ್ಯೂ ಗಂಗವ್ವಳನ್ನು ಹೆಂಡತಿಯಾಗಿ ಸ್ವೀಕರಿಸಲು ಅವನಿಂದಾಗದು. ಧೂಳಪ್ಪನನ್ನು ಮಗಳ ಸಮೇತ ಊರು ಬಿಡುವಂತೆ ತಾಕೀತು ಮಾಡುತ್ತಾರೆ. ಆಗ "ಧೂಳಪ್ಪನಿಗೆ ಸಿಟ್ಟು ನೆತ್ತಿಗೇರಿ ಮಗಳ ಕೈ ಹಿಡಿದು ಎಲ್ಲ ದೈವಸ್ಥರನ್ನು ಸರಿಸುತ್ತ ಜಂಗಮನ ಮುಂದೆ ಬಂದು ತನ್ನ ಮಗಳು ಗಂಗವ್ವನನ್ನು ನಿಲ್ಲಿಸಿ ದೇವ್ರೆ.... ನನ್ಗ ನ್ಯಾಯ ಬೇಕಪ್ಪೋ! ನನ್ನ ಮಗಳ ಶೀಲಾ ಹೋಗ್ಯಾದ, ಮಾನ ಹೋಗ್ಯಾದ ಇವಳನ್ನು 'ನಾಯಿ ಮುಟ್ಟಿದ ಗಡಿಗೆ' ಅಂತ ಯಾರು ಮದುವಿ ಮಾಡ್ಕೆಂತಾರ? ಗೌಡ ನನ್ನ ಮಗಳ ಶೀಲ ಕೆಡಿಸ್ಯಾನ. ಈಗ ಆಕೆಗೆ ಶೀಲ ಕೊಡಿಸಿ,

ಬಾಯಿ ಇಲ್ಲದ ನಮ್ಗೂ ನ್ಯಾಯ ಒದಗಿಸಿಕೊಡ್ಬೇಕು.... ದೇವ್ರೇ.... ನ್ಯಾಯ ಎಂದು.... ಅಡ್ಡ ಬೀಳುತ್ತಾನೆ." ಮತ್ತೊಂದು ಕಡೆ ಸೀತಮ್ಮನ ಬದುಕು ಸೂತ್ರವಿಲ್ಲದ ಗಾಳಿಪಟದಂತಾಗುತ್ತದೆ. ಈಕೆಯ ನೋವು, ಸಂಕಟ, ವೇದನೆಯನ್ನು ಕತೆ ಅನಾವರಣಗೊಳಿಸಿದೆ.

'ಏ ದಿಲ್ ಮಾಂಗೆ ಮೋರ್' ಕತೆಯಲ್ಲಿ ಹೋಟೆಲ್ ಮಾಲೀಕಳಾದ ಹುಸೇನವ್ವಳ ಮಾನವೀಯ ಮನೋಭಾವದ ಚಿತ್ರಣವಿದೆ. ಈಕೆ ಅನಾಥ ಹುಡುಗ ಚಿದಾನಂದ ಮತ್ತು ಎಲ್ಲಮ್ಮನಿಗೆ ಆಶ್ರಯ ನೀಡುವಳು. ಎಲ್ಲಮ್ಮನ ಗಂಡ ಈಕೆಯನ್ನು ಬಿಟ್ಟು ಓಡಿಹೋಗಿದ್ದ. ತುಂಬು ಬಸುರಿ ಎಲ್ಲಮ್ಮ ಕಂಗಾಲಾಗಿರುವಾಗ ಹುಸೇನವ್ವ ಈಕೆಯನ್ನು ತನ್ನ ಬಳಿ ಉಳಿಸಿಕೊಳ್ಳುತ್ತಾಳೆ. ಇವರಿಬ್ಬರನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಾಳೆ. ಚಿದಾನಂದ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಗಳಿಸಿದ ಹಣವನ್ನು ಆತನ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುವಂತೆ ಬುದ್ಧಿ ಹೇಳುತ್ತಾಳೆ. ಹುಸೇನವ್ವ ಓದಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದಳು. ಮೇಲ್ವರ್ಗದ ಶಾಂತಿ ವಿದ್ಯಾಭ್ಯಾಸದ ಅರಿವಿನಿಂದ ದಲಿತರ ಗೋವಿಂದನೆಂಬ ಹುಡುಗನನ್ನು ಪ್ರೀತಿಸುವಳು. ಶಾಂತಿಗೆ ಶಿಕ್ಷಣದಿಂದ ಜಾತ್ಯಾತೀತ ಮನೋಭಾವ ಮೂಡಿ ತನ್ನ ಪ್ರೀತಿಯನ್ನು ಕಾಪಾಡಿಕೊಳ್ಳಲು ಸಮಾಜವನ್ನು ಎದುರಿಸುವ ಸಾಮರ್ಥ್ಯ ಬಂದಿರುವುದು ಭರವಸೆಯ ಆಯಾಮ ಎನಿಸುತ್ತದೆ.

'ಒಡಲುಗೊಂಡವರು' ಕತೆಯಲ್ಲಿ ಪ್ರಮುಖವಾಗಿ ಕಂಡುಬರುವ ಸ್ತ್ರೀ ಪಾತ್ರಗಳು: ಅವ್ವ–ಬಸವ್ವ, ಅತ್ತಿಗೆ–ಗೌರಕ್ಕ, ಹೆಂಡತಿಯಾಗಬೇಕಿದ್ದ– ರೇಣುಕಾ, ಬಸವನ ಮಗ ಹರಿಶ್ಚಂದ್ರ. ಪಿತ್ರಾರ್ಜಿತ ಆಸ್ತಿಯನ್ನು ಮಾರಿ ಆ ವಿಚಾರವನ್ನು ಯಾರಿಗೂ ತಿಳಿಯದಂತೆ ಮಾಡುತ್ತಾನೆ ಹಾಗೂ ಎಲ್ಲರಿಗೂ ಸುಳ್ಳಿನ ಕಟ್ಟುಕತೆಯನ್ನು ಹೇಳಿ ನಂಬಿಸಿ ತಾಯಿಗೆ, ಅತ್ತಿಗೆಗೆ ಮತ್ತು ತಾತನ ನಂಬಿಕೆಗೆ, ಮನಸ್ಸಿನ ಭಾವನೆಗಳಿಗೆ ಮೋಸ ಮಾಡಿರುತ್ತಾನೆ. ಇದೇ ಚಿಂತೆಯಲ್ಲಿ ತಾಯಿಗೆ ಅನಾರೋಗ್ಯದ ಪರಿಸ್ಥಿತಿ ಎದುರಾಗುತ್ತದೆ. ಆ ಜಮೀನಿನ ಮೇಲೆ ಬಸವ್ವ ಮತ್ತು ಅತ್ತಿಗೆ ಹಾಗೂ ತಾತನಿಗೆ ಇದ್ದ ಒಲವಿನ ಜೊತೆ ಆಟವಾಡುತ್ತಾನೆ ಹರಿಶ್ಚಂದ್ರ. ಈ ಕಾರಣದಿಂದ ಮದುವೆಯಾಗಬೇಕಿದ್ದ ರೇಣುಕಾಳೂ ಸಹ ದೂರವಾಗುತ್ತಾಳೆ. ವಿದ್ಯಾಭ್ಯಾಸ, ನಿರುದ್ಯೋಗ ಮತ್ತು ಜಾತಿಯ ಕಳಂಕ ಅವನನ್ನು, ರೇಣುಕಾಳನ್ನು ಹಾದಿ ತಪ್ಪಿಸಿರುವ ಸೂಚನೆ ಸಿಗುತ್ತದೆ. ಕೊನೆಗೆ ಸಾಯಲಿರುವ ತಾಯಿಯನ್ನು ಮಣ್ಣು ಮಾಡಲು ಮಾರಗಲ ಜಾಗ ಸಿಗದಂತ ಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲರ ಬದುಕಿನ ಒಳತಲ್ಲಣಗಳನ್ನು ಕತೆ ಬಿಚ್ಚಿಡುತ್ತದೆ.

ಕತೆಯಲ್ಲಿ ಶಿಕ್ಷಿತಳಾದ ಪ್ರಭಾವಿತಳಾದ ಹೆಣ್ಣು ಸುಖವಾದ ಜೀವನವನ್ನು

ಬಯಸುತ್ತಾ ಶ್ರೀಮಂತ ಹುಡುಗನನ್ನು ಪ್ರೀತಿಸಿ ನಂಬಿ ಮೋಸ ಹೋಗುವ ರೀತಿ ಹಾಗೂ ಸರ್ಕಾರಿ ಕೆಲಸವನ್ನು ಅರಸಿ ಸಿಗದೇ ಅವಿವಾಹಿತೆಯಾಗಿ ಉಳಿದ ಆಧುನಿಕ ಕಾಲದ ವಿದ್ಯಾವಂತ ಹುಡುಗಿಯರ ಸಮಸ್ಯೆಗಳನ್ನು ಈ ಕತೆ ಚಿತ್ರಿಸಿದೆ. ಇಲ್ಲಿ ರೇಣುಕಾ ಆಡುವ ಮಾತು ನಮ್ಮ ಸುತ್ತ ಇರುವ ವಿಷ ವರ್ತುಲದ ಸಮಾಜದಲ್ಲಿ ಸಿಕ್ಕಿಕೊಂಡು ನರಳುವ ಹೆಣ್ಣಿನ ಮಾತುಗಳಾಗಿವೆ. ಅವಳು "ನನ್ನ ಕಳ್ಳು ಬಳ್ಳಿಯಲ್ಲೇ ನನ್ಗ ನೆಲೆಯಿಲ್ಲ. ಇನ್ನ ಮನೆ ಹೊರಗ, ಸಮಾಜದಾಗ....."

ಈ ಮಾತುಗಳು ನೊಂದ ಹೆಣ್ಣಿನ ದಾರುಣ ಸ್ಥಿತಿಯನ್ನು ತಿಳಿಸುತ್ತದೆ. ಬದುಕಿನಲ್ಲಿ ಅನೇಕ ಸಂದರ್ಭಗಳಲ್ಲಿ ಬೇರೆಯವರ ಆಸೆ, ಆಮಿಷಗಳಿಗೆ ಬಲಿಯಾದ ಹೆಣ್ಣಿನ ಸ್ಥಿತಿಗತಿ ಇಲ್ಲಿವೆ. ಜೀವನವೆಲ್ಲ ಅಲೆಮಾರಿಯಾಗಿ ಅಲೆಯುತ್ತಾ ಹಲವಾರು ಜನರ ಲೈಂಗಿಕ ದೌರ್ಜನ್ಯಗಳಿಗೆ ಒಳಗಾದವರು, ಸಾವಿನವರೆಗೂ ಅದೇ ನೋವಿನ ಬದುಕನ್ನು ನಡೆಸುವ ಸ್ತ್ರೀಯರ ಜೀವನ ಚಿತ್ರಣವನ್ನು ನುಗಡೋಣಿಯವರ ಕತೆಗಳಲ್ಲಿ ಕಾಣಬಹುದಾಗಿದೆ. ಅಲಕ್ಷಿತರು, ಹಿಂದುಳಿದ ಸಮುದಾಯದವರು, ಮಹಿಳೆಯರು, ಮುಸ್ಲಿಂ ಸಮುದಾಯದ ಜನ ಮುಂತಾದವರನ್ನೇ ನುಗಡೋಣಿ ತಮ್ಮ ಕತೆಗಳಲ್ಲಿ ಮುನ್ನೆಲೆಗೆ ತಂದಿದ್ದಾರೆ. ಆ ಮೂಲಕ ಅವರ ಅಸ್ತಿತ್ವ ಮತ್ತು ಅಸ್ಮಿತೆಯ ಸವಾಲುಗಳು ಎಂತದು ಎಂಬುದನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ.

ತುಳಸಿ ಊರ ಗೌಡನ ಬಳಿ ತುಳಸಿಯ ತಂದೆ ಜೀತದ ಆಳಾಗಿ ದುಡಿಯುತ್ತಿರುತ್ತಾನೆ. ಇವನು ಗೌಡನಿಗೆ ಬಹಳ ನಿಷ್ಠಾವಂತನಾಗಿದ್ದು, ಸ್ವಾಮಿಭಕ್ತಿಯನ್ನು ಕೂಡ ಹೊಂದಿದ್ದನು. ಅದು ಎಷ್ಟರ ಮಟ್ಟಿಗೆ ಎಂದರೆ ಗೌಡನ ವಿರುದ್ಧ ಯಾರೋ ಒಬ್ಬ ವ್ಯಕ್ತಿ ಮಾತನಾಡಿದ ಎಂದು ಹಾಡಹಗಲೇ ಸಂತೆಯಲ್ಲಿ ಅವನನ್ನು ಕೊಲೆ ಮಾಡಿ ಜೈಲು ಪಾಲಾದನು. ಈ ಸಂದರ್ಭದಲ್ಲಿ ತಂದೆಯ ಅಣ್ಣತಮ್ಮಂದಿರು ತುಳಸಿ ಮತ್ತು ಅವಳ ತಾಯಿಯನ್ನು ಮನೆಯಿಂದ ಓಡಿಸುವರು. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಗೌಡನು ತನ್ನ ಜಮೀನಿನಲ್ಲಿ ಗುಡಿಸಲನ್ನು ಹಾಕಿಸಿಕೊಟ್ಟನು. ಜೊತೆಗೆ ಒಂದು ಹೊಲವನ್ನು ಕೊಟ್ಟು "ಬಾಳ್ವೆ ಮಾಡಿಕೊಂಡಿರು. ನಿನ್ನ ಗಂಡನನ್ನು ಜೈಲಿನಿಂದ ಬಿಡಿಸಿಕೊಂಡು ಬರ್ತೀನಿ" ಎಂದು ಆಶ್ರಯ ಮತ್ತು ಕಾಳಜಿಯನ್ನು ತೋರುವ ಮಾತನಾಡುತ್ತಾನೆ. ಹೀಗಿರುವಾಗ ಊರಗೌಡನಿಗೆ ತುಳಸಿಯ ತಾಯಿ ವಶವಾಗುತ್ತಾಳೆ. ಪರಿಸ್ಥಿತಿಗೆ ಅಡಿಯಾಳಾಗಿ ಗೌಡನ ಆಶ್ರಯ ಅನಿವಾರ್ಯವಾಗುವುದು. ಇದೆಲ್ಲವನ್ನು ತೊರೆದು ಸ್ವತಂತ್ರವಾಗಿ ಜೀವಿಸಲು ಗೌಡ ಬಿಡುವುದಿಲ್ಲ. ತುಳಸಿಗೆ 'ಗೌಡನ ಸೂಳೆಮಗಳು' ಎಂದು ಕರೆದಾಗ ಬೇಸರವಾದರೂ ವಿರೋಧಿಸಲು ಆಗದಂತ ಸ್ಥಿತಿ.

ತುಳಸಿ ಓದಿನಲ್ಲಿ ಮುಂದಿರುವುದನ್ನು ಕಂಡ ಶಾಲೆಯ ಶಿಕ್ಷಕರು ಪ್ರೋತ್ಸಾಹ

ನೀಡಿ ಅವಳ ಶಿಕ್ಷಣ ಮುಂದುವರೆಯುವಂತೆ ಮಾಡಿದರು. ಆದರೆ ತುಳಸಿಯ ಮೇಲೆ ಗೌಡನ ಮಗನಿಗೆ ಪ್ರೀತಿ ಹುಟ್ಟಿ ಅವಳನ್ನು ಪಡೆಯಬೇಕು ಎಂದು ಹಠ. ಇದಕ್ಕೆ ಊರಿನ ಹಿರಿಯರನ್ನು ಒಲಿಸಿಕೊಂಡು ಕೇರಿಯ ಹೆಣ್ಣನ್ನು ದೇವದಾಸಿಗೆ ಬಿಡುವ ರೂಢಿಯಿರುವುದರಿಂದ ಇದಕ್ಕೆ ತುಳಸಿಯನ್ನು ಸೇರಿಸಿಕೊಳ್ಳಲೇಬೇಕು ಎಂದು ಆಜ್ಞೆ ಮಾಡಿಸಿದನು. ಇದರಿಂದ ತುಳಸಿಯ ತಾಯಿ ಹೆದರಿ ತಾಲೂಕಿನಲ್ಲಿ ಓದುತ್ತಿದ್ದ ಇವಳಿಗೆ ನಡೆದ ಸಂಗತಿ ತಿಳಿಸಿ **"ನೋಡವ್ವ ಬದುಕಬೇಕಂದ್ರ ಊರಿಗೆ ಬಾ"** ಎಂದು ಹೇಳುತ್ತಾಳೆ. ತಾಯಿಯ ಮಾತನ್ನು ಕೇಳಿ ತುಳಸಿಗೆ ಬೇಸರವಾಗುತ್ತದೆ. ಈ ವಿಚಾರವನ್ನು ತನ್ನ ಶಿಕ್ಷಕರಿಗೆ ತಿಳಿಸಿದಾಗ ಅವರು ತುಳಸಿಯ ಮೂಲಕ ಎ.ಸಿ ಗೆ ದೇವದಾಸಿ ಪದ್ಧತಿಯಿಂದ ನನಗೆ ರಕ್ಷಣೆ ನೀಡಿ ಎಂದು ಪತ್ರ ಬರೆಸುವರು. ಇದರಿಂದ ಪೊಲೀಸರು ಊರಿಗೆ ಬಂದು ದೇವದಾಸಿ ಆಚರಣೆಯ ಬಗ್ಗೆ ಜಾಗೃತಿ ನೀಡಿ, ಗೌಡನ ಮಗನನ್ನು ಬಂಧಿಸುವ ಬದಲು ಎಚ್ಚರಿಕೆಯನ್ನು ನೀಡುವರು. ಅಸ್ಪೃಶ್ಯತೆ, ದೇವದಾಸಿ ಪದ್ದತಿ, ಬೆತ್ತಲೆ ಸೇವೆಯಂತ ಕೆಟ್ಟ ಆಚರಣೆಗಳು ದಲಿತ ಮಹಿಳೆಯರಿಗೆ ಯಾಕಿವೆ ಎಂಬುದು ಕುತೂಹಲಕಾರಿ ಸಂಗತಿ. ಇಂತ 'ವಸ್ತು'ವನ್ನು ಕತೆಯಾಗಿಸುವಲ್ಲಿ ಅಮರೇಶ ತೋರಿರುವ ಸೃಜನತೆ–ಕಲಾತ್ಮಕತೆ, ಸ್ತ್ರೀ ಪಾತ್ರ ಪೋಷಣೆ ವಿಶೇಷ ಎನಿಸುತ್ತದೆ.

ಪರಾಮರ್ಶನ ಗ್ರಂಥಗಳು

1. ಅಮರೇಶ ನುಗಡೋಣಿ – ಬಿಸಿಲ ಬಾಗಿನ– 1, 2., ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್.ಲಿ., ಬೆಂಗಳೂರು, 2013 ಮತ್ತು 2014.
2. ಅಮರೇಶ ನುಗಡೋಣಿ., ಚುಕ್ಕಿ ಮದುವೆ ಪ್ರಸಂಗ, ದೇಸಿ ಪುಸ್ತಕ ಪ್ರಕಾಶನ, 13ನೇ ಮುಖ್ಯ ರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು, 2017.
3. ಡಾ. ಪ್ರಸಾದಸ್ವಾಮಿ.ಎಸ್ – ಶೀಲವೆಂಬುದು ಸೂತಕ, ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್.ಲಿ., ಬೆಂಗಳೂರು, 2014.

ಡಾ. ಸುರೇಶ.ಎನ್

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್

ಚಿಕ್ಕಬಳ್ಳಾಪುರ – 562101

drsureshan17@gmail.com

ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕ: ಒಂದು ಸಂಶೋಧನಾ ವರದಿ

¤ ಡಾ. ವಿಜಯ ಯು. ಪಾಟೀಲ ¤ ಡಾ. ಕೋಮಲಾ ಎಂ.

ಕಾಲೇಜು ಉನ್ನತ ಶಿಕ್ಷಣದ ಹೆಬ್ಬಾಗಿಲು, ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಮತ್ತು ಪರಿಣತಿಯನ್ನು ನೀಡುತ್ತದೆ. ಕಾಲೇಜು ಪದವಿಯನ್ನು ಪಡೆಯುವುದು ವೃತ್ತಿ ಭವಿಷ್ಯವನ್ನು ಹೆಚ್ಚಿಸುತ್ತದೆ ಮತ್ತು ಉತ್ತಮ ಉದ್ಯೋಗ ಅವಕಾಶಗಳು ಮತ್ತು ಹೆಚ್ಚಿನ ಗಳಿಕೆಯ ಸಾಮರ್ಥ್ಯಕ್ಕೆ ಬಾಗಿಲು ತೆರೆಯುತ್ತದೆ. ಕಾಲೇಜು ವಿದ್ಯಾರ್ಥಿಗಳು ವಿಭಿನ್ನ ಆಸಕ್ತಿಗಳು, ಹಿನ್ನೆಲೆಗಳು ಮತ್ತು ಆಕಾಂಕ್ಷೆಗಳನ್ನು ಹೊಂದಿರುವ ವೈವಿಧ್ಯಮಯ ಗುಂಪು. ಒಟ್ಟಾರೆಯಾಗಿ, ಕಾಲೇಜು ವಿದ್ಯಾರ್ಥಿಗಳು ಮತ್ತು ಕಾಲೇಜು ವರ್ಷಗಳು ವ್ಯಕ್ತಿಗಳು ಮತ್ತು ಸಮಾಜಗಳ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ, ವೈಯಕ್ತಿಕ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುತ್ತವೆ.

ಸಂಶೋಧನಾ ವಿಧಾನ: ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕದ ಮೇಲೆ ಅಧ್ಯಯನ ವಿಭಾಗ (ಶಾಖೆ) ಮತ್ತು ಅಧ್ಯಯನ ಮಾಡುತ್ತಿರುವ ತರಗತಿ ಬೀರುವ ಪ್ರಭಾವವನ್ನು ಪರೀಕ್ಷಿಸಲು ಪ್ರಸ್ತುತ ಅಧ್ಯಯನದಲ್ಲಿ ಅಡ್ಡ ವಿಭಾಗದ (Cross Sectional) ಮತ್ತು ಪರಸ್ಪರ ಸಂಬಂಧದ (Co-relational) ಅಧ್ಯಯನ ವಿನ್ಯಾಸವನ್ನು ಬಳಸಲಾಗಿದೆ. ಕಾಲೇಜು ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು (ಆತಂಕ) ನಿರ್ಣಯಿಸಲು ಭಟ್ನಾಗರ್ ಮತ್ತು ಇತರರು (2011) ಅಭಿವೃದ್ಧಿ ಪಡಿಸಿರುವ ADSS ಪ್ರಶ್ನಾವಳಿಯನ್ನು ಈ ಅಧ್ಯಯನದಲ್ಲಿ ಬಳಸಲಾಗಿದೆ. ಪ್ರಸ್ತುತ ಅಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜುಗಳಲ್ಲಿ ಎಲ್ಲಾ ವಿಭಾಗಗಳಲ್ಲಿ (ಕಲೆ, ವಾಣಿಜ್ಯ, ವಿಜ್ಞಾನ) 1, 2 ಮತ್ತು 3ನೇ ವರ್ಷದ ಸ್ನಾತಕ ಪದವಿಗಳನ್ನು ಪಡೆಯುತ್ತಿರುವ ಒಟ್ಟು 1455 ಪುರುಷ ಮತ್ತು

ಮಹಿಳಾ ಕಾಲೇಜು ವಿದ್ಯಾರ್ಥಿಗಳನ್ನು ಒಳಗೊಂಡಿದೆ.

ಫಲಿತಾಂಶಗಳು ಹೀಗಿವೆ, ಸುಮಾರು 68% ಕಾಲೇಜು ವಿದ್ಯಾರ್ಥಿಗಳು ಆತಂಕದಿಂದ ಬಳಲುತ್ತಿದ್ದಾರೆ, ಉಳಿದ 32% ವಿದ್ಯಾರ್ಥಿಗಳು ಸಾಮಾನ್ಯ ವರ್ಗದ ಅಡಿಯಲ್ಲಿ ಕಂಡುಬಂದಿದ್ದಾರೆ. ಮಧ್ಯಮ (22%) ಮತ್ತು ಸೌಮ್ಯ (11%) ಆತಂಕದ ಮಟ್ಟಗಳಿಗೆ ಹೋಲಿಸಿದರೆ ಹೆಚ್ಚಿನ ಶೇಕಡಾವಾರು ಮಾದರಿಗಳು ತೀವ್ರ ಮಟ್ಟದ ಆತಂಕ (35%) ಅಡಿಯಲ್ಲಿ ಕಂಡುಬಂದಿವೆ. ವಾಣಿಜ್ಯ ವಿದ್ಯಾರ್ಥಿಗಳು (68%) ಮತ್ತು ವಿಜ್ಞಾನ ವಿದ್ಯಾರ್ಥಿಗಳಿಗೆ (68.4%) ಹೋಲಿಸಿದರೆ, ಆರ್ಟ್ಸ್ ಸ್ಟ್ರೀಮ್‌ನ (ಕಲಾ ವಿಭಾಗದ) (81.1%) ಹೆಚ್ಚಿನ ವಿದ್ಯಾರ್ಥಿಗಳು ಸೌಮ್ಯದಿಂದ ತೀವ್ರ ಆತಂಕದ ಮಟ್ಟವನ್ನು ಎದುರಿಸುತ್ತಿದ್ದಾರೆ ಎಂದು ಅಧ್ಯಯನದ ಫಲಿತಾಂಶವು ತೋರಿಸುತ್ತದೆ. ಒಟ್ಟಾರೆಯಾಗಿ, ಎಲ್ಲಾ ವಿಭಾಗದ (ಶಾಖೆ) 50% ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ತೀವ್ರ ಮಟ್ಟದ ಆತಂಕವನ್ನು ಎದುರಿಸುತ್ತಿದ್ದಾರೆ. ಅಧ್ಯಯನದ ವಿಭಾಗ (ಶಾಖೆ) ಮತ್ತು ಆತಂಕದ ಮಟ್ಟಗಳ ನಡುವೆ ಸಂಖ್ಯಾಶಾಸ್ತ್ರೀಯವಾಗಿ ಗಮನಾರ್ಹವಾದ ಸಂಬಂಧವನ್ನು ಗಮನಿಸಬಹುದಾಗಿದೆ. ($x^2(6) = 190.02$, $p<0.01$). ಅದೇ ರೀತಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವ ತರಗತಿ ಮತ್ತು ಆತಂಕದ ನಡುವೆ ಕೂಡ ಸಂಖ್ಯಾಶಾಸ್ತ್ರೀಯವಾಗಿ ಗಮನಾರ್ಹ ಸಂಬಂಧವನ್ನು ಗಮನಿಸಬಹುದಾಗಿದೆ ($x^2(6) = 17.02$, $p<0.01$). ಸುಮಾರು 71.8% ಮೊದಲ ವರ್ಷದ ವಿದ್ಯಾರ್ಥಿಗಳು ಸೌಮ್ಯದಿಂದ ತೀವ್ರ ಆತಂಕವನ್ನು ಅನುಭವಿಸಿದ್ದಾರೆ. ಎರಡನೇ ವರ್ಷದ ಪದವಿ ವಿದ್ಯಾರ್ಥಿಗಳಲ್ಲಿ, ಈ ಅಂಕಿ ಅಂಶವು 68.5% ಆಗಿದ್ದರೆ, ಮೂರನೇ ವರ್ಷದ ವಿದ್ಯಾರ್ಥಿಗಳಲ್ಲಿ 64% ಇದೇ ರೀತಿಯ ಆತಂಕದ ಮಟ್ಟವನ್ನು ವರದಿ ಮಾಡಿದೆ. ಎಲ್ಲಾ ವರ್ಷಗಳಲ್ಲಿ ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಈ ಸಮಸ್ಯೆಯನ್ನು ಎದುರಿಸುತ್ತಿರುವಾಗ, ಉನ್ನತ ತರಗತಿಗಳ ಮೂಲಕ ಮುಂದುವರಿದಂತೆ ಆತಂಕವನ್ನು ಅನುಭವಿಸುವ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣವು ಕಡಿಮೆಯಾಗಿದೆ ಎಂದು ಗಮನಿಸಲಾಗಿದೆ.

ಉಪಸಂಹಾರ: ಪ್ರಸ್ತುತ ಅಧ್ಯಯನದಿಂದ, ಪ್ರಸ್ತುತ ಅಧ್ಯಯನದ ಕಾಲೇಜು ವಿದ್ಯಾರ್ಥಿಗಳು ಆತಂಕದಂತಹ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಹೆಚ್ಚು ಗುರಿಯಾಗುತ್ತಾರೆ ಎಂದು ತೀರ್ಮಾನಿಸಬಹುದು. ಈ ಅಧ್ಯಯನವು ಸೈದ್ಧಾಂತಿಕವಾಗಿ ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕದ ಹರಡುವಿಕೆಯ ವೈಜ್ಞಾನಿಕ ಜ್ಞಾನದ ಕೊಡುಗೆ ನೀಡುತ್ತದೆ. ಈ ರೀತಿಯ ಸಂಶೋಧನೆಗಳು ಕಾಲೇಜು ವಿದ್ಯಾರ್ಥಿಗಳಿಗೆ ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಹಸ್ತಕ್ಷೇಪ (Intervention) ಮತ್ತು ಬೆಂಬಲ ತಂತ್ರಗಳ

(Supportive system) ಮೂಲಕ ಸಹಾಯ ಮಾಡಬೇಕೆಂಬ ತುರ್ತುಸ್ಥಿತಿಯನ್ನು ಒತ್ತಿಹೇಳುತ್ತವೆ.

ಪ್ರಮುಖ ಪದಗಳು: ಕಾಲೇಜು ವಿದ್ಯಾರ್ಥಿಗಳು, ಆತಂಕ

ಪೀಠಿಕೆ

ರಾಷ್ಟ್ರ ಮತ್ತು ಜಗತ್ತಿನಾದ್ಯಂತ ಯುವಜನರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಕಾಲೇಜು ವಿದ್ಯಾರ್ಥಿಗಳು ಎದುರಿಸುವ ಸಾಮಾನ್ಯ ಸಮಸ್ಯೆಗಳೆಂದರೆ ಒತ್ತಡ, ಆತಂಕ, ಖಿನ್ನತೆಯ ಲಕ್ಷಣಗಳು, ತಿನ್ನುವ ಸಮಸ್ಯೆಗಳು ಮತ್ತು ಇತರ ಮಾನಸಿಕ ಸಮಸ್ಯೆಗಳು, ಇದು ಅವರ ಜೀವನದ ಮೇಲೆ ಗಮನಾರ್ಹ ಋಣಾತ್ಮಕ ಪರಿಣಾಮಗಳನ್ನು ಬೀರುತ್ತದೆ (ಸಲೀಮ್, ಮತ್ತು ಇತರರು. 2013). ಕೇಂದ್ರದಿಂದ ನಿಯೋಜಿಸಲ್ಪಟ್ಟ ಮತ್ತು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (NIMHANS) ಜಾರಿಗೊಳಿಸಿದ, ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆಯ (NMHS) (2016) ಸಂಶೋಧನೆಗಳ ಪ್ರಕಾರ, ಜನಸಂಖ್ಯೆಯ ಸುಮಾರು 8% ಜನರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಮತ್ತು ಅವರಿಗೆ ಮಾನಸಿಕ ಆರೋಗ್ಯ ಸಹಾಯದ ಅಗತ್ಯವಿದೆ.

ಕಾಲೇಜು, ಉನ್ನತ ಶಿಕ್ಷಣದ ಹೆಬ್ಬಾಗಿಲು, ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಮತ್ತು ಪರಿಣತಿಯನ್ನು ನೀಡುತ್ತದೆ. ಕಾಲೇಜು ಪದವಿಯನ್ನು ಪಡೆಯುವುದು ವೃತ್ತಿ ಭವಿಷ್ಯವನ್ನು ಹೆಚ್ಚಿಸುತ್ತದೆ ಮತ್ತು ಉತ್ತಮ ಉದ್ಯೋಗ ಅವಕಾಶಗಳು ಮತ್ತು ಹೆಚ್ಚಿನ ಗಳಿಕೆಯ ಸಾಮರ್ಥ್ಯಕ್ಕೆ ಬಾಗಿಲು ತೆರೆಯುತ್ತದೆ. ಕಾಲೇಜು ವಿದ್ಯಾರ್ಥಿಗಳು ವಿಭಿನ್ನ ಆಸಕ್ತಿಗಳು, ಹಿನ್ನೆಲೆಗಳು ಮತ್ತು ಆಕಾಂಕ್ಷೆಗಳನ್ನು ಹೊಂದಿರುವ ವೈವಿಧ್ಯಮಯ ಗುಂಪು. ಒಟ್ಟಾರೆಯಾಗಿ, ಕಾಲೇಜು ವಿದ್ಯಾರ್ಥಿಗಳು ಮತ್ತು ಕಾಲೇಜು ವರ್ಷಗಳು ವ್ಯಕ್ತಿಗಳು ಮತ್ತು ಸಮಾಜಗಳ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ, ವೈಯಕ್ತಿಕ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುತ್ತವೆ.

ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಅಡ್ಡ–ವಿಭಾಗದ ಮತ್ತು ಪರಸ್ಪರ ಸಂಬಂಧದ ಅಧ್ಯಯನ ವಿನ್ಯಾಸವನ್ನು ಬಳಸಲಾಗಿದೆ. ಕಾಲೇಜು ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿಯನ್ನು ಪಡೆಯಲು ಸಂಶೋಧಕರು ಸ್ವಯಂ–ಅಭಿವೃದ್ಧಿಪಡಿಸಿದ

ಪ್ರಶ್ನಾವಳಿಯನ್ನು ಬಳಸಲಾಯಿತು. ಹೆಚ್ಚಿನ ಸಂಶೋಧನಾ ಕಾರ್ಯವನ್ನು ಪ್ರಾರಂಭಿಸುವ ಮೊದಲು ಮೈಸೂರು ವಿಶ್ವವಿದ್ಯಾನಿಲಯದ "ಸಾಂಸ್ಥಿಕ ಮಾನವ ನೈತಿಕ ಸಮಿತಿ" (Institutional Human Ethical Committee)ಯಿಂದ ನೈತಿಕ ಅನುಮತಿಯನ್ನು ಪಡೆಯಲಾಯಿತು. ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ನಡೆಸಲಾಗಿದೆ. ಇದು ಪಟ್ಟಣ ಪುರಸಭೆ ಮತ್ತು ಉತ್ತರ ಕನ್ನಡ ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿದೆ. 2011ರ ಜನಗಣತಿಯ ಪ್ರಕಾರ, ಅಂಕೋಲಾ ತಾಲೂಕಿನ ಒಟ್ಟು ಜನಸಂಖ್ಯೆ 107332 ಇದರಲ್ಲಿ 53961 ಪುರುಷರು ಮತ್ತು 53371 ಮಹಿಳೆಯರು. ಪ್ರಸ್ತುತ ಅಧ್ಯಯನದ ಮಾದರಿಯು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜುಗಳಲ್ಲಿ ಸ್ನಾತಕ ಪದವಿಯನ್ನು ಪಡೆಯುತ್ತಿರುವ ಕಾಲೇಜು ವಿದ್ಯಾರ್ಥಿಗಳನ್ನು (n=1455) ಒಳಗೊಂಡಿತ್ತು.

ಕಾಲೇಜು ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು (ಆತಂಕ) ನಿರ್ಣಯಿಸಲು ಭಟ್ನಾಗರ್ ಮತ್ತು ಇತರರು (2011) ಅಭಿವೃದ್ಧಿ ಪಡಿಸಿರುವ ADSS ಪ್ರಶ್ನಾವಳಿಯನ್ನು ಈ ಅಧ್ಯಯನದಲ್ಲಿ ಬಳಸಲಾಗಿದೆ. ಈ ಪರೀಕ್ಷೆಯು ಆತಂಕ, ಖಿನ್ನತೆ ಮತ್ತು ಒತ್ತಡದ ಮೇಲೆ ಕೇಂದ್ರೀಕರಿಸುವ ಮೂರು ಉಪ–ಮಾಪಕಗಳನ್ನು ಹೊಂದಿದೆ. ಈ ಪ್ರಮಾಣವು ಆತಂಕ, ಖಿನ್ನತೆ ಮತ್ತು ಒತ್ತಡದ ಅಸ್ವಸ್ಥತೆಗಳ ದೈಹಿಕ, ಅರಿವಿನ, ಭಾವನಾತ್ಮಕ ಮತ್ತು ವರ್ತನೆಯ ಲಕ್ಷಣಗಳನ್ನು ಒಳಗೊಂಡ 48 ಅಂಶಗಳನ್ನು ಒಳಗೊಂಡಿದೆ. ADSS 48 ವಾಕ್ಯಗಳನ್ನು (ಆತಂಕದ ಮೇಲಿನ 19 ವಾಕ್ಯಗಳು) 3 ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ ಅಂದರೆ ಆತಂಕ, ಖಿನ್ನತೆ, ಮತ್ತು ಒತ್ತಡ. ಆತಂಕವು ವ್ಯಕ್ತಿಗಳಲ್ಲಿ ಉದ್ವೇಗದ ಭಾವನೆಗಳು (ಮರಗಟ್ಟುವಿಕೆ, ಮೂರ್ಛೆ, ಹೆದರಿಕೆ, ಇತ್ಯಾದಿ), ಚಿಂತಿತ ಆಲೋಚನೆಗಳು (ಯಾವುದೇ ಕಾರಣಗಳಿಲ್ಲದೆ ದುಃಸ್ವಪ್ನಗಳು) ಮತ್ತು ದೈಹಿಕ ಬದಲಾವಣೆಗಳು (ಬಾಯಿಯ ಶುಷ್ಕತೆ, ನುಂಗಲು ತೊಂದರೆ, ಹೆಚ್ಚಿದ ಹೃದಯ ಬಡಿತ) ಒಳಗೊಂಡ ಸಂವೇಗಗಳನ್ನು ತೋರಿಸುತ್ತದೆ. ಪ್ರಶ್ನಾವಳಿಯಲ್ಲಿ ತಿಳಿಸಿದಂತೆ ಆತಂಕದ ಅಭಿವ್ಯಕ್ತಿಗೆ ನೀಡಲಾದ ಒಟ್ಟು ಸ್ಕೋರ್ ಅನ್ನು ಪರಿಗಣಿಸಿ, ಅಧ್ಯಯನದ ಮಾದರಿಯನ್ನು ಸಾಮಾನ್ಯ, ಸೌಮ್ಯ, ಮಧ್ಯಮ ಮತ್ತು ತೀವ್ರ ಮಟ್ಟದ ಆತಂಕ ಎಂದು ವರ್ಗೀಕರಿಸಲಾಗಿದೆ. ಪ್ರತಿ ವಾಕ್ಯಗಳ ಪ್ರತಿಕ್ರಿಯೆಗಳನ್ನು ಹೌದು ಮತ್ತು ಇಲ್ಲ ಎಂಬ ವಿಷಯದಲ್ಲಿ ನೀಡಲಾಗಿದೆ. ಪ್ರತಿ ಪ್ರತಿಕ್ರಿಯೆಗಾಗಿ ಹೌದು ಎಂದರೆ 1 ಮತ್ತು ಇಲ್ಲಾ ಎಂದರೆ 0 ಸ್ಕೋರ್ ಮಾಡಲಾಗಿದೆ. ಹೆಚ್ಚಿನ ಅಂಕವು ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಆತಂಕವನ್ನು ಅನುಭವಿಸುತ್ತಿದ್ದಾರೆ ಎಂದು

ಸೂಚಿಸುತ್ತದೆ.

ಅಧ್ಯಯನ ವಿಭಾಗ (ಶಾಖೆ)(ಶೈಕ್ಷಣಿಕ ಸ್ಟ್ರೀಮ್): ಕಲೆ, ವಾಣಿಜ್ಯ ಮತ್ತು ವಿಜ್ಞಾನವು ಪದವಿ ಕಾಲೇಜುಗಳಲ್ಲಿ ಮೂರು ಮುಖ್ಯ ಶೈಕ್ಷಣಿಕ ಸ್ಟ್ರೀಮ್‌ಗಳಾಗಿವೆ. ಶೈಕ್ಷಣಿಕ ಸ್ಟ್ರೀಮ್‌ಗಳನ್ನು ಸ್ವತಂತ್ರ ಅಸ್ಥಿರಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಅಧ್ಯಯನ ಮಾಡುತ್ತಿರುವ ತರಗತಿ (ಶೈಕ್ಷಣಿಕ ವರ್ಗ): 1ನೇ ವರ್ಷ, 2ನೇ ವರ್ಷ ಮತ್ತು 3ನೇ ವರ್ಷದಲ್ಲಿ ಓದುತ್ತಿರುವ ಕಾಲೇಜು ವಿದ್ಯಾರ್ಥಿಗಳನ್ನು ಸ್ವತಂತ್ರ ಅಸ್ಥಿರಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ದತ್ತಾಂಶ ಸಂಗ್ರಹಣೆ ಪ್ರಕ್ರಿಯೆಯು ಪ್ರಶ್ನಾವಳಿಗಳನ್ನು ನಿರ್ವಹಿಸಲು ತನಿಖಾಧಿಕಾರಿಯು ಎಲ್ಲಾ ಕಾಲೇಜುಗಳಿಗೆ ವೈಯಕ್ತಿಕವಾಗಿ ಭೇಟಿ ನೀಡುವುದನ್ನು ಒಳಗೊಂಡಿರುತ್ತದೆ. ವಿಂಡೋಸ್‌ಗಾಗಿ ಸ್ಟ್ಯಾಟಿಸ್ಟಿಕಲ್ ಪ್ಯಾಕೇಜಸ್ ಫಾರ್ ಸೋಶಿಯಲ್ ಸೈನ್ಸಸ್ (SPSS) ಆವೃತ್ತಿ 21 ಅನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಕ್ರೋಢೀಕರಿಸಲಾಗಿದೆ, ಪಟ್ಟಿ ಮಾಡಲಾಗಿದೆ ಮತ್ತು ಅಂಕಿಅಂಶಗಳ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಫಲಿತಾಂಶಗಳು ಮತ್ತು ಚರ್ಚೆ

ಕೋಷ್ಟಕ 1. ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕದ ಹರಡುವಿಕೆ

	ಆತಂಕದ ಮಟ್ಟಗಳು			
	ಸಾಮಾನ್ಯ (0-3)	ಸೌಮ್ಯ (3-5)	ಮಧ್ಯಮ (5-9)	ತೀವ್ರ (>9)
ಆತಂಕ	460 (31.6%)	167 (11.5%)	313 (21.5%)	515 (35.4%)



ಕೋಷ್ಟಕ 1ರ ಪ್ರಕಾರ, ಸುಮಾರು 68% ಕಾಲೇಜು ವಿದ್ಯಾರ್ಥಿಗಳು ಆತಂಕದಿಂದ ಬಳಲುತ್ತಿದ್ದಾರೆ, ಉಳಿದ 32% ವಿದ್ಯಾರ್ಥಿಗಳು ಸಾಮಾನ್ಯ ವರ್ಗದ ಅಡಿಯಲ್ಲಿ ಕಂಡುಬಂದಿದ್ದಾರೆ. ಮಧ್ಯಮ (22%) ಮತ್ತು ಸೌಮ್ಯ (11%) ಆತಂಕದ ಮಟ್ಟಗಳಿಗೆ ಹೋಲಿಸಿದರೆ ಹೆಚ್ಚಿನ ಶೇಕಡಾವಾರು ಮಾದರಿಗಳು ತೀವ್ರ ಮಟ್ಟದ ಆತಂಕ (35%)

ಅಡಿಯಲ್ಲಿ ಕಂಡುಬಂದಿವೆ.

ಕೋಷ್ಟಕ 2: ಸ್ಟ್ರೀಮ್ ಆಫ್ ಸ್ಟಡಿ ಮತ್ತು ಆತಂಕದ ನಡುವಿನ ಸಂಬಂಧ

ಅಸ್ಥಿರ		ಮಟ್ಟಗಳು				$\chi 2$ value (df) Sig
		ಸಾಮಾನ್ಯ (0-3)	ಸೌಮ್ಯ (3-5)	ಮಧ್ಯಮ (5-9)	ತೀವ್ರ (>9)	
ಅಧ್ಯಯನ ವಿಭಾಗ (ಶಾಖೆ) (ಶೈಕ್ಷಣಿಕ ಸ್ಟ್ರೀಮ್)	ಕಲೆ	88(18.9%)	31(6.7%)	87(18.7%)	259(55.7%)	190.02** 6 0.000
	ವಾಣಿಜ್ಯ	243(31.9%)	102(13.4%)	202(26.5%)	214(28.1%)	
	ವಿಜ್ಞಾನ	129(56.3%)	34(14.8%)	24(10.5%)	42(18.3%)	

P< 0.05 ನಲ್ಲಿ ಗಮನಾರ್ಹವಾಗಿದೆ ** P<0.01 ನಲ್ಲಿ ಗಮನಾರ್ಹವಾಗಿದೆ ಎಂದು ಸೂಚಿಸುತ್ತದೆ



ಕೋಷ್ಟಕ 2 ಅಧ್ಯಯನದ ವಿಭಾಗ ಮತ್ತು ಆತಂಕದ ಮಟ್ಟಗಳ ನಡುವಿನ ಸಂಬಂಧವನ್ನು ಪ್ರಸ್ತುತ ಪಡಿಸುತ್ತದೆ. ಕಲಾ ವಿದ್ಯಾರ್ಥಿಗಳಲ್ಲಿ ಗಮನಿಸಿದರೆ 18.9% ಕಲಾ ವಿದ್ಯಾರ್ಥಿಗಳು ಸಾಮಾನ್ಯ ಮಟ್ಟದಲ್ಲಿದ್ದರೆ, 6.7% ಸೌಮ್ಯವಾದ ಆತಂಕದ ಮಟ್ಟವನ್ನು ಹೊಂದಿದ್ದರು, 18.7% ಮಧ್ಯಮ ಆತಂಕದ ಮಟ್ಟವನ್ನು ಹೊಂದಿದ್ದರು ಮತ್ತು 55.7% ಕಲಾ ವಿದ್ಯಾರ್ಥಿಗಳು ತೀವ್ರ ಆತಂಕದ ಮಟ್ಟವನ್ನು ಹೊಂದಿರುವುದು ಕಂಡುಬರುತ್ತದೆ. ವಾಣಿಜ್ಯ ವಿದ್ಯಾರ್ಥಿಗಳ ಪೈಕಿ 31.9% ಸಾಮಾನ್ಯ ವರ್ಗದ ಅಡಿಯಲ್ಲಿ, 13.4% ವಿದ್ಯಾರ್ಥಿಗಳು ಸೌಮ್ಯವಾದ ಆತಂಕದ ಮಟ್ಟವನ್ನು, 26.5% ಮಧ್ಯಮ ಆತಂಕದ ಮಟ್ಟದಲ್ಲಿ ಮತ್ತು 28.1% ವಿದ್ಯಾರ್ಥಿಗಳು ತೀವ್ರ ಆತಂಕದ ಮಟ್ಟವನ್ನು ಹೊಂದಿರುವುದು ಕಂಡುಬರುತ್ತದೆ. ವಿಜ್ಞಾನದ ವಿದ್ಯಾರ್ಥಿಗಳಲ್ಲಿ, 56.3% ಸಾಮಾನ್ಯ ಮಟ್ಟದಲ್ಲಿ, 14.8% ವಿದ್ಯಾರ್ಥಿಗಳು ಸೌಮ್ಯವಾದ ಆತಂಕದ ಮಟ್ಟವನ್ನು, 10.5% ವಿದ್ಯಾರ್ಥಿಗಳು ಮಧ್ಯಮ ಆತಂಕದ ಮಟ್ಟವನ್ನು, ಮತ್ತು 18.3% ವಿದ್ಯಾರ್ಥಿಗಳು ತೀವ್ರ ಆತಂಕದ ಮಟ್ಟವನ್ನು ಹೊಂದಿರುವುದು ಕಂಡುಬರುತ್ತದೆ.

ವಾಣಿಜ್ಯ ವಿದ್ಯಾರ್ಥಿಗಳಿಗೆ (68%) ಮತ್ತು ವಿಜ್ಞಾನ ವಿದ್ಯಾರ್ಥಿಗಳಿಗೆ (68.4%)

ಹೋಲಿಸಿದರೆ, ಆರ್ಟ್ಸ್ ವಿಭಾಗದಲ್ಲಿ (81.1%) ಹೆಚ್ಚಿನ ವಿದ್ಯಾರ್ಥಿಗಳು ಸೌಮ್ಯದಿಂದ ತೀವ್ರ ಆತಂಕದ ಮಟ್ಟವನ್ನು ಎದುರಿಸುತ್ತಿದ್ದಾರೆ. ಒಟ್ಟಾರೆಯಾಗಿ, ಎಲ್ಲಾ ಶಾಖೆಗಳ 50% ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹೆಚ್ಚು ಆತಂಕವನ್ನು ಎದುರಿಸುತ್ತಿದ್ದಾರೆ. ಅಧ್ಯಯನದ ಶಾಖೆ ಮತ್ತು ಆತಂಕದ ಮಟ್ಟಗಳ ನಡುವೆ ಸಂಖ್ಯಾಶಾಸ್ತ್ರೀಯವಾಗಿ ಮಹತ್ವದ ಸಂಬಂಧವನ್ನು ಗಮನಿಸಲಾಗಿದೆ ($x^2(6) = 190.02$, $P<0.01$).

ಪ್ರಸ್ತುತ ಅಧ್ಯಯನದ ಫಲಿತಾಂಶಗಳಿಗೆ ವಿರುದ್ಧವಾಗಿ, ವಾನಿ ಮತ್ತು ಇತರರು(2016) ನಡೆಸಿದ ಸಂಶೋಧನೆ. ಆರ್ಟ್ಸ್ ವಿದ್ಯಾರ್ಥಿಗಳಿಗೆ (73.84%) ಹೋಲಿಸಿದರೆ ವಿಜ್ಞಾನ ವಿದ್ಯಾರ್ಥಿಗಳು ಹೆಚ್ಚಿನ ಮಟ್ಟದ ಆತಂಕವನ್ನು (96.14%) ಪ್ರದರ್ಶಿಸಿದ್ದಾರೆ ಎಂದು (2016) ಬಹಿರಂಗಪಡಿಸಿದೆ. ಅದೇ ರೀತಿ, ಚೋಕ್ಷಿ ಮತ್ತು ಇತರರು (2021) ನಡೆಸಿದ ಅಧ್ಯಯನವು ವಿಜ್ಞಾನದ ವಿದ್ಯಾರ್ಥಿಗಳಲ್ಲಿ ಮತ್ತು ವಿಜ್ಞಾನೇತರ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಆತಂಕದ ಸಂಭವ ಮತ್ತು ತೀವ್ರತೆಯಲ್ಲಿ ಸಂಖ್ಯಾಶಾಸ್ತ್ರೀಯ ಮಹತ್ವದ ಸಂಬಂಧವನ್ನು ಗಮನಿಸಲಾಗಿದೆ.

ಕೋಷ್ಟಕ 3: ಶೈಕ್ಷಣಿಕ ವರ್ಗ ಮತ್ತು ಆತಂಕದ ನಡುವಿನ ಸಂಬಂಧ

ಅಸ್ಥಿರ		ಮಟ್ಟಗಳು				χ^2 value (df) Sig
		ಸಾಮಾನ್ಯ (0-3)	ಸೌಮ್ಯ (3-5)	ಮಧ್ಯಮ (5-9)	ತೀವ್ರ (>9)	
ಶೈಕ್ಷಣಿಕ ವರ್ಗ	1st year	158(28.2%)	67(11.9%)	110(19.6%)	226(40.3%)	17.02** 6 0.009
	2nd year	142(31.5%)	51(11.3%)	96(21.3%)	162(35.9%)	
	3rd year	160(36.1%)	49(11.1%)	107(24.2%)	127(28.7%)	

P< 0.05 ನಲ್ಲಿ ಗಮನಾರ್ಹವಾಗಿದೆ ** P<0.01 ನಲ್ಲಿ ಗಮನಾರ್ಹವಾಗಿದೆ ಎಂದು ಸೂಚಿಸುತ್ತದೆ



ಕೋಷ್ಟಕ 3ರಲ್ಲಿ ಶೈಕ್ಷಣಿಕ ವರ್ಗ ಮತ್ತು ಆತಂಕದ ನಡುವಿನ ಸಂಬಂಧವನ್ನು ಪ್ರಸ್ತುತ ಪಡಿಸಲಾಗಿದೆ. 1 ನೇ ವರ್ಷದ ವಿದ್ಯಾರ್ಥಿಗಳಲ್ಲಿ 28.2% ವಿದ್ಯಾರ್ಥಿಗಳು ಸಾಮಾನ್ಯ ಮಟ್ಟದಲ್ಲಿದ್ದರು ಮತ್ತು ಉಳಿದ ವಿದ್ಯಾರ್ಥಿಗಳು ಅಂದರೆ 11.9% ಸೌಮ್ಯ,

19.6% ಮಧ್ಯಮ ಮತ್ತು 40.3% ತೀವ್ರ ಆತಂಕದ ಮಟ್ಟದಲ್ಲಿದ್ದಾರೆ ಎಂದು ಕಂಡುಬಂದಿದೆ. 2 ನೇ ವರ್ಷದ ವಿದ್ಯಾರ್ಥಿಗಳಲ್ಲಿ 31.5% ಸಾಮಾನ್ಯ ಮಟ್ಟದಲ್ಲಿದ್ದರು ಮತ್ತು ಉಳಿದ 68.5% ಜನರು ಸೌಮ್ಯದಿಂದ ಹೆಚ್ಚಿನ ಮಟ್ಟದ ಆತಂಕವನ್ನು ಹೊಂದಿದ್ದಾರೆ, ಅಂದರೆ 11.3% ಸೌಮ್ಯ, 21.3% ಮಧ್ಯಮ ಮತ್ತು 35.9% ತೀವ್ರ ಮಟ್ಟದ ಆತಂಕವನ್ನು ಹೊಂದಿದ್ದಾರೆ ಎಂದು ಕಂಡುಬಂದಿದೆ. 3ನೇ ವರ್ಷದ ವಿದ್ಯಾರ್ಥಿಗಳಲ್ಲಿ, 36.1% ಸಾಮಾನ್ಯ ಮತ್ತು ಉಳಿದ 63.9% ಆತಂಕದ ಸೌಮ್ಯದಿಂದ ತೀವ್ರ ಮಟ್ಟದಲ್ಲಿ ಕಂಡುಬಂದಿದೆ ಅಂದರೆ 11.1% ಸೌಮ್ಯ, 24.2% ಮಧ್ಯಮ ಮತ್ತು 28.7 % ತೀವ್ರ ಆತಂಕದ ಮಟ್ಟವನ್ನು ಹೊಂದಿದ್ದಾರೆ ಎಂದು ಕಂಡುಬಂದಿದೆ.

ತರಗತಿ/ವರ್ಷದ ಅಧ್ಯಯನ ಮತ್ತು ಆತಂಕದ ಮಟ್ಟಗಳ ನಡುವೆ ಗಮನಾರ್ಹ ಸಂಬಂಧವನ್ನು ಗಮನಿಸಲಾಗಿದೆ ($x^2(6) = 17.02$, $p<0.01$). ಸುಮಾರು 71.8% ಮೊದಲ ವರ್ಷದ ವಿದ್ಯಾರ್ಥಿಗಳು ಸೌಮ್ಯದಿಂದ ತೀವ್ರ ಆತಂಕವನ್ನು ಅನುಭವಿಸುತಿದ್ದಾರೆ, ಎರಡನೇ ವರ್ಷದ ಪದವಿ ವಿದ್ಯಾರ್ಥಿಗಳಲ್ಲಿ, ಈ ಅಂಕಿ ಅಂಶವು 68.5% ಆಗಿದ್ದರೆ, ಮೂರನೇ ವರ್ಷದ ವಿದ್ಯಾರ್ಥಿಗಳಲ್ಲಿ 64% ಇದೇ ರೀತಿಯ ಆತಂಕದ ಮಟ್ಟವನ್ನು ಕಾಣಬಹುದಾಗಿದೆ. ಎಲ್ಲಾ ವರ್ಷಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಈ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ನಾವು ಕಾಣಬಹುದು, ಉನ್ನತ ತರಗತಿಗಳ ಮೂಲಕ ಮುಂದುವರಿದಂತೆ ಆತಂಕವನ್ನು ಅನುಭವಿಸುವ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣವು ಕಡಿಮೆಯಾಗಿದೆ ಎಂಬುದನ್ನು ಸಹ ಗಮನಿಸಬಹುದಾಗಿದೆ.

ಆದಾಗ್ಯೂ ಅಹದ್ ಮತ್ತು ಇತರರು 507 ದಂತ ವಿದ್ಯಾರ್ಥಿಗಳ ಮೇಲೆ ನಡೆಸಿದ ಅಧ್ಯಯನದಲ್ಲಿ ವ್ಯತಿರಿಕ್ತ ಫಲಿತಾಂಶವನ್ನು ಗಮನಿಸಲಾಗಿದೆ. (2021). ಕ್ಲಿನಿಕಲ್ ವಿದ್ಯಾರ್ಥಿಗಳಲ್ಲಿಆತಂಕವು ಪ್ರಿಕ್ಲಿನಿಕಲ್ ವಿದ್ಯಾರ್ಥಿಗಳಿಗಿಂತ ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಸಂಶೋಧನೆಗಳು ತೋರಿಸಿವೆ ಮತ್ತು ಇದು ಎರಡನೇ ವರ್ಷದ ವಿದ್ಯಾರ್ಥಿಗಳಿಗಿಂತ ಮೂರನೇ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ಗಮನಾರ್ಹವಾಗಿ ಹೆಚ್ಚಾಗಿದೆ.

ಒಟ್ಟಾರೆಯಾಗಿ, ಕಲಾ ವಿದ್ಯಾರ್ಥಿಗಳು (81.1%) ಮತ್ತು 1ನೇ ವರ್ಷದಲ್ಲಿ (71.8%) ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಜೊತೆಗಾರರಿಗಿಂತ ಸೌಮ್ಯದಿಂದ ತೀವ್ರ ಮಟ್ಟದ ಆತಂಕದ ಹೆಚ್ಚಿನ ಹರಡುವಿಕೆಯನ್ನು ಪ್ರಸ್ತುತ ಪಡಿಸಿದ್ದಾರೆ. ವಿಭಿನ್ನ ವೇರಿಯಬಲ್ ಗುಂಪುಗಳಲ್ಲಿ ಸುಮಾರು 43.7% ರಿಂದ 81.1% ರಷ್ಟು ಅಧ್ಯಯನದ ಮಾದರಿಗಳು ಸೌಮ್ಯದಿಂದ ತೀವ್ರ ಮಟ್ಟದ ಆತಂಕದಿಂದ ಬಳಲುತ್ತಿವೆ. ಸ್ವತಂತ್ರ

ವೇರಿಯಬಲ್ ಗಳಾದ ಅಧ್ಯಯನದ ಶಾಖೆ ಮತ್ತು ಶೈಕ್ಷಣಿಕ ಅಧ್ಯಯನದ ವರ್ಷ ಮತ್ತು ಆತಂಕದ ಮಟ್ಟಗಳ ನಡುವೆ ಗಮನಾರ್ಹವಾದ ಸಂಬಂಧಗಳು ಕಂಡುಬಂದಿವೆ.

ಉಪಸಂಹಾರ

ಪ್ರಸ್ತುತ ಅಧ್ಯಯನದಿಂದ, ಪ್ರಸ್ತುತ ಅಧ್ಯಯನದಲ್ಲಿರುವ ಕಾಲೇಜು ವಿದ್ಯಾರ್ಥಿಗಳು ಆತಂಕದಂತಹ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಹೆಚ್ಚು ಗುರಿಯಾಗುತ್ತಾರೆ ಎಂದು ತೀರ್ಮಾನಿಸಬಹುದು. ಅಧ್ಯಯನವು ಸೈದ್ಧಾಂತಿಕವಾಗಿ ಕಾಲೇಜು ವಿದ್ಯಾರ್ಥಿಗಳಲ್ಲಿ ಆತಂಕದ ಹರಡುವಿಕೆಯ ವೈಜ್ಞಾನಿಕ ಜ್ಞಾನದ ಕೊಡುಗೆಯನ್ನು ನೀಡುತ್ತದೆ. ಇಂತಹ ಸಂಶೋಧನೆಗಳು ಕಾಲೇಜು ವಿದ್ಯಾರ್ಥಿಗಳಿಗೆ ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಹಸ್ತಕ್ಷೇಪ ಮತ್ತು ಬೆಂಬಲ ತಂತ್ರಗಳ ತುರ್ತುಸ್ಥಿತಿಯನ್ನು ಒತ್ತಿಹೇಳುತ್ತವೆ. ಮಾನಸಿಕ ಆರೋಗ್ಯದ ಕಾಳಜಿಯನ್ನು ಪರಿಹರಿಸುವಲ್ಲಿ ಅಗತ್ಯವಾದ ಮಾರ್ಗದರ್ಶನ , ತರಬೇತಿ ಮತ್ತು ಜೀವನ ಕೌಶಲ್ಯಗಳೊಂದಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ಅನಿವಾರ್ಯವಾಗಿದೆ. ಇದಲ್ಲದೆ, ಪ್ರತಿಕೂಲ ಮತ್ತು ಸವಾಲಿನ ಸನ್ನಿವೇಶಗಳನ್ನು ಕ್ರಿಯಾತ್ಮಕ ರೀತಿಯಲ್ಲಿ ನಿಭಾಯಿಸುವ ಕೌಶಲ್ಯಗಳನ್ನು ಬೆಳೆಸುವುದು ಅತ್ಯುನ್ನತ ಮಾರ್ಗವಾಗಿದೆ.

Reference

1. Ahad A., Chahar P., Haque E., Bey A., Jain M., and Raja W., (2021), Factors affecting the prevalence of stress, anxiety, and Depression in undergraduate Indian Dental Students. Journal of Education and Health Promotion, IP: 252.224.100.161, DOI: 10.4103/jehp.jehp_1475_20

2.Chokshi A.S., Rangwala P.P., Dumra G.H., Thakrar M.R., Singh A.J., and Lakdawala B. M., (2021), Depression, anxiety and stress amongst students in science verses non-science stream: a comparative study. International Journal of Community Medicine and Public Health, 8(7),3461-3467.pISSN 2394-6032 | eISSN 2394-6040. DOI: https://dx.doi.org/10.18203/2394-6040.ijcmph20212602

3.https://statisticstimes.com/demographics/india/karnataka-population.php, Sept 2020.

4.National Mental Health Survey (NMHS) (2016) https://main.mohfw.gov.in/sites/default/files/National%20Mental%20Health%20Survey%2C%202015-16%20-%20Mental%20Health%20Systems_0.pdf

5.Saleem S., Mahmood Z., and Naz M., (2013), Mental Health Problems in University Students: A Prevalence Study, FWU Journal of Social Sciences, Winter. 7(2): 124-130

6.Wani M., (2016),. Stress Anxiety and Depression Among Science and Arts Students. International Journal of Education and Psychological Research (IJEPR), 5, 48-52.

ಡಾ. ವಿಜಯ ಯು. ಪಾಟೀಲ
ಗೃಹ ವಿಜ್ಞಾನ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಂಕೋಲಾ,
ಪೂಜಗೇರಿ 581353, ಜಿ: ಉತ್ತರ ಕನ್ನಡ.
patilvijayau@gmail.com

ಡಾ. ಕೋಮಲಾ ಎಂ
ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನದ ಪ್ರಾಧ್ಯಾಪಕರು,
ಹಾಗೂ ಅಧ್ಯಕ್ಷರು ಆಹಾರ ವಿಜ್ಞಾನ ಮತ್ತು ಪೋಷಣೆಯಲ್ಲಿ
ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ,
ಮಾನಸಗಂಗೋತ್ರಿ, ಮೈಸೂರು– 570006.
komalagangadhar71@gmail.com

ಅನುವಾದದ ಅಗತ್ಯ

¤ ಗಗನ .ಜೆ

ಜ್ಞಾನದ ವಿಕಾಸಕ್ಕೆ ಭಾಷಾಂತರ ಅಗತ್ಯ, ಪ್ರಗತಿಶೀಲವೂ, ಪರಿವರ್ತನ ಶೀಲವೂ ಆಗಿರುವ ಜಗತ್ತಿನಲ್ಲಿ ಭಾಷಾಂತರ ಅನಿವಾರ್ಯ ಚಟುವಟಿಕೆಯಾಗಿ ಪರಿಣಮಿಸಿದೆ. ಕನ್ನಡ ಸಾಹಿತ್ಯ ಇಂದು ಅತ್ಯಂತ ಸಮೃದ್ಧವಾಗಿರುವುದಕ್ಕೆ ಕಾರಣ, ಜಗತ್ತಿನ ನಾನಾ ಭಾಷೆಗಳಿಂದ ಭಾಷಾಂತರವು ಹರಿದು ಬಂದಿರುವುದು. ಭಾಸ, ಕಾಳಿದಾಸ, ಸಫೋಕ್ಲಿಸ್. ಉಮರ್‌ಖಯ್ಯಾಮ್, ಖಲೀನ್ ಗಿಬ್ರಾನ್, ಗಯಟೆ, ರವೀಂದ್ರನಾಥ ಟ್ಯಾಗೋರ್ ಮೊದಲಾದವರು ಇಂದು ನಿಜವಾದ ಅರ್ಥದಲ್ಲಿ ಲೋಕ ಪ್ರಿಯರಾಗಿದ್ದರೆ ಅದಕ್ಕೆ ಭಾಷಾಂತರಗಳೇ ಕಾರಣ.

ಅನುವಾದ ಮುಖ್ಯವಾಗಿ ತೌಲನಿಕ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ. Trans-Latus ಎಂಬ Latin ಪದದಿಂದ Translation ಇಂಗ್ಲಿಷ್ ಪದ ಬಂದಿದೆ. Translatus ಎಂದರೆ Carry across, ಸ್ಥಳಾಂತರಿಸು, ಬದಲಾಯಿಸು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸು ಎಂದರ್ಥ. ಇಂಗ್ಲಿಷ್ ಭಾಷೆಯಲ್ಲಿ 'ಭಾಷಾಂತರ' ಎಂಬುದನ್ನು ಸೂಚಿಸಲು Trans-lation-Version-Rendering ಇರುವಂತೆ ಕನ್ನಡದಲ್ಲೂ ಕೂಡ ಅನುವಾದ ತರ್ಜಿಮೆ ಜೊತೆಗೆ ಕನ್ನಡಿಸು ಎಂಬ ಶಬ್ದ ಬಳಕೆಯಲ್ಲಿರುವುದು ಕಂಡುಬರುತ್ತದೆ. ಇದೊಂದು ಅತ್ಯಂತ ಪ್ರಭಾವಶಾಲಿಯಾದ ಮಹತ್ವದ ಪದ, 'ಕನ್ನಡ' ಎಂಬ ಅಂಕಿತ ನಾಮಕ್ಕೆ ಕ್ರಿಯಾರ್ಥಕವಾದ 'ಇಸು' ಪ್ರತ್ಯಯವನ್ನು ಸೇರಿಸುವುದರ ಮೂಲಕ ಸೃಷ್ಟಿಸಲಾಗಿರುವ ಈ ಶಬ್ದ ಕನ್ನಡಕ್ಕೆ ತರುವುದು ಅಥವಾ ಕನ್ನಡವಾಗಿಸುವುದು ಎಂಬ ಅರ್ಥವನ್ನು ಸಮರ್ಥ ರೀತಿಯಲ್ಲಿ ವಿಶದಪಡಿಸುತ್ತದೆ. ಹಾಗೆಯೇ to mirror ಎಂಬ ಇಂಗ್ಲಿಷ್ ಪದಕ್ಕೆ ಇದೇ ಅತ್ಯಂತ ಉಚಿತ ಸಂವಾದಿ ಶಬ್ದವಾಗುತ್ತದೆ. ಕನ್ನಡೀಕರಣ ಎಂಬುದು

ಅತ್ಯಂತ ಸೂಕ್ತಪದವೆನಿಸುತ್ತದೆ.

ಅನೇಕ ಪ್ರಸಿದ್ಧ ಸಾಹಿತಿಗಳು ಭಾಷಾಂತರ ಗ್ರಂಥಗಳನ್ನು ಮೊದಲು ರಚಿಸಿ ಆಮೇಲೆ ಸ್ವತಂತ್ರ ಗ್ರಂಥಗಳನ್ನು ಬರೆದರೆಂಬ ಕಾರಣದಿಂದ ಪ್ರತಿಯೊಬ್ಬ ಉದಯೋನ್ಮುಖ ಸಾಹಿತಿಯು ಮೊಟ್ಟಮೊದಲು ಭಾಷಾಂತರಗಳನ್ನು ಮಾಡಬೇಕೆಂದು ಒಂದು ಅಭಿಪ್ರಾಯವಿದೆ ಕಾರ್ಲೈಲ್ ಎಂಬ ಪಂಡಿತ ಕೂಡ ತನ್ನ ಜನರನ್ನು ಕುರಿತು ಸ್ವತಂತ್ರ ನಾಟಕಗಳನ್ನು ರಚಿಸಬಲ್ಲ ಮಹನೀಯರು ಎಲ್ಲಿಯೋ ಕೆಲವರು ಮಿಕ್ಕವರಿಗೆ ಭಾಷಾಂತರವನ್ನು ಮಾಡಿ ಉತ್ತಮ ಸಾಹಿತ್ಯವನ್ನು ನಮ್ಮ ದೇಶದಲ್ಲಿ ನಾಟಿ ಹಾಕುವುದಕ್ಕಿಂತ ಬೇರೆ ಘನವಾದ ಕಾರ್ಯ ಯಾವುದು ಎಂದು ಹೇಳಿದ್ದಾನೆ. ಡಿ.ವಿ.ಜಿ.ಯವರೂ ಕೂಡ "ಸ್ವತಂತ್ರ ಕಾವ್ಯದ ಪೈರು ಹುಟ್ಟುವುದಕ್ಕೆ ಮೊದಲು ನಡೆದಿರಬೇಕಾದ ಉಳುಮೆಯ ಕೆಲಸ ತರ್ಜಿಮೆ"[1] ಎಂದಿದ್ದಾರೆ. ಒಟ್ಟಿನಲ್ಲಿ ಅನುವಾದ ಕಾರ್ಯವು ಮನುಷ್ಯನನ್ನು ಪರಿಪಕ್ವನನ್ನಾಗಿ ಮಾಡಿ ಸೃಜನಶೀಲತೆಯೆಡೆಗೆ ಕರೆದೊಯ್ಯುತ್ತದೆ.

ಅನುವಾದವೇ ಮೂಲ ಕೃತಿಯಲ್ಲ. ಮೂಲ ಬಿಂಬವಾದರೆ ಭಾಷಾಂತರ ಪ್ರತಿ ಬಿಂಬ, ಮೂಲಕೃತಿ ನಿಸರ್ಗದಲ್ಲಿ ಮೂಡುವ ಕಾಮನಬಿಲ್ಲಿನಂತಾದರೆ ಅನುವಾದ ಕೃತಿ ಅದರ ಚಿತ್ರ ಬರೆದು ಅದಕ್ಕೆ ಬಣ್ಣ ಹಚ್ಚುವ ಪ್ರಯತ್ನ. ಡಿ.ವಿ.ಜಿ. ಯವರ ಕೆಳಗಿನ ಪದ್ಯ ಅನುವಾದದ ರುಚಿ, ಸವಿಗಳನ್ನು ಬಹಳ ಸೊಗಸಾಗಿ ಸಾರುತ್ತದೆ.

"ಮೂಕಂಗೆ ನುಡಿಯಿಲ್ಲ ಸಿಹಿಕಹಿಗಳಿಲ್ಲವೇಂ?
ಸವಿಯ ತೋರಲವನು ಚಪ್ಪರಿಸನೇ ತುಟಿಯ
ಅಂತುಂಡ ಬಾಯ್ ಕೈಯ ಸನ್ನೆ ತರ್ಜಿಮೆಯ ಕೃತಿ
ಬರಿಕಿವಿಯನಗಲವಾಗಿಸದೆ ಚಪ್ಪರಿಕೆ?"[2]

ಭಾಷಾಂತರ ಪ್ರವೃತ್ತಿ ನಮ್ಮಲ್ಲಿ ಅರ್ವಾಚೀನ ಕಾಲಕ್ಕೆ ಮಾತ್ರ ಸೀಮಿತವಲ್ಲ; ಅದು ಕನ್ನಡ ಸಾಹಿತ್ಯದಷ್ಟೇ ಹಳೆಯದು. ಕನ್ನಡ ಸಾಹಿತ್ಯ ತನ್ನ ಉಗಮಕಾಲದಿಂದಲೂ ಭಾಷಾಂತರ ಪರಂಪರೆಯನ್ನೊಳಗೊಂಡು ಸಾಗಿಬಂದಿದೆ. ಆದು ಭಾಷಾಂತರದಿಂದಲೇ ಪ್ರಾರಂಭಗೊಂಡಿದ್ದರೂ ಆಶ್ಚರ್ಯವಿಲ್ಲ, ಆಧುನಿಕ ಯುಗ ದಲ್ಲಿ ಹೇಗೆ ಮುಖ್ಯವಾಗಿ ಇಂಗ್ಲಿಷಿನಿಂದ ಅನುವಾದ ನಡೆದಿದೆಯೊ ಹಾಗೆಯೇ ಪ್ರಾಚೀನ ಕಾಲದಲ್ಲಿ ಸಂಸ್ಕೃತ, ಪ್ರಾಕೃತಗಳಿಂದ ಮುಖ್ಯವಾಗಿ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಕಾರ್ಯ ನಡೆಯುತ್ತಿತ್ತು. ಕನ್ನಡದ ಪ್ರಪ್ರಥಮ ಉಪಲಬ್ಧ ಕೃತಿ 'ಕವಿರಾಜಮಾರ್ಗ'. ಅದು ಭಾಗಶಃ ಒಂದು ಅನುವಾದ ಎನ್ನಬಹುದು, ಅಲ್ಲಿಂದೀಚೆಗೆ ಯುಗಯಾತ್ರಿಯಾದ ಕನ್ನಡ ಸಾಹಿತ್ಯದಲ್ಲಿ ಭಾಷಾಂತರದ ಹೆಜ್ಜೆಗುರುತುಗಳು ಕಾಣ ಸಿಗುತ್ತವೆ. ಈ ಸಂದರ್ಭದಲ್ಲಿ ಪ್ರಾಚೀನ

ಕನ್ನಡ ಕಾವ್ಯಗಳನ್ನು ಕುರಿತು ಗ್ರಿಯರ್ಸನ್ ಕೊಟ್ಟಿರುವ ಒಂದು ಹೇಳಿಕೆಯನ್ನು ಲೆಕ್ಕಿಸಬೇಕು : "Nearly all the works which have been described seem to be either translation or immitation of Sanskrit''.[3]

ಬೇರೆ ಬೇರೆ ಭಾಷೆಗಳನ್ನಾಡುವ ಜನರು ಒಂದೆಡೆ ಸೇರಿದಾಗ ಭಾಷಾಂತರದ ಅಗತ್ಯ ಬೇಕಾಗಿದ್ದಿರಬಹುದು. ಮೊದಲು ವ್ಯಾಪಾರ ಮತ್ತು ಯುದ್ಧ ಅಂತಹ ಪರಿಸ್ಥಿತಿಗೆ ಕಾರಣವಾಗಿರಬಹುದು, ಆಳರಸರ ಭಾಷೆ ಬೇರೆಯಾದಾಗ ಅವರ ಭಾಷೆ ಕಲಿಯಲು ಭಾಷಾಂತರ ಪ್ರಾರಂಭವಾಗಿರುವುದೂ ಉಂಟು. ಉನ್ನತ ಸಂಸ್ಕೃತಿಯ ಭಾಷೆಯ ಸಂಪರ್ಕವುಂಟಾದಾಗಲೂ ಭಾಷಾಂತರ ಅಪೇಕ್ಷಣೀಯವೆನ್ನಿಸುತ್ತದೆ. ಪರ ದೇಶಗಳನ್ನು ನೋಡುವ ಕುತೂಹಲದಿಂದ ಪ್ರಚೋದಿತರಾದ ಪ್ರವಾಸಿಗಳ ಸಾಹಸಮಯ ಜೀವನವೂ ಇದಕ್ಕೆ ಸ್ವಲ್ಪಮಟ್ಟಿಗೆ ಕಾರಣವಾಗಿದ್ದಿರಬಹುದು. ಮತ ಬೋಧಕರು ಎಲ್ಲಿಗೆ ತಮ್ಮ ಮತವನ್ನು ಕೊಂಡೊಯ್ಯುತ್ತಿದ್ದರೋ ಅಲ್ಲಿನ ಭಾಷೆಯಲ್ಲೇ ಬೋಧನೆ ಮಾಡಬೇಕಾಗುತ್ತಿತ್ತು, ಹಾಗೆಯೇ ಒಂದು ಮತಾನುಯಾಯಿಗಳು ತಮ್ಮ ಮತದ ವಿಷಯವಾಗಿ ಹೆಚ್ಚು ತಿಳಿಸಲೋಸುಗ ಮತಸ್ಥಾಪಕರು ಬೋಧಿಸಿದ ಭಾಷೆ ತಿಳಿಯಲು ಪ್ರಯತ್ನ ಪಡುತ್ತಾರೆ. ಹೀಗಾಗಿ ಭಾಷಾಂತರ ಅಸ್ತಿತ್ವಕ್ಕೆ ಬಂದಿರಬೇಕು. ಮೊಹಂಜದಾರೊ–ಹರಪ್ಪ ಸಂಸ್ಕೃತಿಗಳ ಕಾಲದ ಭಾರತೀಯರು ಪುರಾತನ ಈಜಿಪ್ಟ್ ಸುಮೋರಿಯಗಳೊಡನೆ ವ್ಯಾಪಾರ ಸಂಪರ್ಕ ಹೊಂದಿದ್ದರೆಂದು ತಿಳಿದುಬಂದಿದೆ. ಆಗ ಭಾಷಾಂತರ ಇಲ್ಲವೆಂದು ಹೇಳಾಲಾಗುವುದಿಲ್ಲ.

ಭಾಷೆಯಂತೆ ಭಾಷಾಂತರವೂ ಜೀವನಕ್ಕೆ ನೇರವಾಗಿ ಸಂಬಂಧಪಟ್ಟಿದೆ. ಭಾಷೆಯು ನೇರವಾದ ಅಭಿವ್ಯಕ್ತಿಯಾದರೆ, ಭಾಷಾಂತರವು ಅದಕ್ಕಿಂತಲೂ ಸ್ವಲ್ಪ ದೂರವಾದದ್ದು ಅಥವಾ ಒಂದು ಹೆಜ್ಜೆಯಷ್ಟು ಹಿಂದಿರುವಂಥದು, ಭಾಷೆಯು ವಸ್ತುವನ್ನು ಪ್ರತಿಬಿಂಬಿಸಿದರೆ, ಭಾಷಾಂತರವು ಪ್ರತಿಬಿಂಬದ ಪ್ರತಿಬಿಂಬ; ಆಲೋಚನೆ. ಅದರ ಅಭಿವ್ಯಕಿಯಾದ ಭಾಷೆ ಮತ್ತು ಭಾಷೆ ಭಾಷಾಂತರಗಳನ್ನು ಈ ರೀತಿ ವ್ಯಕ್ತಪಡಿಸಬಹುದು.

ಭಾಷೆ = ಆಲೋಚನೆ ಅಭಿವ್ಯಕ್ತಿ ಆದ ಭಾಷೆ

ಭಾಷಾಂತರ = ಆಲೋಚನೆ ಭಾಷೆ — ಭಾಷಾಂತರ ಅಥವಾ ಇನ್ನೊಂದು ಭಾಷೆ

ಭಾಷೆಗಳ ಇತಿಹಾಸವನ್ನು ನೋಡಿದರೆ ಭಾಷಾಂತರಗಳೂ ಭಾಷೆ–ಸಾಹಿತ್ಯಗಳನ್ನು ಶ್ರೀಮಂತ ಮಾಡಲು ಸಹಾಯ ಮಾಡಿವೆ ಮತ್ತು ಜ್ಞಾನವನ್ನು ಒದಗಿಸಿವೆ. ಕನ್ನಡ ಭಾಷೆ–ಸಾಹಿತ್ಯಗಳಿಗೆ ಸಂಸ್ಕೃತದ ಮತ್ತು ಪ್ರಾಕೃತದ ನೆರವಿಲ್ಲದಿದ್ದರೆ ವೈದಿಕ, ಬೌದ್ಧ ಮತ್ತು ಜೈನ ಗ್ರಂಥಗಳಲ್ಲಡಗಿದ್ದ ಜ್ಞಾನರಾಶಿ ಮತ್ತು ಶಬ್ದ ಸಂಪತ್ತು

ನಮಗಿಲ್ಲವಾಗುತ್ತಿತ್ತು. ಅನೇಕ ಶಿವಶರಣರ ಕಥೆಗಳೆಲ್ಲ ತಮಿಳಿನಿಂದ ತೆಗೆದುಕೊಂಡದ್ದಾಗಿದೆ.

ಇಂಗ್ಲಿಷ್ ಸಾಹಿತ್ಯದ ಅತ್ಯಂತ ಶ್ರೇಷ್ಠ ಕವಿ ಶೇಕ್ಸ್‌ಪಿಯರ್‌ನ ಕಾವ್ಯ ಸೃಷ್ಟಿಗೆ ಭಾಷಾಂತರವಾದ ಸಾಹಿತ್ಯದ ನೆರವು ಅಷ್ಟಿಷ್ಟಲ್ಲ. ಶೇಕ್ಸ್‌ಪಿಯರ್‌ಗೆ ಗ್ರೀಕ್ ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯವಿರಲಿಲ್ಲವಂತೆ. ಅವನು ಬರೆದ ಗ್ರೀಸಿನ ಮತ್ತು ರೋಮಿನ ಮಹಾಪುರುಷರನ್ನು ಕುರಿತ ನಾಟಕಗಳಿಗೆ ಪ್ಲೊಟಾರ್ಚ್ ಎಂಬುವನು ಬರೆದ ಮಹಾಪುರುಷರ ಜೀವನ ಚಿತ್ರವನ್ನುಳ್ಳ ಗ್ರೀಕ್ ಗ್ರಂಥದ ಇಂಗ್ಲಿಷ್ ಭಾಷಾಂತರವೇ ಆಧಾರ. ಇನ್ನೂ ಕೆಲವು ನಾಟಕಗಳ ಕಥೆಗಳು ಇಟಾಲಿಯನ್ ಭಾಷೆಯಲ್ಲಿ ಬರೆದಿದ್ದ ಕಾದಂಬರಿಗಳ ಕಥೆಗಳು. ಇನ್ನೊಬ್ಬ ಪ್ರಸಿದ್ಧ ಇಂಗ್ಲಿಷ್ ಕವಿ ಕೀಟ್ಸ್, ಹೋಮರ್‌ನ ಕಾವ್ಯವನ್ನು ಚಾಪ್‌ಮನ್ನನ ಭಾಷಾಂತರದಲ್ಲಿ ಓದಿದಾಗ, ಅವನಿಗಾದ ಅಪೂರ್ವವಾದ ರೋಮಾಂಚಕಾರಿ ಅನುಭವವೆಂತಹದೆಂಬುದನ್ನು ಗಮನಿಸಬಹುದಾಗಿದೆ.

ಕೀಟ್ಸ್‌ನ ಪರಿಭಾಷೆಯಲ್ಲಿ ಹೇಳುವುದಾದರೆ, ಭಾಷಾಂತರ ಹೊಸ ಹೊಸ ಸಾಹಿತ್ಯಕ ಗ್ರಹಗಳನ್ನು ನಮ್ಮ ಕಣ್ಣಳವಿಗೆ ತಂದುಕೊಡುವ ಒಂದು ದೂರದರ್ಶಕ. ಅದು ನವೀನ ಸಾಹಿತ್ಯ ಪ್ರಾಂತಗಳನ್ನು ನಮ್ಮ ವಶಕ್ಕೆ ತಂದುಕೊಡುವ ದಿಗ್ವಿಜಯವೂ ಹೌದು, ಅದರಿಂದ ನಮ್ಮ ಸಾಹಿತ್ಯ ಸಾಮ್ರಾಜ್ಯದ ಮೇರೆಗಳು ನಿರಂತರವಾಗಿ ಹಿಗ್ಗುತ್ತ ಹೋಗುತ್ತವೆ. ಯಾವ ದೇಶದ ಭಾಷೆ ಸಾಹಿತ್ಯಗಳಾಗಲಿ ಶ್ರೀಮಂತವಾಗಿರುವುದಕ್ಕೆ ಬೇರೆ ಭಾಷೆಗಳಿಂದ ಭಾಷಾಂತರವಾದ ವಸ್ತುಗಳೂ ಸ್ವಲ್ಪಮಟ್ಟಿಗಾದರೂ ಕಾರಣವಾಗಿವೆ. ಧರ್ಮ ಸಾಹಿತ್ಯಗಳು ಪ್ರಧಾನವಾಗಿದ್ದ ಹಿಂದಿನ ಯುಗದಲ್ಲಿ, ಒಂದು ಕಾರಣಕ್ಕೆ ಭಾಷಾಂತರ ಬೇಕಾಗಿದ್ದರೆ, ವಿಜ್ಞಾನಯುಗವಾದ ಈ ಕಾಲದಲ್ಲಿ ಅದರ ಜೊತೆಗೆ ಅದಕ್ಕಿಂತಲೂ ಹೆಚ್ಚಾಗಿ ತಾಂತ್ರಿಕ ಜ್ಞಾನ (technology) ಮತ್ತು ಉತ್ಪಾದನಾ ರೀತಿಗಳನ್ನು (know-how) ಕುರಿತ ಗ್ರಂಥಗಳ ಭಾಷಾಂತರ ಅಗತ್ಯವೆನಿಸಿದೆ. ಜಗತ್ತಿನ ನಾನಾ ದೇಶಗಳನ್ನು ವಿವರಿಸುವ ಮತ್ತು ಆ ದೇಶಗಳ ಜನರನ್ನೂ ಜನಜೀವನವನ್ನೂ ಪರಿಚಯಿಸುವ, ಅವರ ಧರ್ಮ ನೀತಿ ಆಚಾರಗಳನ್ನು ತಿಳಿಸಿಕೊಡುವ, ಅವರ ವಿಜ್ಞಾನ ಸಾಹಿತ್ಯಗಳಲ್ಲಿನ ಮಹತ್ಸಾಧನಗಳನ್ನು ನಮಗೆ ತಂದುಕೊಡುವ ಭಾಷಾಂತರಗಳು, ಜಗತ್ತಿನ ಜನರೆಲ್ಲರೂ ಶಾಂತಿಸೌಹಾರ್ದಗಳಿಂದ ಉತ್ತಮ ಜೀವನ ನಡೆಸಲು ಜನರ ಮನಸ್ಸನ್ನು ಸಿದ್ಧಗೊಳಿಸಲು ಬೇಕಾಗಿವೆ.

ಭಾಷಾಂತರ ಒಂದು ಕಲೆ, ಕುಶಲಕಲೆಗಳಲ್ಲಿ ಒಂದಾದ ಸಾಹಿತ್ಯದ ಒಂದು ಅಂಗ ಮಾನವನ ಕಲಾದೃಷ್ಟಿ ಎಂದು ಉದಿಸಿತೊ ಅಂದೇ ಭಾಷಾಂತರದ ಭಾವ ಹೊಳೆದಿರ ಬೇಕು, ಏಕೆಂದರೆ ತನಗೆ ಲಭಿಸಿದ ಸೌಂದರ್ಯಾನುಭವವನ್ನು ಇತರರಿಗೆ

ತಂದು ಕೊಡುವುದು ಮಾನವನ ಸಹಜಸ್ವಭಾವ, ಮಾನವನು ಸಮಾಜ ಜೀವಿಯಾಗಿ ಪರಸ್ಪರ ಆಗುಹೋಗುಗಳ, ಸುಖದುಃಖಗಳ ಸಹಭಾಗಿಯಾಗಿರುವುದೇ ಈ ಸ್ವಭಾವಕ್ಕೆ ಮೂಲ ಕಾರಣ. ರಸಾನಂದವೇ ಭಾಷಾಂತರದ ನೈಜ ಪ್ರೇರಕ ಶಕ್ತಿ, ಜೀವನೋತ್ಸಾಹ ಶಕ್ತಿ ಎಂಬುದು ಸುವಿದಿತವಾಗುವುದು. ಆಂಗ್ಲ ಸಾಹಿತ್ಯದ ಕಾವ್ಯ ಕನ್ನಿಕೆಯು ತನ್ನ ಕಣ್ಮಣಿಯಾಗಿ, ಜೀವದುಸಿರಾಗಿ 'ನಲಿಸಿ, ಕಲಿಸಿ, ಮನವನೊಲಿಸಿ ಕುಣಿಸಿದ' ಕಾರಣವೆ ಉತ್ಸಾಹವು ಉಕ್ಕಿ,

'"ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ನಲ್ಲೆಯೊಲವ ತೆರೆದು ತಂದ
ಮೊದಲು ತಾಯ ಹಾಲ ಕುಡಿದು"[4]

ಆ ಕನ್ನಡ ನಾಡ ನುಡಿವೆಣ್ಣು ಈ 'ಕಡಲ ಹೊನ್ನ ಹೆಣ್ಣಿನ' ಸೊಬಗನ್ನು ತೊಟ್ಟಿರುವುದನ್ನು ಕವಿಯ ಮನ

"ನೋಡಬಯಸಿದೆ.
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ."[5]

ಈ ಕಾವ್ಯ ಕಲಾ ಸೌಂದರ್ಯಾನುಭೂತಿಯು ಹೇಗೆ ಭಾಷಾಂತರದ ಸಹಜ ಕಾರಣವೊ ಹಾಗೆಯೆ ಅದರ ಚರಮೋದ್ದೇಶವೂ ಆಗಿದೆ. ತನಗಾದ ರಸಾನುಭವವನ್ನು ತನ್ನವರೂ ಪಡೆದು ಆನಂದದಿಂದ ನಲಿಯಬೇಕೆನ್ನುವುದು ಭಾಷಾಂತರಕಾರನ ಆಶಯ. ಮತ್ತೊಂದು ಭಾಷೆಯಿಂದ ತನ್ನನ್ನು ನೆಲವೇರಿಸಿದ ರಸವತ್ಕಾವ್ಯವು ತನ್ನ ಭಾಷೆಯಲ್ಲಿಯೂ ಮೂಲದ ಸಹಜ ಸೌಂದರ್ಯದಿಂದ ತನ್ನ ನಾಡಿನ ಜನರನ್ನು ಸೊಗವಡಿಸುವಂತೆ ಮಾಡಬೇಕೆಂಬುದೆ ಆತನ ಬಯಕೆ. ಅದಕ್ಕಾಗಿ ಉತ್ತಮ ಭಾಷಾಂತರಕಾರನು ಬೇರೆಯ ಭಾಷೆಯ ಕಾವ್ಯಮಾರ್ಗ, ವಸ್ತು ಸ್ವರೂಪ ಮತ್ತು ರಸಭಾವಗಳ ಸಜೀವ ಸೃಷ್ಟಿಯನ್ನು ಮಾಡುವನು. ಹೀಗೆ ಆತನ ಆಶಯ ನೆರವೇರಿದಲ್ಲದೆ ಆತನಿಗೆ ಒಬ್ಬನಾಗಿ ಉಂಡ ಊಟ ಹಬ್ಬ ವೆನಿಸದು, "ಒಬ್ಬನೇ ಸವಿದ ರಸ ರುಚಿ"ಯಾಗದು, ಇಂಥ ಪ್ರಯತ್ನಗಳು ಭಾಷಾಂತರಕ್ಕೆ ದಾರಿ ಮಾಡಿಕೊಡುತ್ತವೆ. ಅನೇಕ ವೇಳೆ ತಮ್ಮ ಇಂಥ ಅಭಿರುಚಿ ಆಸಕ್ತಿಗಳು ಎಂಥ ಮಹತ್ವಪೂರ್ಣ ಪರಿಣಾಮಗಳನ್ನು ಬೀರಬಹುದು, ಎಂಥ ಕ್ರಾಂತಿಗೆ ಎಡೆಮಾಡಿಕೊಡಬಹುದು ಎಂಬುದರ ಅರಿವೂ ಅವರಿಗಿರುವುದಿಲ್ಲ. ಹೋಮರನ ಕೃತಿಗಳ ಭಾಷಾಂತರದ ಸಂದರ್ಭದಲ್ಲಿ ಭಾಷಾಂತರಕಾರನೊಬ್ಬ ಬಳಸಿದ ಛಂದಸ್ಸು ಇಂಗ್ಲಿಷ್ ಕಾವ್ಯಕ್ಷೇತ್ರದಲ್ಲಿ

ಹೊಸ ಆಯಾಮಗಳನ್ನೇ ತೆರೆಯಿತು ಎಂದು ಹೇಳಲಾಗಿದೆ. ಅಂತೆಯೇ ಬಿ.ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತೆಗಳು' ಕನ್ನಡ ಕಾವ್ಯಕ್ಷೇತ್ರದಲ್ಲಿ ಎಂಥ ಕ್ರಾಂತಿಕಾರಿ ಬೆಳವಣಿಗೆಗೆ ನಾಂದಿಯನ್ನು ಹಾಡಿತೆಂಬುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

ಭಾಷಾಂತರದ ಅಗತ್ಯ ಮತ್ತು ಪ್ರಯೋಜನಗಳನ್ನು ಕುರಿತ ಇ.ಎಸ್. ಬೇಟ್‌ನ ಹೇಳಿಕೆ ಈ ರೀತಿ ಇದೆ: "ಅನುವಾದವಿಲ್ಲದೆ ಯಾವುದೂ ಚಲಿಸುವುದಿಲ್ಲ. ಮಾನವನ ಅನುಭವವು ಮೂರು ಪದಗಳಿಂದ ಆವರಿಸಲ್ಪಟ್ಟಿದೆ: ಭಾವನೆಗಳು, ತಂತ್ರಗಳು, ಆಲೋಚನೆಗಳು. ಭಾವನೆಗಳು (ಭಯ, ಇತ್ಯಾದಿ.) ಪಾತ್ರದಲ್ಲಿ ಬದಲಾಗುವುದಿಲ್ಲ, ಆಲೋಚನೆಗಳು ಮತ್ತು ತಂತ್ರಗಳು ಬದಲಾಗುವುದಿಲ್ಲ. ಅನುವಾದದ ಸಹಾಯವಿಲ್ಲದೆ ಆಲೋಚನೆ ಅಥವಾ ತಂತ್ರಗಳಲ್ಲಿ ಯಾವುದೇ ಬದಲಾವಣೆಯು ಹರಡುವುದಿಲ್ಲ, ಏಕೆಂದರೆ, ಅದು ಹರಡಬೇಕಾದರೆ, ಅದು ಜನರಿಂದ ಜನರಿಗೆ ಮತ್ತು ಆದ್ದರಿಂದ ಭಾಷೆಯಿಂದ ಭಾಷೆಗೆ ಹರಡಬೇಕು."

Emotions, thought ಮತ್ತು techniques ಶಬ್ದಗಳು ಮಾನವ ಸಮುದಾಯಕ್ಕೆ ಸಾಮಾನ್ಯವಾಗಿರುವಂಥ ಅನುಭವಗಳನ್ನು ಒಳಗೊಂಡಿರುವ ಸಾಹಿತ್ಯವನ್ನೂ, ಜಾಗತಿಕ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನವನ್ನೂ–ಒಟ್ಟಿನಲ್ಲಿ. ಮಾನವನ ಬೌದ್ಧಿಕ ಮತ್ತು ಆತ್ಮಿಕ ಚಟುವಟಿಕೆಗಳನ್ನೂ ಸೂಚಿಸುತ್ತವೆ ಎಂದಿಟ್ಟು ಕೊಂಡರೆ, ಆಗ ಭಾಷಾಂತರದ ವ್ಯಾಪ್ತಿ ಮತ್ತು ಅಗತ್ಯ ಮನದಟ್ಟಾಗುತ್ತವೆ. ಆ ಸಮಗ್ರ ಚಟುವಟಿಕೆಗಳು ಮತ್ತು ಅವುಗಳ ಫಲ ದೇಶಕಾಲಗಳ ಮೇರೆಯನ್ನು ಮೀರಿ ಸಮಸ್ತ ಮಾನವ ಜನಾಂಗಕ್ಕೆ ಉಪಯುಕ್ತವಾಗಿ ಪರಿಣಮಿಸಬೇಕಾದರೆ ಅನಿವಾರ್ಯವಾಗಿ ಭಾಷಾಂತರ ಅಗತ್ಯವಾದ ಮಾಧ್ಯಮವಾಗಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಜ್ಞಾನಕ್ಕೆ ಭಾಷೆ ವಾಹಕವಷ್ಟೆ. ಈ ಭಾಷೆ ಅಥವಾ ಭಾಷೆಯನ್ನು ರೂಪಿಸುವ ಶಬ್ದವೆಂಬ ಜ್ಯೋತಿ ಬೆಳಗದಿದ್ದರೆ ಈ ಲೋಕವೆಲ್ಲ ಅಂಧಕಾರದಲ್ಲಿ ಮುಳುಗಿಹೋಗುತ್ತೆದೆಂಬ ಸಂಸ್ಕೃತ ಕಾವ್ಯಮೀಮಾಂಸಕನೊಬ್ಬನ ಮಾತು ನೆನಪಿಗೆ ಬರುತ್ತದೆ ಈ ಲೋಕಪ್ರದೀಪನ ಕಾರ್ಯ ಇಂದು ಯಾವುದೇ ಒಂದು ಭಾಷೆ ಅಥವಾ ಆ ಭಾಷೆಯಲ್ಲಿನ ಶಬ್ದಗಳಿಂದ ಸಂಪೂರ್ಣವಾಗಿ ಸಾಧಿತವಾಗಲಾರದು, ಈ ಕಾರ್ಯ ಸಾರ್ವತ್ರಿಕವಾಗಿ ಸಾಧಿತವಾಗಬೇಕಾದರೆ ಹಲವು ಭಾಷೆಗಳಲ್ಲಿ, ಏಕಕಾಲದಲ್ಲಿ ಈ ಕಾರ್ಯ ನೆರವೇರಬೇಕಾಗುತ್ತದೆ. ಏಕೆಂದರೆ, 'ಬೈಬಲ್ಲಿ'ನ ಪ್ರಕಾರ ಒಬ್ಬನ ಮಾತನ್ನು ಮತ್ತೊಬ್ಬರು ಅರ್ಥ ಮಾಡಿಕೊಳ್ಳದಂತೆ ಮಾನವರ ಭಾಷೆಯನ್ನು ಗೊಂದಲಗೊಳಿಸಲಾಗಿದೆ.

"Go to, let us go down, and there confound their language, that they may not understand one another's speech"[6] ಈ ಗೊಂದಲವನ್ನು ದೂರಮಾಡಿ ಲೋಕಪ್ರದೀಪನ ಕಾವ್ಯವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಭಾಷಾಂತರ ಅಗತ್ಯವಾಗುತ್ತದೆ, ಈ ದೃಷ್ಟಿಯಲ್ಲಿ ಭಾಷೆ ಮಾನವ ಜನಾಂಗಗಳ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸಿದರೆ, ಭಾಷಾಂತರ ಅವುಗಳನ್ನು ತೊಡೆದುಹಾಕುತ್ತದೆ. ಭಾಷಾಂತರ ಎಂಥ ಮಹತ್ವಪೂರ್ಣ ಕಾರ್ಯವನ್ನು ನಿರ್ವಹಿಸುತ್ತದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಭಾಷಾಂತರದಿಂದಾಗುವ ಪರಮ ಪ್ರಯೋಜನವೇನೆಂಬುದನ್ನು ರವೀಂದ್ರರ 'ಗೀತಾಂಜಲಿ'ಯ ಪದ್ಯವೊಂದು ಹೃದಯಂಗಮವಾಗಿ ಚಿತ್ರಿಸುತ್ತದೆ. ಆ ಪದ್ಯ ಈ ರೀತಿ ಇದೆ:

"ನೀನು ಯಾರನ್ನು ಗೆಳೆಯರಿಗೆ ತಿಳಿಯಪಡಿಸಿದೆ
ನನಗೆ ಗೊತ್ತಿತ್ತು/ಇಲ್ಲ
ನನ್ನದಲ್ಲದ ಮನೆಗಳಲ್ಲಿ ಆಸನಗಳನ್ನು ಕೊಟ್ಟೆ,
ದೂರದವರನ್ನು ಹತ್ತಿರಕ್ಕೆ ಕರೆತಂದು
ಅಪರಿಚಿತರನ್ನು ಸಹೋದರನನ್ನಾಗಿ ಮಾಡಿದ್ದೀರಿ."[7]

ಕವಿವರರ ವಂಗ ಕೃತಿಯ

"ಕೂತೊ ಅಜನಾರೆ ಜಾನಾಯಿಲೆ ತುಮಿ,
ಕೂತೊ ಫರೆ ದಿಲೆ ತಾಜ್,
ದೂರ್ ಕೆ ಕೊರಿಲ್ ನಿಕಟ್, ಬಂಧು
ಪರ್ ಕೆ ಕೊರಿಲ್ ಭಾಯ್"[8]

ಎಂಬ ಈ ಗೀತೆಯ ಭಾವವೆ ಆ ಆಂಗ್ಲ ರೂಪ ತಾಳಿದೆ. ಖಿಥಣ ಎಂಬುದಕ್ಕೆ 'ಭಾಷಾಂತರ' ಎಂದು ಅರ್ಥೈಸಿದರೆ, ಅದು ಎಸಗುವ ಪವಾಡ ನಮ್ಮನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತದೆ. ಅಪರಿಚಿತರನ್ನೂ ಅದು ಸೋದರರನ್ನಾಗಿಸುತ್ತದೆ, ಸ್ನೇಹಿತರನ್ನಾಗಿಸುತ್ತದೆ, ನಮ್ಮದಲ್ಲದ ಮನೆಗಳಲ್ಲೂ ನಮಗೆ ಸ್ಥಾನವನ್ನುಗಳಿಸಿಕೊಡುತ್ತದೆ. ಈ ದೇಶಕಾಲಗಳ ನಡುವಣ ಅಂತರವನ್ನು ತೊಡೆದುಹಾಕುತ್ತದೆ. ರವೀಂದ್ರರಿಗೆ ಅಂತಾರಾಷ್ಟ್ರೀಯ ಮಾನ್ಯತೆಯನ್ನು ಗಳಿಸಿಕೊಡಲೂ ಭಾಷಾಂತರ–ಅದರಲ್ಲೂ 'ಗೀತಾಂಜಲಿ' ಆಯ ಇಂಗ್ಲಿಷ್ ಭಾಷಾಂತರ– ಕಾರಣವಾಯಿತೆಂಬುದು ತಿಳಿದಿರುವ ಸಂಗತಿ.

ಕ್ಯಾಟ್ಫೋರ್ಡ್ ಭಾಷಾಂತರದ ಭಾಷಾ ಸಿದ್ಧಾಂತ ಪುಸ್ತಕದ ಮುನ್ನುಡಿಯಲ್ಲಿ ಭಾಷಾಂತರದ ಅಗತ್ಯವನ್ನು ಕುರಿತು ಈ ರೀತಿ ಹೇಳುತ್ತಾನೆ.

"ಅನುವಾದವು ಆಧುನಿಕ ಜಗತ್ತಿನಲ್ಲಿ ಅಗಾಧವಾದ ಪ್ರಾಮುಖ್ಯತೆಯ ಚಟುವಟಿಕೆಯಾಗಿದೆ ಮತ್ತು ಇದು ಭಾಷಾಶಾಸ್ತ್ರಜ್ಞರು, ವೃತ್ತಿಪರರು ಮತ್ತು ಹವ್ಯಾಸಿ ಭಾಷಾಂತರಕಾರರು ಮತ್ತು ಭಾಷಾ–ಶಿಕ್ಷಕರಿಗೆ ಮಾತ್ರವಲ್ಲದೆ ಎಲೆಕ್ಟ್ರಾನಿಕ್ ಎಂಜಿನಿಯರ್‌ಗಳು ಮತ್ತು ಗಣಿತಜ್ಞರಿಗೆ ಆಸಕ್ತಿಯ ವಿಷಯವಾಗಿದೆ."[9]

ಒಂದು ನಾಡಿನ ಸಾಹಿತ್ಯಾಭಿವೃದ್ಧಿಗೆ ಸೃಷ್ಟಿ ಕಾರ್ಯ ಎಷ್ಟು ಮುಖ್ಯವೋ ಭಾಷಾಂತರ ಕಾರವೂ ಅಷ್ಟೇ ಮುಖ್ಯ. ಜಗತ್ತಿನ ಭಾನ್ಯ ಕ್ಯಕ್ಕೆ, ಜ್ಞಾನ ವಿಜ್ಞಾನಗಳ ಪ್ರಗತಿ ವಿಸ್ತಾರಗಳಿಗೆ, ಸಂಸ್ಕೃತಿ ನಾಗರಿಕತೆಗಳ ಬೆಳವಣಿಗೆಗೆ ಭಾಷಾಂತರ ಅತ್ಯಾವಶ್ಯಕ. ಅನುವಾದ ಒಂದು ಕಲೆ. ಮೂಲದಲ್ಲಿ ಕಂಡುಬರುವ ಪದಗಳಿಗೆ ಇನ್ನೊಂದು ಭಾಷೆಯ ಸಮಾನಾರ್ಥಕ ಪದಗಳನ್ನು ಬರೆಯುವುದರಿಂದ ಮಾತ್ರ ಅನುವಾದವಾಗಲಾರದು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವಾಗ, ಅಲ್ಲಿ ಹುದುಗಿರುವ ಭಾವನೆಯನ್ನು ಅನುವಾದಿಸ ಬೇಕು, ಬರಿಯ ಪದಗಳನ್ನಲ್ಲ. ಸರಿಯಾದ ಅನುವಾದದಲ್ಲಿ ಮೂಲಕ್ಕಿಂತ ಒಂದು ಪದವನ್ನು ಸೇರಿಸುವುದೂ ಇಲ್ಲ; ತೆಗೆದುಹಾಕಿರುವುದೂ ಇಲ್ಲ. ಮೂಲದ ಭಾವ ಸಂಪೂರ್ಣವಾಗಿ ವ್ಯಕ್ತವಾಗಬೇಕು. ಆದುದರಿಂದ ಅನುವಾದ ಕಾರ್ಯದಲ್ಲಿ ಮೂಲಕೃತಿಗಿಂತ ಅಧಿಕ ಮಾನಸಿಕ ಪ್ರಯತ್ನ ಆವಶ್ಯಕವೆಂದರೆ ತಪ್ಪಾಗಲಾರದು.

ಅಡಿಟಿಪ್ಪಣಿ

1. ಅನುವಾದ ಕಲೆ – ಜೆ.ಪಿ. ಮುರಡಿ – ಪುಟ –30.
2. ಅದೇ ಪುಟ – 39.
3. ಅದೇ ಪುಟ – 47.
4. ಅದೇ ಪುಟ – 47.
5. ಅದೇ ಪುಟ – 63.
6. ಅದೇ ಪುಟ – 63
7. ಅದೇ ಪುಟ – 63
8. ಉಮರನ ಒಸಗೆ – ಡಿ.ವಿ. ಗುಂಡಪ್ಪ– ಪುಟ – 49.
9. ಪ್ರತಿಕ್ರಿಯೆ – ಜಿ.ಎಸ್. ಶಿವರುದ್ರಪ್ಪ–ಪುಟ – 110.

ಆಧಾರ ಗ್ರಂಥಗಳು

1. ಪ್ರತಿಕ್ರಿಯೆ – ಜಿ.ಎಸ್. ಶಿವರುದ್ರಪ್ಪ
2. ಉಮರನ ಒಸಗೆ – ಡಿ.ವಿ. ಗುಂಡಪ್ಪ
3. ಅನುವಾದ ಕಲೆ – ಜೆ.ಪಿ. ಮುರಡಿ

ಗಗನ ಜೆ.
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ
gagana991@gmail.com

ಗತಕಾಲದ ಅಭಿಮಾನ ಮೋರಿಗೆರೆಯ ಶಾಸನ

¤ ಶ್ರೀ ರಘುಪ್ರಸಾದ ಟಿ

"ವಾರಿಧಿಪರಿವೃತ ಧಾತ್ರೀ
ನಾರಿಯವದನದವೊಲೆಸೆವ ಕೋಗಳಿನಾಡೊ
ಳ್ಮೋರಿಂಗೆಱೆ ತಿಳಕಾಳಂ
ಕಾರಮನನುಕರಿಪುದೆನೆ ಜನಂ ಬಣ್ಣಿಸದೇ"[1]

ಹೀಗೆ ನಾಗಮಯ್ಯ ಎಂಬ ಶಾಸನ ಕವಿಯಿಂದ ವರ್ಣಿಸಲ್ಪಟ್ಟ ಗ್ರಾಮ ಮೋರಿಂಗೆರೆ. ಇದೇ ಊರಿನ ಶಾಸನವೊಂದು ಹಲವು ಶ್ರೀಮಂತಿಕೆಗೆ ಸಾಕ್ಷಿಪ್ರಜ್ಞೆಯಂತೆ ಗತಕಾಲದ ಅಭಿಮಾನವನ್ನು ತನ್ನೊಡಲಲ್ಲಿರಿಸಿಕೊಂಡಿದೆ. ಎಲ್ಲವನ್ನು ತಿಳಿದ ಮೌನಿ ಮುನಿಯಂತೆ ಬದುಕಿನಲ್ಲಾದ ಹಲವು ಪಲ್ಲಟಗಳನ್ನು ನೋಡುತ್ತಲೇ ಕುಳಿತಿದ್ದು, ಇತಿಹಾಸದ ಪಳಿವಳಿಕೆಯ ಕಲ್ಲಿನ ತುಂಡಿನಂತೆ ಕಾಣುತ್ತಿರುವ ಈ ಶಾಸನವು ಮೋರಿಂಗೆರೆಯ ಅಭಿಮಾನವನ್ನು ಹೆಚ್ಚಿಸುವಂತೆ ಮಾಡಿದೆ. ಮೋರಿಗೆರೆಯು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗ್ರಾಮವಾಗಿದೆ. ಇಂದಿಗೂ ಸಾಂಸ್ಕೃತಿಕವಾಗಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿರುವ ಈ ಗ್ರಾಮವು ಐತಿಹಾಸಿಕವಾಗಿ ಮಹತ್ವವನ್ನು ಹೊಂದಿದೆ. ಪ್ರಸ್ತುತ ಪ್ರದೇಶವನ್ನು ಹಲವು ರಾಜಮನೆತನಗಳು ಆಳ್ವಿಕೆ ಮಾಡಿವೆ. ಚಕ್ರವರ್ತಿ ಚಾಳುಕ್ಯರ ಆಹವಮಲ್ಲದೇವನ ಕಾಲದ ಒಂದು ಶಾಸನವನ್ನು ಅಧ್ಯಯನಕ್ಕೆ ಒಳಪಡಿಸಿ ಇಲ್ಲಿ ವಿಷಯವನ್ನು ಮಂಡಿಸಲಾಗಿದೆ.

ಮೋರಿಗೆರೆಯ ಜನರ ಬಾಯಲ್ಲಿ ಉದ್ದಿ ಬಸಪ್ಪನ ಗುಡಿಯೆಂದೇ ಇಂದು ಪ್ರಚಲಿತದಲ್ಲಿರುವ ದೇವಾಲಯದಲ್ಲಿ ಈ ಶಾಸನವಿದೆ. ಆದರೆ ಶಾಸನದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಹೆಸರಿನ ಉಲ್ಲೇಖವಿರದೆ 'ನೊಳಂಬೇಶ್ವರ' ಮತ್ತು 'ಲೆಂಕೇಶ್ವರ'

ಎಂಬ ಹೆಸರುಗಳಿವೆ. ದೇವಾಲಯಗಳು ನಿರ್ಮಾಣವಾದ ವಿವರಗಳೂ ಸ್ಪಷ್ಟವಾಗಿ ದಾಖಲಾಗಿವೆ. ಶಾಸನದ ಕಾಲ ಕ್ರಿ.ಶ. 1045. ಇದೊಂದು ದಾನ ಶಾಸನವಾಗಿದ್ದು ರಾಜಕೀಯ, ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಕಲೆ, ಭಾಷಿಕ ಹೀಗೆ ಹಲವು ಕಾರಣಗಳಿಂದ ಮಹತ್ವವನ್ನು ಪಡೆದಿದೆ. ಕೇವಲ ಪ್ರಸ್ತುತ ಶಾಸನವನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಿಕೊಂಡು ಆ ಮೂಲಕ ಮೋರಿಂಗೆರೆ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಕಂಡುಕೊಳ್ಳುವುದು ಇಲ್ಲಿನ ಬಹುಮುಖ್ಯ ಉದ್ದೇಶಗಳಲ್ಲೊಂದು.

ರಾಜಕೀಯ ಮಹತ್ವ:

ರಾಜಕೀಯವಾಗಿ ಈ ಪ್ರದೇಶವು ಚಾಳುಕ್ಯರ ಸಾಮಂತರಾಗಿದ್ದ ನೊಳಂಬರ ಆಳ್ವಿಕೆಗೆ ಒಳಪಟ್ಟಿದ್ದನ್ನು ತಿಳಿಸುತ್ತದೆ. ಹಿಂದೆ ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದ ಪಲ್ಲವರೇ ಚಾಲುಕ್ಯರ ಕಾಲಕ್ಕೆ ಅವರ ಸಾಮಂತರಾಗಿ ಆಳ್ವಿಕೆ ಮಾಡಿದ್ದಾರೆಂಬುದು ತಿಳಿದುಬರುತ್ತದೆ. ಇಲ್ಲಿ ನೊಳಂಬರಿಗಿದ್ದ ಬಿರುದುಗಳಲ್ಲಿ 'ಪಲ್ಲವ ಕುಳತಿಳಕನ್', 'ಕಾಂಚೀಪುರವರೇಶ್ವರಂ' ಇವು ಅವರು ಪಲ್ಲವರೆಂಬುದನ್ನು ಸ್ಪಷ್ಟಪಡಿಸುತ್ತವೆ. ಮಹಾಸಾಮಂತರಾಗಿದ್ದ ನೊಳಂಬಪಲ್ಲವರ ವಂಶದ ಪ್ರಮುಖರನ್ನು ಇಲ್ಲಿ ಹೆಸರಿಸಲಾಗಿದೆ.
ಶಾಸನದಲ್ಲಿ ದಾಖಲಿಸಿದಂತೆ ನೊಳಂಬ ಪಲ್ಲವರ ವಂಶಾವಳಿಯನ್ನು ಕೆಳಕಿನಂತೆ ನಕ್ಷೆಯಲ್ಲಿ ತಿಳಿಸಲಾಗಿದೆ.

ನೊಳಂಬ ಘಟೆಯಂಕಕಾರದೇವ

↓

ಉದಯಾದಿತ್ಯದೇವ

↓

ಜಗದೇಕಮಲ್ಲ ಇರ್ಮಡಿನೊಳಂಬ ನನ್ನಿ ನೊಳಂಬ ಪಲ್ಲವ ಪೆರ್ಮಾನಡಿ

'ರಾಜ್ಯ ವಿದ್ಯಾಧರ', 'ಕನ್ದುಕಾಚಾರ್ಯ', 'ಇರಿವಬೆಡಂಗ' ಎಂಬ ಬಿರುದುಗಳನ್ನು ಹೊಂದಿದ್ದ ನೊಳಂಬ ಘಟೆಯಂಕಕಾಱದೇವ, ಇವನ ಹಿರಿಯ ಮಗನಾದ 'ಘಟೆಯೊಡೆಗಣ್ಡ', 'ರಣರಂಗಭೀಮ', ಎಂಬ ಬಿರುದುಳ್ಳ ನೊಳಂಬ ಉದಯಾದಿತ್ಯದೇವ, ಇವನ ಹಿರಿಯ ಮಗ 'ರಾಜಗಜಸಿಂಹ', 'ಏಕಾಂಗವೀರ' ಎಂಬ ಬಿರುದುಳ್ಳ ಜಗದೇಕಮಲ್ಲ ಇರ್ಮಡಿನೊಳಂಬ, ಇವನ ತಮ್ಮ

'ವೈರಿನಾರಾಯಣ', 'ದ್ರೋಹಕಾಳಾನಳ', 'ಮಂಡಳಿಕ ತ್ರಿಣೇತ್ರ', 'ರಾಜಮನೋಜ', 'ಹಯವತ್ಸರಾಜ', ಚಿತ್ರವೆಡಂಗ, ತ್ಯಾಗಚಿಂತಾಮಣಿ, ರಾಜಗಜಸರ್ವಜ್ಞ ಎಂಬ ಬಿರುದುಳ್ಳ ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿಯು ಬಲ್ಲುಕುಂದೆ 300, ಕೋಗಳಿ 500, ಕದಂಬಳಿಗೆ 1000, ಕುದಿಯಹರವಿ 70, ಕರಿವಿಡಿ 30, ನೊಳಂಬವಾಡಿ 32000 ಇವುಗಳನ್ನು ಆಳುತ್ತಿದ್ದರೆನ್ನುವುದು ತಿಳಿಯುತ್ತದೆ. ಉದಯಾದಿತ್ಯನ ಮಗನಾದ ತ್ರೈಲೋಕ್ಯಮಲ್ಲ ನನ್ನಿ ನೊಳಂಬನನ್ನು ಶಾಸನ ಕವಿ ಸೊಗಸಾಗಿ ಅವನ ಗುಣಗಳನ್ನು ವರ್ಣಿಸಿದ್ದಾನೆ.

ಪಲ್ಲವರಂತೆ ಕದಂಬರೂ ಚಾಳುಕ್ಯರ ಸಾಮಂತರಾಗಿದ್ದ ಬಗ್ಗೆಯೂ ಪ್ರಸ್ತುತ ಶಾಸನವು ವಿವರ ನೀಡುತ್ತದೆ. ಚಾಳುಕ್ಯರ ಆಹವಮಲ್ಲನ (ಒಂದನೇ ಸೋಮೇಶ್ವರ ತ್ರೈಲೋಕ್ಯಮಲ್ಲ) ನೆಚ್ಚಿನ ಸಾಮಂತನಾಗಿದ್ದ ಘಟ್ಟಿಯರಸನನ್ನು 'ಬನವಾಸಿಪುರವರೇಶ್ವರ', 'ಕದಂಬರಾಭರಣ', 'ಪರಾಂಗನಾಪುತ್ರ', 'ಮನ್ನೆಯವಲ್ಲಹ', 'ಸತ್ಯಕಾನೀನ' ಎಂದೆಲ್ಲಾ ಹೇಳಲಾಗಿದೆ. ಪಲ್ಲವರು, ಕದಂಬರಂತೆಯೇ ಗುತ್ತರು ಅಥವಾ ಗುಪ್ತರು ಚಾಳುಕ್ಯರ ಸಾಮಂತರಾಗಿದ್ದ ವಿಷಯ ತಿಳಿದುಬರುತ್ತದೆ. ಗುತ್ತರು ತಮ್ಮನ್ನು 'ಉಜ್ಜೈನಿಪುರವರೇಶ್ವರ'ರೆಂದು ತಮ್ಮನ್ನು ಕರೆದುಕೊಂಡಿರುವುದು ಈ ಶಾಸನದ ಮೂಲಕ ತಿಳಿದುಬರುತ್ತದೆ. ಬಲ್ಲವಾಡಿ 70ರ ಮನ್ನೆಯ ಚಟ್ಟರಸನನ್ನು ಗುತ್ತರಭೀಮ, ಚಲದಂಕರಾಮ ಎಂದು ವರ್ಣಿಸಲಾಗಿದೆ.

ನೊಳಂಬರ ದಂಡನಾಯಕ ಮುದ್ದಣ್ಣನಾಯಕ ತಿಕಣ್ಣ ಹಾಗೂ ಲೆಂಖಿಸಾಸಿರ್ವರನ್ನು ಇಲ್ಲಿ ಹೊಗಳಲಾಗಿದೆ. ಇವರು ಅರ್ಮೆಳೆ, ನೆಲ್ಲಿಕುದಿರು, ಸೊನ್ನ, ಪೋಟಿಲ್ಗುಂದೆ, ಸೂಗೂರು, ಮೋರಿಂಗೆಱೆ ಎಂಬ ಈ ಬಾಡಗಳನ್ನು(ಹಳ್ಳಿಗಳು) ಆಳುತ್ತಿದ್ದರೆನ್ನುವುದು ತಿಳಿಯುವುದು. ಇವರು ಅರಸನಿಗೆ ಅತ್ಯಂತ ನಿಷ್ಠರಾಗಿರುತ್ತಿದ್ದರು. ರಾಜನಿಗೂ ಇವರ ಬಗ್ಗೆ ಅಷ್ಟೇ ಪ್ರೀತಿ, ಆದರ, ನಂಬಿಕೆ ಇರುತ್ತಿತ್ತು. ಇವರು ಆಡಳಿತಾತ್ಮಕವಾಗಿ ಪ್ರಭಾವಿಗಳು ಆಗಿದ್ದಂತೆ ಕಂಡುಬರುತ್ತದೆ. ಇವರ ಹೆಸರಿನಲ್ಲೇ ಒಂದು ದೇವಾಲಯ ನಿರ್ಮಾಣವಾಗಿದ್ದ ಬಗ್ಗೆಯೂ ಇಲ್ಲಿ ಉಲ್ಲೇಖಿಸಲಾಗಿದೆ. ಆಡಳಿತ ವ್ಯವಸ್ಥೆಯ ಶ್ರೇಣೀಕರಣ, ಅಧಿಕಾರ ವಿಕೇಂದ್ರೀಕರಣದ ಕುರಿತು ಇಲ್ಲಿನ ಶಾಸನದ ಮೂಲಕ ತಿಳಿದು ಬರುವುದು.

ಸಾಹಿತ್ಯಕ ಮಹತ್ವ:

ಪ್ರಸ್ತುತ ಶಾಸನವು ಸಾಹಿತ್ಯಕವಾಗಿ ಅತ್ಯಂತ ಮಹತ್ವದ ಶಾಸನವೆಂದೇ ಗುರುತಿಸಬಹುದು. ವಿಜಯನಗರ ಜಿಲ್ಲೆಯಲ್ಲಿನ ಮೊದಲ ಶಾಸನೋಕ್ತ ಪದ್ಯಗಳನ್ನು

ಇದೇ ಶಾಸನದಲ್ಲಿ ಗುರುತಿಸಬಹುದಾಗಿದೆ. ಇದಕ್ಕಿಂತ ಪೂರ್ವದಲ್ಲಿನ ಶಾಸನಗಳು ಸಂಪೂರ್ಣ ಗದ್ಯ ಶಾಸನಗಳೇ ಆಗಿವೆ. ಈ ಶಾಸನದ ಕರ್ತೃ ನಾಗಮಯ್ಯ. ವಿಜಯನಗರ ಜಿಲ್ಲೆಯ ಮೊದಲ ಪ್ರಾಚೀನ ಶಾಸನ ಕವಿಯಾಗಿದ್ದಾನೆ. ಛಂದೋಬದ್ಧವಾದ ಇವನ ಶಾಸನ ಪದ್ಯಗಳನ್ನು ಗಮನಿಸಿದರೆ ಶಾಸನಗಳನ್ನಲ್ಲದೆ ಇತರೆ ಕಾವ್ಯಗಳನ್ನೂ ಬರೆದಿರಬಹುದೆನಿಸುತ್ತದೆ. ಆದರೆ ಇಲ್ಲಿಯ ತನಕ ದೊರೆತಿರುವುದಿಲ್ಲ. ಇದೇ ಶಾಸನದಲ್ಲಿ ನನ್ನಿ ನೊಳಂಬನನ್ನು ಕಾವ್ಯಾತ್ಮಕವಾಗಿ ವರ್ಣಿಸಿರುವುದು ಅವನ ಕಾವ್ಯ ಸಾಮರ್ಥ್ಯವನ್ನು ತಿಳಿಸುತ್ತದೆ.

"ನುಡಿವುದು ನನ್ನಿ ಮಾಡುವುದು ಕೀರ್ತನಮೀವುದೆ ಸದ್ವಿನೋದಮೊ
ಯ್ದಡೆ ಮಱಿವೊಕ್ಕಱಿನ್ನೆಱಿಯೆ ಕಾವಗುಣಂ ಬಸನಂ ಮಹಾಜಿಯೊ
ಳ್ಪೆಡೆಯದುದುಗ್ಗಿಯೆಂದು ನುಡಿವೀನುಡಿ ಲೆಂಕರೊಳಾವಕಾಲಮುಂ
ನಡೆವುದು ಪಣ್ಡಿತರ್ಪ್ಪೊಗಳೆ ಭೇರಿಯ ಗೋಸನೆ ಭೂತಳಾಗ್ರದೊಳ್"[2]

ಈ ಪದ್ಯವು ಚಂಪಕಮಾಲಾ ವೃತ್ತ ಛಂದಸ್ಸಿನಲ್ಲಿದೆ. ನನ್ನಿ ನೊಳಂಬನು ಹೆಸರಿಗೆ ತಕ್ಕಂತೆ ಸತ್ಯಪರನಾಗಿರುವನಂತೆಯೂ, ಶ್ರೇಷ್ಟಕಾರ್ಯಗಳನ್ನು ಮಾಡುವಂತವನಾಗಿಯೂ, ಸದಾ ಪ್ರಜೆಗಳಿಗೆ ಸುಖಸಂತೋಷಗಳನ್ನು ನೀಡುವವನಂತೆಯೂ, ಆಶ್ರಿಸಿ ಬಂದವರನ್ನು ಕಾಯುವ ಗುಣವುಳ್ಳವನಾಗಿಯೂ, ಯುದ್ಧರಂಗದಲ್ಲಿ ಭಯಪಡದೆ ಮುನ್ನುಗ್ಗುವಂತೆ ಸೇವಕರಲ್ಲಿ ರಣೋತ್ಸಾಹವನ್ನು ಹೆಚ್ಚಿಸುವನಾಗಿ, ಹೊಗಳಿಕೆಯೆಂಬ ಭೇರಿಯ ಶಬ್ದವು ಪಂಡಿತರಿಂದ ನಿರಂತರವಾಗಿ ನಡೆಯಲು ಕಾರಣನಾಗಿದ್ದಾನೆ ಎಂದು ಕವಿ ನನ್ನಿ ನೊಳಂಬನನ್ನು ಮುಕ್ತವಾಗಿ ವರ್ಣಿಸಿದ್ದಾನೆ. ಇಲ್ಲಿ 'ನುಡುವುದು ನನ್ನಿ' ಎಂದು ಬಳಸಿರಿವಲ್ಲಿ ಕವಿಚಮತ್ಕಾರ ವ್ಯಕ್ತವಾಗಿರುವುದನ್ನು ಗುರುತಿಸಬಹುದು. 'ನನ್ನಿ' ಎಂಬ ಪದ ಶ್ಲೇಷೆಯಾಗಿ ಬಳಕೆಗೊಂಡಿದೆ. ಉಪಮೆ, ರೂಪಕಗಳನ್ನು ಇಲ್ಲಿನ ಶಾಸನಕವಿ ಅಷ್ಟೇ ಸೊಗಸಾಗಿ ಬಳಸಿದ್ದಾನೆ. "ಪೊಗಳೆಭೇರಿಯಗೋಸನೆ"[3] "ಧಾತ್ರೀ ನಾರಿಯವದನದವೊಲೆಸೆವ ಕೋಗಳಿನಾಡೊಳ್ಮೋರಿಂಗೆಱೆ ತಿಳಕಾಳಂ ಕಾರಮನನುಕರಿಪುದು"[4] ಎನ್ನುವ ಸಾಲುಗಳು ಇದಕ್ಕೆ ನಿದರ್ಶನಗಳಾಗಿವೆ.

ಧಾರ್ಮಿಕ ಮಹತ್ವ:

ಪ್ರಾಚೀನ ಕಾಲದಿಂದಲೂ ಧರ್ಮವು ಮನುಷ್ಯನನ್ನು ಪ್ರತ್ಯಕ್ಷ, ಪರೋಕ್ಷವಾಗಿ ನಿಯಂತ್ರಿಸುತ್ತಲೇ ಬಂದಿದೆ. ಅರಸನಾದಿಯಾಗಿ ಸಾಮಾನ್ಯ ಪ್ರಜೆಯವರೆಗೂ ತಾವು

ನಂಬಿದ ಧರ್ಮವನ್ನು ಆಚರಿಸುತ್ತಾ, ಅನುಸರಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ನಂಬಿಕೆಯ ಆಧಾರದಲ್ಲೇ ದೇವಾಲಯಗಳು ನಿರ್ಮಾಣವಾಗಿರುವುದನ್ನು, ವಿವಿಧ ಆಚರಣೆ, ಕಲೆ–ವಾಸ್ತುಶಿಲ್ಪಗಳು ಮೂಡಿಬಂದಿರುವುದನ್ನು ಗುರುತಿಸಬಹುದಾಗಿದೆ. ಚಾಳುಕ್ಯರು ಶೈವಾರಾಧಕರಾಗಿದ್ದು ಇವರ ಅವಧಿಯಲ್ಲಿ ನೂರಾರು ಶಿವದೇವಾಲಯಗಳು ನಿರ್ಮಾಣಗೊಂಡಿವೆ. ಅಂತಹ ಎರಡು ಶಿವಾಲಯಗಳನ್ನು ಈ ಶಾಸನವು ಹೆಸರಿಸಿದೆ. ಜಗದೇಕಮಲ್ಲ ಇರ್ಮಡಿ ನೊಳಂಬ ಹಾಗೂ ತ್ರೈಲೋಕ್ಯಮಲ್ಲ ನನ್ನಿ ನೊಳಂಬರ ತಂದೆಯಾದ ಉದಯಾದಿತ್ಯನಿಗೆ ಪರೋಕ್ಷ ವಿನಯವಾಗಿ ದಂಡನಾಯಕ ತಿಕಣ್ಣ ಮತ್ತು ಲೆಂಕಸಾಸಿರ್ವರು ಎರಡು ದೇವಾಲಯಗಳನ್ನು ಕಟ್ಟಿಸಿದ್ದುದು ತಿಳಿದು ಬರುತ್ತದೆ. ಒಂದು ನೊಳಂಬೇಶ್ವರ ದೇವಾಲಯ ಮತ್ತೊಂದು ಲೆಂಕೇಶ್ವರ ದೇವಾಲಯ. ಪ್ರಾಚೀನ ಧರ್ಮಗಳಲ್ಲಿ ಒಂದಾದ ಶೈವಧರ್ಮವು ಹಿಂದಿನಿಂದಲೂ ಹಲವು ಹೆಸರುಗಳಿಂದ ಅದು ಪ್ರಚಲಿತದಲ್ಲಿತ್ತು. ಲಾಕುಲ ಸಮಯ, ಕಾಳಾಮುಖ, ಪಾಶುಪತ ಸಮಯ ಎಂಬ ಹೆಸರಿನಲ್ಲಿ ಚಾಲ್ತಿಯಲ್ಲಿತ್ತೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[5]

ಈ ಶಾಸನದಲ್ಲಿ 'ಲಕುಳೀಶ' ಎಂಬ ಹೆಸರಿನ ಉಲ್ಲೇಖವಿದೆ. ಇವನು ಲಾಕುಳ ಶೈವ ಪಂಥದ ಸ್ಥಾಪಕನಿರಬಹುದೆಂಬ ಅಭಿಪ್ರಾಯವಿದೆ.[6] ಲಕುಲೀಶನು ಸಾಕ್ಷಾತ್ ಶಿವನ ಅವತಾರವೆಂದೇ ನಂಬಿರುವ ಲಾಕುಳ ಶೈವರು ಶಿವನನ್ನು ಅನೇಕ ಹೆಸರುಗಳಿಂದ ಅರ್ಚಿಸುತ್ತಾ ನೂರಾರು ಶೈವ ದೇವಸ್ಥಾನಗಳ ಸ್ಥಾನಪತಿಗಳಾಗಿದ್ದರು ಎನ್ನಲಾಗಿದೆ.[7] ಗುರುಗಳ ಹೆಸರಿನಲ್ಲಿ, ತಮ್ಮಗಳ ಅಥವಾ ಮಾತಾಪಿತೃಗಳಿಗೆ ಶ್ರೇಯಸ್ಸಾಗಲಿ ಎಂದು ಮಕ್ಕಳ ಪರೋಕ್ಷ ವಿನಯಕ್ಕಾಗಿ, ದೇವಾಲಯಗಳ ಜೀರ್ಣೋದ್ಧಾರ, ಮಂಟಪಗಳನ್ನು, ಮಠಗಳನ್ನು ನಿರ್ಮಾಣ ಮಾಡುವುದು, ದೇವಾಲಯಗಳ ಸೇವಾಕಾರ್ಯಗಳಿಗೆ ದತ್ತಿ ನೀಡುವುದು ಕ್ರಿ.ಶ.6–7 ನೇ ಶತಮಾನದಿಂದ 17ನೇ ಶತಮಾನದವರೆಗೆ ನಿರಂತರವಾಗಿ ಇಂತಹ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾ ಬಂದಿರುವುದನ್ನು ಕಪಟರಾಳ ಕೃಷ್ಣರಾಯರು 'ಕರ್ನಾಟಕ ಲಾಕುಳ ಶೈವರ ಇತಿಹಾಸ' ಕೃತಿಯಲ್ಲಿ ತಿಳಿಸಿದ್ದಾರೆ.[8] ಲಕುಳೀಶನ ಪರಂಪರೆಯು ಸಿಂಹಪರ್ಷೆಯು ಮಲೆಯಾಳಪಂಡಿತರು ಕೋಗಳಿ ಅಯ್ನೂರರ ಮಠಾಧಿಪತಿಗಳಾಗಿದ್ದರೆಂದು ಇಲ್ಲಿ ಉಲ್ಲೇಖಿಸಲಾಗಿದೆ.

ಬಹುಶಃ ಲಾಕುಳ ಪರಂಪರೆಯು ಕರ್ನಾಟಕಕ್ಕೆ ಇತರ ಪ್ರದೇಶದಿಂದ ಬಂದಿರಬಹುದೆಂದು ಹೇಳಬಹುದಾಗಿದೆ. ತಮಿಳುನಾಡು, ಕೇರಳ ಭಾಗದಿಂದ ಪ್ರಸಾರಗೊಂಡ ಶೈವಪರಂಪರೆ ಇದಾಗಿರಬಹುದು. ಇವರು "ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಜಪ ಸಮಾಧಿ ಸಂಪನ್ನರು,

ಸಮಸ್ತಶಾಸ್ತ್ರವಾದಪಾರಂಗತರಾಗಿದ್ದ"[9] ರೆಂದು ತಿಳಿಯುತ್ತದೆ. ದೇವಸ್ಥಾನದ ದಾನದತ್ತಿ, ದೇವರ ಸೇವಾಕಾರ್ಯಗಳೆಲ್ಲ ಇವರ ಸಮ್ಮುಖದಲ್ಲಿಯೆ ನಡೆಯುತ್ತಿದ್ದು ಅರಸರಿಂದ ವಿಶೇಷ ಗೌರವಕ್ಕೆ ಪಾತ್ರರಾಗಿದ್ದರು. ನನ್ನಿನೊಳಂಬನ ತಂದೆ ಉದಯಾದಿತ್ಯನಿಗೆ ಪರೋಕ್ಷ ವಿನಯವಾಗಿ ದಂಡನಾಯಕ ತಿಕಣ್ಣ ಮತ್ತು ಲೆಂಕಸಾಸಿರ್ವರು ಮಾಡಿಸಿದ 'ನೊಳಂಬೇಶ್ವರ' ಮತ್ತು 'ಲೆಂಕೇಶ್ವರ' ದೇವರ ಸೇವಾಕಾರ್ಯಗಳಿಗಾಗಿ ಘಟ್ಟಿಯರಸನ ಮೂಲಕ ಜ್ಞಾನೇಶ್ವರಪಂಡಿತರ ಶಿಷ್ಯರಾಗಿದ್ದ ಸೋಮೇಶ್ವರಪಂಡಿತರ ಕಾಲು ತೊಳೆದು ದಾನ ನೀಡಿರುವುದನ್ನು ಇಲ್ಲಿ ಹೇಳಲಾಗಿದೆ. ಮೋರಿಗೆರೆಯ ಭ್ರಹ್ಮದೇವಾಲಯದ ಬಳಿ ದೊರೆತಿರುವ ಕೆಲವು ಜೈನರಿಗೆ ಸಂಬಂಧಿಸಿದ ಕುರುಹುಗಳನ್ನು ಗಮನಿಸಿದರೆ ಕೋಗಳಿಗೆ ಹತ್ತಿರದಲ್ಲೇ ಇದ್ದ ಈ ಪ್ರದೇಶವು ಮೊದಲು ಜೈನಕೇಂದ್ರವಾಗಿದ್ದು ತದನಂತರ ಶೈವಕೇಂದ್ರವಾಗಿ ಬದಲಾದಂತೆ ಕಾಣಿಸುತ್ತದೆ.

ದೇವಾಲಯದ ಸ್ಥಾನಿಕರು ಅತ್ಯಂತ ನಿಷ್ಟೆಯುಳ್ಳ ತಪೋಧನರಾಗಿರಬೇಕು ಎಂದು ಹೇಳಲಾಗಿದ್ದು ನೈಷ್ಠಿಕರಲ್ಲದ, ಬ್ರಹ್ಮಚರ್ಯ ಕೆಟ್ಟು ನಡೆವ ತಪೋಧನರನ್ನು ನಾಡನ್ನು ಆಳುವ ಅರಸರು, ಮನ್ನೆಯರು, ಮೋರಿಂಗೆರೆಯ ಪನ್ನಿರ್ವರು(ಹನ್ನೆರಡು ಜನ ಮಹಾಜನರು), ಊರೊಡೆಯರು ಊರಿಂದ ಹೊರಗಟ್ಟಿ ಅವರ ಸಂತತಿಯ ನೈಷ್ಠಿಕರೆನಿಸಿದವರನ್ನು 'ನೈಷ್ಠಿಕಸ್ಥಾನ'ಕ್ಕೆ ನೇಮಿಸಬೇಕೆಂದು ಹೇಳಲಾಗಿದೆ. ಹಿಂದೆಯೂ ಡಾಂಬಿಕ ಸ್ಥಾನಿಕರು ಇದ್ದರೆಂದು ಅವರನ್ನು ಬದಲಾಯಿಸುವ ಅವಕಾಶವೂ ಇತ್ತೆಂಬುದನ್ನು ಈ ಶಾಸನ ತಿಳಿಸುತ್ತದೆ. ಕೆಲವೊಮ್ಮೆ ಭಂಡತನದಿಂದ ಆಚಾರಗೆಟ್ಟು ಸ್ಥಾನಿಕ ಸ್ಥಾನದಿಂದ ಬಿಟ್ಟುಹೋಗದೆ ಮೊಂಡುತನಕ್ಕೆ ಇಳಿದರೆ ಅಂತವರನ್ನು ಶ್ವಾನ, ಗಾರ್ದಭ, ಚಣ್ಡಾಳ ಎಂದೂ, ಆತನು ಸತ್ತರೆ 'ಪನ್ದಿ ಸತ್ತುದು, ನಾಯಿಸತ್ತುದು' ಎಂದು ಕರೆಯಲಾಗುತ್ತಿತ್ತೆಂದು ಹೇಳಲಾಗಿದೆ. ಸ್ಥಾನಕ್ಕೆ ಅನುಗುಣವಾದ ಅರ್ಹತೆಯನ್ನು ಅಂದಿನ ಸಮಾಜ ನಿರೀಕ್ಷೆ ಮಾಡುತ್ತಿದ್ದುದು ಇದರಿಂದ ತಿಳಿದು ಬರುವುದು. ಪ್ರಾಚೀನರಿಗಿದ್ದ ಧಾರ್ಮಿಕ ಶ್ರದ್ಧೆಯನ್ನು, ಧಾರ್ಮಿಕ ಆಚರಣೆಗಳ ವಿಚಾರದಲ್ಲಿ ಪ್ರಾಚೀನ ಸಮಾಜ ಅತ್ಯಂತ ಕಠಿಣ ನಿಯಮಗಳನ್ನು ರೂಪಿಸಿಕೊಂಡಿರುವುದನ್ನು ಇದರಿಂದ ಗುರುತಿಸಬಹುದಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಮಹತ್ವ:

ಮೋರಿಂಗೆರೆಯು ಒಂದು ಪ್ರಸಿದ್ಧ ಅಗ್ರಹಾರವಾಗಿತ್ತು. ಅಲ್ಲಿನ ಹನ್ನೆರೆಡು ಮಹಾಜನರು ಪ್ರಮುಖರಾಗಿದ್ದರೆಂಬುದು ತಿಳಿದುಬರುತ್ತದೆ. ದಾನದತ್ತಿ, ಸೇವಾಕಾರ್ಯಗಳ ನಿರ್ವಹಣೆಯ ಜವಾಬ್ದಾರಿ ಇವರದಾಗಿರುತ್ತಿತ್ತು. ದೇವಾಲಯಗಳು

ಕೇವಲ ಧಾರ್ಮಿಕ ಶ್ರದ್ಧಾಕೇಂದ್ರಗಳಾಗಿರದೆ ಸಾಮಾಜಿಕವಾಗಿಯೂ ಕೆಲವು ಜವಾಬ್ದಾರಿಗಳನ್ನು ನಿರ್ವಸುತ್ತಿದ್ದವು. ದೇವಾಲಯಗಳು ಪ್ರಾಚೀನ ಕಾಲದ ಬಹುಮುಖ್ಯ ಶೈಕ್ಷಣಿಕ ಕೇಂದ್ರವಾಗಿದ್ದವು. ಮೋರಿಗೆರೆಯ ನೊಳಂಬೇಶ್ವರ ಮತ್ತು ಲೆಂಕೇಶ್ವರ ದೇವಾಲಯಗಳು ಪ್ರಮುಖ ಶಿಕ್ಷಣಕೇಂದ್ರವಾಗಿದ್ದವು. ಅಲ್ಲಿ ವಿದ್ಯೆ ಕಲಿಯಲು ಬಂದವರು ತಪೋಧನರಾಗಿರಬೇಕಾಗಿತ್ತು. ಬ್ರಹ್ಮಚರ್ಯೆ ಪಾಲನೆ ಕಡ್ಡಾಯವಾಗಿತ್ತು. ಮಠದ ವಿದ್ಯಾದಾನಕ್ಕಾಗಿಯೇ ದಾನ ನೀಡಿದ ವಿವರವನ್ನೂ ಇಲ್ಲಿ ಉಲ್ಲೇಖಿಸಲಾಗಿದೆ.

ಸಮಾಜದಲ್ಲಿ ಸೂಳೇಯರಿಗೆ ಅತ್ಯುನ್ನತ ಸ್ಥಾನವಿರಲಿಲ್ಲವಾದರೂ ಅವರನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಳ್ಳುತ್ತಿದ್ದರು. ದೇವಾಲಯದಲ್ಲಿ ಪ್ರತಿದಿನ ಪೂಜೆಯ ವೇಳೆಗೆ ನೃತ್ಯ, ಸಂಗೀತ ಸೇವೆ ಸಲ್ಲಿಸುತ್ತಿದ್ದವರನ್ನು ಸೂಳೆಯರೆಂದು ಕರೆಯಲಾಗುತ್ತಿತ್ತು.[10] ನೂರಾರು ಮಂದಿ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರಿಗೆ ಇಂತಿಷ್ಟು ಪ್ರಮಾಣದ ಭೂಮಿಯನ್ನು ದಾನ ನೀಡಲಾಗುತ್ತಿತ್ತು. ಸೂಳವಾಳಂಗೆ(ದೇವಸ್ಥಾನದಲ್ಲಿ ನೃತ್ಯ, ಸಂಗೀತ ಸೇವೆ ಸಲದಲಿಸುತ್ತದ್ದವರ ಮೇಲಿನ ಅಧಿಕಾರಿ) ವಂಸಿಗರ್ಗೆ(ಕೊಳಲು ನುಡಿಸುವವನು)ಪಜೆಕಾಱಂಗೆ(ಹಲಗೆ ಬಾರಿಸುವವನು), ಘಳಿಗೆಯು ಮಾಣಿಗಳಿಗೆ(ಘಟಿಕಾಲಯದಲ್ಲಿ ವೇಳೆಯನ್ನು ಸೂಚಿಸಲು ನೇಮಕವಾದವರು), ಕಾಹಿನಾಡಯ್ವರಿಗೆ(ಕಾವಲು ಸೈನಿಕರು), ದೇವಾಲಯಯ ಮತ್ತಿತರೆ ಜೀರ್ಣೋದ್ಧಾರದ ಕೆಲಸಗಳನ್ನು ಅರಸನ ಆಜ್ಞೆಯಂತೆ ನಿರ್ವಹಿಸುತ್ತಿದ್ದ ರೂವಾರಿ ಮುಚ್ಚೋಜ, ನರ್ತಕನಾದ ನಟ್ಟವಂಗೆ ಭೂದಾನ ನೀಡಿದ ವಿವರವಿದೆ. ಸಮಾಜದಲ್ಲಿ ಕಲೆಗೆ ಹೆಚ್ಚು ಆದ್ಯತೆ ನೀಡುತ್ತಿದ್ದುದು ಇದರಿಂದ ತಿಳಿದುಬರುತ್ತದೆ.

ವ್ಯವಸಾಯದ ಭೂಮಿಯನ್ನು ಕಿಸುಮತ್ತರ್, ಕರಿಯಮತ್ತರ್ ಎಂದು ವಿಂಗಡಿಸಲಾಗಿತ್ತು. ಕೆಂಪು ಭೂಮಿಯನ್ನು ಕಿಸುಮತ್ತರ್ ಎಂದು, ಕರಿಯ ಮತ್ತರ್ ಎಂದರೆ ಕಪ್ಪು ಭೂಮಿ ಅಥವಾ ಎರೆಯ ಹೊಲ ಎಂದೆಲ್ಲಾ ಕರೆಯಲಾಗಿದೆ. ಈ ಪ್ರದೇಶದಲ್ಲಿ ಹೂವಿನ ತೋಟಗಳು ಸಮೃದ್ಧವಾಗಿದ್ದವು. ಈ ಪ್ರದೇಶದಲ್ಲಿ ಕಲೆಗೆ ಹೆಚ್ಚು ಮಹತ್ವ ಕೊಡಲಾಗಿತ್ತು ಎನ್ನುವುದಕ್ಕೆ ಇಲ್ಲಿನ ಕಲಾವಿದರ ಉಲ್ಲೇಖಗಳೇ ಉತ್ತಮ ನಿದರ್ಶನಗಳು. ವಂಸಿಗರು, ಸೂಳೆಯರ್, ಪಜೆಕಾಱರು, ನಟ್ಟವರು, ರೂವಾರಿ ಮುಚ್ಚೋಜ ಇವರೆಲ್ಲ ಕಲೆಯು ಶ್ರೀಮಂತಗೊಳ್ಳಲು ಕಾರಣೀಕರ್ತರಾಗಿದ್ದಾರೆ. ಕೇವಲ ಸ್ತ್ರೀ ನೃತ್ಯಗಾರರಲ್ಲದೆ ಪುರುಷ ನೃತ್ಯಗಾರರೂ ದೇವಾಲಯಗಳಲ್ಲಿದ್ದರು ಎನ್ನುವುದು 'ನಟ್ಟವಂಗೆ' ಪದವು ಸ್ಪಷ್ಟಪಡಿಸುತ್ತದೆ. ಇಲ್ಲಿ ಉಲ್ಲೇಖಗೊಂಡ ಪ್ರತಿ ಕಲಾವಿದರಿಗೆ ಭೂದಾನ ನೀಡಲಾಗಿದ್ದು ಇದರಿಂದ ಪ್ರಾಚೀನರು ಕಲೆಗೆ ನೀಡುತ್ತಿದ್ದ ಪ್ರೋತ್ಸಾಹ ತಿಳಿದುಬರುತ್ತದೆ.

ಭಾಷಿಕ ಮಹತ್ವ:

ಭಾಷಿಕವಾಗಿಯೂ ಪ್ರಸ್ತುತ ಶಾಸನವು ಮಹತ್ವಪಡೆದಿದೆ. ಇಲ್ಲಿ ಬಳಕೆಯಾಗಿರುವ ಸ್ಥಳನಾಮಗಳು ಪ್ರಚಲಿತದಲ್ಲಿರುವ ಹೆಸರುಗಳ ಮೂಲಸ್ವರೂಪವನ್ನು ತಿಳಿಸುತ್ತವೆ. ಉದಾಹರಣೆಗೆ ಇಂದಿನ ಮೋರಿಗೆರೆ ಶಾಸನದಲ್ಲಿ 'ಮೋರಿಂಗೆಱೆ' ಎಂದೂ, ಹೂವಿನಹಡಗಲಿಯು ಶಾಸನದಲ್ಲಿ 'ಪೂವಿನಪಡಂಗಿಲೆ' ಎಂದು, ನೆಲ್ಲಕುದುರೆಯು ಶಾಸನದಲ್ಲಿ 'ನೆಲ್ಲಿಕುದಿರು' ಎಂದು ಉಲ್ಲೇಖಿಗೊಂಡಿರುವುದನ್ನು ಗುರುತಿಸಲಾಗಿದೆ. ಪ್ರಮುಖ ಭಾಷಿಕ ಅಂಶಗಳನ್ನು ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಈ ಶಾಸನದ ಕಾಲಕ್ಕೆ ರಳ,ಕುಳ,ಕ್ಷಳಗಳ ಬಳಕೆ ಇದ್ದುದು ತಿಳಿದು ಬರುತ್ತದೆ. ಉದಾ: ಪಱೆಕಾಱ
- ಅನುಸ್ವಾರ ಮತ್ತು ಅನುನಾಸಿಕ ಎರಡರ ಬಳಕೆ. 'ನ' 'ಣ' ಕಾರಗಳ ಸ್ಥಾನದಲ್ಲಿ ಅನುಸ್ವಾರ ಬಂದಿಲ್ಲದಿರುವುದನ್ನು ಗುರುತಿಸಲಾಗಿದೆ. ಉದಾ: ತೋಣ್ಪ, ಚಾವುಣ್ಡಯ್ಯಂಗೆ, ಇನ್ತೀ.
- 'ಹ' ಕಾರದ ಬದಲಾಗಿ 'ಪ' ಕಾರ ಬಳಕೆ ಉದಾ: ಪೆಸರ್, ಪಿಡಿದು, ಪತ್ತು.
- ಸಜಾತಿ ಒತ್ತಕ್ಷರ ಉದಾ: ದೇವಗ್ಗೆರ್, ಧರ್ಮ್ಮ, ಧನದ್ದಣ್ಡಿಸಿ

ಸಮಾರೋಪ :

"ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು" ಎಂಬ ಅಲ್ಲಮನ ನಿಲುವು ಇಂದಿನ ಅಗತ್ಯವೂ ಆಗಿದೆ. ಆ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನರ ಬದುಕಿನ ಪರಿಚಯವು ಇಂದಿನ ಮತ್ತು ಮುಂದಿನ ಜೀವನಕ್ಕೆ ಪ್ರೇರಣೆಯೋ ಅಥವಾ ಎಚ್ಚರಿಕೆಯನ್ನೋ ಸೂಚಿಸುವ ದಿಕ್ಸೂಚಿಯೂ ಆಗಬಲ್ಲದು. ಪ್ರಸ್ತುತ ಶಾಸನದ ಮೂಲಕ ನಮ್ಮ ಪ್ರಾಚೀನರ ಧರ್ಮ ಶ್ರದ್ಧೆಯೊಂದಿಗೆ ಅವರಲ್ಲಿದ್ದ ನೈತಿಕ ಎಚ್ಚರಿಕೆ ಹಾಗೂ ಹನ್ನೊಂದನೇ ಶತಮಾನದ ಕನ್ನಡ ಭಾಷೆಯ ಬರವಣಿಗೆಯ ಸ್ವರೂಪ, ಲಕ್ಷಣಗಳನ್ನು ತಿಳಿಯಲಾಯಿತು. ಮೋರಿಗೆರೆ, ಹೂವಿನ ಹಡಗಲಿ, ನೆಲ್ಲಕುದುರೆ ಈ ಊರುಗಳ ಶಾಸನೋಕ್ತ ಹೆಸರುಗಳನ್ನು ಮತ್ತು ಇಂದಿನ ಉದ್ದಿ ಬಸಪ್ಪನ ಗುಡಿ ಹಿಂದೆ ಯಾವ ಹೆಸರುಗಳಿಂದ ಸ್ಥಾಪಿಸಲ್ಪಟ್ಟಿತ್ತು ಎಂಬ ಅಧಿಕೃತವಾದ ಮಾಹಿತಿಯನ್ನು ಪಡೆಯಲಾಯಿತು. ಶೈವಪಂಥದ ಒಂದು ಶಾಖೆಯಾದ ಲಕುಳೀಶ ಪರಂಪರೆಯವರು ಹೇಗೆ ದೇವಾಲಯಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದು ತಿಳಿದುಕೊಳ್ಳಲಾಯಿತು.

ಸಾಮಾಜಿಕವಾಗಿ ಮತ್ತು ಸಾಹಿತ್ಯಕವಾಗಿ ಶಾಸನವು ಮಹತ್ವದ್ದಾಗಿದ್ದು

ವಿಜಯನಗರ ಜಿಲ್ಲೆಯ ಶಾಸನೋಕ್ತ ಮೊದಲ ಕವಿ ನಾಗಮಯ್ಯ ಎಂಬುದನ್ನು ಗುರುತಿಸಲಾಯಿತು. ಛಂದಸ್ಸಿನ ವಿವಿಧ ವೃತ್ತಗಳು ಹಾಗೂ ಕಂದದಲ್ಲಿ ಶಾಸನಪದ್ಯಗಳನ್ನು ರಚನೆಮಾಡಿರುವುದು ಕವಿಯ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ನೊಳಂಬರಲ್ಲಿಯೇ ಪ್ರಸಿದ್ದನಾದ ನನ್ನಿನೊಳಂಬನು ಹೇಗೆ ಜನಮನ್ನಣೆಯನ್ನು ಗಳಿಸಿದ ಅರಸನಾಗಿದ್ದನೆಂಬುದು ಹಾಗೂ ಚಾಳುಕ್ಯರು ಹೊಂದಿದ್ದ ರಾಜ್ಯವಿಸ್ತಾರ ಮತ್ತು ಅವರು ಕಲೆಗೆ ನೀಡಿದ್ದ ಪ್ರೋತ್ಸಾಹ ಇದೆಲ್ಲವನ್ನು ಒಂದೇ ಶಾಸನದಲ್ಲಿ ಗಮನಿಸಬಹುದಾದರೆ, ಇದೇರೀತಿ ವಿಜಯನಗರ ಜಿಲ್ಲೆಯ ಪ್ರತಿಯೊಂದು ಶಾಸನವನ್ನು ಸೂಕ್ಷ್ಮ ಮತ್ತು ಸಮಗ್ರ ಅಧ್ಯಯನಕ್ಕೆ ಒಳಪಡಿಸಿದರೆ ಜಿಲ್ಲೆಯ ಇತಿಹಾಸವು ಮತ್ತಷ್ಟು ಭವ್ಯತೆಯನ್ನು ಪಡೆದುಕೊಳ್ಳುತ್ತದೆ. ಇಂತಹ ಒಂದು ಅಧ್ಯಯನ ಸಾಧ್ಯತೆಯನ್ನು ಮನಗಂಡು ಈಗಾಗಲೇ ಪ್ರಕಟಗೊಂಡ ಶಾಸನಗಳನ್ನು ಮತ್ತೊಮ್ಮೆ ಮರು ಅಧ್ಯಯನಕ್ಕೆ ಒಳಪಡಿಸುವ ಮತ್ತು ಹೊಸದಾಗಿ ಸಿಕ್ಕ ಶಾಸನಗಳನ್ನು ಸೂಕ್ಷ್ಮವಾದ ವಿಶ್ಲೇಷಣೆಯ ಒರೆಗೆ ಹಚ್ಚುವ ಮೂಲಕ ಇಂದಿನ ಜೀವನಕ್ಕೆ ಗತಕಾಲದ ಮಹತ್ವದ ಸಂಗತಿಗಳು ಹೇಗೆ ಪ್ರಸ್ತುತವಾಗುತ್ತವೆ ಎನ್ನುವುದನ್ನು ಯುವಪೀಳಿಗೆಗೆ ತಿಳಿಸಿಕೊಡುವ ಕೆಲಸವಾಗಬೇಕಿದೆ.

ಆಕರಗಳು :

1. ಡಾ.ದೇವರಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1. ಶಾ.ಸಂ–24, ಪು.ಸಂ–284
2. ಡಾ.ದೇವರಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1. ಶಾ.ಸಂ–24, ಪು.ಸಂ–283
3. ಅದೇ, ಪು.ಸಂ–283
4. ಅದೇ, ಪು.ಸಂ–284
5. ಡಾ.ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು.ಸಂ–141
6. ಡಾ.ರೇಣುಕಾ ಪ್ರಸಾದ್ ಪಿ.ಆರ್., ಶೈವಪಂಥ, ಪು.ಸಂ.–151
7. ಅದೇ,
8. ಕೃಷ್ಣರಾಯ ಕಪಟರಾಳ, ಕರ್ನಾಟಕ ಲಾಕುಳ ಶೈವರ ಇತಿಹಾಸ, ಪು.ಸಂ–40
9. ಡಾ.ದೇವರಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ– 1. ಶಾ.ಸಂ–24, ಪು.ಸಂ–284
10. ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ, ಪು.ಸಂ–159

ಪರಾಮರ್ಶನ ಗ್ರಂಥಗಳು :

1. ಡಾ.ದೇವರಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 1 (ಬಳ್ಳಾರಿ ಜಿಲ್ಲೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ 1998
2. ಡಾ.ದೇವರಕೊಂಡಾರೆಡ್ಡಿ, ಕರ್ನಾಟಕ ಶಾಸನಗಳಲ್ಲಿ ಶಾಪಾಶಯ,– ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. 2008
3. ಡಾ.ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, 2015
4. ಡಾ.ರೇಣುಕಾ ಪ್ರಸಾದ್ ಪಿ.ಆರ್., ಶೈವಪಂಥ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 2021
5. ಡಾ.ಹಿರೇಮಠ ಎಸ್.ಎಮ್., ಶಾಸನ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ, ಗದಗ, 2006
6. ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2000
7. ಕೃಷ್ಣರಾಯ ಕಪಟರಾಳ, ಕರ್ನಾಟಕ ಲಾಕುಳ ಶೈವರ ಇತಿಹಾಸ, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ, 1955

ಶ್ರೀ ರಘುಪ್ರಸಾದ ಟಿ

ಕನ್ನಡ ಸಹಾಯಕ ಪ್ರಾಧ್ಯಾಪಕರು

ಶ್ರೀ ಶಂ.ಆ.ಸಿಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ

ವಿಜಯನಗರ ಜಿಲ್ಲೆ

ತಲ್ಲಣಿಸುವ ಮನಸ್ಸಿಗೆ ಕನಕದಾಸರ ಭಕ್ತಿ–ಸಾಂತ್ವನ

¤ ಡಾ. ರಂಗಸ್ವಾಮಿ ಹೆಚ್.

ದಾಸಪಂಥದಲ್ಲೇ ಸುಪ್ರಸಿದ್ಧ ಹರಿದಾಸರಾಗಿದ್ದ ಕನಕದಾಸರು ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ (ಕ್ರಿ.ಶ.1408–1507) ಜೀವಿಸಿದ್ದರು. 'ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು, ಎಂದು ಪುರಂದರದಾಸರು ಮತ್ತು ಕನಕದಾಸರು' ಪ್ರಸಿದ್ಧರಾದವರು. ಇವರಿಬ್ಬರೂ ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರು, ಅವರಿಂದಲೇ ದೀಕ್ಷೆಯನ್ನು ಪಡೆದವರು. ದಾಸಕೂಟದಲ್ಲಿ ಪುರಂದರದಾಸರಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ವ್ಯಕ್ತಿತ್ವ ಅವರದು. ಇವರಿಬ್ಬರ ಸಾಮಾಜಿಕ ಹಿನ್ನೆಲೆ ಬೇರೆ–ಬೇರೆ ಆದರೂ ಇವರು ನಡೆದ ದಾರಿ, ಏರಿದ ಎತ್ತರವನ್ನು ನೋಡಿದರೆ ಅಚ್ಚರಿ ಮೂಡುತ್ತದೆ. ಕನಕದಾಸರ ಮೊದಲ ಹೆಸರು ತಿಮ್ಮಪ್ಪ. ವಿಜಯನಗರದ ಪಾಳೇಗಾರರಾಗಿದ್ದ ಇವರು ವೈರಾಗ್ಯದಿಂದ ಅಧಿಕಾರ ತ್ಯಜಿಸಿ, ಬಡತನದ ವ್ರತವನ್ನು ಕೈಗೊಂಡು ಸಂತರಾದರು ಎಂಬುದು ಪ್ರತೀತಿ. ಇವರ ಜನ್ಮಸ್ಥಳ ಧಾರವಾಡ ಜಿಲ್ಲೆಯ 'ಬಾಡ'. ಆದರೆ, ನೆಲೆಸಿದ್ದು ಕಾಗಿನೆಲೆ. ಇವರ ಆರಾಧ್ಯ ದೈವ 'ಕಾಗಿನೆಲೆಯ ಆದಿಕೇಶವ'.

ಸಾಮಾಜಿಕವಾಗಿ ಕೆಳವರ್ಗದಿಂದ (ಕುರುಬ ಜಾತಿ) ಬಂದ ಕನಕದಾಸರಿಗೆ ಮೇಲ್‌ಜಾತಿ ಹರಿದಾಸರಿಂದ ಕಿರುಕುಳ ಎದುರಾಯಿತು. ಅದಕ್ಕೆ ಅವರು ತಮ್ಮ ಕೃತಿಗಳಲ್ಲಿ ನೇರವಾಗಿ ಉತ್ತರಿಸಿದ್ದಾರೆ. ಇವರು ತಮ್ಮ ಗುರುಗಳಾದ ವ್ಯಾಸರಾಯರ ವಿಶೇಷ ಪ್ರೀತಿ, ಆದರ–ಮನ್ನಣೆಗೆ ಪಾತ್ರರಾಗಿದ್ದಾರೆ. ಕೀರ್ತನಾಕಾರರಾಗಿ 'ಕಾಗಿನೆಲೆ ಆದಿಕೇಶವ' ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲದೆ, ಉಗಾಭೋಗಗಳು, ಮುಂಡಿಗೆಗಳು ಹಾಗೂ ಅಷ್ಟಕಗಳನ್ನೂ ರಚಿಸಿದ್ದಾರೆ. ಕವಿಯಾಗಿ 'ಮೋಹನ ತರಂಗಿಣಿ' ಎಂಬ ಸಾಂಗತ್ಯ ಕೃತಿಯನ್ನೂ, 'ನಳಚರಿತ್ರೆ', 'ಹರಿಭಕ್ತಿಸಾರ' ಮತ್ತು 'ರಾಮಧ್ಯಾನ ಚರಿತೆ' ಎಂಬ ಷಟ್ಪದಿ ಕಾವ್ಯಗಳನ್ನೂ ರಚಿಸಿದ್ದಾರೆ.

ಕನಕದಾಸರ ಕೀರ್ತನೆಗಳಲ್ಲಿ ಗಾಢವಾದ ಭಕ್ತಿಯ ಪರವಶತೆ, ಶ್ರೇಣೀಕರಣದ ಸಾಮಾಜಿಕ ವ್ಯವಸ್ಥೆಯ ದರ್ಶನ ಮತ್ತು ಕಟುವಿಮರ್ಶೆ, ಸಮಾಜದಲ್ಲಿನ ಕಲ್ಮಷಗಳನ್ನು, ಒರೆ–ಕೋರೆಗಳನ್ನು ತಿದ್ದುವ ಉತ್ಕಟತೆ, ಆಳವಾದ ಆಧ್ಯಾತ್ಮಿಕ ಅನುಭವದ ಜ್ಞಾನ–ವಿವೇಕ–ವೈರಾಗ್ಯ, ಅನನ್ಯ ಕೃಷ್ಣ ಭಕ್ತಿ, ಜಾತೀಯತೆಯ ಬಗೆಗಿನ ವೈಚಾರಿಕ ನಿಲುವುಗಳು, ಕಾವ್ಯಗುಣಗಳಿಂದ ಕೂಡಿರುವ ರಸಾಭಿವ್ಯಕ್ತಿ ಇವೆ. ಜಟಿಲ ಲೋಕಾನುಭವದಿಂದ ಕೂಡಿದ ಲೋಕಜ್ಞಾನದ ಸಂಕೀರ್ಣ ವಿಷಯ ವಸ್ತುಗಳನ್ನು ಇವು ಒಳಗೊಂಡಿದ್ದು, ತೀವ್ರವಾದ ಭಾವಪರವಶತೆಯಿಂದ ಕೂಡಿವೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಎಂಬ ಕೀರ್ತನೆಯಲ್ಲಿ ಅಭಿವ್ಯಕ್ತವಾಗಿರುವ 'ಭಕ್ತಿ'ಯ ಸಂಕೀರ್ಣತೆಯ ನೆಲೆಯನ್ನು ವಿಶ್ಲೇಷಣೆಗೆ ಒಳಗುಮಾಡುವುದು ಪ್ರಸ್ತುತ ಲೇಖನದ ಆಶಯವಾಗಿದೆ.

'ಭಕ್ತಿ' ಎಂದರೇನು ಎಂಬ ಪ್ರಶ್ನೆಗೆ ಉತ್ತರವೆಂಬಂತೆ ಪ್ರಮುಖ ಧರ್ಮ ಗ್ರಂಥಗಳು, ದಾರ್ಶನಿಕರು, ಜ್ಞಾನಿಗಳು ಮತ್ತು ಚಿಂತಕರು ಪ್ರತಿಪಾದಿಸಿರುವಂತಹ ಹತ್ತುಹಲವು ವ್ಯಾಖ್ಯಾನಗಳನ್ನು ನಾವಿಂದು ಪ್ರಸ್ತುತ ಸಂದರ್ಭದಲ್ಲಿ ಗಮನಿಸಬಹುದು. " 'ಪ್ರಾರ್ಥನೆ', 'ಪೂಜೆ', 'ಭಜನೆ' ಮೊದಲಾದವು ಭಕ್ತಿಯ ಅಭಿವ್ಯಕ್ತಿಯ ಮಾರ್ಗಗಳು. ಭಕ್ತಿ ಎಂಬ ಮಾತಿಗೆ ಇನ್ನು ಬೇರೆ ಬೇರೆ ಅರ್ಥಗಳೂ ಇವೆ. 'ಸೇವೆ', 'ಆರಾಧನೆ', 'ಪ್ರೀತಿ', 'ಅನುರಾಗ', 'ಅರ್ಪಣೆ', 'ಸ್ನೇಹ', 'ವಿಶ್ವಾಸ', 'ನಂಬಿಕೆ', 'ಶ್ರದ್ಧೆ', 'ನಿಷ್ಠೆ' ಮುಂತಾದ ಪದಗಳು ಭಕ್ತಿಯನ್ನೇ ಅಭಿವ್ಯಕ್ತಿಸುತ್ತವೆ. ಆದರೂ, ಭಕ್ತಿಯ ಮುಖ್ಯವಾದ ಅರ್ಥವಿರುವುದು ಒಬ್ಬ ವ್ಯಕ್ತಿ ದೈವದೊಡನೆ ನಡೆಸುವ ವ್ಯವಹಾರದಲ್ಲಿ, ಅಭಿವ್ಯಕ್ತಿಸುವ ಭಾವನೆಯಲ್ಲಿ, ಹೊಂದುವ ಸಂಪರ್ಕದಲ್ಲಿ, ಸಂಯೋಗದಲ್ಲಿ, ನಡೆಸುವ ಸಂವಹನದಲ್ಲಿ".[1] ಅಲ್ಲದೆ, ಭಗವದ್ಗೀತೆಯಲ್ಲಿ ಬರುವ 'ಭಕ್ತಿ ಯೋಗ'ದಲ್ಲಿ ಶ್ರೀಕೃಷ್ಣ ಹೇಳುತ್ತಾನೆ– "ಯಾರು ನನ್ನಲ್ಲಿಯೇ ಮನಸ್ಸಿಟ್ಟು ಅಚಲವಾದ ನಂಬಿಕೆ ಶ್ರದ್ಧೆ, ಅನನ್ಯ ಭಕ್ತಿಯಿಂದ ನನ್ನನ್ನು ಆರಾಧಿಸುವರೋ ಅವರು ನನಗೆ ಅತ್ಯಂತ ಪ್ರಿಯರಾದವರು ಎಂದು ಅರ್ಜುನನಿಗೆ ಹೇಳುತ್ತಾನೆ. ಭಗವಂತನಿಗೆ ಭಕ್ತಿಯೇ ಪರಮ ಪ್ರಿಯವಾದದ್ದು, ಭಗವಂತನ ದರ್ಶನಕ್ಕೆ ಭಕ್ತಿಯೇ ಸುಲಭ ಸರಳವಾದ ಮಾರ್ಗ"[2] ಎಂದು ತಿಳಿಯಬಹುದಾಗಿದೆ. ಕನಕದಾಸರೂ ಇದೇ ಭಕ್ತಿಮಾರ್ಗದಲ್ಲೇ ನಡೆದವರು.

ಕನಕದಾಸರ ಭಕ್ತಿ ಪ್ರತಿಪಾದನೆಯನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಅರ್ಥಪೂರ್ಣವಾಗಿ ಹೀಗೆ ಗುರುತಿಸಿದ್ದಾರೆ– "ಕನಕದಾಸನ ಕೀರ್ತನೆಗಳಲ್ಲಿ ಎರಡು ಮಾದರಿಗಳಿವೆ. ಒಂದು ಅನನ್ಯ ಶರಣಾಗತಿಯ ಭಕ್ತಿಯನ್ನು ಪ್ರಕಟಿಸುವ ಕೀರ್ತನೆಗಳು. ಮತ್ತೊಂದು ಶ್ರೇಣೀಕರಣ ಸಾಮಾಜಿಕ ವ್ಯವಸ್ಥೆಯ ಅಸಮಾನತೆಯನ್ನು ವಿಡಂಬಿಸುವ ಕೀರ್ತನೆಗಳು. ಮೊದಲನೆಯ ಮಾದರಿಯ ಕೀರ್ತನೆಗಳನ್ನು ಸಾಮಾನ್ಯವಾಗಿ ಎಲ್ಲ

ಕೀರ್ತನಕಾರರಲ್ಲಿಯೂ ಕಾಣುತ್ತೇವೆ. ಆದರೆ, ಎರಡನೆಯ ಮಾದರಿಯ ಕೀರ್ತನೆಗಳು ಕನಕದಾಸನಿಗೆ ವಿಶಿಷ್ಟವಾದಂಥವು. ಏಕೆಂದರೆ ಹನ್ನೆರಡನೆಯ ಶತಮಾನದಲ್ಲಿ ಭಕ್ತಿ ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡಂತೆ, ಕೀರ್ತನಸಾಹಿತ್ಯ ಸಂದರ್ಭದಲ್ಲಿ ಭಕ್ತಿಗೆ ಹಾಗೆ ಸಾಮಾಜಿಕ ನಂಟು ಇರಲಿಲ್ಲ. ಈ ಹಿನ್ನೆಲೆಯಲ್ಲಿ ಕನಕ ನಮಗೆ ಒಂಟಿಯಾಗಿ ಕಾಣುತ್ತಾನೆ. ತನ್ನ ಕಾಲದ ಚಾರಿತ್ರಿಕ ಸನ್ನಿವೇಶದಲ್ಲಿ ಕನಕದಾಸನ ಕೀರ್ತನೆಗಳು ಭಕ್ತಿಯ ಅನನ್ಯ ಶರಣಾಗತಿಯ ಭಾವವನ್ನು ಒಂದು ಕಡೆ ಪ್ರಕಟಿಸುತ್ತಲೇ ಬಂಡಾಯದ ದನಿಯನ್ನು ತನ್ನ ಮಿತಿಯಲ್ಲಿಯೇ ಪ್ರಕಟಿಸುತ್ತವೆ. ಹಾಗೆಯೇ ಭಕ್ತಿಯ ಪ್ರತಿಪಾದನೆ ಮಾಡುತ್ತಲೇ ಸಂದೇಹವಾದಿಯಾಗಿಯೂ ಉಳಿಯುವುದು ಕನಕದಾಸನ ವಿಶಿಷ್ಟತೆಯಾಗಿದೆ".[3]

ಈ ಹಿನ್ನೆಲೆಯಲ್ಲಿ, 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಕೀರ್ತನೆಯಲ್ಲಿ ಕನಕದಾಸರು ಯಾವ ವಿಧವಾದ ಭಕ್ತಿಯನ್ನು ಅಭಿವ್ಯಕ್ತಿಸುತ್ತಿದ್ದಾರೆ? ಭಕ್ತಿಯು ಮೂಲಭೂತವಾಗಿ ಒಂದೇ ಆದರೂ ಬೇರೆ–ಬೇರೆ ನಿಮಿತ್ತಗಳಿಂದ ಅದು ಹನ್ನೊಂದು ವಿಧದಲ್ಲಿ ಪ್ರಕಟಗೊಳ್ಳುವುದನ್ನು ನಾರದ ಮುನಿಗಳದ್ದು ಎಂದು ಹೇಳಲಾಗುವ 'ನಾರದ ಭಕ್ತಿಸೂತ್ರ' ಗ್ರಂಥದಲ್ಲಿ ತಿಳಿಸಲಾಗಿದೆ. ಹನ್ನೊಂದು ವಿಧಗಳಲ್ಲಿ "'ದಾಸ್ಯಾಸಕ್ತಿ' ಮತ್ತು 'ಆತ್ಮನಿವೇದನಾಸಕ್ತಿ' ಎಂಬವೂ ಸೇರಿವೆ. 'ದಾಸ್ಯಾಸಕ್ತಿ' ಎಂದರೆ– 'ಈಶ್ವರನ ಅನಂತ ಸದ್ಗುಣಗಳನ್ನು ಅರಿತು ಅವನ ದಾಸನು ತಾನೆಂಬಭಾವನೆಯನ್ನು ಹೊಂದುವುದು'. 'ಆತ್ಮನಿವೇದನಾಸಕ್ತಿ' ಎಂದರೆ– 'ಪರಮಾತ್ಮನಿಗೆ ತನ್ನನ್ನೇ ಅರ್ಪಿಸುವುದು' ".[4]

ಕನಕದಾಸರ ಈ ಕೀರ್ತನೆಯಲ್ಲಿ 'ದಾಸ್ಯಾಸಕ್ತಿ' ಮತ್ತು 'ಆತ್ಮನಿವೇದನಾಸಕ್ತಿ' ಭಕ್ತಿಯ ವಿಧಗಳು ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಿಗೊಂಡಿರುವುದನ್ನು ಗುರುತಿಸಬಹುದಾಗಿದೆ. ಭಗವಂತನಿಗೆ ಶರಣಾಗುವುದನ್ನು 'ಶರಣಾಗತಿಯ ಭಕ್ತಿ' ಅಥವಾ 'ಆತ್ಮನಿವೇದನಾಸಕ್ತಿ' ಎಂದು ಕರೆಯಲಾಗುತ್ತದೆ. ಇದು ಭಕ್ತಿಯ ಅತ್ಯುನ್ನತ ರೂಪವಾಗಿದೆ. ಇದು ಸ್ವಯಂ ಸಂಪೂರ್ಣವಾಗಿ ಭಗವಂತನಿಗೆ ಶರಣಾಗುವುದು. ಅಂದರೆ ಭಗವಂತನೇ ಎಲ್ಲಾ, ಭಗವಂತನನ್ನು ಬಿಟ್ಟು ಬೇರೇನೂ ಇಲ್ಲ ಎಂದು ದೃಢವಾಗಿ ಆತ್ಮವಿಶ್ವಾಸದಿಂದ ಭಗವಂತನಲ್ಲಿ ನಂಬಿಕೆ ಇಡುವುದಾಗಿದೆ. ಹಾಗೆಯೇ, ಭಗವಂತನ ಸೇವಕನಾಗಿ, ದಾಸನಾಗಿ ಅವನ ಸೇವೆಯಲ್ಲಿ ತೊಡಗಿಕೊಳ್ಳುವುದಕ್ಕೆ ದಾಸ್ಯಭಕ್ತಿ ಎಂದು ಹೇಳಬಹುದು.

ಲೋಕದ ಜಂಜಡಗಳಿಗೆ ತಲ್ಲಣಗೊಳ್ಳದೆ ಧೈರ್ಯದಿಂದ ಬಾಳಬೇಕು. ದೈವಶಕ್ತಿಯು ಸಕಲಜೀವಿಗಳನ್ನು ಹೆತ್ತ ತಾಯಿಯಂತೆ ಸಲಹುವುದು ಎಂಬುದನ್ನು ನಿದರ್ಶನಗಳ ಮೂಲಕ ಕನಕದಾಸರು ಈ ಕೀರ್ತನೆಯಲ್ಲಿ ತಿಳಿಸುತ್ತಾರೆ. ಮನುಷ್ಯ

ಹುಟ್ಟಿ ಬಂದ ಬಳಿಕ ಈ ಲೋಕದ ಕಷ್ಟ–ಕಾರ್ಪಣ್ಯ, ಸಂಕಷ್ಟಗಳಿಗೆ ಹೆದರಬಾರದು. ತಾಯಿ ತನ್ನ ಮಕ್ಕಳ ಪಾಲನೆ–ಪೋಷಣೆಯನ್ನು ಚಾಚೂತಪ್ಪದೆ ಮಾಡುವಂತೆ, ಸಲಹುವಂತೆ ಭಗವಂತನು ಸಕಲ ಜೀವಸಂಕುಲವನ್ನು ಸಲಹುತ್ತಾನೆ. ಮನುಷ್ಯನ ಮನಸ್ಸು ಸಹಜವಾಗಿಯೇ ಸುಖ–ಸಂತೋಷಗಳು ಬಂದಾಗ ಹಿಗ್ಗುತ್ತದೆ, ಕಷ್ಟ–ಕಾರ್ಪಣ್ಯಗಳು ಎದುರಾದರೆ ಕುಗ್ಗಿ ಹೋಗುತ್ತದೆ. ಚಂಚಲಗೊಳ್ಳುವ ಮನಸ್ಸು ದಾರಿಕಾಣದೆ ತಲ್ಲಣಗೊಂಡು ಪರಿತಪಿಸುತ್ತದೆ. ಹೀಗೆ ತಲ್ಲಣಗೊಂಡ ಮನಸ್ಸುಗಳಿಗೆ ನೀಡಿದ ದೃಢಭಕ್ತಿಯ ಸಾಂತ್ವನ ಈ ಕೀರ್ತನೆಯಲ್ಲಿ ಸಶಕ್ತವಾಗಿ ಚಿತ್ರಣಗೊಂಡಿದೆ.

“ತಲ್ಲಣಿಸದಿರು ಕಂಡ್ಯ ತಾಳು ಮನವೆ ॥ ಪ ॥
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ ಅ.ಪ ॥”

ಈ ಕೀರ್ತನೆಯ ತಲೆಬರಹ ‘ತಲ್ಲಣಿಸದಿರು ಕಂಡ್ಯ ತಾಳು ಮನವೇ’. ಇಲ್ಲಿ ‘ತಲ್ಲಣಿಸು’ ಎಂಬ ಪದಕ್ಕೆ ‘ಚಡಪಡಿಸು’, ‘ತಳಮಳಿಸು’, ‘ದುಃಖಿಸು’, ‘ವ್ಯಾಕುಲನಾಗು’ ‘ಭಯಗೊಳ್ಳು’, ‘ಚಿಂತೆಗೀಡಾಗು’, ‘ಆವೇಗಗೊಳ್ಳು’, ‘ನಡುಗು’ ಮೊದಲಾದ ಹತ್ತುಹಲವು ಅರ್ಥಗಳಿವೆ. ಆದರೆ ಕನಕದಾಸರು ಇಲ್ಲಿ ‘ತಲ್ಲಣಿಸದಿರು’ ಎಂದು ಯಾರನ್ನು ಉದ್ದೇಶಿಸಿ ಹೇಳುತ್ತಿದ್ದಾರೆ ಎಂದು ಪ್ರಶ್ನೆಯನ್ನು ಕೇಳಿಕೊಂಡರೆ, ಬಹುಶಃ ಮಾನವರನ್ನು ಬಿಟ್ಟು ಬೇರೆ ಯಾರನ್ನೂ ಉದ್ದೇಶಿಸಿ ಹೇಳಿದಂತಿಲ್ಲ. ಮಾನವರ ಮನಸ್ಸು ದಿನಂಪ್ರತಿ ಒಂದಿಲ್ಲೊಂದು ಬಗೆಯ ತಲ್ಲಣಗಳಿಗೆ, ಒತ್ತಡಗಳಿಗೆ, ಘರ್ಷಣೆಗಳಿಗೆ ಒಳಗಾಗಿ ತೊಯ್ದಾಡುತ್ತಿರುತ್ತದೆ. ತಲ್ಲಣಕ್ಕೆ ಸಿಲುಕಿರುವ ಮನಸ್ಸಿಗೆ ತಾಳುವಿಕೆಯ ಸಾಂತ್ವನವನ್ನು ಹೇಳುತ್ತಿರುವಂತಿದೆ. ಅದಕ್ಕೆ ಕನಕದಾಸರು ಹೇಳಿದ್ದು ‘ತಲ್ಲಣಿಸದಿರು ಕಂಡ್ಯ ತಾಳು ಮನವೇ, ಪುಟ್ಟಿಸಿದ ಸ್ವಾಮಿ ತಾನು ಹೊಣೆಗಾರನಾಗಿರಲು ಎಲ್ಲರನು ಸಲಹುವನು ಸಂಶಯವಿಲ್ಲ’. ಅಂತಹ ತಲ್ಲಣಗಳಿಗೆ ಮರುಗುವುದನ್ನು ಬಿಟ್ಟು, ಸಂಶಯವನ್ನು ತೊರೆದು, ಭಗವಂತನಲ್ಲಿ ದೃಢವಾಗಿ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟು ನಾವು ಮಾಡುವಂತಹ ಕೆಲಸ–ಕಾರ್ಯಗಳನ್ನು ನಿರಂತರವಾಗಿ ಶ್ರದ್ಧಾಭಕ್ತಿಯಿಂದ ನಿಶ್ಚಲವಾಗಿ ಮಾಡಿದರೆ ಅದರ ಪ್ರತಿಫಲವನ್ನು ಭಗವಂತ ನಿಶ್ಚಯಿಸಿ, ನಮ್ಮ ಅಗತ್ಯಗಳನ್ನು ಪೂರೈಸಿ ನಮ್ಮನ್ನು ಸಲಹುತ್ತಾನೆ ಎಂಬ ವಿಶಾಲವಾದ ಅರ್ಥದ ಹಿನ್ನೆಲೆಯಲ್ಲೇ ಈ ಕೀರ್ತನೆಯನ್ನು ಕನಕದಾಸರು ಹಾಡಿದ್ದಾರೆ ಎಂದನ್ನಿಸುತ್ತದೆ.

ಬಹುತೇಕ ಸಂತರು, ದಾರ್ಶನಿಕರಂತೆ ಕನಕದಾಸರೂ ಲೌಕಿಕ ಜಗತ್ತಿನ ಸುಖ–ಭೋಗಗಳು ಅಶಾಶ್ವತ ಮತ್ತು ಕ್ಷಣಿಕ ಎಂದು ಹೇಳುತ್ತಾರೆ. ಮನುಷ್ಯ ಈ ಜಗತ್ತಿನಲ್ಲಿ ನೆಮ್ಮದಿಯಿಂದ ಬದುಕಬೇಕಾದರೆ ದೂರ ದೃಷ್ಟಿಯಿಲ್ಲದ ಕುರುಡು ವಿಶ್ವಾಸ ಅಗತ್ಯವಿಲ್ಲದೆ ಇದ್ದರೂ, ದೃಢವಾದ ಆತ್ಮವಿಶ್ವಾಸ ಅನಿವಾರ್ಯವಾಗಿ ಇರುತ್ತದೆ.

ಇಂತಹ ಆತ್ಮವಿಶ್ವಾಸ ಮಾನವನಿಗೆ ಎಲ್ಲಿಂದ ಬರುತ್ತದೆ? ಹೇಗೆ ಬರುತ್ತದೆ? ದೇವರ ಮೇಲಿನ ದೃಢ ನಂಬಿಕೆ–ವಿಶ್ವಾಸಗಳಿಂದ ಬರುತ್ತದೆ ಎಂಬುದನ್ನು ಕನಕದಾಸರು ತಿಳಿಸಿಕೊಟ್ಟಿದ್ದಾರೆ. ಅನುದಿನದ ಬದುಕಿನಲ್ಲಿ ತವಕ–ತಲ್ಲಣಗಳಿಗೆ ಬಗ್ಗಿ–ಕುಗ್ಗಿ, ಮುರುಟಿ–ಸುರುಟಿ, ಸೊರಗಿ ಹೋಗುವ ಮಾನವನನ್ನು ಕಾಯುವ ಮರೆದೈವ ಇರುವಾಗ ಅಚಲ ನಂಬಿಕೆಯಿಂದ ಮಾನವರು ನಿರಂತರ ಕಾರ್ಯ ಪ್ರವೃತ್ತರಾಗಬೇಕು ಎಂಬ 'ಜೀವನದ ತತ್ತ್ವಸಾರ'ವನ್ನು ಈ ಸಾಲುಗಳು ಪ್ರಸ್ತುತಪಡಿಸುತ್ತವೆ.

"ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಟಾಗಿ ಸಲಹುವನು ಇದಕೆ ಸಂಶಯವಿಲ್ಲ ॥ 1 ॥"

ಈ ಮೇಲಿನ ಸಾಲುಗಳು, ಬೆಟ್ಟದ ತುದಿಯಲ್ಲಿ ಹುಟ್ಟಿರುವ ವೃಕ್ಷಗಳಿಗೆ ಕಟ್ಟೆಯನ್ನು ಕಟ್ಟಿ ನೀರನ್ನು ಹಾಕಿ ಬೆಳೆಸಿದವರು ಯಾರು ಎಂಬ ಪ್ರಶ್ನೆಯನ್ನು ಮುಂದಿಡುತ್ತವೆ. ಬೆಟ್ಟದ ತುದಿಯಲ್ಲಿ ಗಿಡ–ಮರಗಳಿಗೆ ಅಗತ್ಯವಾದ ಮಣ್ಣು ಬಹುತೇಕ ಇರುವುದಿಲ್ಲ. ಅಲೆಲ್ಲಾ ಬೃಹತ್ ಆಕಾರದ ಕಲ್ಲು ಬಂಡೆಗಳಿಂದಲೇ ಆವೃತ್ತವಾಗಿರುತ್ತದೆ. ಆದರೆ ಅಂತಹ ಕಲ್ಲು ಬಂಡೆಗಳ ಮೇಲೆ, ಅದರ ಮಧ್ಯದಿಂದಲೇ ಬೀಜ ಚಿಗುರೊಡೆದು ಸಸಿ ಬೆಳೆದು ಹೆಮ್ಮರವಾಗಿ ಬೆಳೆದಿರುವುದಿಲ್ಲವೇ, ಇರುವಂತಹ ಅಲ್ಪ–ಸ್ವಲ್ಪ ಮಣ್ಣನ್ನು ಮತ್ತು ಮಣ್ಣಿನ ಸಾರವನ್ನು ಹೀರಿಕೊಂಡು ತನ್ನ ಆಶ್ರಯವನ್ನಾಗಿ ಮಾಡಿಕೊಂಡು ಉದ್ದುದ್ದ ಬೇರುಗಳನ್ನು ಬಿಟ್ಟುಕೊಂಡು ಮರ–ಗಿಡಗಳೆಲ್ಲಾ ಬೆಳೆಯುತ್ತವೆ. ಅವಕ್ಕೆ ಕಾಲಕಾಲಕ್ಕೆ ಸರಿಯಾಗಿ ಯಾರೂ ನೀರು–ಗೊಬ್ಬರಗಳನ್ನು ಹಾಕಿ ಬೆಳೆಸಿದವರಿಲ್ಲ. ಆದರೂ ಕೂಡ ಅವು ಬೆಳೆದು ನಿಂತಿರುವುದನ್ನು ನಾವು ಕಣ್ಣಾರೆ ನೋಡಬಹುದು. ಅವುಗಳನ್ನು ಸೃಷ್ಟಿ ಮಾಡಿದಂತಹ ಭಗವಂತನೇ ಅವುಗಳನ್ನು ಸಲಹಿ ಪೋಷಿಸುವ ಹೊಣೆಗಾರಿಕೆಯನ್ನು ಹೊತ್ತಿರುತ್ತಾನೆ. ಅದೇ ರೀತಿ ಮನುಷ್ಯರನ್ನು ಪೊರೆಯುವ ಹೊಣೆಯೂ ಭಗವಂತನದ್ದೇ. ಇಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ, ಕನಕದಾಸರು ಮಾನವರನ್ನು ಉದ್ದೇಶಿಸಿ ಹೇಳುವುದಕ್ಕೆ ಮರ–ಗಿಡಗಳನ್ನು ನಿದರ್ಶನವನ್ನಾಗಿ ಬಳಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಹಾಗಾಗಿ, ಮಾನವರು ಭಗವಂತನನ್ನು ಸಂಶಯ ಬುದ್ಧಿಯಿಂದ ನೋಡದೆ, ಅವನಲ್ಲಿ ದೃಢವಾದ ಆತ್ಮವಿಶ್ವಾಸವನ್ನು ಇರಿಸಿಕೊಂಡರೆ ಅವರನ್ನು ಭಗವಂತನು ಕೈ–ಬಿಡುವುದಿಲ್ಲ, ಕೈ–ಹಿಡಿರು ಸಲಹುತ್ತಾನೆ. ಇಲ್ಲಿ ದೃಢವಾದ ನಂಬಿಕೆ, ವಿಶ್ವಾಸ, ಶ್ರದ್ಧಾ–ಭಕ್ತಿಗಳಿಗೆ ಇರುವ ಸ್ಥಾನವನ್ನು ಅರಿಯಬಹುದಾಗಿದೆ.

"ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ ॥ 2 ॥"

ಈ ಮೇಲಿನ ಸಾಲುಗಳಲ್ಲಿ ಅಡವಿಯೊಳಗಾಡುವ ಮೃಗ–ಪಕ್ಷಿಗಳಿಗೆಲ್ಲ ಅಡಿಗಡಿಗೆ ಆಹಾರವಿತ್ತವರು ಯಾರು?, ಅವುಗಳನ್ನ ರಕ್ಷಣೆ ಮಾಡುತ್ತಿರುವವರು ಯಾರು?, ಅವುಗಳು ಜೀವಿಸುತ್ತಿಲ್ಲವೇ?, ಅವುಗಳ ಸಂತತಿ ಶತಶತಮಾನಗಳಿಂದ ಮುಂದುವರಿಯುತ್ತಿಲ್ಲವೆ?. ಅಡವಿಯಲ್ಲಿ ಇರುವಂತಹ ಸಹಸ್ರಾರು ಬಗೆಯ ಮೃಗ–ಪ್ರಾಣಿ–ಪಕ್ಷಿ–ಕ್ರಿಮಿ–ಕೀಟ–ಸಸ್ಯ ಮೊದಲಾದ ಜೀವ ಸಂಕುಲಗಳಿಗೆ ಕಾಲ–ಕಾಲಕ್ಕೆ ಸರಿಯಾಗಿ ಆಹಾರವನ್ನು ನೀಡಿ ಸಲಹುತ್ತಿರುವವರಾರು? – ಈ ಮೊದಲಾದ ಪ್ರಶ್ನೆಗಳನ್ನು ಮೇಲಿನ ಸಾಲುಗಳು ನಮ್ಮಲ್ಲಿ ಪ್ರಚೋದಿಸುತ್ತವೆ. ತನ್ನ ಮಗುವನ್ನು ಪ್ರೀತಿ–ವಾತ್ಸಲ್ಯ–ಅಕ್ಕರೆ–ಮಮತೆಯಿಂದ ಸಾಕಿಸಲಹುವುದು ತಾಯಿಯ ಜವಾಬ್ದಾರಿ ಮಾತ್ರವಲ್ಲದೆ 'ಕರುಳಬಳ್ಳಿಯ ಸಂಬಂಧ'. ಅದೇ ರೀತಿ ಈ ಭೂಮಂಡಲದಲ್ಲಿ ಹುಟ್ಟಿರುವ ಜೀವ ಸಂಕುಲಗಳಿಗೆ ಜೀವವನಿತ್ತಿರುವ ಭಗವಂತ (ಸೃಷ್ಟಿಕರ್ತ) ಅವುಗಳಿಗೆ ನೀರು–ಆಹಾರ–ರಕ್ಷಣೆಯನ್ನು ಸದಾಕಾಲ ನೀಡಿ ಸಲಹುತ್ತಿದ್ದಾನೆ. ಅವುಗಳೂ ಸಹ ದೃಢವಾಗಿ ನಂಬಿ ಆಶ್ರಯಿಸಿರುವುದು ಆತನನ್ನೇ ಹೊರತು ಬೇರಾರನ್ನೂ ಅಲ್ಲ.

"ನಲಿವಿಗೆ ಚಿತ್ರ ಬರೆದವರು ಯಾರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು
ಅವನೆ ಸಲಹುವನು ಇದಕೆ ಸಂಶಯವಿಲ್ಲ ॥ 3 ॥"

ಈ ಮೇಲಿನ ಸಾಲುಗಳಲ್ಲಿ ತಳಮಳಗೊಂಡ ಮಾನವರ ಮನಸ್ಸಿಗೆ ಕನಕದಾಸರು ಸಮಾಧಾನ ಹೇಳುವುದು ಹೀಗೆ– ನವಿಲಿನ ಸೌಂದರ್ಯಕ್ಕೆ ಕಾರಣನಾದವನು ಯಾರು?, ಹವಳಕ್ಕೆ ಕೆಂಪು ಬಣ್ಣ ನೀಡಿದವರಾರು?, ಸವಿಯಾದ ಮಾತುಗಳನ್ನಾಡುವ ಗಿಳಿಗೆ ಹಸಿರು ಬಣ್ಣವ ನೀಡಿದವರು ಯಾರು?,– ಮತ್ಯಾರೂ ಅಲ್ಲ, ದೇವರೇ! ಈ ಜಗದ ಸೃಷ್ಟಿಯಲ್ಲಿ ಯಾವೆಲ್ಲಾ ಅಚ್ಚರಿಗಳನ್ನು, ಅದ್ಭುತಗಳನ್ನು ನಾವು ನೋಡಿರುತ್ತೇವೆ ಗಮನಿಸಿರುತ್ತೇವೆ. ಆದರೆ ಅವುಗಳ ಸೃಷ್ಟಿಯ ಬಗ್ಗೆ ಅಥವಾ ಅವುಗಳ ಹುಟ್ಟಿನ ಬಗ್ಗೆ ಯಾರೂ ಹೆಚ್ಚಾಗಿ ಯೋಚಿಸಿರುವುದಿಲ್ಲ. ಎಲ್ಲರನ್ನೂ ಎಲ್ಲ ಕಾಲದಲ್ಲೂ ಸಲಹುವನು ಭಗವಂತನೇ ಆಗಿರುತ್ತಾನೆ. ಯಾಕಾಗಿ ಹೆದರುವೆ, ಜಗದ ಸೃಷ್ಟಿಗೆ ಕಾರಣಕರ್ತನಾದ ಭಗವಂತನೇ ಜವಾಬ್ದಾರಿ ಹೊತ್ತು ನಮ್ಮೆಲ್ಲರನ್ನೂ

ಸಲಹುತ್ತಿದ್ದಾನೆ ಹೆದರಬೇಡ ಎಂದು ಸಂತೈಸಿ ಸಾಂತ್ವಾನ ಹೇಳುವಾಗ ಈ ಮಾತು ಬಂದಿದೆ.

"ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರ ತಂದೀವರಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲವನು ಸಲಹುವನು ಇದಕೆ ಸಂಶಯವಿಲ್ಲ ॥ 4 ॥"

ಈ ಮೇಲಿನ ಸಾಲುಗಳಲ್ಲಿ ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ಅಲ್ಲಲ್ಲಿಗೆ ಆಹಾರ ತಂದಿಟ್ಟವರಾರು, ಆದರೂ ಅವುಗಳೆಲ್ಲೂ ಆಹಾರವನ್ನು ತಿಂದುಕೊಂಡು ಬದುಕುತ್ತಿಲ್ಲವೇ ಎಂಬರ್ಥದಲ್ಲಿ ಕನಕದಾಸರು ಪ್ರಶ್ನಿಸುತ್ತಾರೆ. ಸೃಷ್ಟಿಯ ರಹಸ್ಯವನ್ನೆಲ್ಲಾ ಬಲ್ಲಂತಹ ಕಾಗಿನೆಲೆಯ ಆದಿಕೇಶವರಾಯ (ಭಗವಂತ) ಎಲ್ಲರನ್ನೂ ಸಲಹುತ್ತಾನೆ, ಇದರ ಬಗ್ಗೆ ಸಂಶಯ ಪಡಬೇಡಿ ಎಂದು ಸಂತೈಸುತ್ತಾರೆ. ಹೀಗೆ ಭಗವಂತನ ಮೇಲೆ ದೃಢವಾದ ಶ್ರದ್ಧಾಭಕ್ತಿಯನ್ನು ಹೊಂದದ ಹೊರತು ನಮ್ಮ ರಕ್ಷಣೆಗೆ ಯಾರೂ ಬರುವುದಿಲ್ಲ. ಅದಕ್ಕೆ ನಾವು ಮೊದಲು ಅವನನ್ನು ನಮ್ಮ ಹೃದಯದ ಅಂತರಾಳದಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಬೇಕು. ಮೇಲಿನ ಮಾತುಗಳಿಗೆ ಪೂರಕವೆಂಬಂತೆ ನಮ್ಮ ಜನಪದರ ಮಾತು ಅರ್ಥಗರ್ಭಿತವಾಗಿದೆ– 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನಾ?'. ಅಂದರೆ ಇದರರ್ಥ ನಮ್ಮ ಜನ್ಮಕ್ಕೆ ಕಾರಣನಾದ ಭಗವಂತ ಆಹಾರವನ್ನು ಇಲ್ಲದಹಾಗೆ ಮಾಡಿ ನಮ್ಮ ಸಾವಿಗೆ ಕಾರಣನಾಗಲಾರ. ಯಾವ ರೂಪದಲ್ಲಾದರೂ ನಮ್ಮ ಹಸಿವನ್ನು ನೀಗಿಸಿ, ಉಸಿರನ್ನು ಉಳಿಸಲು ನೆರವಾಗುತ್ತಾನೆ ಎಂಬುದನ್ನು ತಿಳಿಯಬೇಕಾಗಿದೆ.

ಒಟ್ಟಾರೆಯಾಗಿ ಈ ಕೀರ್ತನೆಯು ತನ್ನ ಒಡಲಿನಲ್ಲಿ ಘನವಾದ ಅರ್ಥವನ್ನೇ ಅಡಗಿಸಿಕೊಂಡಿದ್ದು, ಮಾನವನು ಸುಗಮವಾದ ಬದುಕನ್ನು ನೆಡೆಸಲು ಅಗತ್ಯವಾದ ಜೀವದ್ರವವೆಂದರೆ ಭಗವಂತನನ್ನು ಶ್ರದ್ಧೆಯಿಂದ ಸ್ಮರಿಸುತ್ತಾ, ಅವನಲ್ಲಿ ಗಾಢವಾದ ದೃಢನಂಬಿಕೆ ಇಡುವುದೇ ಆಗಿದೆ ಎಂದು ತಿಳಿಸುತ್ತದೆ. ನಿರ್ಮಲ ಭಕ್ತಿಯ ಉತ್ಕಟತೆ, ಸರ್ವಸಮರ್ಪಣ ಭಾವ ಇಲ್ಲಿ ಬಹು ಹೃದ್ಯಂಗಮವಾಗಿ ಅಭಿವ್ಯಕ್ತಗೊಂಡಿದೆ. ಮನುಷ್ಯ ಬದುಕಿನ ನಾನಾ ಬಗೆಯ ಬವಣೆಗಳಲ್ಲಿ ತಲ್ಲಣಿಸುವ ಮನಸ್ಸಿಗೆ ಕನಕದಾಸರು ದೈವರಕ್ಷಣೆಯ ಅಭಯ ಉಂಟೆಂದು ಬಲವಾಗಿ ನಂಬಿ, ಸಾಂತ್ವನ ನೀಡುವ ರೀತಿ ವಿಶಿಷ್ಟವಾಗಿ ಮೂಡಿಬಂದಿದೆ.

ಮನುಷ್ಯ ಅಂದ ಮೇಲೆ ಸಮಸ್ಯೆಗಳು ಸಹಜ. ಸಮಸ್ಯೆಗಳ ಹೊರತಾಗಿ ಮನುಷ್ಯನ ಇರುವಿಕೆಯನ್ನು ಕಲ್ಪಿಸಿಕೊಳ್ಳಲು ಅಸಾಧ್ಯ. ಯಾವುದಕ್ಕೂ ಆತಂಕಪಡುವ,

ಕಳವಳಗೊಳ್ಳುವ ಅಗತ್ಯವಿಲ್ಲ. ಪ್ರತಿಯೊಂದು ಸಮಸ್ಯೆಗೂ ತನ್ನದೇ ಆದಂತಹ ಪರಿಹಾರ ಇದ್ದೇ ಇರುತ್ತದೆ. ಮಾನವನ ಸಂಕೀರ್ಣ ಬದುಕಿನಲ್ಲಿ ತಾಳ್ಮೆ ತುಂಬಾ ಮುಖ್ಯ. ಪ್ರತಿಕ್ಷಣದ ಸಂತಸವನ್ನು ಅನುಭವಿಸುತ್ತ ಸಂತೋಷವಾಗಿ ಜೀವಿಸಬೇಕು. ಜಗತ್ತಿನ ಚರಾಚರಗಳ ಬದುಕು ಇದಕ್ಕೆ ಹೊರತಲ್ಲ. ಇವಿಷ್ಟನ್ನು ಭಗವಂತನ ಮೇಲಿನ ನಂಬಿಕೆಯಿಲ್ಲದೆಯೂ ಹೇಳಬಹುದಾಗಿದೆ. ಆದರೆ, ಹೇಳಿದಂತೆ ಬದುಕಲು ಯಾವುದಾದರೊಂದು ನಂಬಿಕೆಯನ್ನು ಬಲವಾಗಿ ಆಶ್ರಯಿಸಬೇಕಾಗುತ್ತದೆ. ಭಗವಂತನಲ್ಲಿ ಆ ನಂಬಿಕೆ ಇಡಿ ಎನ್ನುವುದು ಕನಕದಾಸರ ಕಿವಿಮಾತು. ಇದು ಒಂದು ರೀತಿಯಲ್ಲಿ 'ವಿಧಿವಾದ'ಕ್ಕೂ ಎಡೆಮಾಡಿಕೊಡುತ್ತದೆ. ಅಂದರೆ ನಮ್ಮ ಕಷ್ಟ, ತೊಂದರೆ, ನೋವುಗಳಿಗೆ ನಮ್ಮ ಹಣೆಯ ಬರಹ, ನಮ್ಮ ವಿಧಿಯೇ ಸರಿಯಾಗಿಲ್ಲ ಎಂದು ಹೇಳುವ ಜನರನ್ನೂ ಗಮನಿಸಬಹುದು. ಅನೇಕ ಆಧುನಿಕ ಕವಿವರ್ಯರ ಕಾವ್ಯಗಳಲ್ಲಿ ಈ ವಿಧಿವಾದ, ಹಣೆಯಬರಹ ಇಂತಹ ವಿಷಯಗಳ ಕುರಿತು ಪ್ರಸ್ತಾಪಗಳಿರುವುದನ್ನು ನೋಡಬಹುದು. ಕನಕದಾಸರ ಜೀವನದಲ್ಲಿ ಭಕ್ತಿಯ ಸಂಕೀರ್ಣತೆಯ ಪ್ರಭಾವದಿಂದಾಗಿ ಅವರ ಘನವಾದ ವ್ಯಕ್ತಿತ್ವ ರೂಪುಗೊಂಡಿರುವುದನ್ನು ಈ ಮುಂದಿನ ಮಾತುಗಳಿಂದ ಅರಿಯಬಹುದು. **"ಭಕ್ತಿಯನ್ನು ಕುರಿತಂತೆ ಎರಡು ರೀತಿಯ ಗ್ರಹಿಕೆಗಳಿವೆ. ಒಂದು ಪ್ರಭುತ್ವವನ್ನು ವಿರೋಧಿಸುವ ನೆಲೆ; ಮತ್ತೊಂದು ದೈನ್ಯತೆಯ ನೆಲೆಯಲ್ಲಿ ಪ್ರತಿಭಟನೆಯ ಶಕ್ತಿಯನ್ನೇ ಕಸಿದುಕೊಳ್ಳುವ ವಿಧೇಯತೆ. ಈ ಎರಡು ಬಗೆಯ ಚಿಂತನೆಗಳಿಗೆ ಅವಕಾಶ ಕಲ್ಪಿಸುವಷ್ಟು ಸಂಕೀರ್ಣವಾಗಿದೆ ಕನಕದಾಸನ ವ್ಯಕ್ತಿತ್ವ".**[5] ಅಲ್ಲದೆ, ಕನಕದಾಸರ ಕೀರ್ತನೆಗಳು ಒಳಗೊಂಡಿರುವ ಒಟ್ಟೂ ಮೌಲ್ಯಗಳನ್ನು ಹಿಡಿಯಾಗಿ, ಸಂಗ್ರಹ ರೀತಿಯಲ್ಲಿ ನೋಡುವುದಾದರೆ– **"ಕನಕದಾಸರು ಕೀರ್ತನೆಗಳಲ್ಲಿ ಭಕ್ತಿಭಾವ, ಲೋಕಾನುಭವ, ತತ್ವಬೋಧೆ, ಆತ್ಮ ನಿವೇದನೆ, ಸಾಮಾಜಿಕ ಪ್ರಜ್ಞೆ ಅತ್ಯಂತ ಹೃದ್ಯವಾಗಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿವೆ. ಬದುಕಿನ ಅರ್ಥ, ಉದ್ದೇಶ ಜೀವನ ಮೌಲ್ಯಗಳನ್ನು ಸಂಗ್ರಹವಾಗಿ ಹೇಳಿರುವ ರೀತಿ ವಿಸ್ಮಯ ಹುಟ್ಟಿಸುತ್ತದೆ. ನಿಜವಾದ ಭಕ್ತಿಯ ರೀತಿಯನ್ನು ಹೇಳಿರುವುದರೊಂದಿಗೆ ಡಾಂಭಿಕ ಭಕ್ತಿಯನ್ನು ವಿಡಂಬಿಸಿದ್ದಾರೆ. ನಿರಾಶೆಗೊಂಡ ಮಾನವನಿಗೆ ಸಾಂತ್ವನ ಹೇಳಿ ಸನ್ಮಾರ್ಗವನ್ನು ತೋರಿದ್ದಾರೆ".**[6] ಹೀಗೆ ತಮ್ಮ ಬದುಕನ್ನೇ ಹೋರಾಟವನ್ನಾಗಿಸಿಕೊಂಡು ಸಮಾಜವನ್ನು ಸುಧಾರಣೆ ಮಾಡುವಂತಹ ಮೌಲ್ಯಯುತವಾದ ಚಿಂತನೆಗಳನ್ನು ಬಿತ್ತುವಂತಹ ಕೆಲಸಮಾಡಿದ್ದಾರೆ. ಅಲ್ಲದೆ ಮಾನವನ ಕಲ್ಯಾಣಕ್ಕಾಗಿ, ಏಳಿಗೆಗಾಗಿ ನಿಃಸ್ವಾರ್ಥದಿಂದ ಶ್ರಮಿಸಿದ ಹೆಗ್ಗಳಿಕೆ ಕನಕದಾಸರದು. ಈ ಮಾನವ ಸಮಾಜ ಮೌಲ್ಯಾಧಾರಿತ ಸಮಾಜವಾಗಿ ನಿರ್ಮಾಣಗೊಂಡು ಶಾಂತಿಯು ನೆಲೆಸಿ, ಸುವ್ಯವಸ್ಥಿತವಾಗಿರಬೇಕಾದರೆ ಕನಕದಾಸರು

ಪ್ರತಿಪಾದಿಸಿದ ಸರಳಸಜ್ಜನಿಕೆ, ಸಾತ್ತ್ವಿಕತೆ, ಸಭ್ಯತೆ, ಸತ್ಯಪರತೆ, ತ್ಯಾಗಬುದ್ಧಿ, ಅಹಿಂಸೆ, ಸನ್ಮಾರ್ಗ, ಧರ್ಮ, ದೈವಪ್ರಜ್ಞೆ, ಭಾವಸ್ಪಂದನೆ, ಆತ್ಮಸಾಕ್ಷಾತ್ಕಾರ, ತತ್ತ್ವಾದರ್ಶಗಳು, ಆಧ್ಯಾತ್ಮಿಕ ಮೌಲ್ಯ–ಚಿಂತನೆಗಳು ಜರೂರಾಗಿ ಪುನರ್ ಸ್ಥಾಪನೆಯಾಗಿಬೇಕಾಗಿದೆ.

ಒಟ್ಟಾರೆಯಾಗಿ ಕನಕದಾಸರ ಕೀರ್ತನೆಗಳ ಅಂತಃಸತ್ವವನ್ನು ಕುರಿತು ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಹೇಳಿರುವ ಮಾತುಗಳು ಅರ್ಥಪೂರ್ಣವಾಗಿದ್ದು, ಇಂದಿಗೂ ಕನಕದಾಸರ ಪ್ರಸ್ತುತತೆಯನ್ನು ಕಟ್ಟಿಕೊಡುತ್ತವೆ. ಅಲ್ಲದೆ ಕನಕದಾಸರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿವೆ. "ಕನಕದಾಸರ ಕೀರ್ತನೆಗಳಂತೂ ಸುಭಾಷಿತಗಳಿದ್ದಂತೆ. ನಮ್ಮೆಲ್ಲರ ದಿನನಿತ್ಯದ ಬದುಕಿನ ನಡವಳಿಕೆಯತ್ತ ಅವು ಉಪದೇಶಾಮೃತವಾಗಿ ಪರಿಣಮಿಸಿವೆ. ತಮ್ಮ ಭಾವಸೂಕ್ಷ್ಮತೆ, ಕಲಾತ್ಮಕತೆ, ಧೀಮಂತಿಕೆ, ಆಧ್ಯಾತ್ಮಿಕ ಶ್ರೀಮಂತಿಕೆಗಳಿಂದ ಕನಕದಾಸರು ಶತಮಾನಗಳ ನಂತರವೂ ಸೀಮಾಪುರುಷರಾಗಿಯೇ ನಿಲ್ಲುತ್ತಾರೆ. ಎತ್ತರಕ್ಕೆ ಬೆಳೆಯಬೇಕೆನ್ನುವವರಿಗೆ ಕನಕದಾಸರ ಕೀರ್ತನೆಗಳು ದಾರಿದೀಪ. ಲೋಕದ ನಾಟಕ ಬೂಟಾಟಿಕೆಗಳಿಂದ ಕುಗ್ಗಿರುವವರಿಗೆ ಕನಕಕೀರ್ತನೆಗಳು ಊರುಗೋಲು. ಕನಕದಾಸರ ಮುಂಡಿಗೆಗಳಂತೂ ಜಗತ್ಪ್ರಸಿದ್ಧ. ಅವು ಮೇಧಾವಿಗಳೆನಿಸಿಕೊಂಡವರಿಗೊಂದು ಸವಾಲು. 'ಕನಕನನ್ನು ಕೆಣಕಬೇಡ, ಕೆಣಕಿ ತಿಣಕಬೇಡ' ಎಂಬ ಗಾದೆ ಮಾತೇ ಇದಕ್ಕೆ ಸಾಕ್ಷಿ. ತಮ್ಮ ಕೀರ್ತನೆಗಳಿಂದ ಅವರು ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಜನಮನವನ್ನು ತಟ್ಟಿದರು. ಅವರ ಹೃದಯದಾಳವನ್ನು ಮುಟ್ಟಿ ಭಕ್ತಿಯ ಬೀಜವನ್ನು ನೆಟ್ಟರು".[7]

ಕೊನೆ ಟಿಪ್ಪಣಿಗಳು:

1. ಪಿ. ಚಂದ್ರಿಕಾ (ಸಂ), ಭಕ್ತಿಯ ಬೆರಗು, ಪುಟ–21.
2. ಸಿ ಎನ್ ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, ಪುಟ–360.
3. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ, ಪುಟ–146.
4. ರಹಮತ್ ತರೀಕೆರೆ (ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : 3 ಧರ್ಮ, ಪುಟ–255.
5. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ, ಪುಟ–146.
6. ಸಿ ಎನ್ ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, ಪುಟ–405.

7. ಎ.ವಿ.ನಾವಡ ಮತ್ತು ಗಾಯತ್ರಿ ನಾವಡ (ಸಂ), ಸಾವಿರಾರು ಕೀರ್ತನೆಗಳು, ಮುನ್ನುಡಿಯಿಂದ ಪುಟ–6 ಮತ್ತು 7.
8. 'ತಲ್ಲಣಿಸದಿರು ಕಂಡ್ಯ ತಾಳು ಮನವೆ' ಎಂಬ ಕೀರ್ತನೆಯನ್ನು ಎ. ವಿ. ನಾವಡ ಮತ್ತು ಗಾಯತ್ರಿ ನಾವಡ ಅವರು ಸಂಪಾದಿಸಿರುವ 'ಸಾವಿರಾರು ಕೀರ್ತನೆಗಳು' ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಪುಟ ಸಂಖ್ಯೆ: 444.

ಪರಾಮರ್ಶನ ಗ್ರಂಥಗಳು:

1. ಎ. ವಿ. ನಾವಡ ಮತ್ತು ಗಾಯತ್ರಿ ನಾವಡ (ಸಂಪಾದಕರು), ಸಾವಿರಾರು ಕೀರ್ತನೆಗಳು, 2012, ಅಂಕಿತ ಪುಸ್ತಕ, ಬೆಂಗಳೂರು.
2. ಬಸವರಾಜ ಕಲ್ಗುಡಿ, ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, 2013, ಕೆ. ಬಿ. ಪ್ರಗತಿ ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
3. ಚಂದ್ರಿಕಾ ಪಿ. (ಸಂ), ಭಕ್ತಿಯ ಬೆರಗು, 2015–ಸೆಪ್ಟಂಬರ್, ಜನವರಿ, ಮೇ, ಸೆಪ್ಟಂಬರ್–2016, ಅಭಿನವ ಪ್ರಕಾಶನ, ಬೆಂಗಳೂರು.
4. ಸಿ. ಎನ್. ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, 2015, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
5. ಗಿರಡ್ಡಿ ಗೋವಿಂದರಾಜ, ವಚನಗಳಲ್ಲಿ ಭಕ್ತಿಯ ಸಮಸ್ಯೆ, ಸಮಗ್ರ ವಿಮರ್ಶೆ (ಸಂಪುಟ–1), 2013, ಸಪ್ನ ಬುಕ್ ಹೌಸ್, ಬೆಂಗಳೂರು.
6. ಕೇಶವ ಶರ್ಮ ಕೆ., ಕನಕದಾಸರ ಸಾಹಿತ್ಯದ ತಾತ್ವಿಕ ನೆಲೆಗಳು (ಭಕ್ತಿ–ಧರ್ಮ–ಸಮಾಜ–ಚರಿತ್ರೆಗಳ ಹಿನ್ನೆಲೆಯಲ್ಲಿ), 2016, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
7. ಮಂಗಳಾ ಪ್ರಿಯದರ್ಶಿನಿ ಡಿ., ನವೋದಯ ಕಾವ್ಯದಲ್ಲಿ ಅನುಭಾವದ ಅಂಶಗಳು ಒಂದು ಅಧ್ಯಯನ, 1994, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
8. ಮಹಾಬಲೇಶ್ವರ ರಾವ್ (ಸಂಪಾದನೆ / ಅನುವಾದ), ಭಕ್ತಿ ಕಂಪಿತ (ಎ ಕೆ ರಾಮಾನುಜನ್ ಅವರ ಭಕ್ತಿ ಕುರಿತ ಲೇಖನಗಳು), ಜನವರಿ– ಮೇ 2017 (ಸಂಪುಟ–24, ಸಂಚಿಕೆ–1, 2), ಅಭಿನವ ಪ್ರಕಾಶನ, ಬೆಂಗಳೂರು.
9. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ, 2024, ಅಭಿನವ ಪ್ರಕಾಶನ, ಬೆಂಗಳೂರು.
10. ರಹಮತ್ ತರೀಕೆರೆ (ಸಂ), ಧರ್ಮ (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–3), 2000, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

11. ಸಬಿತಾ ಬನ್ನಾಡಿ, ಆಲಯ ಬಯಲಾಗಿ, 2010, ತಿಂಗಳು ಬೆಳಕು ಪ್ರಕಾಶನ, ಕುಂದಾಪುರ.

12. ಶಿವರಾಮಶೆಟ್ಟಿ ಬಿ. (ಸಂ), ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ (ಕನಕದಾಸ ಅಧ್ಯಯನ : ಸಮಗ್ರ ಸಂಪುಟ ಭಾಗ–1), 2013, ಕನಕದಾಸ ಅಧ್ಯಯನ ಪೀಠ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

13. ಸುಮತಿ ಮುದ್ದೇನಹಳ್ಳಿ, ಕಾವ್ಯ ನಾಗರಕಟ್ಟೆ (ಸಂ), ಅವರವರ ಭಕುತಿಗೆ (ಭಕ್ತಿ ಕುರಿತ ನುಡಿ ಚಿಂತನೆಗಳು), 2017, ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.

14. ತಿಪ್ಪೇರುದ್ರಸ್ವಾಮಿ ಎಚ್., ಕನ್ನಡದಲ್ಲಿ ಅನುಭಾವ ಸಾಹಿತ್ಯ, 1962 (ಮೊದಲನೇ ಮುದ್ರಣ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

15. ವೆಂಕಟೇಶಮೂರ್ತಿ ಎಚ್. ಎಸ್., ಕೀರ್ತನಕಾರರು (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂಪುಟ–8), 2000, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

16. ಯತೀಶ್ವರ ಸೀ. ಚ, ಭಾರತೀಯ ಭಕ್ತಿ ಚಳುವಳಿಗಳು, 2017, ಮಹಿಮಾ ಪ್ರಕಾಶನ, ಮೈಸೂರು.

ಡಾ. ರಂಗಸ್ವಾಮಿ ಹೆಚ್
ಕನ್ನಡ ಅಧ್ಯಾಪಕರು,
ವಿಶ್ವವಿದ್ಯಾನಿಲಯ ಕಲಾ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು–572103.
ranguhosur@gmail.com

ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ

¤ ಸಂದೀಪ ಆರ್

ಅಮೂರ್ತ : ಜಗತ್ತಿನ ಪ್ರತಿಯೊಂದು ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯಲ್ಲಿ ಉದ್ದಿಮೆಗಳ ಸ್ಥಾಪನೆ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಒಂದು ರೀತಿಯಲ್ಲಿ ಕೃಷಿ ಮತ್ತು ನೀರಾವರಿಯಿಂದ ಆಹಾರ, ಬಟ್ಟೆಗಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದ್ದರೂ, ಆಧುನಿಕ ಜನ ಜೀವನದಲ್ಲಿ ಕೈಗಾರಿಕೋದ್ಯಮಗಳು ಹಾಗೂ ಅವುಗಳಿಂದ ಹೊರ ಬಂದ ಅನೇಕಾನೇಕ ವೈವಿದ್ಯಮಯ ಪದಾರ್ಥಗಳು ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಾಣಬಹುದು ಹಾಗೂ ಆ ವಸ್ತುಗಳನ್ನು ಬಿಟ್ಟು ಮತ್ತು ಅವುಗಳಿಂದ ದೂರವಿದ್ದು ಜೀವನ ಸಾಗಿಸಲು ಸಾಧ್ಯವೇ ಇಲ್ಲ. ಉದಾಹರಣೆಯಾಗಿ ಕಬ್ಬಿಣ, ಉಕ್ಕು, ಸಿಮೆಂಟ್, ಕಾಗದ, ಬಟ್ಟೆ, ಸಕ್ಕರೆ ಮುಂತಾದ ಪದಾರ್ಥಗಳಿಲ್ಲದೆ ಈಗಿನ ಜೀವನವನ್ನು ಊಹಿಸುವುದು ಅಸಾಧ್ಯ. ಇದರಿಂದ ಉದ್ದಿಮೆಗಳ ಪ್ರಭಾವ ಎಷ್ಟಿದೆ ಎಂಬುದು ತಿಳಿಯುತ್ತದೆ.

ಭಾರತವು ನೈಸರ್ಗಿಕ ಸಂಪತ್ತಿನಿಂದ ಶ್ರೀಮಂತ ರಾಷ್ಟ್ರವೆನಿಸಿದೆ. ಆದರೆ ಜನ ಸಾಮಾನ್ಯರ ಜೀವನ ಮಟ್ಟ ನಮ್ಮ ನೆರೆಯ ರಾಷ್ಟ್ರಗಳಲ್ಲಿಯ ಜನತೆಯ ಜೀವನ ಮಟ್ಟಕ್ಕಿಂತ ತೀರ ಕೆಳಮಟ್ಟದಲ್ಲಿದೆ ಬಡತನ, ಅಜ್ಞಾನ, ನಿರುದ್ಯೋಗ, ಅನಾರೋಗ್ಯ ನಮ್ಮನ್ನು ಬಹುದಿನಗಳಿಂದ ಕಾಡುತ್ತ ಬಂದಿದೆ. ಬಡತನವನ್ನು ಹೋಗಾಲಾಡಿಸಿ ದೇಶವನ್ನು ಸ್ವಯಂ ಪೂರ್ಣತೆಯ ಗುರಿಯತ್ತ ನಡೆಸುವುದು ನಮ್ಮ ಆರ್ಥಿಕ ಯೋಜನೆಗಳ ಗುರಿಯಾಗಿದೆ. ದೇಶದಲ್ಲಿ ಸರಕುಗಳನ್ನು ಮತ್ತು ಸೇವೆಗಳ ರೂಪದಲ್ಲಿ ಪರಿವರ್ತಿಸಬೇಕಾದರೆ, ರಾಷ್ಟ್ರದ ಶ್ರಮಶಕ್ತಿ ಅಥವಾ ಮನುಷ್ಯ ಪ್ರಾಧ್ಯಾನ್ಯತೆ ಬೇಕಾಗುವುದು.

ಔದ್ಯೋಗೀಕರಣ ದೃಷ್ಟಿಯಿಂದ ಭಾರತವು ಹಿಂದುಳಿದ ರಾಷ್ಟ್ರವಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಪೂರ್ವದಲ್ಲಿ ಭಾರತದಲ್ಲಿ ಒಟ್ಟು ಕಾರ್ಮಿಕರ ಬಲ 185.2 ದಶಲಕ್ಷವಿದ್ದು. ದ್ವಿತೀಯ ಯೋಜನೆಯ ಕಾಲಕ್ಕೂ ಅದು 197.00 ದಶಲಕ್ಷಕ್ಕೆ ಹೆಚ್ಚಿತ್ತು. ಪ್ರಸ್ತುತ ಅಧ್ಯಯನವು ಭಾರತೀಯ ಮಹಿಳಾ ಕಾರ್ಮಿಕರು ಅಥವಾ ದಾವಣಗೆರೆ ಪಟ್ಟಣದ ಭತ್ತದ ಗಿರಣಿಗಳಲ್ಲಿನ ಮಹಿಳಾ ಕಾರ್ಮಿಕ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳ ಬಗ್ಗೆ ಈ ಅಧ್ಯಯನವು ಕೇಂದ್ರೀಕರಿಸಿದೆ.

ಕೀಲಿ ಪದಗಳು : ಕಾರ್ಮಿಕರು, ಔದ್ಯೋಗೀಕರಣ, ಮಹಿಳೆ, ಗಿರಣಿ, ನಿರುದ್ಯೋಗ, ಅನಾರೋಗ್ಯ

ಪೀಠಿಕೆ : ವಿಶ್ವವು ವೈವಿದ್ಯಮಯವಾದದ್ದು ಅಂತೆಯೇ ಸಮಾಜವು ವೈವಿಧ್ಯತೆಯಿಂದ ಕೂಡಿದೆ. ಭಾರತದಲ್ಲಿ ಮಹಿಳೆಯರ ಸ್ಥಾನಮಾನವು ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಏರು–ಪೇರುಗೊಳ್ಳುತ್ತಾ ಬಂದಿರುವುದು ಸರ್ವವಿಧಿತವಾಗಿದೆ. ವೇದ ಮತ್ತು ವೇದೋತ್ತರ ಕಾಲದಲ್ಲಿ ಬ್ರಿಟೀಷರ ಕಾಲದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳೆಯರ ಸ್ಥಾನಮಾನಗಳು ವಿಭಿನ್ನವಾಗಿರುವುದನ್ನು ಗುರುತಿಸಬಹುದಾಗಿದೆ. ಪ್ರಸ್ತುತ ಭಾರತೀಯ ಸಮಾಜದಲ್ಲಿ ಅನೇಕ ಸಮಸ್ಯೆಗಳಿವೆ. ಅವುಗಳಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳೂ ಸಹ ಒಂದಾಗಿದೆ. ಆದ್ದರಿಂದ ಭಾರತೀಯ ಸಮಾಜಶಾಸ್ತ್ರಜ್ಞರು ಇತ್ತ ಗಮನಹರಿಸಿ ಭಾರತೀಯ ಮಹಿಳಾ ಕಾರ್ಮಿಕರ ಬಗ್ಗೆ ಅಧ್ಯಯನ ನಡೆಸಬೇಕಾಗಿರುವುದು ಆಧ್ಯ ಕರ್ತವ್ಯವಾಗಿದೆ. ಇದರ ಅಧ್ಯಯನವು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದಲೂ ಬಹಳ ಮಹತ್ವವನ್ನು ಪಡೆದಿದೆ. ಆಧುನಿಕ ಯುಗದಲ್ಲಿ ಉದ್ದಿಮೆಗಳೇ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ಧರಿಸುವ ಘಟಕಗಳಾಗಿರುತ್ತವೆ. ಮಿಲ್ಲುಗಳ ಸಂಖ್ಯೆ ಬೆಳವಣಿಗೆಯಾದಂತೆ, ಮಹಿಳಾ ಕಾರ್ಮಿಕರ ಸಂಖ್ಯೆಯೂ ಕೂಡ ತೀವ್ರಗತಿಯಿಂದ ಬೆಳವಣಿಗೆಯಾಗುತ್ತಿರುವುದನ್ನು ಕಾಣುತ್ತೇವೆ. ಮಹಿಳಾ ಕಾರ್ಮಿಕರನ್ನು ಒಂದು ದೇಶದ ಸಜೀವ ಸಂಪತ್ತು ಎಂಬ ನಿಸ್ಸಂಶಯವಾಗಿ ಹೇಳಬಹುದು. ಒಂದು ಕೆಲಸದಲ್ಲಿ ಪ್ರಗತಿ ಮತ್ತು ಅಭ್ಯುದಯಕ್ಕೆ ಮಹಿಳಾ ಕಾರ್ಮಿಕರೂ ಸಹಾ ಮೂಲ ಕಾರಣರಾಗಿರುತ್ತಾರೆ. ಸಧೃಡ ಮತ್ತು ಬುದ್ಧಿವಂತ ಮಹಿಳಾ ಕಾರ್ಮಿಕರೂ ಆರ್ಥಿಕ ಅಭಿವೃದ್ಧಿಗೆ ಭದ್ರಬುನಾದಿಯನ್ನು ಹಾಕಬಲ್ಲರು.

ಈ ಮೇಲಿನ ತಿಳಿಸಿದ ಕೆಲವು ಅಂಶಗಳು ಅಲ್ಲದೆ ಇಲ್ಲಿ ಮುಖ್ಯವಾಗಿ ಸಂಶೋಧನಾ ವಸ್ತು ಭತ್ತದ ಗಿರಣಿಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ

ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಈ ವಿಷಯದಲ್ಲಿ ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿದೆ. ಇಲ್ಲಿ ಮಹಿಳಾ ಕಾರ್ಮಿಕರ ಕೌಟುಂಬಿಕ ಹಿನ್ನಲೆ, ವೈವಾಹಿಕ ನೆಲೆ ಕುಟುಂಬದ ಜವಾಬ್ದಾರಿ ಗಿರಣಿಗಳಲ್ಲಿರುವ ತೊಂದರೆಗಳು, ವಿರಾಮ ವೇಳೆಯ ಚಟುವಟಿಕೆಗಳು, ಮಕ್ಕಳ ಸ್ಥಿತಿಗತಿ, ಕಾರ್ಮಿಕ ಸಂಘಗಳು, ಇನ್ನೂ ಮುಂತಾದ ಅಂಶಗಳನ್ನು ಕುರಿತು ಅಧ್ಯಯನ ಮಾಡಿ ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಿಸಿ ವರದಿ ತಯಾರಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಸರಿಯಾದ ಸೌಲಭ್ಯಗಳನ್ನು ನೀಡಿಲ್ಲ. ಕಡಿಮೆ ಕೂಲಿ, ಕೆಲಸದ ಭದ್ರತೆ ಇಲ್ಲ, ವೈದ್ಯಕೀಯ ಸೌಲಭ್ಯ ಇಲ್ಲ, ರಕ್ಷಣಾ ಗೃಹಗಳಿಲ್ಲ, ಮಹಿಳಾ ಕಾರ್ಮಿಕರ ಜೀವನ ಮಟ್ಟ ಬಹಳ ಕೆಳಮಟ್ಟದಲ್ಲಿ ಇರುವುದು, ಹೆಚ್ಚು ವೇಳೆ ದುಡಿಸಿಕೊಳ್ಳುವುದು ಇನ್ನು ಹಲವಾರು ತೊಂದರೆಗಳನ್ನು ಮಹಿಳಾ ಕಾರ್ಮಿಕರಲ್ಲಿ ಕಾಣಬಹುದು. ಈ ಎಲ್ಲಾ ಅಂಶಗಳಿಂದ ಈ ಅಧ್ಯಯನವು ಹೆಚ್ಚು ಪ್ರಾಮುಖ್ಯತೆ ಪಡೆದಿದೆ.

ಸಾಹಿತ್ಯಾವಲೋಕನ :

ಜೋಷಿ ಸಿ.ಟಿ. ರವರ "ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಿತಿಗತಿ ಮತ್ತು ಮಹಿಳಾ ಕಾರ್ಮಿಕ ಒಂದು ವಿಶ್ಲೇಷಣೆ" ಎಂಬ ಲೇಖನದಲ್ಲಿ ಕೈಗಾರಿಕೆಗಳ ಸ್ಥಿತಿಗತಿಗಳನ್ನು ವಿಮರ್ಶಾಕವಾಗಿ ವಿವರಿಸಿದ್ದಾರೆ. ಜೊತೆಗೆ ಕೈಗಾರಿಕಾ ಪ್ರಗತಿಯನ್ನು ಒಮ್ಮೆ ದೇಶದ ಹೆಮ್ಮೆ ಎನಿಸಿದ್ದ ಕರ್ನಾಟಕ ಕೆಲವು ವರ್ಷಗಳಿಂದಿಚೆಗೆ ಆ ಸ್ಥಾನವನ್ನು ಕಳೆದುಕೊಂಡಿದೆ. ರಾಜ್ಯ ಸರ್ಕಾರ ಸ್ವಾಮ್ಯದ ಹಲವಾರು ಉದ್ಯಮಗಳು ಸತತವಾಗಿ ನಷ್ಟ ಅನುಭವಿಸುತ್ತಿವೆ. ವಿದ್ಯುತ್ತಿನ ಕೊರತೆಯಿಂದಾಗಿ ಉತ್ಪಾದನೆಯಲ್ಲಿ ಆಗುತ್ತಿರುವ ನಷ್ಟ ಅಪಾರವಾಗಿದೆ. ವಿದ್ಯುಚ್ಛಕ್ತಿ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕರ್ನಾಟಕದಲ್ಲಿ ಕೈಗಾರಿಕಾ ಪ್ರಗತಿ ತೀವ್ರವಾಗಿ ಆಗುವಂತೆ ಮಾಡಬೇಕಾಗಿದೆ. ಇದಕ್ಕಾಗಿ ಸಮಗ್ರ ಯೋಜನೆಯನ್ನು ರೂಪಿಸಬೇಂದು ಲೇಖಕರು ಇಲ್ಲಿ ಒತ್ತಿ ಹೇಳಿರುವುದನ್ನು ಕಾಣಬಹುದಾಗಿದೆ. ರಾಜ್ಯ ಸರ್ಕಾರ ಸ್ವಾಮ್ಯದ ಉದ್ಯಮಗಳು ಹಾಗೂ ಖಾಸಗಿ ಕೈಗಾಗಿಕಾ ಉದ್ಯಮಗಳ ಬಗ್ಗೆ ಮತ್ತು ಅವುಗಳ ಆರೋಗ್ಯ, ಅಸ್ವಸ್ಥತತೆ ಬಗ್ಗೆ ಈ ಲೇಖನದಲ್ಲಿ ತಿಳಿದುಕೊಳ್ಳಬಹುದಾಗಿದೆ.

Savithri Arp uthamurthy- women work and Discrimination Ashish publishing Hous, New Delhi. ಎಂಬ ಗ್ರಂಥವು ಮಹಿಳೆ ದುಡಿಮೆ ಮತ್ತು ತಾರತಮ್ಯ ಎಂಬ ವಿಚಾರವನ್ನು ಕುರಿತದ್ದಾಗಿದೆ, ಗ್ರಾಮೀಣ ಕಾರ್ಮಿಕರ ಕೂಲಿ ಎಂಬ ಮಾರುಕಟ್ಟೆಯಲ್ಲಿ ಲಿಂಗದ ಆಧಾರದ ಮೇಲೆ ವೇತನ ತಾರತಮ್ಯತೆ

ಸಹಜವಾದುದಾಗಿದೆ, ಪ್ರಸ್ತುತ ಗ್ರಂಥವು ಮೇಲೆ ತಿಳಿಸಿದ ವಿಷಯದ ಮೇಲೆ ಸೈದ್ಧಾಂತಿಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ವಿವರವಾದ ಮತ್ತು ಆಳವಾದಂತಹ ಮಾಹಿತಿಗಳನ್ನು ಬದಗಿಸುವಂತಹ ಪ್ರಯತ್ನವನ್ನು ಈ ಗ್ರಂಥದಲ್ಲಿ ಕೈಗೊಳ್ಳಲಾಗಿದೆ, ಗ್ರಂಥದ ಮೊದಲ ಅಧ್ಯಾಯವು ಮಹಿಳಾ ಕಾರ್ಮಿಕರ ವಿರುದ್ಧದ ತಾರತಮ್ಯತೆಯನ್ನು ಕುರಿತು ತಿಳಿಸುತ್ತದೆ. ಹಾಗೂ ಕಾರ್ಮಿಕ ಮಾರುಕಟ್ಟೆಯಲ್ಲಿ ಲಿಂಗಾಧಾರಿತ ತಾರತಮ್ಯತೆಯನ್ನು ಕುರಿತು ತಿಳಿಸುತ್ತದೆ, ಮಹಿಳಾ ಕಾರ್ಮಿಕರಿಗೆ ನೀಡಲಾಗುವ ವೇತನದಲ್ಲಿ ಹೇಗೆ ತಾರತಮ್ಯತೆ ಉಂಟುಮಾಡಲಾಗಿದೆ ಎಂಬುದನ್ನು ಈ ಗ್ರಂಥದಲ್ಲಿ ತಿಳಿಸಲಾಗಿದೆ, ಉಪಕಲ್ಪನೆಗಳನ್ನಾಧರಿಸಿದ ಪ್ರಸುತ್ತ ಅಧ್ಯಯನವು ಲಿಂಗಧಾರಿತ ವೇತನ ತಾರತಮ್ಯದ ಪೂರ್ವಗ್ರಹ ಕಲ್ಪನೆಯಿಂದ ಹೊರಬಂದು ಮಹಿಳಾ ಕಾರ್ಮಿಕರಿಗೆ ಉತ್ತಮ ವೇತನ ನೀಡುವಲ್ಲಿ ಮತ್ತು ಈ ಸಂಬಂಧವಾದ ನೀತಿಗಳನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ ಪ್ರಸ್ತುತ ಅಧ್ಯಯನಕ್ಕೆ ಈ ಗ್ರಂಥದಿಂದ ಸಾಕಷ್ಟು ಮಾಹಿತಿಗಳು ಮತ್ತು ಮಾರ್ಗದರ್ಶನ ಲಭ್ಯವಾಗಿದೆ.

ಅಧ್ಯಯನದ ಉದ್ದೇಶಗಳು:

- ಮಹಿಳಾ ಕಾರ್ಮಿಕರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು.
- ಮಹಿಳಾ ಕಾರ್ಮಿಕರ ಮೂಲಭೂತ ಸಮಸ್ಯೆಗಳನ್ನು ತಿಳಿಯುವುದು.
- ಸಂಶೊಧನಾ ಸಮಸ್ಯೆಯ ಹೇಳಿಕೆ.

ಪ್ರಸ್ತುತ ಅಧ್ಯಯನವು "ದಾವಣಗೆರೆ ನಗರಕ್ಕೆ ಸಂಬಂಧಿಸಿದಂತೆ, ಭತ್ತದ ಗಿರಣಿಗಳಲ್ಲಿ ಕೆಲಸ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬುದಾಗಿದೆ.

ಅಧ್ಯಯನದ ಜನಸಂಖ್ಯೆ ಮತ್ತು ಮಾದರಿ :

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಮೇಲೆ ಉಲ್ಲೇಖಿಸಿದಂತೆ, ಭತ್ತದ ಗಿರಣಿಗಳಲ್ಲಿ ದುಡಿಯುತ್ತಿರುವಂತಹ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು, ದಾವಣಗೆರೆ ನಗರ ಪಟ್ಟಣದ ಗಿರಣಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಭತ್ತದ ಗಿರಣಿಗಳಿಗೆ ಭೇಟಿ ಮಾಡಿ 'ಸರಳ ವಿಭಾಗಿತ ಯಾದೃಚ್ಚಿಕ ಮಾದರಿಯಿಂದ ಆಯ್ಕೆ ಮಾಡಿದ 50 ಮಹಿಳಾ ಕಾರ್ಮಿಕರನ್ನು ಸಂದರ್ಶನ ಅನುಸೂಚಿ, ಅವಲೋಕನದ ಸಹಾಯದಿಂದ ಮುಕ್ತವಾಗಿ ಮಾಹಿತಿ ಸಂಗ್ರಹಿಸಲಾಗಿದೆ.

ಸಂಶೋಧನಾ ವಿಧಾನ ಮತ್ತು ತಂತ್ರಗಳು :

ಪ್ರಸ್ತುತ ಅಧ್ಯಯನದಲ್ಲಿ ಎರಡು ರೀತಿಯ ಸಂಶೋಧನಾ ತಂತ್ರಗಳನ್ನು ಬಳಸಲಾಗಿದೆ.

1. ಸಂದರ್ಶನ : ಸಂದರ್ಶನ ಅನುಸೂಚಿಯನ್ನು ಬಳಸಿ ಸಂಶೋಧನಾ ಅಧ್ಯಯನದ ಮಾದರಿಯಿಂದ 50 ಜನ ಸೂಚನಾದಾರರನ್ನು ಆಯ್ಕೆ ಮಾಡಿಕೊಂಡು. ದಾವಣಗೆರೆ ನಗರದ ಭತ್ತದ ಗಿರಣಿಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕ ಸಾಮಾಜಿಕ ಸ್ಥಿತಿಗಳು ವಯಕ್ತಿಕವಾಗಿ ಸಂದರ್ಶಿಸಲಾಗಿದೆ.

2. ಅವಲೋಕನ : ಅಧ್ಯಯನದ ಸಂದರ್ಶನದಲ್ಲಿ ದಾವಣಗೆರೆ ನಗರದ ಭತ್ತದ ಗಿರಣಿಗಳಲ್ಲಿ ಮಹಿಳಾ ಕಾರ್ಮಿಕರ ಸೇವೆ ಸಲ್ಲಿಸುತ್ತಿರುವವರ ಮನೋಭಾವನೆಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಸಾಮಾಜಿಕ ಸ್ಥಿತಿಗತಿಗಳನ್ನು ಅವಲೋಕಿಸಲಾಗಿದೆ.

ಮಾಹಿತಿ ಸಂಗ್ರಹಣೆಯ ಮೂಲಗಳು :

ಮಾಹಿತಿಯನ್ನು ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಲು ಪ್ರಮುಖವಾಗಿ ಎರಡು ರೀತಿಯ ವಿಧಾನವನ್ನು ಬಳಸಿಕೊಳ್ಳಲಾಗಿದೆ.

1. ಪ್ರಾಥಮಿಕ ಆಕರಗಳು : ಪ್ರಾಥಮಿಕ ಆಕರಗಳ ಸಹಾಯದಿಂದ ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಸರಳ ಯಾದೃಚ್ಚಿಕ ನಮೂನೆಯಿಂದ ಆಯ್ಕೆ ಮಾಡಿದ ದಾವಣಗೆರೆ ನಗರದ ಭತ್ತದ ಗಿರಣಿಗಳಲ್ಲಿನ ಮಹಿಳೆಯರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವಲೋಕನ ಸಹಾಯದಿಂದ ಮತ್ತು ಕ್ಯಾಮರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

2. ಮಾಧ್ಯಮಿಕ ಆಕರಗಳು : ಪ್ರಾಥಮಿಕ ಆಕರಗಳು ಮೂಲಕ ಮಾತ್ರವೇ ಅಲ್ಲದೆ ಮಾಧ್ಯಮಿಕ ಆಕರಗಳು ಮೂಲಕವು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಧ್ಯಮಿಕ ಆಕರಗಳಾದ ಗ್ರಂಥಾಲಯದಲ್ಲಿ ದೊರೆಯುವ ವಿವಿಧ ಲೇಖಕರು ಬರೆದಿರುವಂತಹ ಗ್ರಂಥಗಳು, ಲೇಖನಗಳು, ದಿನಪತ್ರಿಕೆಗಳು, ಯೋಜನಾ ಪುಸ್ತಕಗಳು, ವಿಶ್ವಕೋಶಗಳು ಹಾಗೂ ಸಮೀಕ್ಷಾ ಗ್ರಂಥಗಳು, ಸಂಶೋಧನಾ ಮಹಾ ಪ್ರಬಂಧಗಳಲ್ಲಿ ದೊರೆಯುವಂತಹ ಮಾಹಿತಿಯನ್ನು ಆಧರಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮಾಹಿತಿ ವಿಶ್ಲೇಷಣೆ :

ಈ ಮೇಲೆ ತಿಳಿಸಿದ ಎಲ್ಲಾ ಸಂಶೋಧನಾ ವಿಧಾನಗಳು ಹಾಗೂ ಹಲವಾರು ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪಟ್ಟಿ ಮಾಡಲಾಗಿದೆ. ಸೂಚೀಕರಣ ಮತ್ತು ಅಗತ್ಯವೆನಿಸಿದಷ್ಟು ಸಂಖ್ಯಾಶಾಸ್ತ್ರೀಯ ವಿಧಾನಗಳಿಂದ

ಮಾಹಿತಿಯನ್ನು ವಿಶ್ಲೇಷಿಸುವುದರ ಮೂಲಕ ಅಧ್ಯಯನ ನಡೆಸಲಾಗಿದೆ. ಅಲ್ಲದೆ ಎಲ್ಲಾ ಅಂಶಗಳನ್ನು ನಮೂದಿಸಿ ಅದರ ಶೇಕಡವಾರುಗಳನ್ನು ತಿಳಿಸಲಾಗಿದೆ. ಈ ರೀತಿಯಾಗಿ ಸಂಶೋಧನಾ ಮಾಹಿತಿಯನ್ನು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶ್ಲೇಷಿಸಿ ವರದಿಯನ್ನು ತಯಾರಿಸಲಾಗಿದೆ.

ವಯಸ್ಸು :

ಮಹಿಳಾ ಕಾರ್ಮಿಕರ ಅಧ್ಯಯನದ ದೃಷ್ಟಿಯಿಂದ ವಯೋರಚನೆಯು ಬಹಳ ಪ್ರಾಮುಖ್ಯತೆ ಪಡೆದಿದೆ. ಏಕೆಂದರೆ ಬಹಳಷ್ಟು ಕಾರ್ಮಿಕರು ಕಾರ್ಖಾನೆಗಳಲ್ಲಿ ಬಾಲಕಾರ್ಮಿಕರು ಇರುತ್ತಾರೆ. ಅದ್ದರಿಂದ ಮಾಡುವ ಕೆಲಸದ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾದರೆ ವಯಸ್ಸು ಕೂಡ ಬಹಳ ಮುಖ್ಯ. ಆದರೆ ಆರ್ಥಿಕತೆಯ ಅನುಕೂಲ ಅವಶ್ಯಕವಾಗಿರುವುದರಿಂದ ಅವರಿಗೆ ದೊರಕಿದ ಕೆಲಸವನ್ನು ಮಾಡಬೇಕಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳಾ ಕಾರ್ಮಿಕರು ಸೂಚಿಸಿದ ಹಾಗೆ ಈ ಕೆಳಗಿನ ಕೋಷ್ಟಕಯಿಂದ ಅವರ ವಯೋರಚನೆಯ ಮಾಹಿತಿಯನ್ನು ತಿಳಿಯಬಹುದು.

ಕೋಷ್ಟಕ : 01

ಮಹಿಳಾ ಕಾರ್ಮಿಕರ ವಯೋರಚನೆಯ ವಿವರ

ಮಹಿಳಾ ಕಾರ್ಮಿಕರ ವಯಸ್ಸು	ಆವೃತ್ತಿ	ಶೇಕಡವಾರು
20–24	02	04.00
25–29	15	30.00
30–34	05	10.00
35–39	10	20.00
40–45	12	24.00
45–49	06	12.00
50– ಕ್ಕಿಂತ ಹೆಚ್ಚು	00	00.00
ಒಟ್ಟು	**50**	**100.00**

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ 20–24 ವರ್ಷ ವಯಸ್ಸಿನ ಮಹಿಳಾ ಕಾರ್ಮಿಕರು ಶೇಕಡ 04. ರಷ್ಟು ದುಡಿಯುತ್ತಿದ್ದಾರೆ. 25–29 ವರ್ಷ ವಯಸ್ಸಿನ ಮಹಿಳಾ ಕಾರ್ಮಿಕರು ಶೇಕಡ 30ರಷ್ಟು ದುಡಿಯುತ್ತಿದ್ದಾರೆ. 30–34 ವರ್ಷ ವಯಸ್ಸಿನ ಮಹಿಳಾ ಕಾರ್ಮಿಕರು ಶೇಕಡ 10.ರಷ್ಟು ದುಡಿಯುತ್ತಿದ್ದಾರೆ.

35–39 ವರ್ಷ ವಯಸ್ಸಿನ ಮಹಿಳಾ ಕಾರ್ಮಿಕರು ಶೇಕಡ 24ರಷ್ಟು ದುಡಿಯುತ್ತಿದ್ದಾರೆ. 45–49ವರ್ಷ ವಯಸ್ಸಿನ ಮಹಿಳಾ ಕಾರ್ಮಿಕರು ಶೇಕಡ 12ರಷ್ಟು ದುಡಿಯುತ್ತಿದ್ದಾರೆ.

ಈ ಕೊನೆಯ ವಯಸ್ಸಿನ ಮಹಿಳಾ ಕಾರ್ಮಿಕರಲ್ಲಿ ಮುಖ್ಯವಾಗಿ ದೇಹದಲ್ಲಿ ನಿಶ್ಯಕ್ತಿ ಬಲಹೀನತೆ, ಅನಾರೋಗ್ಯದ ಕಾಲಾವಧಿ ಇನ್ನೂ ಮುಂತಾದ ತೊಂದರೆಗಳನ್ನು ಕಾಣುತ್ತೇವೆ. ಇದರಿಂದ ಕೆಲಸದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಲು ಸಾಧ್ಯವಾಗದ ಪರಿಸ್ಥಿತಿಯಿದೆ. ಆದರೂ ಮೂಲತಃ ಕುಟುಂಬದ ನಿರ್ವಹಣೆ ಅತ್ಯವಶ್ಯಕವಾಗಿರುವುದರಿಂದ ದುಡಿಯಲೇ ಬೇಕಾದಂತಹ ಪರಿಸ್ಥಿತಿಯಿಂದ ದಣಿದು ರಾತ್ರಿ ಹಾಸಿಗೆ ಸೇರಬೇಕಾಗುತ್ತದೆ.

ಕುಟುಂಬದಲ್ಲಿ ಅತಿಪಾನತೆಯ ಘಟನೆ :

ಮಧ್ಯಪಾನ ಮಾನವನ ಒಂದು ಚಟ. ಮಧ್ಯಪಾನವನ್ನು ಮಿತವಾಗಲ್ಲದೆ ಅತಿಯಾಗಿ ಉಪಯೋಗಿಸಿದಾಗ ಅದು ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗೆ ನಾಂದಿಯಾಗುತ್ತದೆ. ಮಧ್ಯಪಾನವನ್ನು ಉಪಯೋಗಿಸಿದ ವ್ಯಕ್ತಿಗಳಲ್ಲದೇ ಅವರ ಕುಟುಂಬಕ್ಕೂ, ಸಮಾಜಕ್ಕೂ ಹಾನಿಕರ ಪರಿಣಾಮಗಳನ್ನು ಬೀರುತ್ತದೆ. ಕುಡುಕರು ಸಮಾಜದಲ್ಲಿ ಘನತೆ, ಅಂತಸ್ತು ಹಾಗೂ ಸ್ಥಾನಮಾನಗಳನ್ನು ಕಳೆದುಕೊಳ್ಳುತ್ತಾರೆ, ಅವರು ಸಾಮಾಜಿಕ ಕಳಂಕ ಹಾಗೂ ಖಂಡನೆಗೆ ಗುರಿಯಾಗುತ್ತಾರೆ. ಕುಡಿತದಿಂದ ಗಂಡ–ಹೆಂಡತಿ ಸಂಬಂಧ ಹಾಗೂ ತಂದೆ ಮಕ್ಕಳ ಸಂಬಂಧ ಕೆಟ್ಟು ಹೋಗುತ್ತದೆ. ಕೆಲವು ಕುಡುಕರ ಕುಟುಂಬದಲ್ಲಿ ಜಗಳ ದಿನ ನಿತ್ಯವಾಗಿರುತ್ತದೆ, ಇದರಿಂದ ಕುಟುಂಬದ ಸೌಹಾರ್ದಯುತ ವಾತಾವರಣವೇ ಕೆಟ್ಟು ಹೋಗುತ್ತದೆ, ಗಂಡನ ಮೇಲೆ ಹೆಂಡತಿ, ಹೆಂಡತಿ ಮೇಲೆ ಗಂಡ ಹೀಗೆ ಒಬ್ಬರ ಮೇಲೆ ಒಬ್ಬರಿಗೆ ತಿರಸ್ಕಾರ ಬೆಳೆಯುತ್ತದೆ, ಅಲ್ಲದೆ ಮಕ್ಕಳೂ ಸಹ ನಿರ್ಲಷ್ಟಕ್ಕೆ ಒಳಗಾಗುತ್ತಾರೆ,ಭತ್ತದ ಗಿರಣಿಗಳಿಗೆ ಭೇಟಿ ನೀಡಿ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದ ಸಮಯದಲ್ಲಿ ನಮಗೆ ಹೆಚ್ಚು ಭಾಗ ಕುಡಿತಕ್ಕೆ ಒಳಗಾಗಿರುವುದು ಕಂಡು ಬಂದಿತು, ಅದರ ಒಂದು ಕೋಷ್ಟಕ ಈ ಕೆಳಗಿನಂತಿದೆ.

ಕೋಷ್ಟಕ : 03

ಸೂಚನಾದಾರರ ಕುಟುಂಬದಲ್ಲಿ ಅತಿಪಾನತೆಯ ವಿವರ

ಕುಟುಂಬದಲ್ಲಿ ಅತಿಪಾತೆ	ಆವೃತ್ತಿ (50)	ಶೇಕಡವಾರು(100.00%)
ಗಂಡ	35	70.00
ಗಂಡು ಮಕ್ಕಳು	15	30.00
ಹೆಣ್ಣು ಮಕ್ಕಳು	03	06.00
ನೀವು	30	60.00
ಹಿರಿಯರು	38	76.00
ಇತರರು	18	36.00

ಈ ಮೇಲಿನ ಕೊಷ್ಟಕದಿಂದ ತಿಳಿದು ಬರುವುದೇನೆಂದರೆ ಗಂಡ ಶೇ,70 ರಷ್ಟು ಗಂಡು ಮಕ್ಕಳು ,ಶೇ,30ರಷ್ಟು, ಹೆಣ್ಣು ಮಕ್ಕಳು 06ರಷ್ಟು, ಮಹಿಳಾ ಕಾರ್ಮಿಕರು ಶೇ.60ರಷ್ಟು, ಮಹಿಳಾ ಕಾರ್ಮಿಕರ ಮನೆಯಲ್ಲಿರುವ ಹಿರಿಯರು ಶೇ 76ರಷ್ಟು, ಇತರರು ಶೇ 36ರಷ್ಟು, ಎಂದು ತಿಳಿದು ಬಂದಿದೆ, ಮಹಿಳಾ ಕಾರ್ಮಿಕರು ಸ್ವತಃ ತಾವೇ ಕುಡುಕರಾಗಿದ್ದು ಇದು ಅವರ ಸಾಮಾಜಿಕ ಸ್ಥಾನಮಾನ ಮತ್ತು ಕುಟುಂಬದ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರುತ್ತದೆ, ಇದೂ ಕೂಡ ಅವರ ಒಂದು ಪ್ರಮುಖ ಸಮಸ್ಯೆ.

ಕೋಷ್ಟಕ : 04

ಮಹಿಳಾ ಕಾರ್ಮಿಕರ ಮೇಲೆ ಬೀರುವ ಕೆಟ್ಟ ಪರಿಣಾಮಗಳ ವಿವರ

ಪರಿಣಾಮಗಳು	ಆವೃತ್ತಿ	ಶೇಕಡವಾರು
ಗಂಡ, ಮಕ್ಕಳು ಮತ್ತು ಕುಟುಂಬ ಇತರ ಸದಸ್ಯರ ಮೇಲೆ	09	18.00
ಆರೋಗ್ಯದ ಮೇಲೆ	30	60.00
ಮಕ್ಕಳನ್ನು ಬೆಳೆಸುವಲ್ಲಿ	11	60.00
ಒಟ್ಟು	**50**	**100.00**

ಈ ಮೇಲ್ಕಂಡ ಕೋಷ್ಟಕದಿಂದ ತಿಳಿದು ಬರುವ ಸಂಗತಿಯನ್ನು ಸಂಕ್ಷಿಪ್ತವಾಗಿ ಈ ರೀತಿ ವಿವರಿಸಬಹುದು, ಮಹಿಳಾ ಕಾರ್ಮಿಕರು ಭತ್ತದ ಕೆಲಸಕ್ಕೆ ಹೋಗುವುದರಿಂದ ಗಂಡ, ಮಕ್ಕಳು ಮತ್ತು ಇತರ ಸದಸ್ಯರ ಮೇಲೆ ತೀರ ಕೆಟ್ಟ ಪ್ರಭಾವ ಬೀರುತ್ತದೆ ಏಕೆಂದರೆ ಗಿರಣಿಗಳಲ್ಲಿ ದುಡಿಯುವುದರಿಂದ ಇವರ ಕೂಲಿ ತುಂಬಾ

ಕಡಿಮೆಯಾದ್ದರಿಂದ ಸಂಪೂರ್ಣ ಮನೆಯ ಖರ್ಚನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ, ಇದರಿಂದ ಮಕ್ಕಳ ಲಾಲನೆ, ಪೋಷಣೆ ಮಾಡುವುದಕ್ಕೆ ಖಂಡಿತಾ ಸಾಧ್ಯವಾಗುತ್ತಿಲ್ಲ, ಜೊತೆಗೆ ಗಂಡನೂ ದುಡಿಯುತ್ತಿದ್ದಾರೆ, ಹೆಂಡತಿಯೂ ಬೆಳ್ಳಿಗ್ಗೆಯಿಂದ ಸಾಯಂಕಾಲದವರೆಗೂ ಗಿರಣಿಗಳಲ್ಲಿ ದುಡಿದು ಮನೆಗೆ ಬಂದು ಮನೆಗೆಲಸವನ್ನು ಮಾಡಬೇಕಾರುವುದರಿಂದ ದೈಹಿಕವಾಗಿ, ಮಾನಸಿಕವಾಗಿ ತುಂಬಾ ಶ್ರಮವಹಿಸಬೇಕಾಗುತ್ತದೆ.

ಎರಡನೆಯದಾಗಿ ಮಹಿಳಾ ಕಾರ್ಮಿಕರು ಇಂತಹ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವುದ ರಿಂದ ಅವರ ಆರೋಗ್ಯದ ಸ್ಥಿತಿ ಕೆಳಮಟ್ಟಕ್ಕೆ ಹೋಗುವುದು, ಹೇಗೆಂದರೆ ಯಾವುದೇ ರೀತಿಯ ವೈದ್ಯಕೀಯ ಸೌಲಭ್ಯಗಳು ಯಾವೊಂದು ಗಿರಣಿಗಳಲ್ಲಿಯೂ ಒದಗಿಸಿರುವುದಿಲ್ಲ, ಇಂತಹ ಪರಿಸ್ಥಿತಿಯಿಂದಾಗಿ ಮಹಿಳಾ ಕಾರ್ಮಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ, ಈ ಗಿರಣಿಗಳಲ್ಲಿ ಹೆಚ್ಚು ಧೂಳಿನಿಂದ ಕೂಡಿದಂತಹ ಮತ್ತು ಹೆಚ್ಚು ಶಾಖದಿಂದ ಕೂಡಿದಂತಹ ವಾತಾವರಣದಲ್ಲಿ ಕೆಲಸ ನಿರ್ವಹಿಸಬೇಕಾಗಿರುತ್ತದೆ, ಇದರಿಂದ ಅವರಿಗೆ ಕೆಮ್ಮು , ದಮ್ಮು, ಅಲರ್ಜಿ, ಶ್ವಾಸಕೋಶಕ್ಕೆ ಸಂಬಂಧಿಸಿದಂತಹ ಕಾಯಿಲೆಗಳು ಹೀಗೆ ಇನ್ನೂ ಮುಂತಾದ ರೋಗಗಳಿಗೆ ತುತ್ತಾಗುತ್ತಾರೆ. ಕಾರ್ಮಿಕರು ತಮ್ಮ ಯೋಗ್ಯತಾನುಸಾರ ಖಾಸಗೀ ಮತ್ತು ಸರ್ಕಾರೀ ಆಸ್ಪತ್ರೆಗೆ ಹೋಗಿ ತಮ್ಮ ಆರೋಗ್ಯ ತಪಾಸಣೆ ಮಾಡಿಕೊಳ್ಳುತ್ತಾರೆ, ವೈದ್ಯಕೀಯ ಸೌಲಭ್ಯಕ್ಕಂತೂ ಯಾವುದೇ ರೀತಿಯ ಸಹಾಯವನ್ನು ಗಿರಣಿಗಳ ಮಾಲೀಕರು ಒದಗಿಸಿಲ್ಲದಿರುವುದನ್ನು ಕಾಣಬಹುದಾಗಿದೆ.

ಮೂರನೆಯದಾಗಿ ಮಹಿಳಾ ಕಾರ್ಮಿಕರು ಮಕ್ಕಳನ್ನು ಬೆಳೆಸುವಲ್ಲಿ ಹಲವಾರು ಸಮಸ್ಯೆಗಳು ತಲೆದೋರುತ್ತದೆ, ಕೆಲವು ಕುಟುಂಬದಲ್ಲಿ ಗಂಡ–ಹೆಂಡತಿಯರಿಬ್ಬರೂ ಕೆಲಸದಲ್ಲಿ ನಿರತರಾಗಿರುವುದರಿಂದ ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುವುದನ್ನು ಗಮನಿಸಬಹುದು, ಮಕ್ಕಳಿಗೆ ಪೋಷಕರ ಪ್ರೀತಿ,ಪ್ರೇಮ, ವಾತ್ಸಲ್ಯ,ಪೋಷಣೆ, ಮುಖ್ಯವಾಗಿರುತ್ತದೆ, ಕೆಲಸದಲ್ಲಿ ನಿರತರಾಗಿರುವ ಇವರು ಇವುಗಳನ್ನು ಒದಗಿಸಲು ಸಾಧ್ಯವಿರದ ವಾತಾವರಣದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಇವರ ಮಕ್ಕಳನ್ನು ಆಡಿಸಲು ಗಿರಣಿಗಳಲ್ಲಿ ಯಾವುದೇ ರೀತಿ ರಕ್ಷಣಾ ಗೃಹಗಳು ಇಲ್ಲದಿರುವುದು ಕಂಡು ಬರುತ್ತದೆ. ಇದರಿಂದ ಇದರ ಮಕ್ಕಳ ಮೇಲೆ ಅವರ ಬೆಳವಣಿಗೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಇಂತಹ ಮಕ್ಕಳಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸಿ ಸಮಾಜದಲ್ಲಿ ಇವರನ್ನು ಸತ್ಪ್ರಜೆಗಳನ್ನಾಗಿ ಮಾಡುವುದು ಪ್ರತಿಯೊಬ್ಬ

ನಾಗರೀಕನ ಆದ್ಯ ಕರ್ತವ್ಯವಾಗಿದೆ.

ಈ ಮೇಲೆ ತಿಳಿಸಿದ ಅಂಶಗಳಲ್ಲಿ ಮಹಿಳಾ ಕಾರ್ಮಿಕರಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಮಾಲೀಕರು ಒದಗಿಸಿದೇ ಇರುವುದು ಇಲ್ಲಿ ಕಂಡುಬರುತ್ತದೆ. ಕ್ಷೇತ್ರಾಧ್ಯಯನ ವ್ಯಾಪ್ತಿಯಲ್ಲಿ ಬರುವ ಗಿರಣಿಗಳಲ್ಲಿ ಮಹಿಳಾ ಕಾರ್ಮಿಕರಿಗೆ ವಿಶ್ರಾಂತಿ ಗೃಹಗಳಿಲ್ಲ, ಉಪಹಾರ ಗೃಹಗಳಿಲ್ಲ, ಆರೋಗ್ಯ ಮತ್ತು ರಕ್ಷಣಾ ಸೌಲಭ್ಯಗಳಲ್ಲಿ, ಹೀಗೆ ಇನ್ನೂ ಹಲವಾರು ಅಂಶಗಳನ್ನು ಪಟ್ಟಿ ಮಾಡುತ್ತಾ ಹೋಗುವುದು ಆದ್ದರಿಂದ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಮೇಲೆ ಹಲವಾರು ಅಂಶಗಳು ಕೆಟ್ಟ ಪರಿಣಾಮಗಳನ್ನು ಉಂಟುಮಾಡುತ್ತವೆ.

ಸಲಹೆಗಳು

- ಮಹಿಳಾ ಕಾರ್ಮಿಕರಿಗೆ ಕೊಡುವ ಕೂಲಿ ಬಹಳ ಕಡಿಮೆ ಇದರಿಂದ ಅವರಿಗೆ ಜೀವನ ನಿರ್ವಹಣೆ ಸಾಧ್ಯವಾಗದ ಸ್ಥಿತಿಯನ್ನು ಕಾಣಬಹುದು. ಆದ್ದರಿಂದ ಕಾಲಕಾಲಕ್ಕೆ ಅನ್ವಯಿಸುವ ಕೂಲಿಯನ್ನು ಹೆಚ್ಚು ಮಾಡಬೇಕು.
- ಈ ಗಿರಣಿಯಲ್ಲಿ ಮಹಿಳಾ ಕಾರ್ಮಿಕರ ಮಕ್ಕಳಿಗೆ ಶಾಲೆಯ ಸೌಲಭ್ಯ ಇರುವುದಿಲ್ಲ. ಇವರಿಗೆ ಇತರೆ ಶಾಲೆಗಳಿಗೆ ಕಳುಹಿಸುವಂತಹ ಚೈತನ್ಯ ಇರುವುದಿಲ್ಲ. ಆದ್ದರಿಂದ ಆ ಮಕ್ಕಳ ಅಜ್ಞಾನ ತೊಲಗಿಸಿ ಸುಜ್ಞಾನದ ದಾರಿ ತೋರಿಸಬೇಕಾದರೆ ಶಿಕ್ಷಣ ಸೌಲಭ್ಯವನ್ನು ಒದಗಿಸಿಕೊಡಬೇಕು.

ಆಧಾರ ಗ್ರಂಥಗಳು / REFERENCES

- ಜೋಷಿ ಸಿ.ಟಿ. "ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಿತಿಗತಿ ಮತ್ತು ಮಹಿಳಾ ಕಾರ್ಮಿಕ ಒಂದು ವಿಶ್ಲೇಷಣೆ"
- Savithri Arp uthamurthy- 1954 women work and Discrimination Ashish publishing Hous, New Delhi
- Chhaochharia, Sweta, Targeting Women: A Financial Perspective (2006).
- http://www.yorku.ca/laps/people/working_papers/SAS-HR2008-03-Ezzedeen.pdf
- http://www.icoachacademy.com/blog/coaching-resources/research-papers/himani-tyagiindian-working-

women-and-life-coaching

- http://www.aabri.com/manuscripts/08056.pdf
- http://en.wikipedia.org/wiki Women_in_India#Workforce_participation
- Singh, S., & Hoge, G. (2010). Debating Outcomes for 'Working' Women – Illustration from India, The Journal of Poverty, 14 (2), 197-215

ಸಂದೀಪ ಆರ್.
ಸಂಶೋಧಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಜ್ಞಾನ ಸಹ್ಯಾದ್ರಿ ಶಂಕರಘಟ್ಟ ಶಿವಮೊಗ್ಗ ಜಿಲ್ಲೆ, 577451
sandeep21.jlr@gmail.com

ಕನ್ನಡ ಸಾಹಿತ್ಯದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಪರಿಕಲ್ಪನೆ

¤ ಮಂಜುನಾಥ .ಬಿ

ನಮ್ಮನಾಳುವ ಪ್ರಭುತ್ವಗಳು ದಿಕ್ಕುತಪ್ಪಿದಾಗ ವಿಮರ್ಶಿಸುವ, ಟೀಕಿಸುವ ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಈ ನೆಲದ ಪ್ರತಿಯೊಬ್ಬರಿಗೂ ಇದೆ. ತಮ್ಮ ಸರ್ಕಾರದ ವಿರುದ್ಧದ ಟೀಕೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸದ ಸಂದಿಗ್ಧ, ಸಂಕೀರ್ಣ ಕಾಲಘಟ್ಟದಲ್ಲಿ ನಾವಿದ್ದೇವೆ. ಈ ಮೂಲಕ ಪ್ರಭುತ್ವಗಳು ತಮ್ಮ ಅಧಿಕಾರದ ಎಲ್ಲೇ ಮೀರಿ ಮತ್ತೊಬ್ಬರ 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಕಸಿದುಕೊಳ್ಳುವ, ಹರಣಮಾಡುವಲ್ಲಿ ನಿರತವಾಗಿವೆ. ಸರ್ಕಾರವನ್ನು ಟೀಕಿಸಿದವರ ವಿರುದ್ಧ ತಮ್ಮ ಸುಪರ್ಧಿಯಲ್ಲಿರುವ ಸೇನೆ, ಪೋಲಿಸ್, ಸಿಬಿಐ, ಇಡಿ ಯಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಅವರ ಅಭಿವ್ಯಕ್ತಿ ಕ್ರಮವನ್ನು ಹತ್ತಿಕ್ಕುವಲ್ಲಿ ನಿರತವಾಗಿದೆ. ಆದರೆ ಪ್ರಾಚೀನ ಕನ್ನಡ ಸಾಹಿತ್ಯದಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದವರೆಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಯಾವ ನಿಲುವು ತಾಳಿದೆ ಎಂಬುದನ್ನು ಈ ಲೇಖನದಲ್ಲಿ ಅನೇಕ ಪ್ರಸಂಗಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪಂಪಭಾರತದಲ್ಲಿ ಬರುವ ಒಂದು ಸನ್ನಿವೇಶ, ಜೂಜಿನಲ್ಲಿ ಮೋಸದಿಂದ ದುರ್ಯೋಧನ ಧರ್ಮರಾಯನಿಂದ ಸಾಮ್ರಾಜ್ಯವನ್ನು ಪಡೆದ ಮೇಲೆ ಅದರ ಆಳ್ವಿಕೆಯನ್ನು ಸರಿಯಾಗಿ ನಿರ್ವಹಿಸುತ್ತಿರುವನೋ? ಇಲ್ಲವೋ? ಎಂಬ ಆತಂಕದಲ್ಲಿ ಅವನ ಆಳ್ವಿಕೆಯ ಸಮಸ್ತ ವಿಚಾರ ತಿಳಿಯಲು ಕಿರಾತನೆಂಬ ದೂತನನ್ನು ಧರ್ಮರಾಯ ಗುಪ್ತವಾಗಿ ಅಟ್ಟಿದ. ಆತ ಅವನ ಆಳ್ವಿಕೆಯನ್ನು ಕುರಿತು ಈ ರೀತಿ ಹೊಗಳಿದ. ದುರ್ಯೋಧನನು ಜೂಜಿನಲ್ಲಿ ರಾಜ್ಯ ಪಡೆದ ಮೇಲೆ ಅತ್ಯಂತ ನೀತಿಯುತವಾಗಿ ಆಳುತ್ತಿರುವನು. ದುಶ್ಶಾಸನನನ್ನು ಯುವರಾಜನನ್ನಾಗಿ ಮಾಡಿ, ಸುಖದಿಂದ ರಾಜ್ಯಭಾರ ಮಾಡುತ್ತಿದ್ದ. "ಜೂಜಿನಲ್ಲಿ ಪಡೆದ ರಾಜ್ಯವನ್ನು ತನ್ನ ಅಂಗೈಯಲ್ಲಿರುವ ಹಾಗೆ

ನೋಡಿಕೊಳ್ಳುತ್ತಾ ಇರುವನು. ಆತನ ಆಳ್ವಿಕೆಯ ಹೊಸ ಮಾದರಿ 'ಬೃಹಸ್ಪತಿ'ಯ ಆಡಳಿತವನ್ನು ಮೀರಿಸುವಂತಿದೆ.

ಮ॥ ಮೊದಲೊಳ್ ತಿಣ್ಣಮದೊಪ್ಪಿ ತಪ್ಪಿದುದನೀಯೆಂದಟ್ಟಿದಂ ದಂಡನ/
ಟ್ಟದೆ ಸಾಮರ್ಥ್ಯದಿನಟ್ಟಿದೋಲೆಗೆ ಮಹಾಪ್ರತ್ಯಂತ ಭೂಪಾಳರ//
ಟ್ಟಿದ ಕಾಳಿಂಗ ಗಜೇಂದ್ರ ದಾನಜಲಧಾರಾಸಾರದಿಂ ನೋಡ ಕುಂ/
ದಿದುದಿಲ್ಲೊಳ್ಗೆಸಱೂ ಸುಯೋಧನ ನೃಪದ್ವಾರೋಪಕಂಠಗಳೊಳ್ //[1]

ಸಾಮಂತರಾಜರುಗಳು ಕೊಡವ ಕಪ್ಪವನ್ನು ಕೊಡದೆ ಮಾತುತಪ್ಪಿದರೆ ಕೂಡಲೆ ಯದ್ದಮಾಡದೇ 'ಸಾಮ' ತಂತ್ರವನ್ನು ಅನುಸರಿಸುವನು. ಅವನ ಆಜ್ಞಾಪತ್ರ ಕಂಡ ಕೂಡಲೇ ಸಮಸ್ತ ಸಾಮಂತರು ಕಪ್ಪ ಸಲ್ಲಿಸುತ್ತಿದ್ದರು. ಕಪ್ಪವನ್ನು ಕಳಿಂಗ ದೇಶದ ಆನೆಗಳ ಮೇಲೇರಿ ಕಳುಹಿಸುತ್ತಿದ್ದರು. ಆನೆಗಳ ಕಾಲಿನಿಂದ ಉದ್ಭವವಾದ ಕೆಸರು ಅರಮನೆಯ ಬಾಗಿಲಿನಲ್ಲಿ ವರ್ಷಪೂರ್ತಿ ಕಡಿಮೆಯಾಗಲೇ ಇಲ್ಲ ಎಂದನು. ಆತ ಸದಾಕಾಲ ಮೈ ಮರೆಯದಂತೆ ಎಚ್ಚರದಿಂದ ಆಳ್ವಿಕೆ ಮಾಡುತ್ತಿದ್ದಾನೆಂಬುದನ್ನು ಕಿರಾತ ದುರ್ಯೋಧನನ 'ರಾಜನೀತಿ ಧರ್ಮ'ದ ಕುರಿತು ತಿಳಿಸಿದನು

ಕುಸಿದಂ ರಿಪುವಿಜಯದೆ ನಿ/
ದ್ರಿಸಿದಂ ಕಂಡೆಂದಿನಂದಮಂ ತಪ್ಪಿದನಾ ।
ಳ್ವೆಸಕಗಿಯೆ ನುಡಿದನೆಂಬೀ/
ಪಿಸುಣನಣಂ ಕೇಳ್ದೆನಿಲ್ಲ ಬೀಡಿನೊಳವನಾ''//[2]

ಈ ಹಿಂದಿನ ಆಡಳಿತದ ಅವಧಿಯಲ್ಲಿ ಕಪ್ಪ ಸಲ್ಲಿಸಲು ಮೈ ಮರೆಯುತ್ತಿದ್ದ ಸಾಮಂತರುಗಳು ಇಲ್ಲಿ ಮಾತ್ರ ತಪ್ಪದೇ ಕಪ್ಪ ನೀಡುತ್ತಿದ್ದಾರೆ. ಈ ಹಿಂದೆ ರಾಜರುಗಳು ಗೆಲುವಿನಿಂದ ಉಬ್ಬಿ ಮೈ ಮರೆತು ನಿದ್ರಿಸಿದರೆ ಇವನು ಮಾತ್ರ ಎಚ್ಚರಿಕೆಯಿಂದಿರುತ್ತಿದ್ದನು. ದುರ್ಯೋದನನ ಕುರಿತ ಕೆಟ್ಟ ಚಾಡಿಮಾತುಗಳು ಬೀಡಿನಲ್ಲಿ ಯಾರ ಬಾಯಲ್ಲೂ ಕೇಳಲೇ ಇಲ್ಲ.

ಪ್ರಭುತ್ವವೆಂಬುದ ಮೂಲತಃ ಒಡೆತನ, ಆಳ್ವಿಕೆ ಎಂಬ ಅರ್ಥವನ್ನು ನಿರೂಪಿಸಿದರೂ ಅದೊಂದು ಆಳುವ ಮತ್ತು ಆಳ್ವಿಕೆಗೆ ಒಳಪಡುವವರ ಒಂದು ಸಂಕೀರ್ಣ ವ್ಯವಸ್ಥೆಯಾಗಿರುತ್ತದೆ. ಮೂಲತಃ ಅದೊಂದು ಅಧಿಕಾರದ ಕೇಂದ್ರವನ್ನು ಆಧರಿಸಿರುತ್ತದೆ. ಪ್ರಜೆಗಳಿಂದ ಆರಿಸಿಬರುವ ಪ್ರಭುಗಳು ತಮ್ಮ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು ಆಡಳಿತ ನಡೆಸಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಳುವ ಮತ್ತು ವಿರೋಧಪಕ್ಷಗಳೆಂಬ ವ್ಯವಸ್ಥೆಯಿರುತ್ತದೆ. ಅನೇಕ ಸನ್ನಿವೇಶಗಳಲ್ಲಿ ಆಳುವ ಪಕ್ಷ ತಪ್ಪಿ ನಡೆದಾಗ ವಿರೋಧ ಪಕ್ಷಗಳು ಅದನ್ನು ವಿರೋಧಿಸುವ, ಟೀಕಿಸುವ

ಸಾಂವಿಧಾನದತ್ತ ಅವಕಾಶವಿರುತ್ತದೆ. ಇನ್ನೂ ಮುಂದುವರೆದು ಆಡಳಿತದ ಪಕ್ಷಗಳು ವಿರೋಧಿಸುವ ಅವಕಾಶ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಗೂ ಇರುತ್ತದೆ. ಆದರೆ ಎಷ್ಟೋಬಾರಿ ಅಧಿಕಾರದಲ್ಲಿದ್ದವರು ತಮ್ಮ ವಿರುದ್ಧ ವಿರೋಧಧ ಹೇಳಿಕೆ ನೀಡುವ ಸಾಮಾನ್ಯ ಪ್ರಜೆಗಳನ್ನು, ಕವಿಗಳನ್ನು, ದಾರ್ಶನಿಕರನ್ನು ಗುರಿಯಾಗಿಸಿ ಅಧಿಕಾರ ಮದ, ದರ್ಪದ ಬಲದಲ್ಲಿ ಅವರನ್ನು ಹತ್ತಿಕ್ಕುವ ಪ್ರಯತ್ನಗಳಾಗಿವೆ. ಯಾವ ಸರ್ಕಾರಗಳು ಕವಿಗಳ, ಸಾಮಾನ್ಯ ಪ್ರಜೆಗಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುವುದೋ ಅದು ಆರೋಗ್ಯಕರ ಪ್ರಭುತ್ವದ ಲಕ್ಷಣವಲ್ಲ.

ಜಗತ್ತಿನಲ್ಲಿ ಯಾವುದೇ ಪ್ರಭುತ್ವದ ರಾಜನೀತಿಕ್ರಮವನ್ನು, ಆಡಳಿತಾತ್ಮಕ ನೀತಿಯನ್ನು 'ಮಾದರಿ' ಎಂದು ಕರೆಯಬೇಕಾದರೆ ಅದು ತನ್ನ ಆಡಳಿತದ ಸಂದರ್ಭದಲ್ಲಿ ಯಾವ ರೀತಿಯ 'ರಾಜನೀತಿ'ತತ್ವವನ್ನು ಅನುಸರಿಸಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಪಂಪ 'ತನ್ನ ವಿಕ್ರಮಾರ್ಜುನ ವಿಜಯಂ'ದಲ್ಲಿ ಅರಿಕೇಸರಿಯನ್ನು ಕಥಾನಾಯಕನ್ನಾಗಿಸಿ ಅರ್ಜುನನ ಪಾತ್ರದೊಟ್ಟಿಗೆ ಸಮೀಕರಿಸುವುದರ ಹಿಂದೆ ಆತನ ಸ್ನೇಹ ಹಾಗೂ ಅನ್ನವಿಟ್ಟದೊರೆಯ ಋಣತೀರಿಸುವುಕೆಗೆ ಸಂದ ಗೌರವವಾದರೂ ಹಾಗೆಂದು ಅರಿಕೇಸರಿಯ ಆಶ್ರದಲ್ಲಿದ್ದರೂ "ಪೆರರೀವುದೇಂ ಪೆರರಿಂದಪ್ಪುದೇಂ" ಎಂಬ ಸ್ವಾಭಿಮಾನವನ್ನು ಮಾರಟಕ್ಕಿಡದ ಆತ್ಮಪ್ರತ್ಯಯವುಳ್ಳ ಕವಿ. ಇಂಥ ಪಂಪನಿಗೆ ಅರಿಕೇಸರಿ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವೂ ಆದರ್ಶ ಮತ್ತು ಅನುಕರಣೀಯ ಸನ್ನಿವೇಶವಾಗಿದೆ.

ಪಂಪ ಅರಿಕೇಸರಿಯ ಆಸ್ಥಾನದಲ್ಲಿ ಕುಳಿತು ಪ್ರತಿನಾಯಕನಾದ 'ದುರ್ಯೋದನನ ಮಾದರಿ 'ರಾಜನೀತಿ'ಯನ್ನು ಪ್ರಶಂಸೆ ಮಾಡುತ್ತಾನೆ. ಧರ್ಮರಾಯ ಕಿರಾತನ ಮೂಲಕ ದುರ್ಯೋಧನನ ಮಾದರಿ ಆಡಳಿತದ ಬಗೆಗೆ ತಿಳಿಯುತ್ತಾನೆ. ದುರ್ಯೋಧನನ ಸಮಸ್ತ ಆಡಳಿತದ ಬಗೆಗೆ ಪ್ರಶಂಸೆಯ ಮಾತಗಳನ್ನಾಡುವ ಕಿರಾತ, ಪ್ರತಿ ಆಡಳಿತಾತ್ಮಕ ವಿವರವನ್ನು ನಿಡುವಾಗಲೂ ಧರ್ಮರಾಯನ ಆಡಳಿತದ ದಿನಗಳಿಗೆ ಹೋಲಿಸಿ ವಿಮರ್ಶಾತ್ಮಕವಾಗಿ ಸಮೀಕರಿಸುತ್ತಾನೆ.

ದುರ್ಯೋಧನ ಜೂಜಿನಲ್ಲಿ ಮೋಸದಿದಂದ ಸಾಮ್ರಾಜ್ಯವನ್ನು ಪಡೆದರೂ ಆ ಸಾಮ್ರಾಜ್ಯದ ಬಗೆಗೆ ಅತೀವ ಆಸ್ಥೆವಹಿಸಿ ಒಂದು ಮಾದರಿ ಆಡಳಿತ ನೀತಿಯನ್ನು ತರುತ್ತಾನೆ. ಇಡೀ ಸಾಮ್ರಾಜ್ಯವನ್ನು ಅತ್ಯಂತ ನೀತಿಯುಕ್ತವಾಗಿ ಆಳ್ವಿಕೆ ಮಾಡುತ್ತಿರುವುದು. ಆತನ ಆಳ್ವಿಕೆ ಬೃಹಸ್ಪತಿಯ ಆಳ್ವಿಕೆಯನ್ನು ಮೀರಿಸುವಂತೆದೆ ಎಂದು ಪ್ರಶಂಸೆ ಮಾಡುತ್ತಾನೆ. ದುಶ್ಯಾಸನನನ್ನು ಯುವರಾಜನನ್ನಾಗಿ ಮಾಡಿ, ಸುಖದಿಂದ ರಾಜ್ಯಭಾರ ಮಾಡುತ್ತಿದ್ದ. ಸಾಮಂತರಾಜರುಗಳಿಂದ ಕಪ್ಪವನ್ನು ವಸೂಲಿ ಮಾಡುವ ವಿಷಯದಲ್ಲಿ

ಆತನದು ಹಿಂದಿನ ರಾಜರುಗಳಿಗಿಂತ ಅತ್ಯಂತ ಜಾಣತನದ ಕ್ರಮ ವಹಿಸಿರುವನು. ಕೊಡುವ ಕಪ್ಪವನ್ನು ಕೊಡದೆ ಮಾತುತಪ್ಪಿದವರ ಮೇಲೆ ಏಕಾಏಕಿ ಯುದ್ಧ ಮಾಡದೆ 'ಸಾಮ'ತಂತ್ರದಿಂದ ಅವರುಗಳ ಮನವೊಲಿಸಿ ಕಪ್ಪ ಪಡೆಯುತ್ತಿದ್ದ. ಬರಿಯ ಆತನ ಆಜ್ಞಾಪತ್ರಕ್ಕೆ ಸಮಸ್ತ ಸಾಮಂತರುಗಳು ಕಳಿಂಗ ದೇಶದ ಆನೆಗಳ ಮೇಲೇರಿ ಕಪ್ಪವನ್ನು ಕಳುಹಿಸುತ್ತಿದ್ದರು. ಕಪ್ಪದ ಪ್ರಮಾಣ ವರ್ಷಪೂರ್ತಿಯೂ ತಪ್ಪುತ್ತಿರಲಿಲ್ಲವೆಂಬುದಕ್ಕೆ ಅರಮನೆಯ ಬಾಗಿಲಿನಲ್ಲಿ ಕಳಿಂಗ ದೇಶದ ಆನೆಗಳ ಕಾಲಿನಿಂದ ಉದ್ಭವವಾದ ಕೆಸರು ವರ್ಷಪೂರ್ತಿ ಕಡಿಮೆಯಾಗಲೇ ಇಲ್ಲ ಎನ್ನುವ ಮೂಲಕ ದುರ್ಯೋಧನ ಸದಾಕಾಲ ಎಚ್ಚರದಿಂದ ಆಳ್ವಿಕೆ ಮಾಡುತ್ತಿದ್ದಾನೆಂಬುದನ್ನು ಕಿರಾತ ತಿಳಿಸಿದ.

ಈ ಹಿಂದಿನ ಆಳ್ವಿಕೆ ಸಂದರ್ಭದಲ್ಲಿ ಕಪ್ಪ ಸಲ್ಲಿಸದೆ ಮೈಮರೆತಿದ್ದ ರಾಜರುಗಳು ದುರ್ಯೋಧನನ ಆಡಳಿತದ ಅವಧಿಯಲ್ಲಿ ಮಾತ್ರ ತಪ್ಪದೇ ಕಪ್ಪ ಸಲ್ಲಿಸುತ್ತಿದ್ದರು. ಈ ಹಿಂದೆ ರಾಜರುಗಳು ಗೆಲುವಿನುತ್ಸಾದಲೆಯಮೇಲೆ ತೇಲುತ್ತಿದ್ದರೆ, ಈಗಿನ ದುರ್ಯೋದನ ಸದಾ ಎಚ್ಚರದಿಂದಿರುತ್ತಾನೆ. ಅವನ ಹೊಸ ಆಳ್ವಿಕೆ ಆರಂಭವಾದಾಗಿನಿಂದಲೂ ಅವನ ಅರಮನೆಯಲ್ಲಾಗಲಿ, ಅವನ ಬೀಡಿನಲ್ಲಾಗಲಿ ಅವನ ಬಗೆಗೆ ಒಂದೇ ಒಂದು ಚಾಡಿಯ ಮಾತನ್ನು ಕೇಳಲಿಲ್ಲವೆನ್ನುವ ಮೂಲಕ ಸಮಸ್ತ ಪ್ರಜಾ ಸಮೂಹವೂ ದುರ್ಯೋಧನನ ಆಡಳಿತವನ್ನು ಪ್ರಶಂಸೆಮಾಡಿದೆ ಎಂಬುದನ್ನು ಧರ್ಮರಾಯನಿಗೆ ತಿಳಿಸಿದ.

ಪಂಪ ಅರಿಕೇಸರಿಯನ್ನು ಅರ್ಜುನನೊಟ್ಟಿಗೆ ಸಮೀಕರಿಸಿ ಗೌರವಿಸಿದರೂ ಈಗ ಆತ ಹೊಗಳುತ್ತಿರುವುದು ಪ್ರತಿನಾಯಕನ ಮಾದರಿ ಆಡಳಿತವನ್ನು. ಅರಿಕೇಸರಿಯ ಆಸ್ಥಾನದಲ್ಲಿ ಕುಳಿತು ಪಂಪ ಪ್ರತಿನಾಯಕನ ಆಡಳಿತವನ್ನು ಪ್ರಶಂಸೆ ಮಾಡಬೇಕಾದರೆ ಅರಿಕೇಸರಿಯಂತ ರಾಜ ಪಂಪನಿಗೆ ಪರಮೋಚ್ಚ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದ್ದನೆಂದು ಊಹಿಸಬಹುದು.

ಅರಿಕೇಸರಿ ಕಥಾನಾಯಕನಾದರೂ ಇಡೀ ಪ್ರಸಂಗದಲ್ಲಿ ಆಡಳಿತಾತ್ಮಕ ಪ್ರಶಂಸೆ ಮಾಡಿರುವುದು ದುರ್ಯೋಧನನ ಆಳ್ವಿಕೆಯನ್ನು. ಆತ ಸಾಮಂತರಾಜರೊಂದಿಗೆ ಅನುಸರಿಸಿದ ನೀತಿ, ಸಾಮ್ರಾಜ್ಯ ನೋಡಿಕೊಳ್ಳುತ್ತಿರುವ ರೀತಿ, ಯುದ್ಧದ ವಿಷಯದಲ್ಲಿ ಸಾಮಂತರೊಂದಿಗೆ ಆತನ ವರ್ತನೆ ಎಲ್ಲವೂ ಹಿಂದಿನ ರಾಜನಿಗಿಂತ ಉತ್ತಮವಾಗಿದೆ. ಹೀಗೆನ್ನುವ ಮೂಲಕ ಕಥಾನಾಯಕ ಅರಿಕೇಸರಿಯ ಆಸ್ಥಾನದಲ್ಲೇ ಕುಳಿತು ಪ್ರತಿನಾಯಕ ದುರ್ಯೋಧನನ ಆಡಳಿತ ಮಾದರಿಯಾಗಿತ್ತೆನ್ನಬೇಕಾದರೆ ಪಂಪನ ಎದೆಗಾರಿಕೆಯನ್ನು, ಅರಿಕೇಸರಿ ಕವಿಯೊಬ್ಬನಿಗೆ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೆಚ್ಚಲೇಬೇಕು. "ಪ್ರಭುತ್ವ ಮತ್ತು ಸೃಜನಶೀಲ ಸ್ವಾತಂತ್ರ್ಯದ ಬಿಕ್ಕಟ್ಟನ್ನು ನಿಭಾಯಿಸುವುದರಲ್ಲಿ ಪಂಪ

ಕವಿಯು ಅಂದಿಗೆ ಆದರ್ಶದ ಹಾದಿ ಹಿಡಿದಿದ್ದು ಇಂದಿಗೂ ಪ್ರಸ್ತುತವಾಗಿದೆ ಹಾಗಾದರೆ ಅಂದಿನ ಆದರ್ಶದ ಹಾದಿ ಯಾವುದು ರಾಜಪ್ರಭುತ್ವದ ಆಶ್ರಯದಲ್ಲಿದ್ದು ಸೃಜನಶೀಲ ಸ್ವಾತಂತ್ರ್ಯವನ್ನು ಕಳೆದುಕೊಳ್ಳದೆ ತನ್ನದೇ ರೀತಿಯ ಒಳ ವಿಮರ್ಶೆಯ ಮೂಲಕ ರಾಜಪ್ರಭುತ್ವದಿಂದ ತನಗೇನು ಆಗಬೇಕಿಲ್ಲವೆಂಬ ನಿಲುವನ್ನು ಪಂಪ ಕವಿಯು ಈ ಪ್ರಸಂಗವನ್ನು ವಿಶ್ಲೇಷಣೆ ಮಾಡಿರುವ ರೀತಿಯಿಂದ ತಿಳಿಯುತ್ತದೆ"[4] ಪಂಪನು ಇಲ್ಲಿ "ಪ್ರಭುತ್ವದ ಆಶ್ರಯದಲ್ಲಿದ್ದೂ ಪ್ರತಿ ನಾಯಕತ್ವವೇ ಮುಖ್ಯವೆಂದು ಪ್ರತಿಪಾದಿಸುವುದು ಒಂದು ಮಹತ್ವದ ಸಂಗತಿಯಾಗಿದೆ. ಇದು ಏಕಕಾಲಕ್ಕೆ ಪ್ರಭುತ್ವದ ಜೊತೆಗಿನ ಸಮೀಪ ಮತ್ತು ದೂರಗಳನ್ನು ಕಾಯ್ದುಕೊಳ್ಳುವ ನಡೆಯಾಗಿದೆ."[5]

ಪಂಪ ಪ್ರಭುತ್ವದ ಒಳಗಿದ್ದೂ ತನ್ನ ಆಶ್ರಯದಾತನ ಆಳ್ವಿಕೆಯನ್ನು ದಿಟ್ಟವಾಗಿ ವಿಮರ್ಶೆಗೊಳಪಡಿಸಿದ. ದುರ್ಯೋಧನನಂತಹ ಪ್ರತಿನಾಯಕನೂ ಆದರ್ಶ ಆಡಳಿತ ನೀಡಬಲ್ಲನೆಂಬುದನ್ನು ಸಾದರಪಡಿಸುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿನಾಯಕ ಪಕ್ಷಕ್ಕೂ ಮನ್ನಣೆ ನೀಡುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯ ಮೌಲ್ಯವನ್ನು ಎತ್ತಿ ಹಿಡಿದಿದ್ದಾನೆ.

ವರ್ತಮಾನ ಕಾಲದಲ್ಲಿ ಆಳುವ ಪ್ರಭುತ್ವಗಳು ತಮ್ಮನ್ನು ಸಾಮ್ರಾಜ್ಯದ ಜನರು, ದಾರ್ಶನಿಕರು, ಕವಿಗಳು, ರಾಜನೀತಿಜ್ಞರು ಸದಾಕಾಲ ಹೊಗಳಬೇಕೆಂದು ಹಪಹಪಿಸುತ್ತಿರುವವರ ನಡುವೆ, ಅರಿಕೇಸರಿಯಂತಹ ಒಬ್ಬ ರಾಜ, ತನ್ನ ವಿರೋಧಿಗಳನ್ನು ತನ್ನೆದುರೇ ಹೊಗಳುತ್ತ, ತನ್ನ ಆಡಳಿತವನ್ನು ಟೀಕಿಸುತ್ತಿರುವ ಪಂಪನನ್ನು ಅರಿಕೇಸರಿ ತನ್ನ ಅಧಿಕಾರದ ಬಳಸಿ ಏನೂ ಬೇಕಾದರೂ ಶಿಕ್ಷೆ ಕೊಡಬಹುದಿತ್ತು. ಪಂಪನ ಮೇಲಿದ್ದ ಗೌರವ, ಅವನ ಸ್ವಾಭಿಮಾನ, ಅವನ ಕಾವ್ಯದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣಮಾಡದೇ ಗೌರವಿಸದ್ದೂ ಒಂದು ಮಾದರಿ ಪ್ರಜಾಸತಾತ್ಮಕ ನಡೆ.

'ಗ್ರೀಕ್'ನ ಇತಿಹಾಸ ಅವಲೋಕಿಸಿದಾಗ ಸಾಕ್ರಟೀಸ್‌ನ ಯಾರಿಗೂ ಎದೆಗುಂದದ ಆತನ ನಿರ್ಭಯವಾದ ಪ್ರಶ್ನಿಸುವ ಅಭಿವ್ಯಕ್ತಿ ಕ್ರಮವನ್ನು ಸಹಿಸದೇ ಇರುವ ಅಲ್ಲಿನ ಹೀನ ಪ್ರಭುತ್ವವೇ ಆತನನ್ನು ಕೊಲ್ಲುವ ಮೂಲಕ ಅವನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ನಾಟಕಕಾರ ಮಾಸ್ತಿ ಹಿರಣ್ಣಯ್ಯನವರ ನಾಟಕವನ್ನು ನೋಡಲು ಬಂದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರ ಎದುರೇ ಅವರ ಸರ್ಕಾರದ ಆಡಳಿತಕ್ರಮವನ್ನು, ಭ್ರಷ್ಟಾಚಾರವನ್ನು ಕುರಿತು ತಮ್ಮ ವೃತ್ತಿರಂಗಭೂಮಿಯ ನಾಟಕಗಳ ಮುಖೇನ ತೀವ್ರವಾಗಿ ಟೀಕಿಸಿದರೂ ಅದನ್ನು ಸಮಾಧಾನಚಿತ್ತದಿಂದ ಸ್ವೀಕರಿಸಿದ ಮಾದರಿ ವ್ಯಕ್ತಿತ್ವ ನಿಜಲಿಂಗಪ್ಪನವರದು. ನಾಟಕ ಮುಗಿದ ಮೇಲೆ

ಮುಖ್ಯಮಂತ್ರಿಗಳ ಬೆಂಬಲಿಗರಿಂದ ವಿರೋಧ ವ್ಯಕ್ತವಾದಾಗ ಮಾಸ್ಟರ್ ಹಿರಣ್ಣಯ್ಯನವರ ಪರವಾಗಿ ನಿಂತು ಅವರ 'ಅಭಿವ್ಯಕ್ತಿ ಸ್ವಾತಂತ್ರ್ಯ' ಗೌರವಿಸಿದ ವಿರಳಾತಿವಿರಳ ವ್ಯಕ್ತಿವಗಳಲ್ಲಿ ನಿಜಲಿಂಗಪ್ಪನವರೂ ಒಬ್ಬರು.

ನಡುಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರಭುತ್ವದಿಂದ ದೂರವೇ ಉಳಿದ ಕುಮಾರವ್ಯಾಸ, ತನ್ನ 'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ನಾರದರ ಮೂಲಕ ಧರ್ಮರಾಯನಿಗೆ 'ರಾಜನೀತಿ ಧರ್ಮ'ದ ಕುರಿತು ಹೇಳುವ ಅರ್ಥಪೂರ್ಣ ಮಾತೊಂದಿದೆ.

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿ ಉರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರದ ಬೇಗೆಯಲಿರದಲೇ ಭೂಪಾಲ ಕೇಳೆಂದ''[6]

ಪ್ರಭುತ್ವವೊಂದು ಅಧಿಕಾರದ ಮದವೇರಿಸಿಕೊಳ್ಳದೆ ಸಾಮ್ರಾಜ್ಯದ ಪ್ರಜೆಗಳ ವಿಷಯದಲ್ಲಿ ವಹಿಸಬೇಕಾದ ಅಗತ್ಯದ ಎಚ್ಚರಿಕೆಯನ್ನು, ನಾರದರ ಮೂಲಕ ಆಡಿಸುವ ಮಾತುಗಳು ಮಾದರಿ ಪ್ರಭುತ್ವವೊಂದು ಹೇಗಿರಬೇಕೆಂಬ ನೀತಿಯನ್ನು ಕುಮಾರವ್ಯಾಸ ಕವಿಹಿಂಡಿ ಎಚ್ಚರಿಸಿದ್ದಾನೆ. ಕವಿಯ ಈ ಮಾತುಗಳು ಅಂದಿನ ಕಾಲಕ್ಕೆ ಪ್ರಭುತ್ವದ ಕುರಿತಾದ ಆತನ ದಿಟ್ಟ 'ಅಭಿವ್ಯಕ್ತಿ' ಸ್ವಾತಂತ್ರ್ಯವನ್ನು ತೋರಿಸುತ್ತದೆ.

ಸಾರ್ವಜನಿಕ ಸಮಾರಂಭವೊಂದರಲ್ಲಿ ಕುನಾಲ್ ಕಾಮ್ರಾನೆಂಬ ಹಾಸ್ಯ ಮಾತುಗಾರನೊಬ್ಬ ಮಹಾರಾಷ್ಟ್ರ ಸರ್ಕಾರದ ಮುಖ್ಯಮಂತ್ರಿಯನ್ನು ಹಾಗೂ ಅವರ ಆಡಳಿತದ ಕಾರ್ಯವೈಖರಿಯನ್ನು ಟೀಕಿಸಿದುದರ ಪರಿಣಾಮ ಆಳುವ ಸರ್ಕಾರ ಅಧಿಕಾರವನ್ನು ಬಳಸಿ ಅವನ ಮೇಲೆ ಪೋಲಿಸ್ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು. ಆದರೆ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಆತನ 'ಅಭಿವ್ಯಕಿ ಸ್ವಾತಂತ್ರ್ಯ'ವನ್ನು ಎತ್ತಿಹಿಡಿದು ಕಾರ್ಯಾಚರಣೆ ನಡೆಸಿದ ಪೋಲಿಸರ ಕ್ರಮವನ್ನು ಖಂಡಿಸಿತು. ''ಈ ನೆಲದ ಕವಿಯೊಬ್ಬ ತನ್ನ'ಕವಿತೆ'ಗಳ ಮೂಲಕ, ಹಾಸ್ಯಗಾರನೊಬ್ಬ 'ವಿಡಂಬನೆ, ಹಾಸ್ಯದ ಮೂಲಕ ಆಳುವ ಸರ್ಕಾರವನ್ನೂ ವಿಮರ್ಶಿಸುವ ಹಕ್ಕಿದೆ'' ಎಂಬ ತೀರ್ಪಿನ ಮೂಲಕ ಈ ನೆಲದ ವ್ಯಕ್ತಿಯೊಬ್ಬನ ಸಂವಿಧಾನದತ್ತ 'ಅಭಿವ್ಯಕ್ತಿ ಸ್ವಾತಂತ್ರ್ಯದ' ಹಕ್ಕನ್ನು ಎತ್ತಿಹಿಡಿದು ಆತನನ್ನು ಬಿಡುಗಡೆಗೊಳಿಸಿತು.

'ಕರ್ನಾಟಕ ಏಕೀಕರಣ'ದ ಸಂದರ್ಭದಲ್ಲಿ 'ಕುವೆಂಪು'ರವರು ಏಕೀಕರಣದ

ಪರವಾಗಿದ್ದುದೂ ಮೈಸೂರು ಭಾಗದ ಕೆಲವು ರಾಜಕಾರಣಿಗಳ ಸಿಟ್ಟಿಗೆ ಕಾರಣವಾಗಿತ್ತು. ಇದೇ ವಿಷಯ ಮುಂದಿಟ್ಟುಕೊಂಡು ರಾಜ್ಯಸರ್ಕಾರ ಕುವೆಂಪು ಅವರಿಗೆ ಒಂದು ನೋಟಿಸ್ ಜಾರಿ ಮಾಡಿತು. ರಾಜ್ಯ ಸರ್ಕಾರದ ವಿರುದ್ಧ ಮಾತನಾಡುವ ನಿಮ್ಮ ಮೇಲೆ ಏಕೆ ಶಿಸ್ತುಕ್ರಮ ಕೈಗೊಳ್ಳಬಾರದೆಂದು? ಅವರಿಗೆ ನೋಟಿಸೊಂದನ್ನು ಜಾರಿ ಮಾಡಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸ ಮಾಡಿತು. ಆ ನೋಟೀಸಿಗೆ ಕುವೆಂಪು ಪದ್ಯದ ರೂಪದಲ್ಲಿಯೇ ಉತ್ತರವಾಗಿ 'ಅಖಂಡ ಕರ್ನಾಟಕ' ಪದ್ಯ ರಚಿಸಿ ಉತ್ತರ ನೀಡಿದರು.

"ಅಖಂಡ ಕರ್ನಾಟಕ ಅಲ್ಲೊ ನಮ್ಮ ಕೂಗಾಟದ ರಾಜಕೀಯ ನಾಟಕ
ಇಂದು ಬಂದು ನಾಳೆ ಸಂದು ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ಲೊ ಸಿರಿಗನ್ನಡ ಸರಸ್ವತಿಯ ವಜ್ರ ಕರ್ಣಕುಂಡಲ
ನೃಪತುಂಗನೇ ಚಕ್ರವರ್ತಿ, ಪಂಪನಲ್ಲಿ ಮುಖ್ಯಮಂತ್ರಿ
ರನ್ನ ಜನ್ನ ನಾಗವರ್ಮ, ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ, ಸರ್ವಜ್ಞ ಷಡಕ್ಷರ
ಸರಸ್ವತಿಯೆ ರಚಿಸಿದೊಂದು, ನಿತ್ಯ ಸಚಿವ ಮಂಡಲ ತನಗೆ ರುಚಿರ ಕುಂಡಲ"ವೆಂಬ ಕುವೆಂಪು ಅವರ ಪದ್ಯರೂಪದ ಉತ್ತರ ನೋಡಿ ರಾಜಕಾರಣಿಗಳ ಕೋಪ ಮತ್ತಷ್ಟು ಕೆರಳಿಸಿತು. ಟೀಕಿಸದವರನ್ನು 'ಮೆಳ್ಳಗಣ್ಣು' ಎಂದು ಕರೆದದ್ದು ಬೆಂಕಿಗೆ ಇನ್ನಷ್ಟು ತುಪ್ಪ ಸುರಿದಂತೆ ಆಗಿತ್ತು. ಮೈಸೂರಿನಲ್ಲಿ ಕೆಲವರು ಈ ಪದ್ಯವನ್ನು ಸಾವಿರಾರು ಪ್ರತಿ ಮಾಡಿ ಹಂಚಿಬಿಟ್ಟರು. ವಿಷಯ ಸಚಿವ ಸಂಪುಟದ ಮುಂದೆ ಬಂದು ಮುಖ್ಯಮಂತ್ರಿ ಕೆ.ಸಿ.ರೆಡ್ಡಿ. ಸಂಪುಟ ಸಭೆಯಲ್ಲಿದ್ದ ಕೆಲವರು ಕುವೆಂಪು ವಿರುದ್ಧ ಕ್ರಮಕ್ಕೆ ಮತ್ತೆ ಒತ್ತಾಯಿಸಿದರು ಆಗ ಕೆ.ಸಿ.ರೆಡ್ಡಿ ಅವರು "ಒಂದು ನೋಟಿಸ್‌ಗೆ ಈ ಪದ್ಯ ಬರೆದಿದ್ದಾರೆ. ಇನ್ನೊಂದು ನೋಟಿಸ್ ನೀಡಿದರೆ ಮತ್ತೆ ಮೂರು ಪದ್ಯ ಬರೆಯಬಹುದೆಂದು" ತಿಳಿಸಿ ಕುವೆಂಪುರವರ 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಗೌರವಿಸಿದರು. ಜಗತ್ತಿನ ಚರಿತ್ರೆಯಲ್ಲಿ ಫ್ರಾನ್ಸ ಕ್ರಾಂತಿಯ ಸಂದರ್ಭ ಸ್ಮರ್ತ್ಯಾರ್ಹವಾದುದು. ಫ್ರಾನ್ಸ್ ಕ್ರಾಂತಿಯ ಹರಿಕಾರ 'ಮೀರಬ್ಯೂ' ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಆತನು ಆಡಿದ ಮಾತು ಚರಿತ್ರಾರ್ಹವಾದುದು "ನಿನ್ನ ಒಂದೂ ಮಾತನ್ನೂ ನಾನು ಒಪ್ಪಲಾರೆ, ಆದರೆ ನಿನ್ನ ಅಭಿವ್ಯಕ್ತಿಗೆ ಯಾರಾದರೂ ಅಡ್ಡಿಪಡಿಸಿದರೆ ಅದನ್ನು ನಾನು ಸಹಿಸಲಾರೆ, ಪ್ರತಿಭಟಿಸಿಯೇ ತೀರುತ್ತೇನೆ" ಎನ್ನುವ ಮೂಲಕ ತನ್ನ ವಿರುದ್ಧದ ಹೇಳಿಕೆ ಬಂದರೂ ಅವನ ಅಭಿಪ್ರಾಯ ಸ್ವಾತಂತ್ರ್ಯವನ್ನು ಗೌರವಿಸಿದ್ದೂ ಮಾದರಿ ನಡೆಯಾಗಿದೆ.

'ವಡ್ಡಾರಾಧನೆ'ಯಲ್ಲಿ ಬರುವ 'ಕಾರ್ತಿಕ ಋಷಿ'ಯ ಕಥೆಯಲ್ಲಿ

ಅಗ್ನಿರಾಜನೆಂಬ ಅರಸು ತನ್ನ ಕೊನೆಯ ಮಗಳಾದ 'ಕೃತ್ತಿಕೆ'ಯ ಸೌಂದರ್ಯಕ್ಕೆ ಮನಸೋತು ಆಕೆಯನ್ನೆ ವಿವಾಹವಾಗುವ ಅನೈತಿಕ ನಿರ್ಧಾರಕ್ಕೆ ಬರುತ್ತಾನೆ. ತನ್ನ ನಿರ್ಧಾರದ ಕುರಿತ ಸಾಮ್ರಾಜ್ಯದ ಸಾಮಂತರ, ಮಂತ್ರಿಗಳ, ಪ್ರಜೆಗಳ ನಿಲುವೇನೆಂಬುದನ್ನು ತಿಳಿಯಲು ಸಭೆ ಸೇರಿಸಿದ. "ನಾನು ರಾಜ್ಯಭಾರ ಮಾಡತಕ್ಕ ಪ್ರದೇಶದಲ್ಲಿ ಹುಟ್ಟಿಬಂದ ಶ್ರೇಷ್ಠವಾದ ವಸ್ತು ಯಾರಿಗೆ ಸೇರಬೇಕಾದುದು?"[7] ಎಂದು ಬಂದವರಿಗೆ ಪ್ರಶ್ನಿಸಿದ. ಪ್ರಭುತ್ವದ ದೊರೆಗಳಿಗೆ ಭಯಪಟ್ಟು ಸಭೆಯಲ್ಲಿದ್ದವರೆಲ್ಲಾ 'ನಿಮಗೆ ಸೇರಬೇಕೆಂದು' ತಿಳಿಸಿದರು. ಅಲ್ಲಿದ್ದ ಋಷಿಗಳು ಮಾತ್ರ 'ಆ ಶ್ರೇಷ್ಠವಾದ ವಸ್ತು ಯಾವುದೆಂಬುದನ್ನು ಮೊದಲು ಹೇಳು, ಆ ನಂತರ ಅದು ನಿನಗೆ ಸೇರಬೇಕೋ? ಬೇಡವೋ? ತಿಳಿಸುತ್ತೇವೆ" ಎಂಬ ತಮ್ಮ ದಿಟ್ಟ ನಿರ್ಧಾರವನ್ನು ಅಭಿವ್ಯಕ್ತಿಪಡಿಸುತ್ತಾರೆ. ರಾಜ "ತನ್ನ ನಿಲುವಿಗೆ ಇವರುಗಳು ವಿರುದ್ಧವಾಗಬಹು"ದೆಂದು ಭಾವಿಸಿ ಆ ಋಷಿಗಳನ್ನು ಸಾಮ್ರಾಜ್ಯದಿಂದ ಗಡಿಪಾರು ಮಾಡುತ್ತಾನೆ. ತನ್ನ ಹೆಂಡತಿ ವೀರಮತಿಯೂ ಪ್ರಭುತ್ವಕ್ಕೆ ಹೆದರಿ ತನ್ನ ಅಭಿಪ್ರಾಯವನ್ನು ಹತ್ತಿಕ್ಕಿ ಈ ಅನೈತಿಕ ಸಂಬಂಧಕ್ಕೆ ಅಸಹಾಯಕಳಾಗಿ ಸಮ್ಮತಿ ಸೂಚಿಸುತ್ತಾಳೆ. ಪ್ರಭುತ್ವಗಳು ತಮ್ಮ ಅಧಿಕಾರದ ಬಲ, ದರ್ಪದ ಅಮಲಿನಲ್ಲಿ ಚರಿತ್ರೆಯುದ್ದಕ್ಕೂ ಹೀಗೆ ತಮ್ಮ ವಿರುದ್ಧವೇ ನಿಲ್ಲುವ ವ್ಯಕ್ತಿಗಳನ್ನು ಅವರ ಅಭಿಪ್ರಾಯ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸದಾ ಹವಣಿಸಿರುವುದಕ್ಕೆ ಇದು ಸಾಕ್ಷಿಪ್ರಜ್ಞೆಯಾಗಿದೆ.

ಯಾವುದೇ ರಾಷ್ಟ್ರದ ಪ್ರಜಾ ಪ್ರಭುತ್ವದ ಆರೋಗ್ಯಕರ ಲಕ್ಷಣವೆಂದರೆ ಅದು ತನ್ನ ಆಡಳಿತದ ಕಾರ್ಯವೈಖರಿಯ ಕುರಿತು ತನ್ನ ದೇಶದ ಪ್ರಜೆಗಳಿಗೂ, ಕವಿಗಳಿಗೂ, ಚಿಂತಕರಿಗೂ, ದಾರ್ಶನಿಕರಿಗೂ, ವಿರೋಧ ಪಕ್ಷಗಳಿಗೂ ನೀಡಿದರುವ ಅಭಿವ್ಯಕ್ತಿ ಸ್ವಾತಂತ್ರ್ಯ ಯಾವ ಪ್ರಮಾಣದಲ್ಲಿದೆ ಎಂಬುದರ ಮೇಲೆ ನಿರ್ಧಾರಿತವಾಗುತ್ತದೆ. ಈ ನಿಟ್ಟಿನಲ್ಲಿ ಪಂಪ ಅರಿಕೇಸರಿಯನ್ನು ನಾಯಕನನ್ನಾಗಿಸಿ ಪ್ರತಿನಾಯಕನಾದ ಕರ್ಣ, ದುರ್ಯೋಧನರನ್ನು ಹೊಗಳಿದರೂ ಪಂಪನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸಿದುದು ಅರಿಕೇಸರಿಯ ಮಾದರಿ ಆದರ್ಶಪ್ರಾಯ ಪ್ರಜಾಸತಾತ್ಮಕ ನಡೆಯಾಗಿದೆ.

ಕೊನೆ ಟಿಪ್ಪಣಿಗಳು :

1. ಅನಂತರಂಗಾಚಾರ್ಯ ಎಸ್., 'ಪಂಪ ಭಾರತ' ಕ.ಸಾ.ಪ., ಬೆಂಗಳೂರು, 2016, 7–41, ಪುಟ–347
2. ಅದೇ, ಪುಟ–348
3. ಅದೇ, ಪುಟ–348

4. ಬರಗೂರು ರಾಮಚಂದ್ರಪ್ಪ ,'ಮನುಷ್ಯ ಜಾತಿ ತಾನೊಂದೇ ವಲಂ', ಜನಪ್ರಕಾಶನ, ಬೆಂಗಳೂರು, 2023, ಪುಟ 5
5. ಅದೇ., ಪುಟ–6
6. ಅ.ರಾ.ಸೇತುರಾಮರಾವ್– ತಾತ್ಪರ್ಯಸಹಿತ ಕು.ವ್ಯಾ.ಭಾ., ಕಾಮಧೇನು ಪ್ರಕಾಶನ, ಬೆಂಗಳೂರು, 2008, ಸಭಾ ಪರ್ವ,1–62, ಪುಟ–255
7. ಟಿ.ಕೇಶವ ಭಟ್ಟ 'ವಡ್ಡಾರಾಧನೆ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2010 ಪುಟ–200

ಪರಾಮರ್ಶನಾ ಗ್ರಂಥಗಳು :

1. ಅನಂತರಂಗಾಚಾರ್ಯ ಎಸ್– 'ಪಂಪ ಭಾರತ' ಕ.ಸಾ.ಪ., ಬೆಂಗಳೂರು, 2016,
2. ಬರಗೂರು ರಾಮಚಂದ್ರಪ್ಪ ,'ಮನುಷ್ಯ ಜಾತಿ ತಾನೊಂದೇ ವಲಂ', ಜನಪ್ರಕಾಶನ, ಬೆಂಗಳೂರು, 2023
3. ಅ.ರಾ.ಸೇತುರಾಮರಾವ್– ತಾತ್ಪರ್ಯಸಹಿತ ಕು.ವ್ಯಾ.ಭಾ., ಕಾಮಧೇನು ಪ್ರಕಾಶನ, ಬೆಂಗಳೂರು, 2008,
4. ಟಿ.ಕೇಶವಭಟ್ಟ 'ವಡ್ಡಾರಾಧನೆ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2010

ಮಂಜುನಾಥ .ಬಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಜ್ಜಂಪುರ–577547
ಚಿಕ್ಕಮಗಳೂರು (ಜಿ)
manjubgfgcajp2024@gmail.com

ಕನ್ನಡ ಸಾಹಿತ್ಯದಲ್ಲಿ ದಾರ್ಶನಿಕತೆಯ ಒಳಹೊಕ್ಕಿರುವ ಕವಿ ಕುವೆಂಪು

ಕೆ. ಎನ್. ನಂದೀಶ

"ಕಥೆ ನಿನ್ನದಾಡೊಡಂ.. ಕೃತಿ ನನ್ನ ದರ್ಶನಂ
ಮೂರ್ತಿವೆತ್ತೊಂದಮರ ಕೃತಿಯೆತ್ತಿ"

"ಇತಿಹಾಸಮಲ್ತು, ಕಥೆಯಲ್ತು ಕಥೆ ತಾಂ ನಿಮಿತ್ತಮಾತ್ರಂ" ಎಂಬ ಕುವೆಂಪು ಅವರ ಹೇಳಿಕೆಗಳು ಅವರ ಸಾಹಿತ್ಯದ ದಾರ್ಶನಿಕತೆನ್ನು ವಿವರಿಸುತ್ತದೆ.

ಹೊಸಗನ್ನಡ ಸಾಹಿತ್ಯಕ್ಕೆ ನವೋದಯ ಸಾಹಿತಿಗಳ ಕೊಡುಗೆಯನ್ನು ಕುರಿತು ಚಿಂತಿಸುವ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪಾತ್ರ ಅವಿಸ್ಮರಣೀಯ. ಇವರ ಜೀವನವೇ ವಿಶ್ವಮಾನವ ತತ್ತ್ವ, ಪರಂಪರೆಯ ಭವ್ಯತೆ, ಉಜ್ವಲತೆಯನ್ನು ಎತ್ತಿ ಹಿಡಿಯುವ ಅವರು ಅದರ ಮೇಲೆ ಮುಸುಕಿದ ಮೌಢ್ಯದ ಮಂಜನ್ನು ಕರಗಿಸುವ ಪ್ರಭೆಯಾಗಿ ಬೆಳಗುತ್ತಾರೆ ಇವರು ಕನ್ನಡದ ಮಟ್ಟಿಗೆ ಒಂದು ಸಾಂಸ್ಕೃತಿಕ ವಿದ್ಯಮಾನದ ಸೃಜನಶೀಲತೆಯ ಪ್ರತೀಕ. 'ಬರೀ ಸಾಹಿತ್ಯವನ್ನು ರಚನೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ನನ್ನ ಬರಹದ ಮೂಲಕ ಈ ಜನರಿಗೆ ಏನಾದರೂ ಸಹಾಯವಾದರೆ ಅದರಿಂದ ಒಂದು ಆಧ್ಯಾತ್ಮಿಕ ಸಮಾಧಾನವನ್ನು ಕಂಡುಕೊಳ್ಳುತ್ತೇನೆ. ಅದು ಈ ಸಾಹಿತ್ಯದ ಪಟ್ಟಕ್ಕಿಂತ ಮುಖ್ಯವಾದದ್ದು' ಅವರ ಮನೋಂಗಿತ. 'ನನ್ನನ್ನು ವೈಚಾರಿಕವಾಗಿ ನೋಡದೆ ಕೇವಲ ಕವಿಯಾಗಿ, ದಾರ್ಶನಿಕನಾಗಿ ಯಾರು ಸ್ವೀಕರಿಸುತ್ತಾರೋ ಅವರು ನನ್ನನ್ನು ಪೂರ್ಣ ಅರಿತಂತೆ ಆಗುವುದಿಲ್ಲ' ಎಂದು ಕುವೆಂಪು ತನ್ನ ವ್ಯಕ್ತಿತ್ವದ ಜೊತೆಗೆ ದರ್ಶನ ಮುಖ್ಯವೇ ಹೊರತು ಕತೆಯಲ್ಲ. ಕಥೆ, ಇತಿಹಾಸ, ಬಹಿರ್ಘಟನೆ ಇವೆಲ್ಲ ಜಡವಾದರೆ, ದರ್ಶನವೊಂದೇ ಜಡವನ್ನು ಚೈತನ್ಯವನ್ನಾಗಿಸುವ ಭಾಷೆಯನ್ನು ಅಸ್ತ್ರವಾಗಿ ಬಳಸಿಕೊಂಡರು.

ಸುಜನಾ : "ಶ್ರೀ ಕುವೆಂಪು ದರ್ಶನದ ವೈಶಿಷ್ಟ್ಯ ಪರಂಪರೆ–ಯುಗ ಪ್ರಜ್ಞೆಗಳೆರಡರ ಸಮನ್ವಯದಿಂದ ಬಂದದ್ದು, ಈ ಅತಿಶಯ ಸಿದ್ಧಿ ಸಾಹಿತ್ಯಲೋಕದಲ್ಲಿ ವಿರಳ" ಎಂದು ಸಂಬೋಧಿಸಿದ್ದಾರೆ. ಕುವೆಂಪು ಅವರ ಸಾಹಿತ್ಯ ದರ್ಶನವನ್ನು ಯುಗದ ಕವಿ, ಜಗದ ಕವಿ, ರಸಋಷಿ ಕವಿ ಎಂದು ಮೂರು ಉಕ್ತಿಗಳ ಮೂಲಕ ನೋಡಬಹುದಾಗಿದೆ. ಕನ್ನಡ ನೆಲದಲ್ಲಿ ನಿಂತು ಬರೆಯುತ್ತಿದ್ದರೂ, ವಿಶ್ವ ವ್ಯಾಪಿ ಮತ, ತತ್ತ್ವ, ಧರ್ಮಗಳನ್ನು ಒಳಗೊಂಡ ಕಾರಣ ಅವರ ಕಾವ್ಯಗಳು ಪೂರ್ಣ ದೃಷ್ಟಿಯಿಂದ ಕೂಡಿದೆ. ದಾರ್ಶನಿಕತೆ ಎನ್ನುವುದು ತನಗೆ ತಾನೇ ಮುಖ್ಯವಾದರೂ, ಅದು ಸಾಹಿತ್ಯ ಕೃತಿಯೊಂದರ ಅಂಗವಾಗಿ, ಮೈದಳೆದಾಗ, ವಿಶಿಷ್ಟವಾದ ಧ್ವನಿಯೊಂದನ್ನು ಪಡೆದುಕೊಳ್ಳುತ್ತದೆ. ಇವರೇ ಅಭಿವ್ಯಕ್ತಿಸುವಂತೆ ದರ್ಶನ ಎಂದರೆ ಅಗೋಚರವಾದ ಕಾಣ್ಕೆ, ಭವಿಷ್ಯದ ಬಗ್ಗೆ ಬಲವಾದ ದೃಷ್ಟಿ ಹೊಂದಿರುವ ವ್ಯಕ್ತಿ ಎಂಬ ಅರ್ಥವ ತಿಳಿಸುತ್ತಾ, ಕವಿಯಾದವನು ಋಷಿಯಾಗದಿದ್ದರೆ ಕಾವ್ಯ ರಚಿಸಲು ಸಾಧ್ಯವಿಲ್ಲ. 'ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ' ಎಂಬ ಲೇಖನದಲ್ಲಿ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಕವಿಯ ದರ್ಶನವು ತನ್ನ ಅಭಿವ್ಯಕ್ತಿಗಾಗಿ "ವಿಭೂತಿತತ್ತ್ವ", "ವಿಶ್ವಮಾನವತತ್ತ್ವ" "ಅನಿಕೇತನ" "ಆತ್ಮಶ್ರೀಗಾಗಿ ನಿರಂಕುಶಮತಿ" "ಸಂಸ್ಕೃತಿ ಕ್ರಾಂತಿ" "ಪೂರ್ಣ ದೃಷ್ಟಿ" "ಸರ್ವೋದಯ" "ಸಮನ್ವಯ" "ವಿಶ್ವಪಥ", "ಮನುಜ ಮತ" ಮೊದಲಾದ ಪರಿಕಲ್ಪನೆಗಳನ್ನು ಸೃಷ್ಟಿಸಿಕೊಂಡಿತು. ಇವೆಲ್ಲವೂ ಅವರ ದರ್ಶನದ ಪರಿಕಲ್ಪನೆಗಳೇ ಆಗಿದೆ. ಪ್ರಜಾಪ್ರಭುತ್ವದ ಮೂಲಭೂತ ತತ್ವಗಳನ್ನು ಸೂಕ್ಷ್ಮವಾಗಿ ಸಾಹಿತ್ಯ ಕೃತಿಗಳ ಮೂಲಕ ಮತ್ತು ಚಿಂತನೆಗಳ ಮೂಲಕ ಬಿತ್ತಲು ಪ್ರಯತ್ನಿಸಿದರು.

ದರ್ಶನದ ವಿರಾಟ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಕವಿಯಾದವನು ಪೂರ್ಣದೃಷ್ಟಿ ಹೊಂದಿರಬೇಕು. 'ನಮ್ಮಮ್ಮ ಜಗದಮ್ಮ' ಕವಿತೆ ಅವರ ಪೂರ್ಣ ತತ್ವಕ್ಕೆ ಜಗತ್ತಿನ ಪೂರ್ಣ ದರ್ಶನಕ್ಕೆ ಸಾಕ್ಷಿಯಾಗಿದೆ. ಪರಿವರ್ತನೆ ಅಥವಾ ರೂಪಾಂತರವೂ ಕುವೆಂಪು ದರ್ಶನದಲ್ಲಿರುವ ಮುಖ್ಯ ತತ್ತ್ವ. ಕುವೆಂಪುರವರು ಗಾಢವಾಗಿ ಪ್ರಭಾವಿತವಾಗಿದ್ದ ಅದ್ವೈತ ದರ್ಶನದಲ್ಲಿ ಜೀವ–ದೇವಗಳ ಭೇದವು ನಿರಾಕರಣೆಯಾಗುತ್ತದೆ. 'ಸೂರ್ಯೋದಯ, ಚಂದ್ರೋದಯ ದೇವರ ದಯ ಕಾಣೊ....' ಎಂಬ ಅವರ ಕಾವ್ಯದ ಮೇಲೆ ಉಪನಿಷತ್ತುಗಳ ದಟ್ಟವಾದ ಪ್ರಭಾವ ಕಾಣಬಹುದು. ಪೂರ್ಣತೆ ಎಂದರೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಶೂನ್ಯ ಎಂದರ್ಥ. ಶೂನ್ಯದಿಂದ ಕೂಡಿದರೂ, ಕಳೆದರೂ, ಭಾಗಿಸಿದರೂ ಶೂನ್ಯವೇ ಆಗಿರುತ್ತದೆ. ಶೂನ್ಯ ಎಂದರೆ ಇಲ್ಲವಾದದಲ್ಲ. ಅದು ಎಲ್ಲವನ್ನೂ ಒಳಗೊಂಡಿರುವುದು ಎಂದರ್ಥ. ಕುವೆಂಪು

ಅವರ ತಮ್ಮ ಬರಹದಲ್ಲಿ 'ಕರಿಸಿದ್ಧನ ಹಾಡು' ಕಥನ ಕವನದಲ್ಲಿ ಕರಿಸಿದ್ಧನ ಸಾವು ಹಾಗೂ ಪಾರ್ಲಿಮೆಂಟಿನಲ್ಲಿ ನಡೆದಿತ್ತೊಂದು ಭಾಷಣದ ಜತೆಗೆ ಹೋಲಿಕೆ ಮಾಡುತ್ತ ಜಗತ್ತಿನ ಎಲ್ಲ ಘಟನೆಗಳು ಏಕಕಾಲಕ್ಕೆ ಹೇಗೆ ಸಂಭವಿಸುತ್ತೆ ಎನ್ನುವುದನ್ನು ಅದರಲ್ಲಿ ಯಾವ ತರತಮವೂ ಇಲ್ಲ ಎಂಬುವುದೇ ಅವರ ಸಾಹಿತ್ಯದ ದರ್ಶನ ಆಧ್ಯಾತ್ಮಿಕವಾಗಿ ಭಾರತದ ಅನುಭಾವವಾದಿಗಳಿಗೆ ಆರೂಢರಿಗೆ ಶರಣರಿಗೆ ಹತ್ತಿರವಾಗುವರು. ಈ ಕಾರಣಕ್ಕೆ ಈ ರೂಪಾಂತರ ತತ್ತ್ವದ ಹಿನ್ನಲೆಯಲ್ಲಿ ಕುವೆಂಪು ಸಾಹಿತ್ಯದಲ್ಲಿ ಬರುವ ಯಾನ ಅಥವಾ ಯಾತ್ರೆಗಳ ಕಲ್ಪನೆಯನ್ನು ಗಮನಿಸಬೇಕು. ಅಲ್ಲಿ ಮತ್ತೆ ಮತ್ತೆ ನದಿಯ ಹರಿವಿನ ವರ್ಣನೆ ಬರುತ್ತದೆ. ಬಂಡೆಯೊಂದು ಸುಂದರ ಮೂರ್ತಿಯಾಗುವ ಕನಸನ್ನು ಕಾಣುವ 'ಶಿಲಾತಪಸ್ವಿ' ಕವನವೂ ಇದೇ ಆಶಯವುಳ್ಳದ್ದು ದುಡಿವವರ್ಗಕ್ಕೆ ಸೇರಿದ ಪಾತ್ರಗಳು ಕವಿಗಳಂತೆ ಭಾವುಕವಾಗಿ ನಿಸರ್ಗದಲ್ಲಿ ಮೈಮರೆವ ಸನ್ನಿವೇಶಗಳು ಕೂಡ ಇಂತಹವೇ. ಮಾನವ ಬದುಕಿನಲ್ಲಿ ಸಂಭವಿಸುವ ಈ ಬದಲಾವಣೆಯನ್ನು ಒಂದು ತತ್ತ್ವ ಪ್ರಣಾಳಿಕೆಯಾಗಿ 'ಅನಿಕೇತನ' ಕವನವು ಮಂಡಿಸುತ್ತದೆ. 'ಮನೆಯನೆಂದೂ ಕಟ್ಟದಿರು ಕೊನೆಯನೆಂದೂ ಮುಟ್ಟದಿರು' ಎಂಬ ನೇತ್ಯಾತ್ಮಕ ಕ್ರಿಯಾಸೂಚನೆಗಳಿವೆ. ಈ ಕವಿತೆಯಲ್ಲಿ 'ಆಗು' 'ದಾಟು' 'ಏರು' 'ಮೀಟು' 'ಮೀರು' 'ತೂರು' ಎಲ್ಲವೂ ಕ್ರಿಯೆ ಮತ್ತು ಪ್ರಕ್ರಿಯೆ ತತ್ವ ಸೂಚಕ ಶಬ್ದಗಳು

ಕುವೆಂಪು ಅವರಂತೆ ಬಸವಣ್ಣ ಕೂಡ ಅದ್ವೈತಿಯಾಗಿದ್ದರು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ವಚನದ ತಿರುಳು ಸಾಹಿತ್ಯ ಒಳನೋಟದಲ್ಲಿ ನೆಲೆಯಾಗಿದೆ. "ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡುಹಿಡಿದ ಸತ್ಯಗಳು ಹಳೆಯ ಅರ್ಧಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ ಧರ್ಮಪ್ರಪಂಚದಲ್ಲೇಕೆ ಹಾಗಾಗಬಾರದು? ವೇದ ಅನಾದಿಯಾದರೆ ಅನಂತವೂ ಆಗಿರುವುದಿಲ್ಲವೇ?" ಎಂದು ತಮ್ಮದೊಂದು ಭಾಷಣದಲ್ಲಿ ಹೇಳುವರು. 'ನೇಗಿಲಯೋಗಿ', 'ದೇವರು ರುಜು ಮಾಡಿದನು', 'ಹೀರೆ ಹೂ', 'ಗೊಬ್ಬರ' 'ಕಲ್ಕಿ', 'ಯಕ್ಷಪ್ರಶ್ನೆ' 'ದೇವರು ಮತ್ತು ಪೂಜಾರಿ' ಇತ್ಯಾದಿ ಕವನಗಳಲ್ಲಿ ಲೋಕಜ್ಞಾನದ ಗ್ರಹಿಕೆಯು, ಸಮಾನತೆ, ಸಹಬಾಳ್ವೆ, ಸಹೋದರತೆ ಹಾಗೂ ಸಾಮಾಜಿಕ–ಸಾಂಸ್ಕೃತಿಕ ನ್ಯಾಯದ ನಿಲುವುಗಳನ್ನೂ ಒಳಗೊಂಡಿರುತ್ತವೆ.

ಕಥಾ ಸಾಹಿತ್ಯದಲ್ಲಿ ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳಲ್ಲಿ ಮಾತ್ರವಲ್ಲದೆ, ಮನುಷ್ಯ ಹಾಗೂ ಪ್ರಾಣಿ ಜಗತ್ತಿನ ಜತೆಗಿನ ಜೀವ ಪರ ಹುಡುಕಾಟಗಳಲ್ಲಿ ಕೂಡ ಮೈದಡವಿಕೊಂಡಿವೆ. ಅವರ ನೋವು–ನಲಿವು, ದುಃಖ ದುಮ್ಮಾನ, ಕಾಮ–

ಪ್ರೇಮ, ಸಾವು ಸಂಕಟಗಳಿಗೆ ಈ ಪ್ರಕೃತಿ ಎನ್ನುವುದು ತಳುಕುಹಾಕಿಕೊಂಡಿದೆ. ಅವರ 'ಸಾಲದ ಮಗು', 'ಧನ್ವಂತರ ಚಿಕಿತ್ಸೆ' ಕಥೆಗಳು ಅವರ ಕಥಾ ಸಾಹಿತ್ಯದ ಮೂಲ ದ್ರವ್ಯಗಳಾಗಿವೆ. ಇಂದು ಸಾಲ ಹೊತ್ತ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸುದ್ದಿ, ವರ್ತಮಾನದ ನಿತ್ಯ ಅನುಭವವಾಗಿದೆ. ನೂರು ವರ್ಷಗಳ ಹಿಂದೆ ಅದನ್ನು ಪತ್ತೆ ಹಚ್ಚಿದ ಶ್ರೇಯಸ್ಸು ಕುವೆಂಪು ಅವರಿಗೆ ಸಲ್ಲಬೇಕು. ಅಲ್ಲಿ ಬರುವ ವಿಶ್ವಾಮಿತ್ರ ಮತ್ತು ಪರಶುರಾಮ ಒಂದು ಬಗೆಯ ಬಂಡೆದ್ದ ಪುರಾಣ ಪಾತ್ರಗಳು. ಕಥೆಯ ಕೊನೆಯಲ್ಲಿ ವಿಶ್ವಾಮಿತ್ರನ ಹೂಂಕಾರಕ್ಕೆ ಹುಸಿ ನಾಗರೀಕತೆಯಲ್ಲಿ ಸುಟ್ಟು ಬೂದಿ ಆಗುವುದನ್ನು ಗಮನಿಸಿದರೆ, ಈ ಚಿತ್ರಣದ ಹಿಂದೆ ಅವರ ಸಮಾಜವಾದಿ ದರ್ಶನದ ಬಲವನ್ನು ಗುರುತಿಸಬಹುದು. ಭಾರತೀಯ ಮತ್ತು ಪಾಶ್ಚಿಮಾತ್ಯ ದರ್ಶನಗಳಲ್ಲಿ ಜೀವಪರವಾದ ಧಾರೆಗಳನ್ನು ಬೆಸೆದುಕೊಂಡರು. ಅವರೊಂದು ಕಡೆ "ನನ್ನ ಸಾಹಿತ್ಯ ಓದುವವರಿಗೆ ದರ್ಶನದ ಹಿನ್ನಲೆಯಿರಬೇಕು, ಇಲ್ಲದಿದ್ದರೆ ಬೇರೆ ಬೀಗದ ಕೈತೆಗೆದುಕೊಂಡು ಬೀಗ ತೆಗೆದಂತೆ"ಎಂದು ಹೇಳುವುದುಂಟು.

ಕುವೆಂಪು ಸಾಹಿತ್ಯದಲ್ಲಿ ಮಾನವ ಮತ್ತು ಪ್ರಕೃತಿಯ ಅಂಶಗಳು ಗೋಚರಿಸುತ್ತವೆ. 'ಈಶ್ವರನೂ ನಕ್ಕಿರಬೇಕು', 'ಮಾಯದ ಮನೆ', 'ಕ್ರಿಸ್ತನಲ್ಲ', 'ಪಾದ್ರಿಯ ಮಗಳು', 'ಶ್ರೀ ಮನ್ಮೂಕವಾಗಿತ್ತು', 'ಮೀನಾಕ್ಷಿಯ ಮನೆ ಮೇಷ್ಟ್ರು', 'ವೈರಾಗ್ಯದ ಮಹಿಮೆ' ಇನ್ನೂ ಮುಂತಾದ ಕಥೆಗಳ ಕುರಿತು ಲೇಖಕರು 'ಶ್ರೀ ಕುವೆಂಪು ಅವರ ಸಣ್ಣ ಕಥೆಗಳು' ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. 'ನನ್ನ ದೇವರು' ಕಥೆಯಲ್ಲಿ ಮದುವೆಯಾಗಿ ಒಂದೇ ವರುಷದಲ್ಲಿ ತನ್ನ ಪತಿಯನ್ನು ಕಳೆದುಕೊಂಡ ಯುವತಿಯೊಬ್ಬಳ ಮನದ ತುಮುಲಗಳ ಚಿತ್ರಣ. 'ಸಾಲದ ಮಗು' – ಸೊಕ್ಕಿನ ಊರ ಗೌಡನ ದುರಾಶೆ, ಸುಬ್ಬುವಿನ ಜೀತಗಾರಿಕೆಯ ಶೋಷಣೆ, ಆದರ್ಶ ಸಾಧನೆ ಎಂಬುದು ಆದರ್ಶಗಳ ಬೆನ್ನಿತ್ತಿದೆ ಯುವಕನೊಬ್ಬನ ಕಥೆಯಾಗಿದೆ. 'ಔದಾರ್ಯ ಕಥೆ'– ತೀರ್ಥಹಳ್ಳಿಯ ಅಮಲ್ದಾರನು ಮುಸ್ಸಂಜೆಯಲ್ಲಿ ತುಂಗಾ ನದಿಯ ದಡಕ್ಕೆ ಹೋದಾಗಿನ ಒಂದು ಘಟನೆ. ಗಂಟು / ಗುಪ್ತಧನ ಎಂಬುದು, ಅದರ ಆಶೆಗೆ ಬಲಿಯಾಗಿ, ಕಪಟ ಸನ್ಯಾಸಿಯೊಬ್ಬನಿಂದ ಮೋಸ ಹೋದ ಸಂಗತಿ. 'ಮೀನಾಕ್ಷಿಯ ಮನೆ ಮೇಷ್ಟ್ರು ಮನೆ ಪಾಠಕ್ಕೆ ಬರುತ್ತಿದ್ದ ಯುವಕನೊಬ್ಬನ ಪಡಿಪಾಟಲನ್ನು ಚಿತ್ರಿಸುವ ಕಥೆ.

'ಧನ್ವಂತರಿಯ ಚಿಕಿತ್ಸೆ' ಕಥೆ ಭಾರತದಲ್ಲಿ ರಾಜ್ಯದ ಎಲ್ಲ ಹೊರೆಯೂ ರೈತನ ಮೇಲೆ ಬಿದ್ದಿರುವುದನ್ನು ಮನಮುಟ್ಟುವಂತೆ ಪ್ರಸ್ತುತ ಪಡಿಸುತ್ತದೆ. 'ವೈರಾಗ್ಯದ ಮಹಿಮೆ' ಕಥೆ ಸೋಮಾರಿಯೊಬ್ಬನ ಬದುಕಿನ ಮಜಲುಗಳ ಆಶಯವಾಗಿದೆ. 'ಯಾರೂ

ಅರಿಯದ ವೀರ' ಕಥೆಯಲ್ಲಿ 'ಅಸಾಧ್ಯವಾದ ಮಳೆಗೆ ಸಿಲುಕಿ ಮನೆ ಕುಸಿತಕ್ಕೆ ಒಳಗಾಗುವ ಶಿವನೂರು ಸುಬ್ಬಣ್ಣ ಗೌಡರ ಮನೆ ಅಲ್ಲಿಂದ ಪಾರಾಗುವ ಪರಿ. ಆ ತುಂಬಿದ ಹೊಳೆ.. ದೋಣಿ ಭಾರ ತಡೆದುಕೊಳ್ಳದೇ ಇದ್ದಾಗ ಹೊಳೆಗೆ ಯಾರಿಗೂ ತಿಳಿಯದೇ ಹಾರುವ ಅವರ ಕೆಲಸದ ಆಳು ಲಿಂಗ ಅವನ ವ್ಯಕ್ತಿತ್ವ. 'ಶ್ರೀ ಮನ್ಮೂವಾಗಿತ್ತು' – ಮಲೆನಾಡಿನಲ್ಲಿ ಕೆರೆಯೂರಿನ ರಂಗನೆಂಬ ಗೇಣಿದಾರ ರೈತನ ಗುಡಿಸಲಿದೆ. ಹೆಂಡತಿ ನಾಗಿ, ಎಮ್ಮೆ ಹುಡುಕುತ್ತ ಅವನು ಒಂದು ರಾತ್ರಿ ಮತ್ತು ಅರ್ಧ ಹಗಲಿನ ಕಾಲ ಕಾಣುವ ಸನ್ನಿವೇಶ ಹಾಗೂ ಪಡೆಯುವ ಅನುಭವಗಳ ನಿರೂಪಣೆಯೇ ಕಥೆ.ಇವರ ದರ್ಶನದಲ್ಲಿ 'ವಿಭೂತಿ' ಎನ್ನುವುದು ಅಲೌಕಿಕವಾದುದು ಎಂಬರ್ಥ ಪಡೆದಿರುವ ಪರಿಭಾಷೆ. ಇದಕ್ಕೆ ಕಥೆಯ ಕೊನೇ ಸಾಲಿನ 'ಆನಂದದ ವಿಭೂತಿ' ಎಂಬ ಮಾತೇ ಸಾಕ್ಷಿ. 'ಮಾತು ಬಾರದ ಎಮ್ಮೆಯು ಲೋಕದ ವಿದ್ಯಾಮಾನಗಳಿಗೆ ಅವ್ಯಕ್ತ ಹೃದಯವಂತಿಕೆಯಿಂದ ಸ್ಪಂದಿಸುತ್ತ ತನ್ನದೇ ಭಾಷೆಯಲ್ಲಿ ನಿಜವಾದ 'ಆನಂದದ ವಿಭೂತಿ'ಯನ್ನು ಅನುಭವಿಸುತ್ತಿದೆ.

'ಸನ್ಯಾಸಿ', 'ಕ್ರಿಸ್ತನಲ್ಲ', 'ಪಾದರಿ', 'ನನ್ನ ದೇವರು', 'ಆದರ್ಶ ಸಾಧನೆ', 'ವೈರಾಗ್ಯದ ಮಹಿಮೆ'..... ಈ ಕಥೆಗಳ ಕಥಾನಾಯಕರು ಸನ್ಯಾಸಿಗಳಾಗ ಹೊರಟವರು. ಸನ್ಯಾಸವನ್ನು ಆದರ್ಶವೆಂದು ತಿಳಿದವರು ಸನ್ಯಾಸತ್ವ ಸಹಜವಾದುದಲ್ಲ, ನೈಸರ್ಗಿಕವಲ್ಲ, ಹಾಗಾಗಿ ನಿಸರ್ಗದ ವಿರುದ್ಧ ಹೊರಡಬಾರದು ಎನ್ನುವ ಸತ್ಯ ಕಂಡುಕೊಂಡು ಮತ್ತೆ ಸಂಸಾರಿಗಳಾಗುವವರು. ಅವರಲ್ಲಿ ಸನ್ಯಾಸ ಮತ್ತು ಆಧ್ಯಾತ್ಮದ ನಡುವೆ ಗೊಂದಲ ಹುಟ್ಟು ಅದರ ಶೋಧನೆ ಇಲ್ಲಿ ನಡೆಯುತ್ತದೆ. ಇದನ್ನು ವೈಚಾರಿಕ ನೆಲೆಯಲ್ಲಿ ಸಮರ್ಥಿಸುವ ಕುವೆಂಪುರವರ ಬಗ್ಗೆ ಮೆಚ್ಚುಗೆ ಹುಟ್ಟುತ್ತದೆ. ಇವರ ಕಥೆಗಳಲ್ಲಿ ವೈವಿಧ್ಯತೆ, ಉದಾರತೆ, ಉದಾತ್ತತೆಯೂ, ಆತ್ಮ ಶೋಧನೆಯೂ, ಸಮಾಜೋದ್ಧಾರ ಚಿಂತನೆಗಳಿವೆ. ಆ ಸಂದರ್ಭದ ಸಾಮಾಜಿಕ ಸಮಸ್ಯೆಗಳಿಗೆ ಹಿಡಿದ ಕನ್ನಡಿಯೂ ಇದೆ.

'ಕಾನೂರು ಹೆಗ್ಗಡತಿ' ಯ ಹೂವಯ್ಯ ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಚಿನ್ನಯ್ಯನ ಪಾತ್ರಗಳು ಪ್ರಾತಿನಿಧಿಕವಾಗಿವೆ. ಈ ಇಬ್ಬರೂ ಸ್ವತಃ ತಮ್ಮ ಆಸುಪಾಸಿನ ಜನರ ವಿಮೋಚನೆಯ ಕದನಕಣಕ್ಕೆ ಇಳಿದವರು. ಮಲೆಗಳಲ್ಲಿ ಮದುಮಗಳು ಕಾದಂಬರಿಯ "ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ! ಇಲ್ಲಿ ಯಾವುದಕ್ಕೂ ಮೊದಲಿಲ್ಲ; ಯಾವುದಕ್ಕೂ ತುದಿಯಿಲ್ಲ; ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ; ಕೊನೆಮುಟ್ಟುವುದೂ ಇಲ್ಲ! ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ! ಇಲ್ಲಿ ಎಲ್ಲಕ್ಕೂ ಇದೆ ಅರ್ಥ;

ಯಾವುದೂ ಅಲ್ಲ ವ್ಯರ್ಥ, ನೀರೆಲ್ಲ ಊ ತೀರ್ಥ' ಎಂಬ ಹೇಳಿಕೆಯಲ್ಲಿ ಬದುಕಿನ ದರ್ಶನವನ್ನು ಕೊಡುವ ಕೈವಲ್ಯವಾಗಿದೆ. ಆಲೋಚನೆ ಮತ್ತು ಭಾಷೆಗಳ ನಡುವಣ ಸಂಬಂಧದ ವಿಭಿನ್ನ ವಿನ್ಯಾಸಗಳು ನಿಚ್ಚಳವಾಗಿಯೇ ಕಾಣುತ್ತದೆ.

"ಮಲೆಗಳಲ್ಲಿ ಮದುಮಗಳು ಕಾದಂಬರಿಯ ಅತ್ಯಂತ ಮಹತ್ವದ ಪಾತ್ರ ಗುತ್ತಿಯ ನಾಯಿ ಹುಲಿಯ ಪಾತ್ರ ಕಾದಂಬರಿಯ ಕೊಟ್ಟಕೊನೆಯಲ್ಲಿ ಶಕ್ತಿಯನ್ನು ಬಿಟ್ಟಿರಲಾರದ ಅದು ಹೊಳೆಯ ಪ್ರವಾಹಕ್ಕೆ ನೆಗೆದು ಗುತ್ತಿಯಿಂದ ಹರಿಗೋಲಿನ ಹಿಂದೆ ಈಜುತ್ತಾ ಈಜುತ್ತಾ ಕೈಕಾಲು ಸೊತು ಕೊಟ್ಟ ಕೊನೆಯದಾಗಿ ಪ್ರವಾಹದ ಪಾಲಾಗುತ್ತದೆ. ಈ ಪಾತ್ರ ಎಷ್ಟು ಗಾಢವಾಗಿ ನಮ್ಮ ಅಂತಃಕರಣವನ್ನು ಕಲಕುತ್ತದೆ. ಎಂದರೆ ನನಗೆ ಇದನ್ನು ಓದಿದ ಮೇಲೆ ನನ್ನ ಕಲ್ಪನೆ ಸುಮ್ಮನೆ ಹೊಳೆ ದಂಡೆಯಲ್ಲಿ ಕುಳಿತು ಪ್ರವಾಹವನ್ನೇ ದಿಟ್ಟಿಸುತ್ತಾ ಮೂಕವಾಗುತ್ತದೆ. ಮನುಷ್ಯನ ಮಿತ್ರ ಶ್ರೇಷ್ಠನಾದ ನಾಯಿ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ನಮಗೆ ಪರಿಚಯವಾದಾಗ ಮಾತ್ರ ಗುತ್ತಿಯ ನಾಯಿ ಹುಲಿಯನ ಹಿರಿಮೆ ನಮಗೆ ಗೊತ್ತಾಗುತ್ತದೆ'. ಪೂರ್ಣಚಂದ್ರ ತೇಜಸ್ವಿ ಅವರ ಅಭಿಮತ.

ಸಂಸ್ಕೃತ ಮತ್ತು ಇಂಗ್ಲೀಷ್ ಸಾಹಿತ್ಯ ಪರಂಪರೆಗಳ ಒಡನಾಟವೇ ಅವರ ನಾಟಕಗಳ ವಸ್ತು ವೈವಿಧ್ಯತೆಯಲ್ಲಿ ಒಡಮೂಡಿದೆ. 'ಯಮನಸೋಲು' 'ಶ್ಮಶಾನ ಕುರುಕ್ಷೇತ್ರ' 'ಬೆರಳ್‌ಗೆಕೊರಳ್' ಮಹಾಭಾರತದ ಹಿನ್ನಲೆಯಲ್ಲಿ ಮೂಡಿಬಂದ ನಾಟಕಗಳಾದರೆ, 'ಶೂದ್ರತಪಸ್ವಿ' 'ವಾಲ್ಮೀಕಿ ಭಾಗ್ಯ' ರಾಮಾಯಣ ಮಹಾಕಾವ್ಯದಿಂದಾಯ್ದ ವಸ್ತುಗಳಾಗಿವೆ. 'ಬಿರುಗಾಳಿ' ಮತ್ತು 'ರಕ್ತಾಕ್ಷಿ' ನಾಟಕಗಳು ಷೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ಮತ್ತು 'ಹ್ಯಾಮ್ಲೆಟ್' ರೂಪಾಂತರವಾಗಿವೆ.

ಗುರು ಮತ್ತು ಶಿಷ್ಯರಿಬ್ಬರ ನಡುವಣ ವಾಗ್ವಾದ ಮತ್ತು ಸಾಮರಸ್ಯಗಳ ಚಿತ್ರಣ 'ಬೆರಳ್‌ಗೆಕೊರಳ್' ನಾಟಕದಲ್ಲಿ ಕ್ಷತ್ರಿಯೋತ್ತಮರ ಕೈಕೆಳಗೆ ಸಿಲುಕಿ ಸ್ವತಂತ್ರ ನಿರ್ಧಾರವನ್ನು ಕೈಗೊಳ್ಳಲಾರದೆ ಅವರ ಕೈಗೊಂಬೆಯಾಗಿ ವರ್ತಿಸುವ ವ್ಯಕ್ತಿಯಾಗಿ, ಮುಗ್ಧ ಬಾಲಕನ ಬೆರಳ ಬಲಿಗೆ ಪಶ್ಚಾತ್ತಾಪ ಪಡುವಂತೆ ಗುರು ದ್ರೋಣಾಚಾರ್ಯರು ಚಿತ್ರಿತವಾಗಿದ್ದಾರೆ.

'ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೇ? ಅವಿದ್ಯೆ!
ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ
ಮಿಕ್ಕುದೆಲ್ಲಂ ಅವಿದ್ಯೆ!

'ತಾನೊಬ್ಬನೇ ಬಿಲ್ವಿದ್ಯೆಯಲ್ಲಿ ಅಪ್ರತಿಮನಾಗಬೇಕೆಂಬ ಅಹಂಕಾರದಿಂದ ಕಲಿತ

ಅರ್ಜುನನ ವಿದ್ಯೆ ಅದು ಅವಿದ್ಯೆ. ಕಾಡಿನ ಸಾಧು ಪ್ರಾಣಿಗಳನ್ನು ಕ್ರೂರಮೃಗಗಳಿಂದ ರಕ್ಷಿಸಬೇಕೆಂಬ ಹಂಬಲದಿಂದ, ಶ್ರದ್ಧೆಯಿಂದ ಕಲಿತ ವಿದ್ಯೆ ಅದು ಸದ್ವಿದ್ಯೆ' ಎಂದು ದ್ರೋಣರು ಅಭಿಪ್ರಾಯ ಪಡುತ್ತಾರೆ.

'ಶ್ಮಶಾನ ಕುರುಕ್ಷೇತ್ರ' ನಾಟಕವು ಹದಿನೆಂಟು ದಿನಗಳ ಯುದ್ಧಾ ನಂತರ ಇಡೀ ಕುರುಕ್ಷೇತ್ರ ರಣಾಂಗಣವು ಶ್ಮಶಾನವಾಗಿ ಯುದ್ಧದಿಂದ ಸರ್ವಸ್ವವೂ ಹಾನಿಗೊಳಗಾಗುವುದನ್ನು ಚಿತ್ರಿಸುತ್ತದೆ. ಕೌರವ ಮತ್ತು ಪಾಂಡವ ಪಕ್ಷಗಳೆರಡರಲ್ಲಿಯೂ ಬಂಧುಬಾಂದವರನ್ನು ಕಳೆದುಕೊಂಡ ದುಃಖಿಗಳ ಸಂಕಟವಿದೆ. ಕರ್ಣನನ್ನು ಕಳೆದುಕೊಂಡ ತಾಯಿ ಕುಂತಿಯ ಮತ್ತು ಗೆಳೆಯ ಸುಯೋಧನನ ಆಕ್ರಂದನ, ಸುಯೋಧನನ್ನು ಕಳೆದುಕೊಂಡವೆಂದು ಪರಿತಪಿಸುವ ದೃತರಾಷ್ಟ್ರ ಗಾಂಧಾರಿ ಮತ್ತು ಅಶ್ವತ್ಥಾಮರ ದುಃಖ ಒಂದೆಡೆಯಾದರೆ, ಅಭಿಮನ್ಯು ಮತ್ತು ಘಟೋತ್ಕಚರನು ಕಳೆದುಕೊಂಡ ಭೀಮಾರ್ಜುನರ ವ್ಯಥೆಯು ಮತ್ತೊಂದೆಡೆಯಾಗಿದೆ. ಸೈನ್ಯದಲ್ಲಿ ಮಡಿದ ಸೈನಿಕರ ಬಂಧುಬಾಂದವರ ದುಃಖ ಮೇರೆ ಮೀರಿದೆ. ಇಲ್ಲಿ ಎಲ್ಲರೂ ಸಮಾನ ದುಃಖಿಗಳಾಗಿದ್ದಾರೆ. ಯುದ್ಧ ಪೂರ್ವದಲ್ಲಿ ಕೌರವ–ಪಾಂಡವರಲ್ಲಿದ್ದ ಪರಸ್ಪರ ಕೋಪ ದ್ವೇಷ, ಅಸೂಯೆ, ಮತ್ಸರ, ಸ್ವಾರ್ಥ ಮೊದಲಾದ ಗುಣಗಳು ಯುದ್ಧಾಂತ್ಯದಲ್ಲಿ ಅವಸಾನ ಹೊಂದಿ ಕೊನೆಗೆ ವಿಯೋಗವೊಂದೆ ಸ್ಥಾಯಿಯಾಗಿ ಉಳಿಯುವುದನ್ನು ನಾಟಕ ದರ್ಶಿಸುತ್ತದೆ.

ಲೋಕಹಿತಾರ್ಥಕ್ಕಾಗಿ ಜಗತ್ತಿನ ಅಂಧಕಾರವನ್ನು ತೊಡೆಯುವ ಮಹದಾಸೆಯಿಂದ ತನ್ನ ಸಾಮ್ರಾಜ್ಯ ಬಂಧು–ಬಾಂಧವರೆಲ್ಲರನ್ನು ತೊರೆದು ಎಲ್ಲಾ ಮೋಹಪಾಶಗಳಿಂದ ಬಿಡುಗಡೆಗೊಂಡು ವಿಶ್ವಮುಖಿಯಾಗಿ ತೆರಳಲು ಸಿದ್ಧಾರ್ಥನು ನಿಶ್ಚಯಿಸಿ ಹೊರಟ ರಾತ್ರಿಯೇ 'ಮಹಾರಾತ್ರಿ' ನಾಟಕವಾಗಿದೆ.

"ತಂದೆಯೊಲಿದೀಯುವ ಮುತ್ತಲ್ಲಿವಿದು ಕಂದ
ಸಂನ್ಯಾಸಿಯೀಯುತಿಹ ನಿಷ್ಕಾಮ ಚುಂಬನ
ಪರಮಾತ್ಮ ನೀಯುತಿಹ ಮಂಗಳದ ಮುತ್ತು!"

ಸಿದ್ಧಾರ್ಥನ ಮನವು ಸಂಪೂರ್ಣವಾಗಿ ಮೋಗಿತ್ವದ ಕಡೆಗೆ ವಾಲಿರುವುದನ್ನು ನೋಡಬಹುದು. ಜಗತ್ತಿನ ಮೌಢ್ಯಾಂಧಕಾರವನ್ನು ತೊಲಗಿಸಿ ಬೆಳಕ ನೀಡಲು ಹೊರಟ ಸಿದ್ಧಾರ್ಥ ಅದಕ್ಕೆ ಪೂರ್ವಭಾವಿಯಾಗಿ ಸಂಸಾರ, ಸಾಮ್ರಾಜ್ಯ ಸಂಪತ್ತು ಬಂಧುಬಾಂಧವರೆಂಬ ಮೋಹಪಾಶಗಳಿಂದ ಬಿಡಿಸಿಕೊಂಡು ಬೆಳಕಿನೆಡೆಗೆ ಸಾಗುವ ಚಿತ್ರಣ. ಆಗೆಯೇ ಸಿದ್ಧಾರ್ಥ ಸ್ವತಃ ತಾನು ಕತ್ತಲಿನಿಂದ ಬೆಳಕಿನೆಡೆಗೆ ಸಾಗುತ್ತಿರುವ

ದೃಶ್ಯವು ನಾಟಕದಲ್ಲಿ 'ಮಹಾರಾತ್ರಿ'ಯಾಗಿ ಚಿತ್ರಿತವಾಗಿದೆ.

'ಶೂದ್ರ ತಪಸ್ವಿ' ನಾಟಕವು ಶೂದ್ರನಾದ ಶಂಭುಕನ ತಪಸಿದ್ಧಿಯನ್ನು ಪಡೆಯಲು ಸಮರ್ಥನು ಎಂಬ ನಿಲುವಿನಿಂದ ಹೊರಹೊಮ್ಮಿದೆ. ದೈವಧ್ಯಾನ ಪ್ರಣೀತ ತಪಸ್ಸಾಚರಣೆ ವೈದಿಕರಿಗೆ ಮಾತ್ರ ಮೀಸಲೆಂದು ನಂಬಿದ್ದ ಬ್ರಾಹ್ಮಣ 'ನಾಯಪಾಲ್ಗೆಣೆ ಶೂದ್ರನ ತಪಂ' ಎಂದು ಮೂದಲಿಸುತ್ತಾನೆ. ತನ್ನ ಮಗನ ಸಾವಿಗೆ ಶೂದ್ರ ಶಂಭೂಕನ ಈ ತಪಸ್ಸೆ ಕಾರಣವೆಂದು ದ್ವಿಜೋತ್ತಮ ಆರೋಪಿಸುತ್ತಾನೆ. ಸ್ವತಃ ಶ್ರೀರಾಮನೇ ಶೂದ್ರ ಮತ್ತು ವೈದಿಕರನ್ನು ಮುಖಾಮುಖಿಯಾಗಿಸುವ ಮೂಲಕ 'ಸನ್ನತಿಯ ಸತ್ಕೃತಿಗೆ ಶಾಸ್ತ್ರದ ನೆರಂಬೇಕೆ?; ಎನ್ನುತ್ತಾ ವೈದಿಕನ ಮನದ ಮೌಢ್ಯವನ್ನು ದೂರ ಮಾಡುತ್ತಾನೆ. ಡಾ.ಅಂಬೇಡ್ಕರ್ ಹೇಳುವಂತೆ "ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಗುಣದಿಂದ ಅಳೆಯಬೇಕೆ ಹೊರತು ಜಾತಿಯಿಂದಲ್ಲ". ಅದಕ್ಕನುಗುಣವಾಗಿ ಮನುಷ್ಯನ ಸಾಧನೆಯನ್ನು ಅವನ ಸಾಮರ್ಥ್ಯ ಅಳೆಯಬೇಕೆ ಹೊರತು, ಅವನ ಜಾತಿಯಿಂದಲ್ಲಾ, ಸ್ವತಃ ಕುವೆಂಪು ತಮ್ಮ ಬಾಳಲ್ಲಿ ಕಂಡುಕೊಂಡ ಸತ್ಯದರ್ಶನವು ಇದಾಗಿದೆ. ಜಾತಿಯಿಂದ ಕೀಳಾಗಿ ವೃತ್ತಿಯಲ್ಲಿ ಜಲಗಾರನಾದರೂ ಅವನ ಕಾಯಕ ನಿಷ್ಠೆಯನ್ನು ಮೆಚ್ಚಿ ಸಾಕ್ಷಾತ್ ಶಿವನೇ ಪ್ರತ್ಯಕ್ಷವಾಗುವುದನ್ನು 'ಜಲಗಾರ' ನಾಟಕವು ತೋರಿಸುತ್ತದೆ. ಕಾಯಕವೇ ಕೈಲಾಸ ಎಂಬ ಬಸವಣ್ಣರ ವಾಣಿಯಂತೆ ಕುವೆಂಪು ಕೂಡ ಜಾತಿಗಿಂತ ದುಡಿಮೆಗೆ ಹೆಚ್ಚು ಒತ್ತು ನೀಡಿದ್ದಾರೆ. ಜಾತಿಯಿಂದ ಜಲಗಾರ ಕೀಳಾದರೂ ಅವನ ಕಾಯಕ ನಿಷ್ಠೆಗೆ ಮೆಚ್ಚಿ ಸಾಕ್ಷಾತ್ ಶಿವನೇ ಸಾಕ್ಷಾತ್ಕಾರಗೊಳ್ಳುತ್ತಾನೆ. ಜಲಗಾರನ ವೃತ್ತಿ ಪ್ರೇಮವನ್ನು ಮೆಚ್ಚಿದ ಶಿವನು 'ಊರ ತೋಟಿಯು ನೀನು; ಜಗದ ತೋಟಿಯು ನಾನು' ಎಂದು ಹೇಳುವ ಮೂಲಕ ಕಾಯಕಕ್ಕೆ ಉನ್ನತ ಸ್ಥಾನವನ್ನು ನೀಡುತ್ತಾನೆ.

'ರಾಮಾಯಣ ದರ್ಶನಂ'ನಲ್ಲಿ ಬರುವ ಅರ್ಪಣೆಯ ಭಾಗದಲ್ಲಿ ಜಗತ್ತಿನ ಎಲ್ಲ ಆಚಾರ್ಯರಿಗೆ ಆಹ್ವಾನಿಸುವ ಮತ್ತು ವಂದಿಸುವ ಭಾಗದಲ್ಲಿ ಒಂದು ಭೌದ್ಧಿಕ ಯಾನವಿದೆ. ಈ ಮಹಾಕಾವ್ಯದಲ್ಲಿ ಬರುವ 'ಪಾಪಿಗೂ ಉದ್ಧಾರವಿಹುದೌ ಸೃಷ್ಟಿಯ ಮಹದ್‌ವೈಹ ರಚನೆಯೊಳ್' ಎಂಬ ಹೇಳಿಕೆಯೂ ಇದೇ ಅರ್ಥದ್ದು ಕುವೆಂಪು ಸಾಹಿತ್ಯದಲ್ಲಿ ಕೇಡಿನ ಪ್ರತೀಕಗಳಾದ ಪಾತ್ರಗಳು 'ಶೂದ್ರತಪಸ್ವಿ'ಯ ಬ್ರಾಹ್ಮಣ, 'ರಾಮಾಯಣ ದರ್ಶನಂ'ನ ರಾವಣ, 'ಕಾನೂನು ಹೆಗ್ಗಡತಿ'ಯ ಚಂದ್ರೇಗೌಡ ಆದಿಯಾಗಿ ಬದಲಾಗುತ್ತವೆ. ಮಾನವ ಬದುಕಿನಲ್ಲಿ ಸಂಭವಿಸುವ ವಸ್ತುವಿನ ಆಯ್ಕೆ ಮತ್ತು ವಿಸ್ತಾರ ಕಿರಿದ್ದಾಗಿದ್ದರೂ ಅವು ತೋರುವ ದರ್ಶನ ಮಾತ್ರ ಎಲ್ಲಾ ಕಾಲಕ್ಕೂ ಸಲ್ಲುವಂತಹುದಾಗಿದೆ. ತನ್ನ ವಿಶಾಲ ಓದಿನ ಅನುಭವದಿಂದ ತಾನು ಕಂಡುಕೊಂಡ

ಸತ್ಯವನ್ನು ಯಾವುದೇ ಅಂಜಿಕೆಯಿಲ್ಲದೇ ಕೃತಿಗಳಲ್ಲಿ ಹೊರತಂದ ಧೀಮಂತ ದಾರ್ಶನಿಕ ಕವಿ ಕುವೆಂಪು.

ಪರಾಮರ್ಶನ ಗ್ರಂಥಗಳು :

1. ಸನ್ಯಾಸಿ ಇತರ ಕಥೆಗಳು ಮತ್ತು ನನ್ನ ದೇವರು ಇತರ ಕಥೆಗಳು., ಕುವೆಂಪು
2. ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿ., ಕುವೆಂಪು
3. ಕುವೆಂಪು ನಾಟಕಗಳ ಅಧ್ಯಯನ– ನರಹಳ್ಳಿ ಬಾಲಸುಬ್ರಹ್ಮಣ್ಯ
4. ವಿಮರ್ಶೆಯ ವಿಮರ್ಶೆ – ಪೂರ್ಣಚಂದ್ರ ತೇಜಸ್ವಿ

ಕೆ.ಎನ್. ನಂದೀಶ
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಂಕೋಲಾ
ಉತ್ತರ ಕನ್ನಡ ಜಿಲ್ಲೆ

ನಾಟ್ಯಮಯೂರಿ : ಹೊಯ್ಸಳೇಶ್ವರ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ಕಥನ

¤ ಡಾ. ಕಿರಣ ವಲ್ಲೇಪುರೆ

ಮರುಳಯ್ಯ ಸಾ. ಶಿ. ಅವರು ರಚಿಸಿದ 'ನಾಟ್ಯಮಯೂರಿ' ದ್ವಾರಸಮುದ್ರದ ಹೊಯ್ಸಳ ಸಾಮ್ರಾಜ್ಯದ ಶ್ರೇಷ್ಟ ಅರಸ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ಕಥನವನ್ನೊಳಗೊಂಡ ಐತಿಹಾಸಿಕ ಕಾದಂಬರಿಯಾಗಿದೆ. ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ತಿಮಬ್ಬೆ, ಅಕ್ಕಮಹಾದೇವಿ ಅಂತೆಯೇ ಶಾಂತಲೆಯೂ ಪ್ರಮುಖಳಾಗಿದ್ದಾಳೆ. ಶಾಂತಲೆ ಕುರಿತು ಕನ್ನಡದಲ್ಲಿ ಕೆ. ವಿ. ಅಯ್ಯರ್ ಅವರು 'ಶಾಂತಲಾ', ಮ. ನ. ಮೂರ್ತಿ ಅವರು 'ನಾಟ್ಯರಾಣಿ ಶಾಂತಲಾ', ಕೆ. ವಿ. ರಾಜೇಶ್ವರಿ ಅವರು 'ನಾಟ್ಯ ಸರಸ್ವತಿ ಶಾಂತಲಾ', ಸಿ. ಕೆ. ನಾಗರಾಜ ಅವರು 'ಪಟ್ಟಮಹಾದೇವಿ ಶಾನ್ತಲಾದೇವಿ 1, 2', ವೈ. ಕೆ. ಸಂಧ್ಯಾ ಶರ್ಮ ಅವರು 'ನೃತ್ಯ ಸರಸ್ವತಿ' ಎಂಬ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಸಾ. ಶಿ. ಮರುಳಯ್ಯನವರ 'ನಾಟ್ಯಮಯೂರಿ' ಚಿಕ್ಕ ಕಾದಂಬರಿಯಾಗಿದ್ದು; ಇಲ್ಲಿ ಲೇಖಕರು ಶಾಂತಲೆಯ ಬದುಕು, ಗೆಳೆತನ, ಪ್ರೇಮ, ವಿವಾಹ, ದಾಂಪತ್ಯ, ಗುರುಭಕ್ತಿ, ನೃತ್ಯ, ಸೌಂದರ್ಯ, ವ್ಯಕ್ತಿತ್ವ, ಆದರ್ಶತನ, ಮಾನವೀಯತೆ, ನೋವು, ಸಾವು –ಎಲ್ಲವನ್ನು ತಮ್ಮದೇ ಅಧ್ಯಯನದ ನೆಲೆಯಲ್ಲಿ ಕಲಾತ್ಮಕವಾಗಿ ಸೆರೆ ಹಿಡಿದಿದ್ದಾರೆ. ಒಟ್ಟು ಹತ್ತು ಅಧ್ಯಾಯಗಳಲ್ಲಿ ಇಲ್ಲಿನ ಕಥೆ ನಿರೂಪಣೆಗೊಂಡಿದೆ.

ಶಾಂತಲೆ ಕಾದಂಬರಿಯ ಕೇಂದ್ರ ಪಾತ್ರ. ಇವಳು ನೃತ್ಯದಲ್ಲಿ ಪ್ರವೀಣಳು. ತಂದೆ ಮಾರಸಿಂಗಯ್ಯ ಮತ್ತು ತಾಯಿ ಮಾಚಿಕಬ್ಬೆ. ಶಾಂತಲೆ ಮತ್ತು ಲಕ್ಷ್ಮಿಯರು ಶಿವ–ಪಾರ್ವತಿಯ ವೇಶ ಧರಿಸಿ ಶಿವಗಂಗೆಯ ಹೊನ್ನಮ್ಮನ ಗುಡಿಯ ಮುಂದೆ 'ಶಿವನ ತಾಂಡವ ನೃತ್ಯ' ಮಾಡುವ ಸಂದರ್ಭವೊಂದರ ಮೂಲಕ ಕಾದಂಬರಿಯ ಕಥೆ ಆರಂಭವಾಗುತ್ತದೆ. ಆ ಸಂದರ್ಭದಲ್ಲಿ ನೊಳಂಬವಾಡಿಯವರೊಂದಿಗಿನ

ಯುದ್ಧದಲ್ಲಿ ವಿಷ್ಣುವರ್ಧನನು ಗೆಲುವು ಸಾಧಿಸಿ ದ್ವಾರಸಮುದ್ರಕ್ಕೆ ಹಿಂದಿರುಗುವಾಗ ದಾರಿ ಮಧ್ಯೆ ಶಿವಗಂಗೆಯಲ್ಲಿ ಶಾಂತಲೆಯ ನೃತ್ಯ ನೋಡಿ ಬೆರಗಾಗುತ್ತಾನೆ. "ಭಾವುಕನಾದ ರಾಜಕುಮಾರ ವಿಷ್ಣುವರ್ಧನನ ಮನಸ್ಸನ್ನು ಸೂರೆಗೊಂಡದ್ದು ಶಾಂತಲೆಯ ವಸಂತನರ್ತನ... ಅವಳ ಚೆಲುವು, ಚೆದುರು, ಹಾವ, ಭಾವ, ನಡೆಯ ಮೋಡಿ, ಕುಣಿತದ ಗತ್ತು, ಬಳುಕುವ ನಡು – ಎಲ್ಲವೂ ಮೆಚ್ಚಾದವು."[1] ಇಲ್ಲಿಯೇ ನಾಟ್ಯಮಯೂರಿ ಶಾಂತಲೆ ಮತ್ತು ಯುವರಾಜ ವಿಷ್ಣುವರ್ಧನರ ನಡುವೆ ಶಾಂತಲೆಯ ತಂದೆ ಡಣಾಯಕರಾದ ಮಾರಸಿಂಗಯ್ಯರ ಮೂಲಕ ಪರಸ್ಪರ ಪರಿಚಯವೂ ಆಗುತ್ತದೆ. ಶಾಂತಲೆಯೂ ಯುವರಾಜನಿಗೆ ಮನಸೋಲುತ್ತಾಳೆ. ನಂತರದಲ್ಲಿ ತಂದೆ ಮಾರಸಿಂಗಯ್ಯನೊಂದಿಗೆ ಯುವರಾಜರ ಬಗ್ಗೆ ಮಾತನಾಡಿ ಯುವರಾಜರ ಬಗ್ಗೆ ತಿಳಿದುಕೊಳ್ಳುತ್ತಾಳೆ. ಇತ್ತ ವಿಷ್ಣುವರ್ಧನನು ಸಹ ದಾರಿ ಮಧ್ಯೆ ತನ್ನ ಆತ್ಮೀಯ ಸ್ನೇಹಿತ ಬಪ್ಪರಸನೊಂದಿಗೆ ಶಾಂತಲೆಯ ಬಗ್ಗೆ ಮಾತನಾಡುತ್ತ ಅವಳ ಬಗ್ಗೆ ತಿಳಿದುಕೊಳ್ಳುತ್ತಾನೆ. ಬಪ್ಪರಸನು ಶಾಂತಲೆಯ ಕುರಿತು ಅವಳು "ಗುಣವತಿ, ರೂಪವತಿ ನಾಟ್ಯಕ್ಕೆ ನಿಂತರೆ ಅಪ್ಸರೆಯರು ನಾಚಬೇಕು, ಹಾಡತೊಡಗಿದರೆ ಗಂಧರ್ವರು ತಲೆತಗ್ಗಿಸಬೇಕು; ವೀಣೆಯನ್ನು ಹಿಡಿದು ಮೇಳದ ಮೇಲೆ ಕೈಆಡಿಸುತ್ತ ಕುಳಿತಳೆಂದರೆ ಸಾಕ್ಷಾತ್ ಸರಸ್ವತಿ!..."[2] ಎಂದು ಅವಳ ಗುಣ ಸ್ವಭಾವವನ್ನು ಬಣ್ಣಿಸುತ್ತಾನೆ. ಯುವರಾಜನು ಶಾಂತಲೆಯನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಮಿತ್ರ ಬಪ್ಪರಸನು ವಿಷಯವನ್ನು ರಾಜಮಾತೆಗೆ ತಿಳಿಸಿ ಅನುಮತಿಯೂ ಪಡೆಯುತ್ತಾನೆ. ಈ ಮಧ್ಯೆ ವಿಷ್ಣುವರ್ಧನನಿಗೆ ನೊಳಂಬ ರಾಜಲೆ, ಪಲ್ಲವ ಬೊಮ್ಮಲೆ, ಬನವಾಸಿಯ ಬಿಜ್ಜಲೆಯ ಮದುವೆ ಸಂಬಂಧದ ಓಲೆಯೂ ಬರುತ್ತದೆ.

ರಾಜಮಾತೆಯಾದ ಏಚಲಾದೇವಿಯು ಯುದ್ಧದ ವಿಜಯೋತ್ಸವ ಮತ್ತು ಯುವರಾಜನ ಕಿರೀಟಧಾರಣಾ ಮಹೋತ್ಸವಕ್ಕೆ ಶಿವಗಂಗೆಯ ಡಣಾಯಕರಾದ ಮಾರಸಿಂಗಯ್ಯನವರಿಗೆ ಕುಟುಂಬ ಜೊತೆಯಲ್ಲಿ ಬರುವಂತೆ ಪತ್ರದ ಮೂಲಕ ಆಹ್ವಾನ ನೀಡುತ್ತಾರೆ. ಇದೇ ನೆಪದಲ್ಲಿ ಭಾವಿ ಸೊಸೆ ಶಾಂತಲೆಯನ್ನು ನೋಡುವ, ಮಾತನಾಡುವ ಪೂರ್ವ ಯೋಜನೆಯು ಅವರದ್ದಾಗಿರುತ್ತದೆ. ದ್ವಾರಸಮುದ್ರಕ್ಕೆ ಬಂದ ಶಾಂತಲೆಯು ಮೊದಲು ರಾಜಮಾತೆಯ ಪಾದಗಳಿಗೆ ವಂದಿಸುತ್ತಾಳೆ. ಅವಳ ಈ ಸಂಸ್ಕೃತಿ, ಸಜ್ಜನಿಕೆಯ ನಡೆ ರಾಜಮಾತೆಗೆ ಆನಂದವನ್ನುಂಟು ಮಾಡುತ್ತದೆ. "ಇಂತಹ ಸುಲಕ್ಷಣ ಸಂಪನ್ನೆ ಮಹಾರಾಣಿಯಾಗುವುದು ನಾಡಿನ ಪುಣ್ಯ; ನಮ್ಮ ಮನೆಗೆ ಸೊಸೆಯಾಗಿ ಬರುವುದು ನಮ್ಮ ಭಾಗ್ಯ ವಿಶೇಷ"[3] ಎಂದುಕೊಳ್ಳುತ್ತಾಳೆ. ಅಲ್ಲಿ ನಡೆದ ಸಂಗೀತ ಗೋಷ್ಠಿಯಲ್ಲಿ ಶಾಂತಲೆಯು ಆರಂಭದಲ್ಲಿ ವೀಣೆ ನುಡಿಸುತ್ತಾಳೆ. ನಂತರದಲ್ಲಿ

ಹಾಡನ್ನು ಹಾಡುತ್ತಾಳೆ. ಶಾಂತಲೆಯು ನೃತ್ಯದಂತೆಯೆ ಸಂಗೀತದಲ್ಲಿಯೂ ಪ್ರವೀಣಳಾಗಿದ್ದಳು. ಅಂದಿನ ಅವಳ ಹಾಡು ಎಲ್ಲರಿಗೂ ಮೆಚ್ಚುಗೆಯಾಗುತ್ತದೆ. ರಾಜಮಾತೆಯಂತೂ ಖುಷಿಯಿಂದ ಶಾಂತಲೆಯನ್ನು ಅಪ್ಪಿಕೊಳ್ಳುತ್ತಾರೆ. "ಶಾಂತಲೆ ನೀನು ನಮ್ಮ ಮನೆಯ ಜ್ಯೋತಿ. ಅಷ್ಟೇ ಅಲ್ಲ, ಈ ಸಾಮ್ರಾಜ್ಯದ ಸಕಲ ಸಂಪದಕ್ಕೂ ನೀನು ರಾಜಲಕ್ಷ್ಮಿ. ಇಂದಿನಿಂದ ಕತ್ತಲಾಗಿದ್ದ ಅರಮನೆ ನಿನ್ನಿಂದ ಬೆಳಗಬೇಕಾಗಿದೆ. ಹೊಯ್ಸಳರು ಚಾಲುಕ್ಯರಿಂದ ಸಂಪೂರ್ಣ ಸ್ವತಂತ್ರರಾಗಿ ಸಾಮ್ರಾಟರಾಗಿ ಬಾಳಬೇಕಾಗಿದೆ. ನಿನ್ನಂಥವಳು ನಮ್ಮ ಮನೆಗೆ ಸೊಸೆಯಾಗಿ ಬರುವುದರಿಂದ ಅದು ವೃದ್ಧಿಯಾದಿತು. ನಿನ್ನ ಶೀಲ, ಸದ್ಗುಣ, ಸೌಜನ್ಯಗಳಿಂದ ನಾಡಿನ ಆತ್ಮಬಲ ಹೆಚ್ಚೀತು "[4] ಎಂದು ಹೇಳಿ ಮದುವೆಯ ಪ್ರಸ್ತಾಪವನ್ನು ಮಾಡುತ್ತಾರೆ. ಶಾಂತಲೆಯು ಇಲ್ಲಿ ವಿಷ್ಣುವರ್ಧನನ ಬಹುಪತ್ನಿತ್ವಕ್ಕೂ ಸಮ್ಮತಿ ಸೂಚಿಸಿತ್ತಾಳೆ. ಮಂತ್ರಿ ಪದವಿಯ ಪ್ರಸ್ತಾಪ ಬಂದಾಗಲೂ ಅನುಭವಿ ಗಂಗರಾಜರ ಹೆಸರನ್ನು ಸೂಚಿಸಿ ಪ್ರಬುದ್ಧತೆ ಮೆರೆಯುತ್ತಾಳೆ. ವಿವಾಹೋತ್ಸವ, ಮರುದಿನ ಪಟ್ಟಾಭಿಷೇಕೋತ್ಸವವೂ ಅದ್ಧೂರಿಯಾಗಿ ನಡೆಯುತ್ತದೆ. ಇಲ್ಲಿ ವಿಷ್ಣುವರ್ಧನನು ಶಾಂತಲೆ, ಬೊಮ್ಮಲೆ, ರಾಜಲೆ, ಬಿಜ್ಜಲೆ, ಲಕ್ಷ್ಮಿ –ಈ ಐವರನ್ನು ಮದುವೆಯಾಗುತ್ತಾನೆ. ನಂತರ ಉದಯಾದಿತ್ಯನಿಗೆ ಯುವರಾಜ ಪಟ್ಟಾಭಿಷೇಕ ಕೂಡ ಮಾಡಲಾಗುತ್ತದೆ.

ಶಾಂತಲೆಯು ತನ್ನ ಗುರು ಅಮರಶಿಲ್ಪಿ ಜಕ್ಕಣಾಚಾರಿಯ ದರ್ಶನಕ್ಕೆ ಹಾಗೂ ವೇಲಾಪುರಿಯಲ್ಲಿ ವಿಜಯನಾರಾಯಣ ದೇವಾಲಯ ನಿರ್ಮಾಣ ಕುರಿತು ಮಾತನಾಡಲು ತನ್ನ ಪತಿ ವಿಷ್ಣುವರ್ಧನನ ಜೊತೆ ಹೋಗುತ್ತಾಳೆ. ಮೊದಲೇ ದೇವಾಲಯ ನಿರ್ಮಿಸಲು ನಿರಾಕರಿಸಿದ ಜಕ್ಕಣಾಚಾರಿಯ ಬಗ್ಗೆ ವಿಷ್ಣುವರ್ಧನನಿಗೆ ಕೋಪವಿದ್ದರೂ ಶಾಂತಲೆಯ ವಿನಂತಿಯ ಮೇರೆಗೆ ಬಳ್ಳಿಗಾವಿಗೆ ಹೋಗುತ್ತಾನೆ. ಆಗ ಮಹತ್ಕಾರ್ಯದಲ್ಲಿ ನಿರತರಾದ ಜಕ್ಕಣಾಚಾರ್ಯರಿಗೆ ತಿಳಿಯದ ಹಾಗೆ ಅವರಿಗೆ ನಡೆಸುವ ತಾಂಬೂಲದ ಕೈಂಕರ್ಯದ ಸೇವೆಯನ್ನು ಮಾಡುತ್ತಾರೆ. ಬೆಳಗಿನ ಜಾವದಲ್ಲಿ ವಿಷಯ ತಿಳಿದ ಜಕ್ಕಣಾಚಾರಿಯು 'ಮಹಾಪ್ರಭುಗಳು ತನ್ನ ಈ ಉದ್ಧಟತನವನ್ನು ಕ್ಷಮಿಸಬೇಕು' ಎಂದು ಕೇಳಿಕೊಳ್ಳುತ್ತಾನೆ. ನಂತರದಲ್ಲಿ ತನ್ನ ಹೆಸರು ಯಾರಿಗೂ ಹೇಳದಂತೆ ಮಾತು ಪಡೆದು ದೇವಾಲಯ ನಿರ್ಮಾಣಕ್ಕೆ ಒಪ್ಪಿಗೆ ನೀಡಿ, ನಾಲ್ಕೈದು ವರ್ಷದಲ್ಲಿ ಒಂದಲ್ಲಾ ಎರಡು ದೇವಾಲಯ ನಿರ್ಮಿಸಿ ಕಣ್ಮರೆಯಾಗುತ್ತಾರೆ. ಶಿಲ್ಪಕಲೆಗೆ ಈ ದೇವಾಲಯಗಳು ಜಗತ್ಪ್ರಸಿದ್ಧವಾಗಿವೆ. ಇಲ್ಲಿ ಶಾಂತಲೆಯು ಗುರುವಿನ ಭೇಟಿಗೆ ಬರಿಗಾಲಲ್ಲಿ ನಡೆಯುವುದು, ಅವರ ಸೇವೆ ಮಾಡುವುದು ಅವಳಲ್ಲಿದ್ದ ಅಪಾರವಾದ ಗುರುಭಕ್ತಿಯನ್ನು ತಿಳಿಸುತ್ತದೆ.

ಹೊಯ್ಸಳ ಸಾಮ್ರಾಜ್ಯದ ಪ್ರಗತಿ ಕಂಡು ಜಿಗುಪ್ಸೆಗೊಂಡು ಅವರ ಮೇಲೆ ಯುದ್ಧ ಸಾರಲು ಚೋಳಮಂಡಲದ ಕುಲೋತ್ತುಂಗ ನಿರ್ಧರಿಸುತ್ತಾನೆ ಮತ್ತು ತನ್ನ ಅಧಿನನಾಗಿರುವ ತಲಕಾಡಿನ ಗಂಗರಾಜ ಆದಿಮನನ್ನು ಯುದ್ಧಕ್ಕೆ ಕಳುಹಿಸುತ್ತಾನೆ. ಈ ಯುದ್ಧದಲ್ಲಿ ಹೊಯ್ಸಳರ ಸೈನ್ಯ ಜಯಗಳಿಸುತ್ತದೆ. ಗಂಗರಾಜ ಆದಿಮನು ಯುದ್ಧದಲ್ಲಿ ಸಾವನ್ನಪ್ಪುತ್ತಾನೆ. ತಲಕಾಡಿನಲ್ಲಿ ತನ್ನ ಸೈನ್ಯ ಜನಸಾಮಾನ್ಯರ ಮೇಲೆ ದೌರ್ಜನ್ಯ ಎಸಗದಂತೆ ತಿಳಿ ಹೇಳಿ ಶಾಂತಿ ಸ್ಥಾಪಿಸಿ ವಿಷ್ಣುವರ್ಧನನು ಉದಾರತೆಯನ್ನು ಮೆರೆಯುತ್ತಾನೆ. ಸಾಮಾನ್ಯವಾಗಿ ಗೆದ್ದ ಸಾಮ್ರಾಜ್ಯವನ್ನು ಲೂಟಿ ಮಾಡುವುದು, ಸರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ಎಸಗುವುದು ಕಂಡುಬರುತ್ತದೆ. ಆದರೆ ಅದನ್ನೆಲ್ಲ ತಡೆದು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಜನರ ಮನೋಭಿತಿಯನ್ನು ದೂರ ಮಾಡಿ ಶಾಂತಿ ಸ್ಥಾಪಿಸಿದ ವಿಷ್ಣುವರ್ಧನನ ನಡೆ ಮೆಚ್ಚುವಂಥದ್ದಾಗಿದೆ.

ಒಂದು ದಿನ ಶಾಂತಲೆಯು ತನ್ನ ರಾಜ್ಯದ ಪ್ರದೇಶದಲ್ಲಿ ಸಂಚರಿಸುವಾಗ ಬನದಮ್ಮನಹಳ್ಳಿಯಲ್ಲಿ ಭೂಮಿಯಲ್ಲಿ ಸಿಕ್ಕ ಬಂಗಾರದ ಹಂಚಿಕೆಗೆ ಸಂಬಧಿಸಿದಂತೆ ಜನರು ಪಂಚಾಯಿತಿಗೆ ನೆರೆದಿರುತ್ತಾರೆ. ಅಲ್ಲಿ ಬಂಗಾರ ರಾಜ್ಯದ ಬೊಕ್ಕಸ ಸೇರಲಿ ಎಂಬ ಮಾತು ಬಂದಾಗ ರಾಣಿ ಮಧ್ಯ ಪ್ರವೇಶಿಸಿ ಇದು ನಿಮ್ಮ ಬಂಗಾರ ನಿಮ್ಮ ಹಳ್ಳಿಯ ಏಳಿಗೆಗೆ ಬಳಕೆಯಾಗಲಿ ಎಂದು ಹೇಳುತ್ತಾಳೆ. ಅಲ್ಲಿನ ಜನರು ರಾಣಿಯನ್ನು ಕಂಡು ಸಂಭ್ರಮ ಪಟ್ಟುಕೊಳ್ಳುತ್ತಾರೆ. ಮುಂದೆ ಆ ಬಂಗಾರದಲ್ಲಿ ದ್ವಾರಸಮುದ್ರದಲ್ಲಿ ಕಲಾದೇಗುಲವನ್ನು ನಿರ್ಮಿಸಲು ತಿರ್ಮಾನಿಸಲಾಗುತ್ತದೆ. ಬನದಮ್ಮನಹಳ್ಳಿಯ ಬಂಗಾರದ ಜೊತೆಗೆ ರಾಜ್ಯದ ಬೊಕ್ಕಸದಿಂದಲೂ ಹಣ ನೀಡಿ ದೇವಾಲಯ ನಿರ್ಮಾಣ ಕಾರ್ಯ ನಡೆಯುತ್ತದೆ. ಆಗ ಕಲ್ಯಾಣಿ ಚಾಲುಕ್ಯರು ದ್ವಾರಸಮುದ್ರದ ಮೇಲೆ ಯುದ್ಧ ಸಾರುತ್ತಾರೆ. ಆ ಸಂದರ್ಭದಲ್ಲಿ ಹಣದ ಅಭಾವ ಎದುರಾದಾಗ ಜನರ ಮೇಲೆ ತೆರಿಗೆ ವಿಧಿಸುವುದನ್ನು ತಡೆದು ತನ್ನಲ್ಲಿದ್ದ ಬಂಗಾರದ ಒಡವೆಗಳನ್ನು ನೀಡಿ ಹಣದ ಅಭಾವ ಆಗದ ಹಾಗೆ ಶಾಂತಲೆ ನೋಡಿಕೊಳ್ಳುತ್ತಾಳೆ. ಆ ಯುದ್ಧದಲ್ಲಿ ಹೊಯ್ಸಳರು ಗೆಲುವು ಸಾಧಿಸುತ್ತಾರೆ. ಸಂಕಟದ ಸಂದರ್ಭದಲ್ಲಿ ಪ್ರಜೆಗಳ ಮತ್ತು ರಾಜ್ಯದ ಹಿತರಕ್ಷಣೆ ಕಾಯುವಲ್ಲಿ ಶಾಂತಲೆ ಯಶಸ್ವಿಯಾಗುತ್ತಾಳೆ. ಅಲ್ಲದೇ ಅವಳು ವಿಷ್ಣುವರ್ಧನನ ಕಾಲದಲ್ಲಿ ಕೆಲವು ಐತಿಹಾಸಿಕ ದೇವಾಲಯಗಳನ್ನು ನಿರ್ಮಿಸುವಲ್ಲಿಯೂ ಪ್ರಮುಖ ಕಾರಣಿಕೃರ್ತಳಾಗಿರುತ್ತಾಳೆ. ಅವಳ ಎಲ್ಲಾ ಸದ್ಗುಣಗಳನ್ನು ಈ ಕಾದಂಬರಿ ಸೆರೆಹಿಡಿದಿದೆ.

ಶಾಂತಲೆಯ ಬದುಕಿನಲ್ಲಿ ಎಲ್ಲವೂ ಒಳ್ಳೆಯದೇ ಆಗುತ್ತಿರುವ ಸಂದರ್ಭದಲ್ಲಿ ಏಕಕಾಲದಲ್ಲಿ ಅನೇಕ ನೋವಿನ ಘಟನೆಗಳು ಎದುರಾಗುತ್ತವೆ. ರಾಜಮಾತೆ ಏಚಲಾದೇವಿಯ ಸಾವು, ತನ್ನ ಏಕೈಕ ಮಗು ಬಲ್ಲಾಳನ ಸಾವು, ತಾಯಿ ಮಾಚಿಕಬ್ಬೆಯ

ಸಾವು, ಉದಯಾದಿತ್ಯನ ಹತ್ತು ವರ್ಷದ ಮಗು ಎರೆಯಂಗ ಕುದುರೆ ಕಾಲಿಗೆ ಸಿಕ್ಕಿ ಸತ್ತದ್ದು – ಎಲ್ಲವೂ ಶಾಂತಲೆಯ ಮನಸ್ಸನ್ನು ಕದಡುತ್ತವೆ. ಮುಂದೆ ತನ್ನ ಪಟ್ಟದರಸಿ ಪದವಿಯನ್ನು ಬೇರೆ ರಾಣಿಗೆ ನೀಡುವಂತೆ ವಿಷ್ಣುವರ್ಧನನಿಗೆ ಕೊರುತ್ತಾಳೆ. ತನ್ನ ಮಗನ ಸಾವು, ಯುವರಾಜ ಉದಯಾದಿತ್ಯನ ಮಗನ ಸಾವು ಆಗಿದ್ದು, ಮುಂದೆ ರಾಜ್ಯಭಾರದ ಅನುಕೂಲಕ್ಕೆ ಪಟ್ಟದರಸಿ ಪದವಿ ಬೇರೆಯವರಿಗೆ ನೀಡಿದರೆ ಅವಳಿಗೆ ಹುಟ್ಟುವ ಮಗು ಯುವರಾಜನಾಗಿ ರಾಜ್ಯ ಕಾಯುತ್ತಾನೆ ಎಂಬುದು ಅವಳ ಆಶಯ. ಮುಂದಿನ ಸಿಂಹಾಸನಕ್ಕೆ ಅರಮನೆಯಲ್ಲಿ ಕಲಹಗಳಾಗಬಾರದು ಎಂಬುದು ಶಾಂತಲೆಯ ವಿಚಾರವಾಗಿರುತ್ತದೆ. ಆದರೆ ವಿಷ್ಣುವರ್ಧನನು ಅದನ್ನು ನಿರಾಕರಿಸುತ್ತಾನೆ. ಆಗ ಅವನು ಹೇಳಿದ 'ನೀನು ಬದುಕಿರುವರೆಗೂ ಪಟ್ಟದರಸಿ ಪಟ್ಟ ಯಾರಿಗೂ ನೀಡುವುದಿಲ್ಲ' ಎಂಬ ಮಾತು ಅವಳ ತಲೆಯಲ್ಲಿ ಸುತ್ತುತ್ತಿರುತ್ತದೆ. ಆಗ ಅವಳಿಗೆ ನಾನ್ಯಾವ ಸೌಭಾಗ್ಯಕ್ಕೆ ಬದುಕಿರಬೇಕು ಎಂದೆನಿಸಿ ಶಿವಗಂಗೆ ನಾಡಿಗೆ ಹೋಗಿ ಹೊನ್ನಮ್ಮನ ಗುಡಿಯ ಬಂಡೆಯ ಮೇಲೆ ಸಲ್ಲೇಖನ ವ್ರತ ಕೈಗೊಳ್ಳುತ್ತಾಳೆ. ಇದನ್ನು ತಡವಾಗಿ ತಿಳಿದ ವಿಷ್ಣು ಅಲ್ಲಿಗೆ ಹೋಗಿ ಶಾಂತಲೆಯನ್ನು ಕಂಡು 'ನೀನು ಯಾಕೆ ಈ ಸಾಹಸಕ್ಕೆ ಕೈ ಹಾಕಿದೆ?', 'ನಿನ್ನ ಹಿಂದೆ ನಾನು ಬರುವೆ' ಎಂದು ಹೇಳುತ್ತಾನೆ. ಆಗ ಶಾಂತಲೆ "ಬೇಡಿ ನನ್ನ ಸ್ವಾಮಿ... ಬೇಡಿ ನನ್ನ ದೊರೆ... ನಾನು ಹೋದರೆ ನಷ್ಟವಿಲ್ಲ... ಆದರೆ ನಾಡಾಳುವ ದಣಿ ಅಳಿದರೆ ಸಾಮ್ರಾಜ್ಯ ಅನಾಥವಾಗುತ್ತದೆ. ಬೇಡಿ... ಯಾವುದೇ ಕೆಟ್ಟ ಸಾಹಸಕ್ಕೆ ಕೈ ಹಾಕಬೇಡಿ... ನನ್ನನ್ನು ಮರೆತು ಬಿಡಿ..."[5] ಎಂದು ಹೇಳಿ ಕಣ್ಮುಚ್ಚುತ್ತಾಳೆ. ಅವಳು ತನ್ನ ಸಾವಿನ ಸಮಯದಲ್ಲೂ ರಾಜ್ಯದ ರಕ್ಷಣೆ ಬಗ್ಗೆ ಆಲೋಚಿಸಿರುವುದು ರಾಜ್ಯದ ಬಗ್ಗೆ ಅವಳಿಗಿದ್ದ ಅಪಾರ ಶ್ರದ್ಧೆಯನ್ನು ಸೂಚಿಸುತ್ತದೆ. ಶಾಂತಲೆಯ ಸಾವಿನೊಂದಿಗೆ ಇಲ್ಲಿನ ಕಥೆ ಅಂತ್ಯವಾಗುತ್ತದೆ.

ಶಾಂತಲೆಯ ಸಾವಿನ ಬಗೆಗೆ ಎರಡು ಕಥನಗಳಿವೆ. ಒಂದು ಅವಳು ಶಿವಗಂಗೆಯ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಳೆಂಬುದು; ಇನ್ನೊಂದು ಅವಳು ಜೈನ ಧರ್ಮದ ಅನುಯಾಯಿ ಆಗಿದ್ದು ಕಠಿಣ ಸಲ್ಲೇಖನ ವ್ರತ ಕೈಗೊಂಡು ಸತ್ತಳೆಂಬುದು. ಈ ಕಾದಂಬರಿ ಎರಡನೆಯ ಕಥನವನ್ನು ನಿರೂಪಿಸಿದೆ.

ಕಾದಂಬರಿಯು ಶಾಂತಲೆಯ ನೃತ್ಯಕಲೆ, ಸೌಂದರ್ಯ, ಗುರುಭಕ್ತಿ, ಮಾನವೀಯತೆ, ರಾಷ್ಟ್ರಪ್ರೇಮ, ಪ್ರಜೆಗಳ ಹಿತರಕ್ಷಣೆ –ಮುಂತಾದ ಗುಣಗಳ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಅಲ್ಲದೇ ನೊಳಂಬವಾಡಿಯವರೊಂದಿಗಿನ ಯುದ್ಧದಲ್ಲಿ, ತಲಕಾಡಿನ ಗಂಗರಾಜ ಆದಿಮನೊಂದಿಗಿನ ಯುದ್ಧದಲ್ಲಿ ಮತ್ತು ಕಲ್ಯಾಣಿ ಚಾಲುಕ್ಯರೊಂದಿಗಿನ ಯುದ್ಧದಲ್ಲಿ ವಿಜಯ ಸಾಧಿಸಿದ ವಿಷ್ಣುವರ್ಧನನ ವೀರತೆಯು

ಇಲ್ಲಿ ಚಿತ್ರಿತಗೊಂಡಿದೆ. ಅಮರಶಿಲ್ಪಿ ಜಕ್ಕಣಾಚಾರಿಯ ಜೀವನ ವೃತ್ತಾಂತ ಹಾಗೂ ಶಿಲ್ಪಕಲೆಯ ಚಿತ್ರಣವೂ ಇಲ್ಲಿ ಕಾಣಸಿಗುತ್ತದೆ. 'ನಾಟ್ಯಮಯೂರಿ' ಚಿಕ್ಕ ಕಾದಂಬರಿ ಆಗಿದ್ದರೂ ಸಹ ಸಂಕ್ಷಿಪ್ತ ರೂಪದಲ್ಲಿ ಹೊಯ್ಸಳ ಸಾಮ್ರಾಜ್ಯದ ಅನೇಕ ಘಟನೆಗಳನ್ನು ನಿರೂಪಿಸುತ್ತದೆ.

ಕೊನೆ ಟಿಪ್ಪಣಿಗಳು :

1. ನಾಟ್ಯಮಯೂರಿ : ಮರುಳಯ್ಯ ಸಾ. ಶಿ., ಪು–6, 7
2. ಅದೇ, ಪು–17
3. ಅದೇ, ಪು–28
4. ಅದೇ, ಪು–32
5. ಅದೇ, ಪು–91

ಆಕರ ಗ್ರಂಥ :

1. ನಾಟ್ಯಮಯೂರಿ : ಮರುಳಯ್ಯ ಸಾ. ಶಿ., ಸಪ್ನ ಬುಕ್ ಹೌಸ, ಬೆಂಗಳೂರು, 2024

ಡಾ. ಕಿರಣ ವಲ್ಲೇಪುರ
ಮು/ ನಾಗೂರ(ಬಿ) ತಾ/ಔರಾದ
ಜಿ/ಬೀದರ –585436
kiranvallepure@gmail.com

ಕನ್ನಡದ ವಿಶಿಷ್ಟ ಮಹಿಳಾ ಪತ್ರಿಕೆ ವೀರಮಾತೆ : ಒಂದು ವಿಶ್ಲೇಷಣೆ

¤ರೂಪ ಕೆ. ¤ ಪ್ರೊ. ನಿರಂಜನ

ಕನ್ನಡ ಪತ್ರಿಕೋದ್ಯಮದಲ್ಲಿ ವಿಶಿಷ್ಟ ಪತ್ರಿಕೆಯಾಗಿ ಛಾಪು ಮೂಡಿಸಿದ್ದ ಮಹಿಳಾ ಪತ್ರಿಕೆಯೆಂದರೆ 'ವೀರಮಾತೆ'. ಈ ಪತ್ರಿಕೆಯು 1952ರಲ್ಲಿ ಆರಂಭವಾಗಿ 1970ರವರಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿತು. ಕನ್ನಡ ಪತ್ರಿಕೋದ್ಯಮಕ್ಕೆ ಉತ್ತರ ಕರ್ನಾಟಕದ ಪ್ರತಿನಿಧಿಯಾಗಿದ್ದ 'ವೀರಮಾತೆ'ಯನ್ನು ಇಂದಿನ ಓದುಗರಿಗೆ ಪರಿಚಯಿಸುವುದು ಮತ್ತು ಮಹಿಳಾ ಪತ್ರಿಕೋದ್ಯಮಕ್ಕೆ ವೀರಮಾತೆಯ ಕೊಡುಗೆಯನ್ನು ತಿಳಿಸಿಕೊಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.ವಿಷಯ ವಿಶ್ಲೇಷಣೆ ಮತ್ತು ಸ್ತ್ರೀವಾದಿ ಸಂಶೋಧನಾ ವಿಧಾನಗಳನ್ನು ಅನುಸರಿಸಲಾಗಿದೆ. ಅಧ್ಯಯನದ ವ್ಯಾಪ್ತಿ: ಪ್ರಸ್ತುತ ಅಧ್ಯಯನಕ್ಕೆ **ವೀರಮಾತೆ** ನಿಯತಕಾಲಿಕೆಯ ಲಭ್ಯವಿರುವ ಸಂಚಿಕೆಗಳನ್ನು ಅಧ್ಯಯನ ನಡೆಸಿ ನಿಯತಕಾಲಿಕೆಯ ಉದ್ದೇಶ, ಧ್ಯೇಯ, ಧೋರಣೆಗಳು ಮತ್ತು ನಿಯತಕಾಲಿಕೆಯಲ್ಲಿ ಪ್ರಕಟವಾದ ಬರಹಗಳ ವಿಷಯ ವಿಶ್ಲೇಷಣೆಹಾಗೂ ಕೊಡುಗೆಗಳನ್ನು ಗುರುತಿಸಿ ವಿವರಿಸಲಾಗಿದೆ.

ಪ್ರಸ್ತಾವನೆ

ಕನ್ನಡ ಪತ್ರಿಕೋದ್ಯಮದಲ್ಲಿ ವಿಶಿಷ್ಟ ಪತ್ರಿಕೆಯಾಗಿ ಛಾಪು ಮೂಡಿಸಿದ್ದ ಮಹಿಳಾ ಪತ್ರಿಕೆಯೆಂದರೆ 'ವೀರಮಾತೆ'. ಈ ಪತ್ರಿಕೆಯು 1952ರಲ್ಲಿ ಆರಂಭವಾಗಿ 1970ರವರಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿತು.

ಕನ್ನಡದಲ್ಲಿ ಆರಂಭವಾದ ಮಹಿಳಾ ಪತ್ರಿಕೆಗಳೆಲ್ಲಾ ಏಕವ್ಯಕ್ತಿ ಪ್ರಯತ್ನವಾದರೆ ವೀರಮಾತೆ ಪತ್ರಿಕೆ ಭಾಗೀರಥಿ ಬಾಯಿ ಪುರಾಣಿಕರು 'ಧಾರವಾಡದಲ್ಲಿ ನಡೆಸುತ್ತಿದ್ದ ವನಿತ ಸೇವಾ ಸಮಾಜದ ಮುಖವಾಣಿಯಾಗಿ ಪ್ರಕಟಣೆ ಪ್ರಾರಂಭಿಸಿತು. ಪತ್ರಿಕೆಯ

ಸಂಪೂರ್ಣ ಖರ್ಚು–ವೆಚ್ಚ,ಪ್ರಕಟಣೆಯ ಸಂಪೂರ್ಣ ಜವಾಬ್ದಾರಿಯನ್ನು ವನಿತ ಸೇವಾ ಸಮಾಜವೇ ವಹಿಸಿಕೊಂಡಿತ್ತು. ಇದೊಂದು ಸಾಂಘಿಕ ಪ್ರಯತ್ನವಾಗಿತ್ತು.ಇದು ಅಂದಿಗೆ ಮಾತ್ರವಲ್ಲದೇ ಇಂದಿಗೂ ಬಹಳ ಮಹತ್ವದ, ವಿಶಿಷ್ಟವಾದ ಸಂಗತಿ.

'ವೀರಮಾತೆ'ಯ ಸಂಪಾದಕಿಯಾಗಿದ್ದ ಸರೋಜಿನಿ ಮಹಿಷಿಯವರು ಅಧ್ಯಾಪಕಿ ಮತ್ತು ವಕೀಲೆ ಸಹ ಆಗಿದ್ದರು. ಸಂಸತ್ ಸದಸ್ಯ (1962–1980) ರಾಗಿದ್ದ ಕಾರಣ, ರಾಜಕೀಯದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದರು. ಹೀಗಾಗಿ, ಇವರು ಪತ್ರಿಕೆಯ ಸಂಪಾದನೆಯ ಕಾರ್ಯಗಳಲ್ಲಿ ಗಮನ ಕೊಡಲು ಸಾಧ್ಯವಿರಲಿಲ್ಲ. ಆದರೆ, 'ವೀರಮಾತೆ'ಯ ಸಹ ಸಂಪಾದಕಿಯಾಗಿದ್ದ, ವೆಂಕಮ್ಮಾ ಕೊಯಿಮತ್ತೂರು ಅವರು ಇಡೀ ಪತ್ರಿಕೆಯ ಚುಕ್ಕಾಣಿ ಹಿಡಿದು ಯಶಸ್ವಿಯಾಗಿ ಮುನ್ನಡೆಸಿದರು.



ವೀರಮಾತೆ

ಕೇವಲ ಹೆಣ್ಣುಮಕ್ಕಳ ವಿಕಾಸಕ್ಕಾಗಿ ನಿರಂತರವಿ
ಕನ್ನಡ ನೂಮಪತ್ರಿಕೆ.

ಸಂಪುಟ ೧ | ಹೆಣ್ಣು ಪ್ರಪಂಚಂ ಬಾಸ ಬಂಧಂ | ಸಂಚಿಕೆ ೧

ಸಂಪಾದಕೀಯ

ಮಾನ್ಯರೇಯರೆ,

'ವೀರಮಾತೆ' ಪತ್ರಿಕೆ, ಸೋದರಿಯರ ಸಮಗ್ರ ಪ್ರಗತಿಯ ಆದರ ಉದ್ದೇಶ. ಪ್ರಗತಿಯ ಸೋದರಿಯರಿಗೆ ಇದರ ಸಂಬಂಧ ವಿಷಯಗಳು ತಿಳಿಯಬೇಕಲ್ಲ. ಗೃಹಿಣಿ ಸುಂದರ್ಯಕಾಗಿ ತನ್ನ ಕರ್ತವ್ಯವನ್ನು ಪಕ್ಷಕ್ಕೆ ಯಿಂದ ಸಾಧಿಸಿಕೊಂಡು ಹೋಗುವುದಕ್ಕಾಗಿ ಮತ್ತು ಒಳಗೂ ಹೊರಗೂ ಸುಖ ಸಮಾಧಾನಗಳು ಹೆಚ್ಚಿಸುವುದಕ್ಕಾಗಿ ಈ ಪತ್ರಿಕೆಯು 'ವೀರಮಾತೆ' ಪ್ರತಿ ಹೆಣ್ಣುಮಕ್ಕಳೂ ಹೆಚ್ಚಲೇ ಬೇಕಾದ ಮಾಸಪತ್ರಿಕೆ.

ಪರಿವಿಡಿ

ಸಂಪಾದಕೀಯ ೧
(೨) ' ಮಾಸಾದಿ ' (ಕವನ) ಆನಂದಕಂದ ೨
(೩) ಹೆಸರಾಂತ ಭರತಕಿಯರ ಪ್ರಗತಿಯ ಹೆಣ್ಣುಮಕ್ಕಳಿಗೆ ಒಂದು ಸಂದೇಶ ೩
(೪) ಸ್ವಚ್ಛ ಮನೆಯಲ್ಲಿ ಸಂಸಾರ .. ರತ್ನಮ್ಮ ಎಂ. ಎ. ಬೆಂಗಳೂರು ೯
(೫) ಪತಿಭಕ್ತಿಯ ಸಮಸ್ಯೆ ಶ್ರೀ ಬಾಲಿ ಸರೋಜ. ೧೦
(೬) ಪ್ರಗತಿಯ ಹೆಸರಿನ ಅನ್ಯಾಚಾರ ಶ್ರೀ ಕೆಸೋರಕಾಲ ಪುಟ್ಟಸ್ವಾಮಿ ೧೩
(೭) ವೀರಮಾತೆ ಚರಿತಾವಳಿ (ಕವನ) ಭಕ್ತಿಸ್ತೋತ್ರ ಸಂಪಾದಕ್ಕ ೨೦
(೮) ಪ್ರಗತಿಯ ಆರೋಗ್ಯಕ್ಕೆ ಸಂಸಾರಾಚಾರ ಸರಣಿಯ L.A. M.S. ೨೧
(೯) ಕುಟುಂಬಸಾರ ೨೩
(೧೦) ಮನೆಯ ಕಿಟಿ-ಲೆಟರ್ ವಿಚಾರ ೨೮
(೧೧) ಮಾತೆಯ ಪಾತ್ರ ಶ್ರೀಮತಿ ಚಂದಾ ಮಲ್ಯ B. A. ಟಿ. ಟಿ. ೩೦
(೧೨) ಹೆಣ್ಣು ಹೊಣೆಗಳಲ್ಲಿ ಪ್ರಗತಿಯ ಸಮಾನತೆ ಶ್ರೀ ಮಲೆಯ ಗೌಡ. ೩೩
(೧೩) ಮಿಠಿಕೆ ಇಷ್ಟಿಯ ಬಟ್ಟೆಗಳನ್ನು ಹೊಸೆಯುವ ವಿಧಾನ. ಸರಣಿಯ ೩೬
(೧೪) ಅಡುಗೆಯ ವಿಭಾಗ ೪೯
(೧೫) ಪ್ರಶ್ನೆಯಲ್ಲಿ ಗ್ರಂಥ (ಸಾಹಿತ್ಯ) ಶ್ರೀ ಸಜ್ಜನಂಕಾಪ

ಸಂಪಾದಕ ಮಂಡಲಿ

ಶ್ರೀಮತಿ ಸರೋಜಿನಿ ಮಹಿಷಿ M. A. ಮುಖ್ಯ ಸಂಪಾದಕಿಯರು.
.. ವೆಂಕಮ್ಮ ಕೊಯಿಮತ್ತೂರು } ಸಹ ಸಂಪಾದಕಿಯರು.
.. ಸರೋಜಾ ಮೇರೆಪ್ಪರ }
ಶ್ರೀಮತಿ ಜಾನಕಿಯಮ್ಮ ಕರ್ನಾಟಕ ಸದಸ್ಯರು
.. ಡಾ. ಶ್ರೀ. ರಾಜಲಕ್ಷ್ಮಿಯಮ್ಮ, ..
.. ರುಕ್ಮಿಣಿ ಗೋಪಾಲಕೃಷ್ಣ ರಾವ್, ..
.. ವಿಧವೆ ರಾಮಚಂದ್ರ ರಾವ್, ..
.. ಕೊಮ್ಮಾ ಪುರಿಪತಿ B. ಟಿ. B.A.,L.L.B. ..
.. ರಂಗಾಚಾರ್ ಸೆಗೆಪಲ್ M. A.,L.L. B ..

'ವೀರಮಾತೆ' ಮಾಸಪತ್ರಿಕೆಯ ಬಿಡಿ ಸಂಚಿಕೆಯ ಬೆಲೆ ಆರಾಣೆ, ವಾರ್ಷಿಕ ಚಂದಾ ದರ 5 ರೂಪಾಯಿ. ಸ್ಥಳೀಯ ಓದುಗರಿಗೆ ವಾರ್ಷಿಕ ಚಂದಾ 4 ರೂಪಾಯಿಗಳು.

1952ರಲ್ಲಿ ಪ್ರಾರಂಭವಾದ ಪತ್ರಿಕೆ 18 ವರ್ಷಗಳ ಕಾಲ ಅಂದರೆ 1970 ರವರೆಗೆ ಪ್ರಕಟವಾಗಿದೆ. ಸ್ವಾತಂತ್ರ್ಯ ಬಂದ ಐದು ವರ್ಷಗಳ ನಂತರ ಆರಂಭವಾದ ಪತ್ರಿಕೆ ಬಹಳ ಶಿಸ್ತುಬದ್ಧವಾಗಿ ಪ್ರಕಟವಾಗಿ ಓದುಗರನ್ನು ತಲುಪಲು ಬೇಕಾದ ಸಮಸ್ತ ತಂತ್ರಗಳನ್ನು ಅನುಸರಿಸಿದೆ.

ಪತ್ರಿಕೆಯು ಮುಂಬಯಿ ಮತ್ತು ಮದ್ರಾಸ್ ಸರ್ಕಾರಗಳಿಂದ ಮಾನ್ಯತೆ

ಪಡೆದಿದ್ದು, ನೋಂದಣಿಯಾದ ಮಾಸಪತ್ರಿಕೆಯಾಗಿರುವುದು ವಿಶೇಷ. ಪತ್ರಿಕೆಯು Reg no.6410 ನೋಂದಣಿ ಸಂಖ್ಯೆಯಡಿಯಲ್ಲಿ ಪ್ರಕಟವಾಗುತ್ತಿತ್ತು.

ಪತ್ರಿಕೆಗೆ ಮುಖ್ಯ ಸಂಪಾದಕರು, ಇಬ್ಬರು ಸಹ ಸಂಪಾದಿಕೆಯರು ಮಾತ್ರವಲ್ಲದೇ ತನ್ನದೇ ಆದ ಸಂಪಾದಕೀಯ ಮಂಡಳಿಯನ್ನು ರಚಿಸಿಕೊಂಡಿತ್ತು. ಮಂಡಳಿಯಲ್ಲಿ 6 ಜನ ಪುರುಷ ಸದಸ್ಯರನ್ನು ಒಳಗೊಂಡಿತ್ತು.

'ವೀರಮಾತೆ' ಮಾಸ ಪತ್ರಿಕೆಯು ರಕ್ಷಾ ಪುಟಗಳನ್ನು ಹೊರತು ಪಡಿಸಿ 40 ಪುಟಗಳಿದ್ದು ಇದರೊಂದಿಗೆ 8 ಪುಟಗಳ ಪುರವಣಿಯನ್ನೂ ಹೊಂದಿದ್ದು ಸಾಹಿತ್ಯಕ ಬರಹಗಳಿಗೆ ಇದನ್ನು ಪ್ರತ್ಯೇಕವಾಗಿ ಮೀಸಲಿಟ್ಟಿದೆ. ಪುರವಣಿಯಲ್ಲಿ ನಾಟಕ, ಜೀವನ ಚರಿತ್ರೆಗಳನ್ನಷ್ಟೇ ಪ್ರಕಟಿಸಿದೆ.

ಅಧ್ಯಯನದ ಉದ್ದೇಶಗಳು :

♦ ಕನ್ನಡ ಪತ್ರಿಕೋದ್ಯಮಕ್ಕೆ ಉತ್ತರ ಕರ್ನಾಟಕದ ಪ್ರತಿನಿಧಿಯಾಗಿದ್ದ 'ವೀರಮಾತೆ'ಯನ್ನು ಇಂದಿನ ಓದುಗರಿಗೆ ಪರಿಚಯಿಸುವುದು.

♦ ಮಹಿಳಾ ಪತ್ರಿಕೋದ್ಯಮಕ್ಕೆ ವೀರಮಾತೆಯ ಕೊಡುಗೆಯನ್ನು ಪರಿಚಯಿಸುವುದು.

ಸಾಹಿತ್ಯ ವಿಮರ್ಶೆ :

ಉಷಾರಾಣಿ ಎನ್. (2002) ಅವರು ಬರೆದಿರುವ "ಮಹಿಳೆ ಮತ್ತು ಮಾಧ್ಯಮ" ಪುಸ್ತಕದಲ್ಲಿ ಮಹಿಳೆಯರು ಮಾಧ್ಯಮಗಳಲ್ಲಿ ರಾಷ್ಟ್ರಮಟ್ಟದಲ್ಲಿ, ಪ್ರಾದೇಶಿಕ ಭಾಷೆಗಳಲ್ಲಿ ಮಹಿಳೆಯರೇ ಪ್ರಾರಂಭಿಸಿದ, ಸಂಪಾದಕಿಯರಾಗಿ, ಪತ್ರಕರ್ತರಾಗಿ ಅಪರೂಪದ ತನಿಖಾ ವರದಿಗಾರಿಕೆಗಳು, ಅವರು ಬೆಳಕಿಗೆ ತಂದ ಪ್ರಕರಣಗಳು, ಮಾಧ್ಯಮದ ವಿವಿಧ ವೃತ್ತಿಗಳಲ್ಲಿನ ಸಾಧಕಿಯರನ್ನು ಉಲ್ಲೇಖಿಸಿದ್ದಾರೆ. ಮಹಿಳಾ ಪತ್ರಿಕೆಗಳ ಆರಂಭ, ವಿಕಾಸ, ಮಹಿಳಾ ಬರಹಗಾರ್ತಿಯರಿಗೆ ವೇದಿಕೆ ಒದಗಿಸಿದವು. ನಿಯತಕಾಲಿಕೆಗಳ ಪ್ರಕಟಣೆಯಲ್ಲಿ ಕಂಡು ಬಂದ ಏರಿಕೆ 1970 ಮತ್ತು 1980ರ ದಶಕವನ್ನು "ಮ್ಯಾಗಜೀನ್‌ಬೂಮ್" ಎಂದು ಲೇಖಕಿ ಗುರುತಿಸುತ್ತಾರೆ. ಇದೇ ದಶಕಗಳಲ್ಲಿ ಮಹಿಳಾ ಪತ್ರಿಕೆಗಳ ಸಂಖ್ಯೆಯೂ ಏರಿದ್ದನ್ನು, ಹಲವಾರು ಮಹಿಳಾ ಪತ್ರಿಕೆಗಳು ಪ್ರಾರಂಭವಾಗಿದ್ದನ್ನು ದಾಖಲಿಸುತ್ತಾರೆ.

ಎನ್.ಎಸ್.ಸೀತಾರಾಮ ಶಾಸ್ತ್ರೀ (1998), ಅವರು ರಚಿಸಿದ "ಕನ್ನಡ ಪತ್ರಿಕೋದ್ಯಮ ಒಂದು ಪರಿಚಯ" ಪುಸ್ತಕದಲ್ಲಿ ಕನ್ನಡ ಪತ್ರಿಕೋದ್ಯಮವು ಕ್ರೈಸ್ತ ಮಿಷನರಿಗಳು ಪ್ರಾರಂಭಿಸಿದ ಪತ್ರಿಕೆಗಳ ಪ್ರಭಾವ ಮತ್ತು ಪ್ರೇರಣೆಯಿಂದ ಆರಂಭವಾಗಿ

ಕಲ್ಲಚ್ಚಿನಲ್ಲಿ ವಿಕಸಿತವಾಗಿ ಅಚ್ಚು ಮೊಳೆಗೆ ಬಡ್ತಿ ಹೊಂದಿತು. ಕನ್ನಡದಲ್ಲಿ 1843 ರಿಂದ 1987 ರವರೆಗೆ ಸುಮಾರು 1600 ಕ್ಕೂ ಹೆಚ್ಚು ಪತ್ರಿಕೆಗಳು ವೈವಿಧ್ಯಮಯ ಪತ್ರಿಕಾ ವ್ಯವಸಾಯ ನಡೆಸಿವೆ ಎಂದು ವಿವರಿಸಿದ್ದಾರೆ.

ಈ ಕಾಲಘಟ್ಟದಲ್ಲಿ ಧಾರವಾಡದಲ್ಲಿ 200 ಪತ್ರಿಕೆಗಳು, ಮಂಗಳೂರು ಮತ್ತು ಮೈಸೂರುಗಳಲ್ಲಿ ತಲಾ 150 ಪತ್ರಿಕೆಗಳು, ಶಿವಮೊಗ್ಗದಲ್ಲಿ 100ಕ್ಕೂ ಹೆಚ್ಚು ಪತ್ರಿಕೆಗಳು ಜನ್ಮ ತಳೆದಿವೆ. ಮುಖ್ಯವಾಗಿ ಶಿವಮೊಗ್ಗದಲ್ಲಿ 50 ಮಂದಿ ಮಹಿಳೆಯರು ಪತ್ರಿಕೋದ್ಯೋಗದಲ್ಲಿ ತೊಡಗಿಸಿಕೊಂಡಿದ್ದರು ಎಂದು ದಾಖಲಿಸಿದ್ದಾರೆ.

ಸುಶೀಲಾ ಕೊಪ್ಪರ (1989), ಅವರು ಬರೆದ 'ಪತ್ರಿಕೋದ್ಯಮಕ್ಕೆ ಮಹಿಳೆಯರ ಕೊಡುಗೆ' ಕೃತಿಯಲ್ಲಿ ಜಗತ್ತಿನಾದ್ಯಂತ ಸಮಾನತೆ, ಸಮಾನ ಅವಕಾಶಗಳಿಂದ ವಂಚಿತರಾದರೂ ಛಲ ಬಿಡದ ಹೋರಾಟದಿಂದ ಸಿಕ್ಕ ಸಣ್ಣ ಸಣ್ಣ ಅವಕಾಶಗಳಲ್ಲೇ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಿದ್ದಾಳೆ.ಮಾಧ್ಯಮ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಕನ್ನಡ ಪತ್ರಿಕೋದ್ಯಮದಲ್ಲಿ ಗಮನಾರ್ಹ ಕೆಲಸ ಮಾಡಿದ ಪತ್ರಕರ್ತೆಯರು, ಪತ್ರಿಕಾ ಸಂಪಾದಕಿಯರು, ಪತ್ರಿಕೋದ್ಯೋಗ ನಿರತ ಮಹಿಳೆಯರು ಮತ್ತು ಮಹಿಳಾ ಪತ್ರಿಕೆಗಳ ಕುರಿತು ಲೇಖಕಿ ಚರ್ಚಿಸಿದ್ದಾರೆ.

ಅಧ್ಯಯನದ ವಿಧಾನ:

ಪ್ರಸ್ತುತ ಅಧ್ಯಯನಕ್ಕೆ ವಿಷಯ ವಿಶ್ಲೇಷಣೆ, ಸ್ತ್ರೀವಾದಿ ಸಂಶೋಧನಾ ವಿಧಾನಗಳನ್ನು ಅನುಸರಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನಕ್ಕೆ ವೀರಮಾತೆ ನಿಯತಕಾಲಿಕೆಯ ಲಭ್ಯವಿರುವ ಸಂಚಿಕೆಗಳನ್ನು ಅಧ್ಯಯನ ನಡೆಸಿ ನಿಯತಕಾಲಿಕೆಯ ಉದ್ದೇಶ, ಧ್ಯೇಯ, ಧೋರಣೆಗಳು ಮತ್ತು ನಿಯತಕಾಲಿಕೆಯಲ್ಲಿ ಪ್ರಕಟವಾದ ಬರಹಗಳ ವಿಷಯ ವಿಶ್ಲೇಷಣೆ ಹಾಗೂ ಕೊಡುಗೆಗಳನ್ನು ಗುರುತಿಸಿ ವಿವರಿಸಲಾಗಿದೆ.

'ವೀರಮಾತೆ' (1952–1970)ಯ ವಿಷಯ ವಿಶ್ಲೇಷಣೆ

'ವೀರಮಾತೆ' ಮಾಸಪತ್ರಿಕೆ ಧಾರವಾಡದಿಂದ 1952ರ ಜೂನ್ ತಿಂಗಳಲ್ಲಿ ಸರೋಜಿನಿ ಮಹಿಷಿ ಅವರ ಸಂಪಾದಕತ್ವದಲ್ಲಿ 'ಕೇವಲ ಹೆಣ್ಣು ಮಕ್ಕಳ ವಿಕಾಸಕ್ಕಾಗಿ ಮೀಸಲಿಟ್ಟ ಕನ್ನಡ ಮಾಸಪತ್ರಿಕೆ'[1] ಎಂಬ ಘೋಷವಾಕ್ಯದಡಿಯಲ್ಲಿ ಪ್ರಕಟಣೆ

ಪ್ರಾರಂಭಿಸಿತು. ಪತ್ರಿಕೆಗೆ ಮಹಿಳೆ ಮತ್ತು ಪುರುಷರಿಬ್ಬರೂ ಬರೆಯಬಹುದಿತ್ತು. ಆದರೆ ಬರಹಗಳು ಮಹಿಳಾ ಶಿಕ್ಷಣ, ಸಮಾನತೆ, ಮಹಿಳೆಯರ ಪ್ರಗತಿ, ಮಹಿಳಾ ಸಬಲೀಕರಣ. ಹೀಗೆ ಒಟ್ಟಾರೆಯಾಗಿ ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಯನ್ನೇ ಮುಖ್ಯ ಉದ್ದೇಶವಾಗಿಟ್ಟು ಪ್ರಕಟವಾಗುತ್ತಿದ್ದ ನಿಯತಕಾಲಿಕೆ.

"ಸೋದರಿಯರ ಸರ್ವತೋಮುಖ ಪ್ರಗತಿಯೇ ಅದರ ಉದ್ದೇಶ. ಹಾಗೆಂದು ಸೋದರರಿಗೆ ಇದರ ಸಂಬಂಧವಿಲ್ಲವೆಂದು ಹೇಳುವಂತಿಲ್ಲ. ಗೃಹಿಣಿ ಸುಸಂಸ್ಕೃತಳಾಗಿ ತನ್ನ ಕರ್ತವ್ಯವನ್ನು ದಕ್ಷತೆಯಿಂದ ಸಾಗಿಸಿಕೊಂಡು ಹೋಗುತ್ತಿದ್ದರಲ್ಲವೇ ಮನೆಯ ಒಳಗೂ ಹೊರಗೂ ಸುಖ ಸಮಾಧಾನಗಳು ನೆಲೆಸುವುದು? ಈ ದೃಷ್ಟಿಯಿಂದ, 'ವೀರಮಾತೆ' ಪ್ರತಿಯೊಬ್ಬರೂ ಮೆಚ್ಚಲೇಬೇಕಾದ ಮಾಸಪತ್ರಿಕೆ."[2] ತನ್ನ ಮೊದಲ ಸಂಚಿಕೆಯಲ್ಲೇ ಪತ್ರಿಕೆಯ ಉದ್ದೇಶ ಮತ್ತು ನಿಲುವುಗಳೇನು ಎಂಬುದನ್ನು ಈ ಮೇಲಿನಂತೆ ಸ್ಪಷ್ಟ ಪಡಿಸಿತ್ತು.

'ವೀರಮಾತೆ' ಮಾಸಿಕ ಮೊದಲ ಸಂಪುಟದ ಮೊದಲ ಸಂಚಿಕೆಯಿಂದಲೇ ಸಂಪಾದಕೀಯ, ಕಾನೂನು ವಿಭಾಗ, ಮಹಿಳಾ ಆರೋಗ್ಯ, ಮಹಿಳಾ ಹಕ್ಕುಗಳು, ಸ್ತ್ರೀ ಸಮಾನತೆ, ಮಹಿಳಾ ಸಂಘಗಳು, ಸ್ತ್ರೀಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಕುರಿತ ಬರಹಗಳು, ಹೆಣಿಗೆ, ಕಸೂತಿ, ಮನೆ ನಿರ್ವಹಣೆ, ಕಥೆ, ಕವನ, ನಾಟಕ, ಸುದ್ದಿ ಸಮಾಚಾರ, ಅನುವಾದ ಬರಹಗಳನ್ನು ಒಳಗೊಂಡು ಸಮೃದ್ಧ ಬರಹಗಳ ಫಸಲನ್ನು ಓದುಗರಿಗೆ ನೀಡಿತ್ತು.

ವೀರಮಾತೆಯಲ್ಲಿ ಪ್ರಕಟವಾಗುತ್ತಿದ್ದ'ಸುದ್ದಿ ಸಮಾಚಾರ'ವನ್ನು ಸಂಗ್ರಹಿಸುವ ಸಲುವಾಗಿ ತನ್ನದೇ ಆದ ಸಣ್ಣದೊಂದು ಜಾಲವನ್ನು ಹೊಂದಿತ್ತು. ಈ ಅಂಕಣದಲ್ಲಿ ಪ್ರಕಟವಾಗುತ್ತಿದ್ದ ವಿಷಯಗಳು ಸ್ಥಳೀಯ ಸುದ್ದಿ, ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸುದ್ದಿಗಳನ್ನೆಲ್ಲಾ ಒಳಗೊಂಡಿದ್ದು ಇವೆಲ್ಲಾ ಶೇ 90 ರಷ್ಟು ಮಹಿಳೆಯರಿಗೆ ಸಂಬಂಧಿಸಿದ್ದ ಸುದ್ದಿಗಳೇ ಆಗಿದ್ದುದೇ ವೈಶಿಷ್ಟ್ಯ.

ಮಕ್ಕಳಿಗಾಗಿ 'ಅಕ್ಕನ ಪೆಟ್ಟಿಗೆ' ಎಂಬ ವಿನೂತನ ಪ್ರಯೋಗವನ್ನು ಪ್ರಾರಂಭಿಸಿ ಅದಕ್ಕೆ ಎರಡಾಣೆ ಸದಸ್ಯತ್ವ ಶುಲ್ಕ ನಿಗದಿಪಡಿಸಿ ಸದಸ್ಯರಾದವರ ಪತ್ರಗಳಿಗೆ ಉತ್ತರ ಬರೆಯುವ ಮಕ್ಕಳ ಬರವಣಿಗೆಯನ್ನು ಪ್ರೋತ್ಸಾಹಿಸಿ,ಸೂಕ್ತವಾದ ಬರಹಗಳನ್ನು ಪ್ರಕಟಿಸಿ, ಬೆನ್ನು ತಟ್ಟುವ ಮೂಲಕ ಮಕ್ಕಳ ಬರಹಗಳಿಗೆ ಸೂಕ್ತ ವೇದಿಕೆಯನ್ನು ನಿರ್ಮಿಸಿತು.ಮಕ್ಕಳ ಬರವಣಿಗೆಗೆ ಬುನಾದಿ ಹಾಕಿತು.

ಇದರ ಜೊತೆಗೆ ಮಕ್ಕಳಿಗಾಗಿ ಪದಬಂಧ ದಂತಹ ಸ್ಪರ್ಧೆಗಳಿಗೆ ಪ್ರವೇಶ ದರ ನಿಗದಿ ಪಡಿಸಿ ಅದನ್ನು ಪಾವತಿಸಿದವರಿಗೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಅವಕಾಶ,

ಭಾಗವಹಿಸಿ ಗೆದ್ದವರಿಗೆ ಪತ್ರಿಕೆಯ ಬಿಡಿ ಸಂಚಿಕೆಯನ್ನು ಬಹುಮಾನವಾಗಿ ಕಳಿಸುವ ವಿನೂತನ ಆಲೋಚನೆ ಮತ್ತು ಆ ಮೂಲಕ ಪತ್ರಿಕೆಯನ್ನು ಪ್ರೋತ್ಸಾಹಿಸುವ, ಪತ್ರಿಕೆಗೆ ಹೊಸ ಓದುಗರನ್ನು ಹುಡುಕಿಕೊಳ್ಳುವ, ಸರ್ವ ಪ್ರಯತ್ನಗಳನ್ನೂ ಮಾಡುತ್ತಿತ್ತು ಎಂಬುದು ಸ್ಪಷ್ಟ. ಇದು ಪತ್ರಿಕಾ ಬಳಗದ ಕ್ರಿಯಾಶೀಲತೆಗೊಂದುನಿದರ್ಶನ.

ಇದರೊಟ್ಟಿಗೆ ಗಮನಿಸಲೇಬೇಕಾದ ಮತ್ತೊಂದು ವೈಶಿಷ್ಟ್ಯವೂ ಇಲ್ಲಿದೆ ನೋಡಿ. "ಪ್ರಶ್ನೆಗಳು ಸ್ತ್ರೀ ಜೀವನದ ವಿಷಯಕವಿರಬೇಕು. ಖಾಸಗಿ, ವೈಯ್ಯಕ್ತಿಕ ಮತ್ತು ಕೂಡಲೇ ಸಲಹೆ ಬೇಕಾದ್ದಲ್ಲಿ ಪ್ರತಿಯೊಂದು ಪ್ರಶ್ನೆಯ ಜೊತೆಯಲ್ಲಿ ಫೀ ಎಂದು ಎರಡು ರೂಗಳನ್ನು ಮನಿಯಾರ್ಡರದಿಂದ ಕಳಿಸಬೇಕು."[3]

ನಿಯತಕಾಲಿಕೆಯೊಂದನ್ನು ಪ್ರಾರಂಭಿಸಿ ನಡೆಸುವುದು ಕಡುಕಷ್ಟವಾಗಿದ್ದ ಕಾಲಘಟ್ಟದಲ್ಲಿ ಮಹಿಳೆಯರಿಗಾಗಿಯೇ ಒಂದು ಪ್ರತ್ಯೇಕ ಪತ್ರಿಕೆ ಹೊರತರುವುದು ಅತ್ಯಂತ ಸವಾಲಿನ ಮತ್ತು ಸಾಹಸದ ಕೆಲಸವಾಗಿತ್ತು. ಅದರಲ್ಲೂ, ಅದನ್ನು ಸಮರ್ಥವಾಗಿ ನಡೆಸುವುದು ಮತ್ತಷ್ಟು ಸವಾಲಿನ ಕೆಲಸ. 'ವೀರಮಾತೆ' ನಿಯತಕಾಲಿಕೆಯ ಎರಡನೇ ಸಂಚಿಕೆಯಿಂದಲೇ ಜಾಹೀರಾತುಗಳು ನಿಯಮಿತವಾಗಿ ಪ್ರಕಟವಾಗಿರುವುದು. ಮಹಿಳಾ ನಿಯತಕಾಲಿಕೆಯೊಂದಕ್ಕೆ ಜಾಹೀರಾತು ಪಡೆಯುವುದೇನೂ ಸುಲಭದ ಮಾತಲ್ಲ. ಹಾಗಿದ್ದಾಗ್ಯೂ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಜಾಹೀರಾತು ಪಡೆಯುವುದು. ಅವುಗಳನ್ನು ನಿರಂತರವಾಗಿ ಪತ್ರಿಕೆಗೆ ದೊರಕುವಂತೆ ಮಾಡಲು ಶ್ರಮಿಸುವುದು.

ನಿಯತಕಾಲಿಕೆಯ ಕೊನೆಯ ಎರಡು ರಕ್ಷಾಪುಟಗಳನ್ನು ತನ್ನ ಪ್ರವರ್ತನೆ (ಪ್ರಮೋಷನ್) ಗಾಗಿ ಬಳಸಿರುವುದನ್ನು ಕಾಣಬಹುದು. ಇದು ಅತ್ಯಂತ ಜಾಣತನದ ಮತ್ತು ಸಮಯೋಚಿತವಾದ ಆಲೋಚನೆಯಾಗಿದೆ. ಅಂದಿನ ಕಾಲದಲ್ಲೇ ಜಾಹೀರಾತು ಪ್ರಕಟಿಸುವುದರಿಂದ ಪತ್ರಿಕೆಗೆ ಸಣ್ಣ ಮಟ್ಟಿಗಿನ ಆರ್ಥಿಕ ಬೆಂಬಲ ದೊರಕುವುದು ಎಂದು ಆಲೋಚಿಸುವುದು. ಇವೆಲ್ಲವೂ ಸಾಹಸವೇ ಸೈ.

ವೀರಮಾತೆ ಪತ್ರಿಕೆ ಆ ಕಾಲಕ್ಕೆ ಮಾಸ್ಟ್ ಹೆಡ್ ಹೊಂದಿದೆ. ಆರಂಭದಲ್ಲಿದ್ದ ಮಾಸ್ಟ್ ಹೆಡ್ ಸ್ವಲ್ಪ ಸಮಯದ ನಂತರ ಬದಲಾವಣೆಯಾಗಿದೆ. ಇದಲ್ಲದೆ, ಕಾಲಕಾಲಕ್ಕೆ ಪತ್ರಿಕಾ ಮಂಡಳಿಯ ಸದಸ್ಯರನ್ನೂ ಬದಲಾಯಿಸಿದೆ. ಬಹಳ ಮುಖ್ಯವಾಗಿ ಇವರೆಲ್ಲರೂ ಸ್ತ್ರೀ ಸಮಾನತೆ, ಸ್ತ್ರೀ ಶಿಕ್ಷಣ ಮತ್ತು ಸಬಲೀಕರಣಗಳೆಡೆ ಒಲವುಳ್ಳವರಾಗಿದ್ದಾರೆ ಎಂಬುದು ಗಮನಾರ್ಹ ಸಂಗತಿ.

ಅಧ್ಯಯನದ ಫಲಿತಗಳು:

ಲಭ್ಯವಿರುವ 23 ಸಂಚಿಕೆಗಳನ್ನು ಸಾದ್ಯಂತವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ

♦ 'ವೀರಮಾತೆ' ಮಾಸಪತ್ರಿಕೆಯು ಮೊದಲ ಸಂಚಿಕೆಯಲ್ಲೇ ಬಹಳ ಸ್ಪಷ್ಟ ಪರಿಕಲ್ಪನೆ, ಮುನ್ನೋಟವುಳ್ಳ ಯೋಜನೆ ರೂಪಿಸಿ ಮಹಿಳಾ ಪತ್ರಿಕೆಯೊಂದನ್ನು ನಡೆಸಲು ನೀಲನಕ್ಷೆ, ಸಂಪೂರ್ಣ ಸಿದ್ಧತೆಯೊಂದಿಗೆ ತನ್ನ ಪತ್ರಿಕಾ ಬಳಗದೊಂದಿಗೆ ಅಖಾಡಕ್ಕಿಳಿದಿತ್ತು. ಸಂಪಾದಕೀಯ ಬರಹವೇ ಇದಕ್ಕೆ ಕೈಗನ್ನಡಿಯಾಗಿದೆ. ಪತ್ರಿಕೆಯ ಮೊದಲ ಸಂಚಿಕೆಯ ವೈವಿಧ್ಯಮಯ, ಸ್ತ್ರೀಪರ ಬರಹಗಳು ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

♦ ಅಧ್ಯಯನಕ್ಕೆ ಲಭ್ಯವಿರುವ 23 ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳು ಮಹಿಳಾ ಪರ ಧ್ವನಿಯನ್ನು ಬರಹಗಳು ಅತ್ಯಂತ ಸಮರ್ಥವಾಗಿ ಎತ್ತಿ ಹಿಡಿಯುತ್ತವೆ. ಪ್ರಬಲವಾಗಿ ಬಿಂಬಿಸುತ್ತವೆ. ಅವರ ಸಮಸ್ಯೆಗಳು, ಪರಿಸ್ಥಿತಿಗಳು, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ಬದಲಾಗಬೇಕಾದ ಪುರುಷಪ್ರಧಾನ ಮನಸ್ಥಿತಿಯ ಕುರಿತು ಬೆಳಕು ಚೆಲ್ಲುವ, ಅವುಗಳಿಗೆ ಕನ್ನಡಿ ಹಿಡಿಯುವ, ಇವುಗಳೆಲ್ಲದರ ನಡುವೆಯೂ ಸಾಧನೆ ಮಾಡಿದ ಮಹಿಳೆಯರನ್ನು ಗುರುತಿಸುವ, ಮನ್ನಣೆ ನೀಡುವ ಮಹತ್ವದ ಕೆಲಸವನ್ನು ಮಾಡಿದೆ.

♦ ವೀರಮಾತೆಗೆ ಬರೆದ ಬರಹಗಾರರನ್ನು ಗಮನಿಸುವುದಾದರೆ ಬಹುತೇಕರು ಅತ್ಯುತ್ತಮ ಶಿಕ್ಷಣ ಪಡೆದವರು, ಬೇರೆ, ಬೇರೆ ಪ್ರದೇಶಗಳನ್ನು ಪ್ರತಿನಿಧಿಸುವವರು, ಮಹಿಳೆಯರು, ಮಹಿಳೆಯರನ್ನು ಗೌರವಿಸುವ, ಮಹಿಳಾಪರ ಚಿಂತನೆಗಳನ್ನು ಹೊಂದಿದವರಾಗಿದ್ದರು. 1952ರ ಕಾಲಘಟ್ಟಕ್ಕೆ ಪತ್ರಿಕೆ ಹೊಂದಿದ್ದ ಧ್ಯೇಯ, ಉದ್ದೇಶಗಳೂ, ಬರಹಗಳೂ ಮೌಲಿಕವಾದವು, ಮುಂದಾಲೋಚನೆಯಿಂದಲೂ ಕೂಡಿದ್ದವು.

♦ ನಿಯತಕಾಲಿಕೆಯಲ್ಲಿ 'ಸ್ತ್ರೀಯರ ಮೇಲೆ ಅತ್ಯಾಚಾರ', 'ಸ್ತ್ರೀಯರ ಅಧೋಗತಿ ದೇಶದ ಪತನಕ್ಕೆ ಕಾರಣ', 'ದೇಹಾರೋಗ್ಯ ಮತ್ತು ಧಾರ್ಮಿಕ ನಿಯಮಗಳ ಮೂಢಕಲ್ಪನೆ', 'ಸ್ತ್ರೀಯರ ಆರೋಗ್ಯ', 'ಹಕ್ಕು ಹೊಣೆಗಳಲ್ಲಿ ಸ್ತ್ರೀಯರಿಗೆ ಸಮಾನತೆ',' ಸ್ತ್ರೀಯರ ಮೇಲಿನ ಅತ್ಯಾಚಾರದ ಮೀಮಾಂಸೆ', 'ಪ್ರಜಾಪ್ರಭುತ್ವವುಳ್ಳ ಚೀನಾದಲ್ಲಿ ವಿವಾಹ ಕಾನೂನು'–ಶಾಯಲಿಯಾಂಗ, ನ್ಯಾಯಮಂತ್ರಿ. 'ಸ್ತ್ರೀಯರ ಮೇಲೆ ಅತ್ಯಾಚಾರವೇಕೆ ನಡೆದಿದೆ?,'ಸ್ತ್ರೀಯರೂ ಮತ್ತು ಚುನಾವಣೆಗಳೂ'–ಸ್ತ್ರೀ ಹಿತೈಷಿ, 'ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ದಾಸ್ಯ ವಿಮೋಚನೆ', 'ಸ್ತ್ರೀ ಜೀವನದ ಮೂಲಭೂತ ಸಮಸ್ಯೆ', 'ಇಂದಿನ ಹೆಣ್ಣು'

♦ 'ವೀರಮಾತೆ' ಪತ್ರಿಕೆಯಲ್ಲಿ ಮೊದಲ ಸಂಚಿಕೆಯಿಂದಲೇ 'ಸಂಪಾದಕೀಯ ಬರಹ', ಎರಡನೆಯ ಸಂಚಿಕೆಯಿಂದ 'ನಮ್ಮ ಮಾತು' ಗಳನ್ನು ಆರಂಭ ಮಾಡಿತ್ತು. ಅಂಕಣ ಬರಹಗಳೂ ಇದ್ದವು ಮೊದಲ ಸಂಚಿಕೆಯಲ್ಲಿಯೇ 'ಕಾನೂನು ವಿಭಾಗ' ಅಂಕಣವನ್ನು ಪ್ರಾರಂಭಿಸಿತು.ಎರಡನೆ ಸಂಚಿಕೆಯಿಂದ 'ಕಾಯದೆ ಕಾನೂನು' ಎಂದು ಬದಲಾದ

ಹೆಸರಿನಿಂದ ಪ್ರಕಟವಾದ ಅಂಕಣ ಕೊನೆಯ ಸಂಚಿಕೆಯವರೆಗೂ ಪ್ರಕಟವಾಯಿತು.

♦ 'ಸ್ತ್ರೀ ಆರೋಗ್ಯ ವೈದ್ಯ','ಪುಸ್ತಕ ವಿಮರ್ಶೆ','ಸಾದರ ಸ್ವೀಕಾರ','ಸತ್ಯವಾದಿನಿ' ಎಂಬ ಹೆಸರಿನಲ್ಲಿ ಪ್ರಕಟವಾದ 'ತಂಗಿಯರೇ ಕೇಳುವಿರಾ ನನ್ನದಿಷ್ಟು ಕಥೆ' ಶೋಷಣೆ,ಹಿಂಸೆಗೊಳಗಾದ ಹೆಣ್ಣುಮಗಳ ಬದುಕಿನ ಅನುಭವ ಕಥನವನ್ನು ಪ್ರಕಟಿಸಿದೆ.ಹುಚ್ಚಪ್ಪ ಎಂಬುವರು ಬರೆದ 'ಗ್ರಹಗಳು ಮತ್ತು ಮನುಷ್ಯನ ಜೀವಿತದ ಮೇಲೆ ಅವುಗಳ ಪ್ರಭಾವ' ಎಂಬ ಸರಣಿ ಬರಹವೂ ಇದೆ.

♦ ಇನ್ನು 'ಸುದ್ದಿ ಸಮಾಚಾರ' ಶೀರ್ಷಿಕೆಯಲ್ಲಿ ಪ್ರಕಟವಾದ ವಿಷಯಗಳ ವಿಶೇಷತೆ ಎಂದರೆ ಶೇ.95ಕ್ಕೂ ಹೆಚ್ಚು ವಿಷಯಗಳು ಮಹಿಳೆಯರಿಗೆ ಸಂಬಂಧಿಸಿದವು. ಮಹಿಳಾ ಕೇಂದ್ರಿತವಾದವುಗಳಾಗಿವೆ.ಇವು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳನ್ನು ಒಳಗೊಂಡಿವೆ.

♦ ಸಂಪಾದಕೀಯ ಬರಹಗಳನ್ನು ನೋಡುವುದಾದರೆ ಇಲ್ಲಿಯೂ ಮಹಿಳೆಯರ ಶಿಕ್ಷಣ, ಸಮಾನತೆ, ಪ್ರಗತಿ, ಸಬಲೀಕರಣ, ರಾಜಕೀಯ ಪ್ರತಿನಿಧೀಕರಣ ಮತ್ತು ನಿರ್ಧಾರ ಕೈಗೊಳ್ಳುವಂತಹ ಹುದ್ದೆಗಳನ್ನು ಪಡೆಯುವ ಮೂಲಕ ಅವರು ಸಮಸ್ತ ಮಹಿಳೆಯರ ಹಿತಕಾಯುವಂತಾಗಬೇಕು ಎಂಬ ಆಶಯವಿದೆ.

♦ ನಿಯತಕಾಲಿಕೆಯೊಂದರ ನಿರ್ವಹಣೆಯ ವಿಷಯ ಬಂದಾಗ ಪ್ರಕಟಣೆಯ ಸಮಯಕ್ಕೆ ನಿಯತಕಾಲಿಕೆಯ ಪುಟ ಸಂಖ್ಯೆಗನುಗುಣವಾಗಿ ವೈವಿಧ್ಯಮಯವಾದ ಬರಹಗಳನ್ನು ಓದುಗರಿಗೆ ಕೊಡಬೇಕಾದದ್ದು ಸವಾಲಿನ ಕೆಲಸವೇ ಸರಿ. ಪ್ರತೀ ಸಂಚಿಕೆಯಲ್ಲೂ ಬಹುಪಾಲು ಬರಹಗಳಿಗಾಗಿ ಸಂಸ್ಥೆಯ ಸಿಬ್ಬಂದಿಯಲ್ಲದ ಸಾಹಿತಿ,ಬರಹಗಾರರು, ಲೇಖಕರುಗಳನ್ನೇ ಅವಲಂಬಿಸಿ ನಡೆಯಬೇಕು.

♦ ಹೊಸ ಬರಹಗಾರರಿಗೆ ವೇದಿಕೆ, ಹೆಸರುವಾಸಿ ಬರಹಗಾರರಿಗೆ ಮನ್ನಣೆ ಕೊಡಬೇಕು. ಇವರೆಲ್ಲರಿಂದ ಬರಹಗಳನ್ನು ಆಹ್ವಾನಿಸಿ, ನಿಗದಿತ ಸಮಯಕ್ಕೆ ಬರಹಗಳನ್ನು ತರಿಸಿಕೊಳ್ಳಬೇಕು. ಅಲ್ಲದೆ ಪತ್ರಿಕೆಯ ಧ್ಯೇಯಕ್ಕನುಗುಣವಾದ ಬರಹಗಳನ್ನು ಮಾತ್ರ ಪ್ರಕಟಿಸಬೇಕು. ಇದು ಸಾಮಾನ್ಯ ಆಸಕ್ತಿಯ ನಿಯತಕಾಲಿಕೆ ಗಳೇ ಎದುರಿಸುವ ಸಮಸ್ಯೆ. ಅದರಲ್ಲೂ ಮಹಿಳೆಯರಿಗಾಗಿಯೇ ಪ್ರಕಟವಾಗುವ, ಮಹಿಳಾ ನಿಯತಕಾಲಿಕೆಗಳಿಗೆ ಇದು ಮತ್ತೂ ಸವಾಲಿನ ಕೆಲಸವೇ ಸೈ. ಮಹಿಳಾ ನಿಯತಕಾಲಿಕೆ, ಮಹಿಳೆಯರೇ ಸಂಪಾದಕರಾಗಿರುವ ನಿಯತಕಾಲಿಕೆಗಳಿಗೆ ಮಹಿಳೆಯರೇ ಬರೆಯಬೇಕೆಂದರೆ ಕೇಳಬೇಕೆ? ಅದು ಮಹಿಳಾ ಶಿಕ್ಷಣ ಮುಗಿಲ ಮಲ್ಲಿಗೆಯಾಗಿದ್ದಂತಹ ಕಾಲಘಟ್ಟದಲ್ಲಿ ಬಹಳ ದುಸ್ತರವಾದ ಸವಾಲು. ಇನ್ನು, ಪುರುಷ ಬರಹಗಾರರು ಮಹಿಳೆಯರನ್ನು ಗೌರವಿಸುವ, ಸಮಾನವಾಗಿ ಕಾಣುವ,ಮಹಿಳೆಯರ ಉನ್ನತಿ

ಬಯಸುವಂತಹ ಮನಸ್ಥಿತಿ ಮತ್ತು ಬರಹಗಳನ್ನು ಬರೆಯುವ ಮನಸ್ಥಿತಿ ಉಳ್ಳವರಾಗಬೇಕು. ಇಂತಹ ಕಾಲಘಟ್ಟದಲ್ಲಿ ವೀರಮಾತೆಯ ಧ್ಯೇಯ, ನಿಲುವು ಗಮನಾರ್ಹವಾದುದ್ದು.

♦ ನಿಯತಕಾಲಿಕೆ 40 ಪುಟಗಳಿತ್ತು. ಇದರ ಜೊತೆಗೆ ಪುರವಣಿ ಸ್ವರೂಪದಲ್ಲಿ ಪ್ರತ್ಯೇಕ 8 ಪುಟಗಳನ್ನು ಮೀಸಲಾಗಿಟ್ಟಿತ್ತು. ಮೊದಲ ಸಂಚಿಕೆಯಲ್ಲಿ ಪುರವಣಿಯಲ್ಲಿ ಸತ್ಯವಂತರಾವ್ ಮಳೆಬೆನ್ನೂರ, ಬಿ.ಎಸ್ಸಿ,ಎಲ್.ಎಲ್.ಬಿ ಇವರ 'ನ್ಯಾಯಕ್ಕೆ ಗಲ್ಲು' ಎಂಬ ನಾಟಕ, ನಾರಾಯಣ ಶ್ರೀನಿವಾಸ ರಾಜಪುರೋಹಿತ, ಅವರ ಶ್ರೀ ವೀರಸಾಧ್ವೀ ಶಿರೋಮಣಿ ಶ್ರೀ ತಿಮ್ಮಮ್ಮನವರ ಚರಿತೆಯೂ ಪ್ರಕಟವಾದವು. ಡಾ ಆರ್.ಕೆ. ಹಾನಗಲ್ಲರ ಶ್ರೀ ಕೃಷ್ಣಜನ್ಮ ನಾಟಕಗಳು ಪುರವಣಿಯಲ್ಲಿ ಪ್ರಕಟವಾದವು..

♦ ವೀರಮಾತೆ ನಿಯತಕಾಲಿಕೆ ತನ್ಮೂಲಕ ಮಹಿಳಾ ಪ್ರತಿಭೆಗಳ ಬರಹಗಳಿಗೆ ಬಹುದೊಡ್ಡ ವೇದಿಕೆ ಒದಗಿಸಿತು. ಮಹಿಳಾ ಪ್ರತಿಭೆಗಳ ಜೊತೆಜೊತೆಗೆ, ದೊಡ್ಡ ಸಂಖ್ಯೆಯ ಪುರುಷ ಪ್ರತಿಭೆಗಳನ್ನು ಗುರುತಿಸಿತು.

♦ ಇದರೊಟ್ಟಿಗೆ 'ಅಕ್ಕನ ಓಲೆ','ಪದಬಂಧ' ಅಂಕಣಗಳ ಮೂಲಕ ಮಕ್ಕಳಲ್ಲಿ ಹುದುಗಿದ್ದಪ್ರತಿಭೆಯನ್ನು ಅನಾವರಣಗೊಳಿಸುವ, ಬರೆಯಲು ಪ್ರೋತ್ಸಾಹಿಸುವ, ವಿಪುಲವಾದ ಅವಕಾಶವನ್ನು ಒದಗಿಸಿತು.ನಗೆ ಹನಿ, ಒಗಟುಗಳು, ಮಕ್ಕಳ ಕಥೆಗಳನ್ನು ಮಕ್ಕಳು ಬರೆದರು

♦ ಪತ್ರಕರ್ತೆಯಾಗಿದ್ದ ಸುಶೀಲಾ ಕೊಪ್ಪರ ಅವರು ಪತಿಯ ಉದ್ಯೋಗ ನಿಮಿತ್ತ ಜೈಪುರ,ಅಜ್ಮೀರ್ ಹೀಗೆ ಬೇರೆ ಬೇರೆ ರಾಜ್ಯಗಳಲ್ಲಿದ್ದರು. ಅವರು ಅಲ್ಲಿಂದಲೇ ವೀರಮಾತೆಗೆ ಬರಹಗಳನ್ನು ಕಳಿಸುತ್ತಿದ್ದರು. ದ.ರಾ.ಬೇಂದ್ರೆ, ಆನಂದ ಕಂದ, ಜಿ.ಬಿ.ಜೋಶಿ, ನಾ.ಶ್ರೀ.ರಾಜಪುರೋಹಿತ, ಗಿರಡ್ಡಿ ಗೋವಿಂದರಾಜ, ದತ್ತಮೂರ್ತಿ ದೇಸಾಯಿ ಹುಬ್ಬಳ್ಳಿ, ಗರುಡ ಸದಾಶಿವರಾಯರಂತಹ ಖ್ಯಾತನಾಮರೂ ವೀರಮಾತೆಗೆ ಬರೆದಿದ್ದರು ಎಂಬುದೂ ಒಂದು ಹೆಗ್ಗಳಿಕೆ.

♦ ರವೀಂದ್ರನಾಥ ಟ್ಯಾಗೋರ್, ಡಾ.ಶಾಂತಾಬಾಯಿ ಸಪ್ತರ್ಷಿ, ಸಾನೇ ಗುರೂಜೀ, ಕಿಶೋರಲಾಲ ಮಶ್ರೂವಾಲಾ, ದಾದಾ ಧರ್ಮಾಧಿಕಾರಿ ಮುಂತಾದ ಮಹನೀಯರುಗಳ ಬರಹಗಳ ಅನುವಾದಗಳನ್ನು ವೀರಮಾತೆಯಲ್ಲಿ ಪ್ರಕಟಿಸುವ ಮೂಲಕ ಓದುಗರಿಗೆ ಮಹತ್ವದ ವಿಚಾರ, ಚಿಂತನೆಗಳ ಜೊತೆಗೆ ಜಾಗತಿಕ ಖ್ಯಾತಿಯ ಮಹನೀಯರು, ವಿದ್ವಾಂಸರು, ಲೇಖಕರ ಬರಹಗಳ ಅನುವಾದಗಳನ್ನು ಓದುಗರಿಗೆ ಉಣಬಡಿಸಲಾಗುತ್ತಿತ್ತು.

♦ ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಕಥೆಗಳು, ಲೇಖನಗಳು ಹಿಂದಿ, ಇಂಗ್ಲೀಷ್ ಭಾಷೆಯಿಂದ ಅನುವಾದಗೊಂಡ ಲೇಖನಗಳು ಪ್ರಕಟವಾಗಿವೆ.

♦ ವೀರಮಾತೆ ನಿಯತಕಾಲಿಕೆ ಆರಂಭದಲ್ಲಿ ಸಮೃದ್ಧವಾದ ಹೂರಣವನ್ನು ಒಳಗೊಂಡಿತ್ತು. ನಿಯತಕಾಲಿಕೆಯ ಮಹತ್ವ, ಮೌಲ್ಯವನ್ನು ಅರಿತ ಬೆರಳೆಣಿಕೆಯ ಜನ ಆರ್ಥಿಕ ಬೆಂಬಲ, ಬೌದ್ಧಿಕ ಬೆಂಬಲ ನೀಡಿದರು. ಹೊಸ ಓದುಗರು ಆರಂಭದಲ್ಲಿ ಉತ್ಸಾಹ ತೋರಿದರೂ, ಕೆಲವರಷ್ಟೇ ಸರಿಯಾದ ಸಮಯಕ್ಕೆ ಚಂದಾ ಪಾವತಿಸಿದರು. ಬಹುತೇಕರಿಂದ ನಿಯತಕಾಲಿಕೆಯ ಚಂದಾ ಸಂಗ್ರಹಿಸುವುದು ಸವಾಲಿನ ಕೆಲಸವಾಯಿತು.

ಒಟ್ಟಾರೆಯಾಗಿ ದಿನಕಳೆದಂತೆ ನಿಯತಕಾಲಿಕೆಯ ನಿರ್ವಹಣೆಯಲ್ಲಿ ಹಲವಾರು ಅಡಚಣೆಗಳನ್ನು, ಮುಖ್ಯವಾಗಿ ಹಣಕಾಸಿನ ತೊಂದರೆಯನ್ನು ಎದುರಿಸಬೇಕಾಯಿತು.ಇದರ ಜೊತೆಗೆ 1970ರ ವೇಳೆಗೆ ನಿಯತಕಾಲಿಕೆಗೆ ವೈವಿಧ್ಯಮಯ ಬರಹಗಳ ಕೊರತೆ ಉಂಟಾಯಿತು. ಇದರಿಂದ ಸಂಚಿಕೆಗಳು ನೀರಸವಾಗಲಾರಂಭಿಸಿದವು. ಹೀಗೆ ಮಹತ್ವದ ನಿಯತಕಾಲಿಕೆಯೊಂದು 1970ರಲ್ಲಿ ಅವಸಾನವಾಯಿತು.

ಉಪಸಂಹಾರ : 'ವೀರಮಾತೆ' ನಿಯತಕಾಲಿಕೆ 6–7 ದಶಕಗಳ ಹಿಂದೆಯೇ ಪ್ರಸ್ತುತದ ನಿಯತಕಾಲಿಕೆಗಳಿಗೆ ಸರಿಸಾಟಿಯಾಗಬಲ್ಲ, ಸವಾಲೊಡ್ಡುವಷ್ಟು ಸಮರ್ಪಕವಾದ ಮುನ್ನೋಟ ಹೊಂದಿತ್ತು. ಪೂರ್ಣ ಪ್ರಮಾಣದ ನಿಯತಕಾಲಿಕೆಗಳಿಗೆ ಒಂದು ಉತ್ಕೃಷ್ಟವಾದ ಮಾದರಿಯಾಗಬಲ್ಲಷ್ಟು ಒಳನೋಟಗಳನ್ನು ಹೊಂದಿತ್ತು. ನಿಯತಕಾಲಿಕೆ ಪ್ರಕಟವಾದ ಕಾಲ, ಸನ್ನಿವೇಶ, ಎದುರಿಸಿದ ಸಮಸ್ಯೆ, ಸವಾಲುಗಳು ಮತ್ತು ಇತಿ ಮಿತಿಗಳಲ್ಲಿ ಕನ್ನಡ ಪತ್ರಿಕೋದ್ಯಮದ ಆರಂಭಿಕ ಘಟ್ಟದಲ್ಲಿ, ಅದೂ ಪತ್ರಿಕೋದ್ಯಮ ಎಂಬುದು ಪುರುಷ ಆಡುಂಬೊಲ ಎಂದಾಗಿದ್ದಾಗಲೂ, ಪುರುಷರೇ ಯಶಸ್ವಿಯಾಗಿ ಪತ್ರಿಕೆಯೊಂದನ್ನು ನಡೆಸುವುದು ಕಷ್ಟ ಸಾಧ್ಯವಾಗಿತ್ತು. ಉದ್ಯೋಗ ಎಂಬುದು ಪುರುಷ ಕೇಂದ್ರಿತವಾಗಿತ್ತು. ಮಹಿಳೆಯರೇನಿದ್ದರೂ ಮನೆಗೆಲಸಕ್ಕಷ್ಟೇ ಲಾಯಕ್ಕಾದವರು ಎಂಬ ಪರಿಸ್ಥಿತಿಯಲ್ಲಿ ಸ್ತ್ರೀ ಶಿಕ್ಷಣ, ಸಬಲೀಕರಣ, ಆರ್ಥಿಕ ಸ್ವಾವಲಂಬನೆಗಳು ಗಗನ ಕುಸುಮವಾಗಿದ್ದವು. ಪುಸ್ತಕವೋ, ನಿಯತಕಾಲಿಕೆಯನ್ನೊ ಕೊಳ್ಳುವ ಸ್ವಾತಂತ್ರ್ಯ,ಕೊಳ್ಳುವುದನ್ನು ನಿರ್ಧರಿಸುವುದು ಮತ್ತು ಅದಕ್ಕೆ ಬೇಕಾದ ಹಣ ಹೊಂದಿಸಿಕೊಳ್ಳುವುದು ಮಹಿಳೆಯರಿಗೆ ದುರ್ಬರವಾಗಿತ್ತು. ಹೀಗಿರುವಾಗ

ನಿಯತಕಾಲಿಕೆಯೊಂದನ್ನು, ಅದರಲ್ಲೂ ಮಹಿಳೆಯರಿಗಾಗಿಯೇ ನಿಯತಕಾಲಿಕೆಯೊಂದನ್ನು ತರುವ ದುಸ್ಸಾಹಸ, ಸೂಕ್ತವಾದ, ಪರಿಪೂರ್ಣ ಎಂದೆನಿಸಬಹುದಾದ ನಿಯತಕಾಲಿಕೆ ಪ್ರಾರಂಭಿಸಿ ನಡೆಸಿದ್ದು ಚಾರಿತ್ರಿಕ ಮಹತ್ವದ ಸಾಧನೆಯಾಗಿದೆ.

ವೀರಮಾತೆ ತನ್ನ ಪರಮ ಧ್ಯೇಯದಂತೆ ಅಸಂಖ್ಯ ಯುವತಿಯರ, ಮಹಿಳೆಯರ, ಬಾಲಕಿಯರ ಬರಹಗಳನ್ನು, ಜೊತೆಜೊತೆಗೆ ಮಹಿಳಾ ಪರ ಬರಹಗಳನ್ನು ಬರೆದ ಯುವಕರ, ಪುರುಷ ಲೇಖಕರ ಬರಹಗಳನ್ನೂ, ಬರೆಯುವ ಚೈತನ್ಯವುಳ್ಳ ಬಾಲಕರನ್ನು ಗುರುತಿಸಿ ಅವರ ಬರಹಗಳನ್ನು ಪ್ರಕಟಿಸಿದೆ. ತನ್ಮೂಲಕ ಅವರಿಗೆ ಪ್ರೋತ್ಸಾಹ, ಬೆಂಬಲ ಮತ್ತು ಅತ್ಯುತ್ತಮ ವೇದಿಕೆಯನ್ನೊದಗಿಸಿ ಮಹಿಳಾ ಸಂವೇದನೆಯನ್ನು ಬೆಳೆಸುವ, ಮಹಿಳೆಯರನ್ನು ಸಮಾನವಾಗಿ ಕಾಣುವ, ಅವರನ್ನು ಗೌರವಿಸುವ ರೀತಿಯನ್ನು ಕಲಿಸಲು, ಬೆಳೆಸಲು ಅಹರ್ನಿಶಿ ಶ್ರಮಿಸಿದೆ. ಕನ್ನಡ ಪತ್ರಿಕಾಲೋಕಕ್ಕೆ, ಮಹಿಳಾ ಪತ್ರಿಕೋದ್ಯಮಕ್ಕೆ ಮಹತ್ವದ ನೆಲೆ ಮತ್ತು ಕೊಡುಗೆ ನೀಡಿದೆ.

ಆಕರಗಳು :

1. ವೀರಮಾತೆ ಸಂಚಿಕೆ 1, ಸಂಪುಟ, 1 ಪುಟ ಸಂಖ್ಯೆ –1
2. ಅದೇ ಪುಟ
3. ಸಂಚಿಕೆ 1, ಸಂಪುಟ 1, ಪು.ಸಂ 39 ಬರಹ: ಕಾನೂನು ವಿಭಾಗ

ಪರಾಮರ್ಶನ ಗ್ರಂಥಗಳು :

1. 'ವೀರಮಾತೆ' ಮಹಿಳಾ ನಿಯತಕಾಲಿಕೆಯ 1952 ರ ಜೂನ್ ನಿಂದ 1953 ಮೇ ವರೆಗಿನ ಸಂಪುಟ–1: 1 ರಿಂದ 12 ಸಂಚಿಕೆಗಳು.
2. 1959ರ ಜೂನ್ ನಿಂದ 1960 ರ ಮೇ ವರೆಗಿನ ಸಂಪುಟ–8: 1ರಿಂದ 12 ಸಂಚಿಕೆಗಳು.
3. 8ನೇ ಸಂಪುಟದ ಮೊದಲ ಸಂಚಿಕೆ ಜೂನ್ ಮತ್ತು ಜುಲೈ ತಿಂಗಳುಗಳ ಸಂಯುಕ್ತ ಸಂಚಿಕೆ.
4. ಸಿ.ಜಿ. ಮಂಜುಳಾ, ಕನ್ನಡ ಪತ್ರಿಕಾಲೋಕ ಮಹಿಳೆಯ ಹೆಜ್ಜೆಗುರುತು, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು, 2015
5. ಹೇಮಲತಾ, ಗಂಡುಪಾಳಯದಲ್ಲಿ ಸ್ತ್ರೀಲೇಖ, ಮಾಧ್ಯಮ ಕರ್ನಾಟಕ: ಪತ್ರಕರ್ತರ ಇಂದು ನಾಳಿನ ಸವಾಲುಗಳು, ಉದಯಭಾನು ಕಲಾಸಂಘ, ಬೆಂಗಳೂರು,

2012.

6. ಸುಶೀಲಾ ಕೊಪ್ಪರ, ಪತ್ರಿಕೋದ್ಯಮಕ್ಕೆ ಮಹಿಳೆಯರ ಕೊಡುಗೆ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮೈಸೂರು, 1989
7. 'ಕನ್ನಡ ಪತ್ರಿಕಾಸೂಚಿ'(1843–1972)– ಸಂಪಾದಕರು: ಡಾ.ಶ್ರೀನಿವಾಸ ಹಾವನೂರ, ಸಂಕಲನಕಾರರು: ಮೋಹನ ಗ.ಹೆಗಡೆ, ಪಂಡಾರಿ ಚೆಲ್ಲಪ್ಪನ್. ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮೊದಲ ಮುದ್ರಣ–2004

ಲೇಖಕರು : ರೂಪ ಕೆ.

ಸಂಶೋಧನಾ ವಿದ್ಯಾರ್ಥಿನಿ,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ಮಾನಸ ಗಂಗೋತ್ರಿ ,ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮಾರ್ಗದರ್ಶಕರು : ಪ್ರೊ. ನಿರಂಜನ

ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

'ಯುಗ ಪ್ರವರ್ತಕ ಕವಿ ಹರಿಹರನ ರಗಳೆಗಳು ಮತ್ತು ಮಹಾಕವಿ ಸೇಕ್ಕಿಲಾರ್ ಅವರ ಪೆರಿಯ ಪುರಾಣಂ' – ಒಂದು ತೌಲನಿಕ ಅಧ್ಯಯನ

¤ ಇಂದಿರಾ ಶರಣ ಜಮ್ಮಲದಿನ್ನಿ

ಮನುಷ್ಯನು ಭೂಮಿಯ ಮೇಲೆ ಹುಟ್ಟಿ ಬಂದಂದಿನಿಂದ ಹಲವಾರು ವಸ್ತುಗಳ ಹುಡುಕಾಟದಲ್ಲಿ ತೊಡಗಿದ್ದಾನೆ. ಅವನು ಉಣ್ಣುವ ಊಟ, ತೊಡುವ ಬಟ್ಟೆ, ಅವನ ಶೋಧದ ಫಲವೆಂದೇ ಹೇಳಬೇಕು. ಮೀನಿನಂತೆ ನೀರಿನಲ್ಲಿ ಈಜುವ, ಆಕಾಶದಲ್ಲಿ ಹಕ್ಕಿಯಂತೆ ಹಾರುವ, ಚಂದ್ರಲೋಕದ ಬಗೆಗೆ ಆತನ ಆಸ್ಥೆ, ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳು ಇತ್ಯಾದಿ ಎಲ್ಲವುಗಳು ಮನುಷ್ಯನ ವಿಸ್ಮಯಕಾರಿ ಮೆದುಳಿನ ಫಲಶ್ರುತಿಯ ಫಲವೇ ಆಗಿದೆ. ಮನುಷ್ಯನ ಸಂಘ ಜೀವನ ಅವನ ಸಂಶೋಧನೆಯ ಪರಿಧಿ ಹಾಗು ಸಾಧ್ಯತೆಗಳನ್ನು ಹಿಗ್ಗಿಸಿದೆ. ಹೀಗಾಗಿ ಅವನ ಶೋಧದ ಪ್ರವೃತ್ತಿ ನಿರಂತರ ಸಾಗಿದೆ.

ಹುಟ್ಟು ಹೋರಾಟಗಾರ, ಕವಿ ಹರಿಹರನ ಅನನ್ಯ ಕಾವ್ಯ ಪ್ರತಿಭೆ, ದಿಟ್ಟತನ, ದಾರ್ಶನಿಕತೆ, ಲೋಕದೃಷ್ಟಿ ನನಗೆ ಬಹಳ ಪ್ರಿಯವಾದದ್ದು. ಅದೇ ರೀತಿ ತಮಿಳಿನ ಕವಿ ಸೇಕ್ಕಿಲಾರ್ ಅವರ ಕಾವ್ಯ ಪ್ರತಿಭೆಯೂ ಅನುಪಮವಾದುದು. ಹರಿಹರ ತನ್ನ ರಗಳೆಗಳಲ್ಲಿ ಶಿವ ಭಕ್ತರ, ಶರಣರ ಜೀವನವನ್ನು ದಾಖಲಿಸಿದ್ದಾನೆ. ಕವಿ ಸೇಕ್ಕಿಲಾರ್ 63 ನಾಯನಾರರ ಕಥೆಗಳನ್ನು ತಮ್ಮ 'ಪೆರಿಯ ಪುರಾಣಂ' ಮಹಾಗ್ರಂಥದಲ್ಲಿ ವಿವರಿಸಿದ್ದಾರೆ. ಈ ನಾಯನಾರರು ದಕ್ಷಿಣ ಭಾರತದ ಆಧ್ಯಾತ್ಮ ಸಾಧಕರು.

ಪ್ರಮುಖ ಪದಗಳು :

ಶೋಧ, ಆವಿಷ್ಕಾರ, ತೌಲನಿಕ, ಫಲಶ್ರುತಿ, ದಾರ್ಶನಿಕತೆ, ಲೋಕದೃಷ್ಟಿ, ನಾಯನಾರ್ ಇತ್ಯಾದಿ.

ಖ್ಯಾತ ವಿಮರ್ಶಕ ಮ್ಯಾಥ್ಯೂ ಆರ್ನಾಲ್ಡ್ 'ಜೀವನದ ವಿಮರ್ಶೆಯೆ ಸಾಹಿತ್ಯ' ಎಂದು ಹೇಳುವುದರ ಮೂಲಕ ಸಾಹಿತ್ಯ ಮತ್ತು ಜೀವನಗಳ ನಡುವಿನ ಅವಿನಾಭಾವ ಸಂಬಂಧವನ್ನು ಮನಗಾಣಿಸುತ್ತಾನೆ. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ಅಸಾಮಾನ್ಯ ಬದುಕನ್ನು ಸಾಹಿತ್ಯದಲ್ಲಿ ದಾಖಲುಗೊಳಿಸಿದ ಕವಿ ಹರಿಹರ ಮತ್ತು ಕವಿ ಸೇಕ್ಕಿಲಾರ್ ಇವರುಗಳ ಸಾಧನೆ ಅಪ್ರತಿಮವಾದುದು.

ಹರಿಹರನು ಭಕ್ತ ಕವಿಗಳಲ್ಲಿ ಪ್ರಥಮ ಶ್ರೇಣಿಗೆ ಸೇರಿದವನು. ಶಿವ ಕವಿಗಳಲ್ಲಿ ಅಗ್ರಗಣ್ಯನು. ಭಕ್ತಿ ಪರಾಕಾಷ್ಠೆಯಲ್ಲಿ ಅವನಿಗೆ ಸರಿದೊರೆಯಾದವರನ್ನು ಕಾಣುವುದು ಕಷ್ಟ. ನಾನು ಈ ಲೇಖನದಲ್ಲಿ ಕವಿ ಹರಿಹರನ ತಾತ್ವಿಕತೆ ಮತ್ತು ಕವಿ ಸೇಕ್ಕಿಲಾರ್‌ನ ಲೋಕದೃಷ್ಟಿಯ ಬಗ್ಗೆ ಸಂಕ್ಷಿಪ್ತವಾಗಿ ಬರೆದಿದ್ದೇನೆ.

ಹರಿಹರ ಕ್ರಾಂತಿಕಾರಕ ಹಾಗೂ ಯುಗ ಪ್ರವರ್ತಕ ಕವಿ. ಶಿವಶರಣರ ಕಥೆಗಳ ಮೂಲಕ, ವಚನ ಚಳುವಳಿಯ ಆಶಯಗಳ ಪ್ರಾಮುಖ್ಯತೆಯನ್ನು ಸಾರಬೇಕಾಗಿತ್ತು.

ಜೀವನದ ವಿವಿಧ ವೃತ್ತಿಗಳನ್ನು ಕುಲಗೋತ್ರಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು ಇಲ್ಲಿದ್ದಾರೆ. ಬಿನ್ನ ಕುಲ, ಭಿನ್ನ ವೃತ್ತಿಗಳನ್ನು ಪ್ರತಿನಿಧಿಸುವ ಇವರುಗಳೆಲ್ಲ ತಮ್ಮ ಒಮ್ಮಖವಾದ ನಡೆ–ನುಡಿಗಳಿಂದ ತಿಳಿಯಾದ ಚಾರಿತ್ರ್ಯದಿಂದ ಜನಮನವನ್ನು ಆಕರ್ಷಿಸಿರುವರು. ಜೈನ, ಬೌದ್ಧಮತಗಳ ನಿರೀಶ್ವರವಾದವನ್ನು ಬಲವಾಗಿ ಖಂಡಿಸಿ ತೇಜಗೆಡುತ್ತಿದ್ದ ಶೈವಧರ್ಮವನ್ನು ಬೆಳಗಿ ಜನತೆಯಲ್ಲಿ ಭಗವದ್ಭಕ್ತಿ ಬೆಳೆಯುವಂತೆ ಮಾಡಿದರು. ಅಲ್ಲದೆ ತಮ್ಮ ಸುತ್ತಣ ಸಮಾಜವನ್ನು ಸಮಾನ ಮನೋಭಾವದಿಂದ ಕಂಡರು. ಗುಣಗಳನ್ನು ಗೌರವಿಸಿದರು. ಶಿವನ ಸಾಮ್ರಾಜ್ಯದಲ್ಲಿ ಮೇಲು ಕೀಳುಗಳಿಲ್ಲವೆಂದೂ ಎಲ್ಲರೂ ದೇವರ ಮಕ್ಕಳೆಂದು ಸಾರಿಸಾರಿ ಹೇಳಿದರು.

ನನ್ನ ಈ ಲೇಖನದಲ್ಲಿ ಹರಿಹರನ ರಗಳೆಗಳು ಹಾಗು ಸೇಕ್ಕಿಳಾರ್ ಕವಿಯ ಪೆರಿಯ ಪುರಾಣದಲ್ಲಿನ (ಕಥೆಗಳು) ಕೆಲವು ವ್ಯತ್ಯಾಸಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವ ಪ್ರಯತ್ನವನ್ನು ಮಾಡಿದ್ದೇನೆ. (ಪ್ರಾತಿನಿಧಿಕವಾಗಿ ಎರಡು ರಗಳೆಗಳನ್ನು ಮಾತ್ರ ಆರಿಸಿಕೊಂಡಿದ್ದೇನೆ)

1. ಕಾರಿಕಾಲಮ್ಮೆಯ ಕಥೆ :

1. ಕಾರಿಕಾಲಮ್ಮೆಯ ತಂದೆ ತಾಯಿಗಳು ತಮಗೆ ಗಂಡುಸಂತಾನವಿಲ್ಲವೆಂದು ಮಗಳನ್ನೂ ಅಳಿಯನನ್ನೂ ತಮ್ಮ ಮನೆಯಲ್ಲಿ ಇಟ್ಟುಕೊಂಡ ಉಲ್ಲೇಖ, ಮಾತು, ಪೆರಿಯ ಪುರಾಣದಲ್ಲಿ ಇರುತ್ತದೆ.

2. ಹರಿಹರ ಕಾರಿಕಾಲಮ್ಮೆಯು ತಮ್ಮ ಪತಿಗೃಹದಲ್ಲಿದ್ದಂತೆಯೂ ಅದು ಭವಿಗೃಹವೆಂಬಂತೆಯೂ ಹೇಳುತ್ತಾನೆ. 'ಸೇಕ್ಕಿಲಾರ'ರು ಕಾರಿಕಾಲಮ್ಮೆಯ ಮನೆಯವರೆಲ್ಲರೂ ಭಕ್ತರೇಯೆಂಬಂತೆ ವರ್ಣಿಸುತ್ತಾರೆ. ಹರಿಹರನ ರಗಳೆಯಲ್ಲಿ ಕಾರಿಕಾಲಮ್ಮೆ ಗುಪ್ತಮಹೇಶ್ವರಿಯಾಗುತ್ತಾಳೆ. ಯಾರಿಗೂ ತಿಳಿಯದಂತೆ ಶಿವಲಿಂಗಾರ್ಚನೆ ಜಂಗಮಸೇವೆಯಲ್ಲಿಯೇ ನಿರತಳಾಗಿರುತ್ತಾಳೆ.

3. ಶಿವಭಕ್ತರೊಬ್ಬರು ಬಂದು ಎರಡು ಮಾವಿನಹಣ್ಣುಗಳನ್ನು ಕಾರಿಕಾಲಮ್ಮೆಯ ಪತಿಯ ಕೈಯಲ್ಲಿ ಕೊಟ್ಟು ಹೋಗುತ್ತಾರೆ. ಆತನು ಅವುಗಳನ್ನು ಕಾರಿಕಾಲಮ್ಮೆಯ ಕೈಯಲ್ಲಿ ತೆಗೆದಿಡಲು ಕೊಡುತ್ತಾನೆ. ಈ ಹೇಳಿಕೆಯು ಎರಡು ಗ್ರಂಥಗಳಲ್ಲಿ ಒಂದೇ ತೆರನಾಗಿದ್ದರೂ ಶಿವನೇ ಕಾರಿಕಾಲಮ್ಮೆಗೆ ಗಣಪದವಿಯನ್ನೀಯುವನು. ಕೃಪೆಗೆಯ್ಯಲೋಸುಗ ಶಿವಭಕ್ತರೂಪದಲ್ಲಿ ಬಂದು ಮಾವಿನಹಣ್ಣುಗಳನ್ನು ತಂದನೆಂದು ಹರಿಹರನ ರಗಳೆಯಲ್ಲಿ ಬಂದಿದೆ.

4. ತೆಗೆದಿಟ್ಟ ಎರಡು ಮಾವಿನಹಣ್ಣುಗಳಲ್ಲಿ ಒಂದನ್ನು ಹಸಿದುಬಂದ ಅತಿಥಿಗೆ ಕಾರಿಕಾಲಮ್ಮೆಯು ಕೊಟ್ಟ ಉಲ್ಲೇ ಎರಡೂ ಗ್ರಂಥಗಳಲ್ಲಿಯೂ ಬಂದಿದೆ. ಆದರೆ ಬಂದ ಅಭ್ಯಾಗತನು ಶಿವಭಕ್ತನೆಂದು ಪೆರಿಯ ಪುರಾಣದಲ್ಲಿಯೂ ಪ್ರತ್ಯಕ್ಷ ಶಿವನೇ ಮಾನವರೂಪದಲ್ಲಿ ಬಂದನೆಂದು ಹರಿಹರನ ರಗಳೆಯಲ್ಲಿ ಬಂದಿದೆ.

5. ಅಭ್ಯಾಗತನು ಹಣ್ಣು ತಿಂದು ಹೋಗುವುದನ್ನು ಕಾರಿಕಾಲಮ್ಮೆಯ ಪತಿಯು ಕಂಡ ಸಂದರ್ಭ ಪೆರಿಯಪುರಾಣದಲ್ಲಿ ಬರುವುದೇ ಇಲ್ಲ. ಆದರೆ ಹರಿಹರನ ಕಾವ್ಯದಲ್ಲಿ ಆ ಅಭ್ಯಾಗತನು ಹಣ್ಣು ತಿಂದು ಹೋಗುವುದನ್ನು ಕಾರಿಕಾಲಮ್ಮೆಯ ಪತಿಯು ಕಾಣುವನು. ಕಂಡೊಡನೆಯೇ ಸಂದೇಹ, ಕೋಪಗಳೆರಡೂ ಅವನಲ್ಲಿ ಉದ್ಭವಿಸುವವು ಎಂದಿದೆ.

6. ಪೆರಿಯಪುರಾಣದ ಪ್ರಕಾರ ಪತಿಯು ಊಟಕ್ಕೆ ಬರುತ್ತಾನೆ. ತಾನು ಹಿಂದೆ ತೆಗೆದಿಡಲು ಕೊಟ್ಟ ಹಣ್ಣು ಕೇಳುತ್ತಾನೆ. ಕಾರಿಕಾಲಮ್ಮೆ ಉಳಿದ ಒಂದು ಹಣ್ಣನ್ನು ನೀಡುತ್ತಾಳೆ. ಆಗ ಪತಿಯು ಇನ್ನೊಂದನ್ನೂ ಕೊಡುವಂತೆ ತಿಳಿಸಲು ಆಕೆ ಚಿಂತಾಕ್ರಾಂತಳಾಗಿ ಒಳಗೆ ಹೋಗುವಳು. ಶಿವನ ಕೃಪೆಯಿಂದ ಒಂದು ಮಾವಿನಹಣ್ಣು ಪ್ರಾಪ್ತವಾಗುವುದು. ಅದನ್ನು ತಂದು ಪತಿಗೆ ನೀಡುವಳು. ಅದನ್ನು ತಿಂದ ಪತಿಯು ಅದರ ತಿಂದ ಪತಿಯು ಅದರ ಮಾಧುರ್ಯಕ್ಕೆ ಮನಸೋತು ಅದು ತಾನು ತಂದುಕೊಟ್ಟ ಹಣ್ಣಲ್ಲವೆಂದು ನಿಶ್ಚೈಸಿ ಅದರ ರಹಸ್ಯವನ್ನು ಕೇಳುವನು. ನಡೆದ ನಿಜಸಂಗತಿಯನ್ನು ಅವಳು ತಿಳಿಸುವಳು. ಹಾಗಾದರೆ ಇನ್ನೊಂದು ಹಣ್ಣನ್ನು ತರಿಸಬೇಕೆಂದು ಪತಿಯು ಒರೆಗೆ ಹಚ್ಚುವನು. ಆಕೆಯ ಪ್ರಾರ್ಥನೆಯ ಮೇರೆಗೆ ಮತ್ತೊಂದು ಹಣ್ಣು

ಗೋಚರವಾಗುವುದು. ಅದನ್ನು ಪತಿಗೆ ನೀಡುವಳು. ಅದನ್ನು ಪತಿ ಮುಟ್ಟುವಷ್ಟರಲ್ಲಿಯೇ ಅದು ಮಾಯವಾಗುವುದು. ಭಯವಾಗುವುದು. ಭಯಭರಿತನಾದ ಪತಿಯು ಆಕೆಯನ್ನು ಪರದೈವವೆಂದು ಬಗೆದು ಆಕೆಯ ಸಂಗವನ್ನು ತ್ಯಜಿಸಿ ತನ್ನ ಮನದಿಂಗಿತವು ಯಾರಿಗೂ ಗೋಚರವಾಗದಂತೆ ಕಾಲಕಳೆಯುತ್ತಿರುವನು.

ಹರಿಹರನ ರಗಳೆಯಲ್ಲಿ ಈ ಕಥೆ ಹೀಗೆ; ಕಾರಿಕಾಲಮ್ಮೆ ದಿನಕ್ಕಿಂತ ಮೊದಲೇ ಬಂದ ಪತಿಗೆ ಅಂಜುತ್ತಂಜುತ್ತ ಊಟಕ್ಕೆ ನೀಡುವಳು. ಹಸಿದ ಹಾಗೂ ಸಿಟ್ಟಿಗೆದ್ದ ಅವಳ ಪತಿ 'ಹಣ್ಣೆಲ್ಲಿ ತಾ' ಎಂದು ಕೇಳಲು ಉಳಿದ ಒಂದು ಹಣ್ಣನ್ನು ತಂದು ಕೊಡುವಳು. ಇನ್ನೊಂದನ್ನು ಕೊಡಬೇಕೆಂದು ಗದರಿಸಲು ಆಕೆಯು ಅಂಜಿ ಗಡಿಗೆಯಲ್ಲಿ ಕೈಹಾಕಲು ಪರಶಿವನ ಕೃಪೆಯಿಂದ ಹಣ್ಣು ದೊರೆಯುವುದು. ಅದನ್ನು ಪತಿಗೆ ಕೊಡುವಳು. ಅದನ್ನು ಮುಟ್ಟುದೊಡನೆಯೆ ಆತನಿಗೆ ಮೈಯಲ್ಲಿ ರೋಮಾಂಚನವಾಗುವುದು. ಅದರ ಸವಿಗೆ ಮೆಚ್ಚಿ, ಆ ಹಣ್ಣಿನ ರಹಸ್ಯವೇನೆಂದು ಕೇಳುವನು. ಮನದಲ್ಲಿ ಸಿಡಿಮಿಡಿಗೊಳ್ಳುತ್ತ ಕಾರಿಕಾಲಮ್ಮೆ ನಿಜಸಂಗತಿಯನ್ನು ಅರುಹಲು ಪತಿ ನಡುಗಿ ಆಕೆ ತನ್ನ ಸತಿಯೆಂಬ ಭಾವವನ್ನು ತೊಗೆದು ತಾಯೆ, ಮಹಾಮಾಯೆ, ದೇವಿ ಎಂದು ಭಾವಿಸುವನು.

ಕಾರಿಕಾಲಮ್ಮೆ ಮನೆಬಿಟ್ಟ ವಿಚಾರ :

ಪೆರಿಯ ಪುರಾಣ :

ಪೆರಿಯಪುರಾಣದನ್ವಯ ಕಾರಿಕಾಲಮ್ಮೆಯ ಪತಿಯು ವ್ಯಾಪಾರಕ್ಕೆಂದು ಬೇರೆಡೆಗೆ ಹೋಗಿ ಅಲ್ಲಿಯೇ ನೆಲಸಿ, ಮತ್ತೋರ್ವಳನ್ನು ಮದುವೆಯಾಗಿ ಅಲ್ಲಿ ಹುಟ್ಟಿದ ಹೆಣ್ಣು ಮಗುವಿಗೆ ಕಾರಿಕಾಲಮ್ಮೆಯ ಸ್ಮರಣೆಗೋಸುಗ ಆಕೆಯ ಹೆಸರನ್ನೇ ಇಟ್ಟು ಸುಖದಿಂದಿರುವನು. ಕಾರಿಕಾಲಮ್ಮೆಯ ಬಂದು ಬಳಗದವರಿಗೆ ಈ ವಿಷಯ ತಿಳಿದು ಆಕೆಯನ್ನು ಕರೆದುಕೊಂಡು ಅವನಲ್ಲಿಗೆ ಹೋಗುವರು. ಪತಿಯು ಆಕೆಯ ಪಾದಕ್ಕೆ ನಮಸ್ಕರಿಸಿ ಇನ್ನು ಮುಂದೆ ಆಕೆ ತನಗೆ ಪೂಜ್ಯ ವ್ಯಕ್ತಿಯೆಂದೂ ಪತ್ನಿಯಲ್ಲವೆಂದೂ ಸಾರುವನು. ಪತಿಯ ನಿಮಿತ್ತವಾಗಿಯೇ ಈ ದೇಹದ ರೂಪು ಲಾವಣ್ಯಗಳನ್ನು ಆತನು ತ್ಯಜಿಸಿದ ಮೇಲೆ ಇವುಗಳ ಅವಶ್ಯಕತೆಯಿಲ್ಲವೆಂದು ಮಾಂಸವನ್ನೆಲ್ಲ ಕಿತ್ತು ಬಿಸುಟು ಎಲುಬಿನ ಹಂದರವಾಗಿ ಮುಂದೆ ಸಾಗುವಳು.

ಹರಿಹರನ ರಗಳೆಯಲ್ಲಿ :

ತನ್ನ ಗುಪ್ತಭಕ್ತಿ ಪ್ರಕಟವಾಯಿತು. ಭಕ್ತಿಯನ್ನು ಮಾಡಲಾಗದು' ಎಂದು ಕಾರಿಕಾಲಮ್ಮೆಯು ಮನೆಬಿಟ್ಟು ಕೈಲಾಸದತ್ತ ನಡೆಯುವಳು. ಕಾಮಿಗಳು ದಾರಿಯಲ್ಲಿ ಅವಳ ಬೆನ್ನುಹತ್ತಿ ಬರಲು ಅವರಿಗೆ ಎಷ್ಟು ಉಪದೇಶ ಮಾಡಿದರೂ ಕೇಳುವುದಿಲ್ಲ. ಆಗ ಈ ದೇಹಕ್ಕೆ

ರೂಪು ಲಾವಣ್ಯಗಳಿರುವುದರಿಂದ ಇವರು ಹೀಗೆ ಮಾಡುವರೆಂದು ತಿಳಿದು ಆಕೆಯು ತನ್ನ ದೇಹದ ಮಾಂಸದ ಮುದ್ದೆಯನ್ನು ಕಿತ್ತೊಗೆದು ಮುಂದೆ ಸಾಗುವಳು.

ಪೆರಿಯ ಪುರಾಣ:

ಕಾರಿಕಾಲಮ್ಮೆ ಕೈಲಾಸದ ಸಮೀಪಕ್ಕೆ ಹೋಗಿ ಅಲ್ಲಿ ಕಾಲಿನಿಂದ ಹೋಗುವುದು ಉಚಿತವಲ್ಲವೆಂದು ತಲೆಯಿಂದ ಬೆಟ್ಟವನ್ನೇರುವಳು. ಪಾರ್ವತಿಯು ಮಹದಾಶ್ಚರ್ಯದಿಂದ ಆ ಪುಣ್ಯಾತ್ಮಳ ಮಹಿಮೆಯನ್ನು ಪರಶಿವನಿಂದ ಕೇಳಿ ತಿಳಿಯುವಳು. ಕಾರಿಕಾಲಮ್ಮೆಯು ತನ್ನ ತಾಯಿಯೆಂದು ಪರಿಶಿವನು ಹೇಳಲು ಕಾರಿಕಾಲಮ್ಮೆ ಎನ್ನ ತಂದೆ ಎಂದು ಆತನ ಪಾದಗಳಿಗೆ ನಮಸ್ಕರಿಸುವಳು. ಶಿವನ ಅಪ್ಪಣೆಯಂತೆ ಕಾರಿಕಾಲಮ್ಮೆ ತಲೆಯಿಂದ ನಡೆಯುತ್ತಲೇ 'ತಿರುವಾಲಂಗಾರು' ಎಂಬ ಗ್ರಾಮಕ್ಕೆ ಬಂದು ಶಿವನ ನೃತ್ಯವನ್ನು ನೋಡುತ್ತ ತಿರುಪಾಡುಗಳನ್ನು ಹಾಡುತ್ತ ಶಿವನ ಸಾನ್ನಿಧ್ಯದಲ್ಲಿರುವಳು. ಪೆರಿಯ ಪುರಾಣದಲ್ಲಿಯ ಕಥೆ ಹೀಗೆ ಮುಕ್ತಾಯವಾಗುತ್ತದೆ. ಹರಿಹರನ ರಗಳೆಯಲ್ಲಿ ಇದು ಬೇರೆ ತೆರನಾಗಿದೆ. ಮನೆಬಿಟ್ಟು ಹೊರಟ ಕಾರಿಕಾಲಮ್ಮೆ ಮೊದಲು ಕಾಂಚಿಗೆ ಬಡಗಲಲ್ಲಿರ್ಪ ತಿರುವಾನ ಕಾಡಿಗೆ ಬಂದು ಅಲ್ಲಿ ಶಿವನ ನೃತ್ಯವನ್ನು ನೋಡಿ ಆನಂದಪಟ್ಟು ಶಿವನ ಅಪ್ಪಣೆಯ ಮೇರೆಗೆ ಕೈಲಾಸಪುರದತ್ತ ತೆರಳುವಳು. ಕೈಲಾಸದ ದಾರಿಯಲ್ಲಿ ಶರಣರ ಹೆಜ್ಜೆಗಳನ್ನು ಕಂಡು ಅವುಗಳ ಮೇಲೆ ತನ್ನ ಹೆಜ್ಜೆ ಮೂಡಬಾರದೆಂದು ತಲೆಯಿಂದಲೇ ನಡೆಯುವಳು. ಮಾರ್ಗದಲ್ಲಿ ಒಳ್ಳೆ ವೇಗದ ಗಜ ತುರುಗಗಳನ್ನು ಏರಿಹೊರಟ ನಂಬಿ, ಚೇರಮರು ಈಕೆಯನ್ನು ಕಂಡು 'ಎಂದಿಗೆ ಕೈಲಾಸಕ್ಕೆ ಬರ್ಪಿರೇ ಅಮ್ಮೇ' ಎಂದು ನುಡಿಯುವರು. ಕಾರಿಕಾಲಮ್ಮೆ ನೊಂದು ಕಣ್ಣೀರಿಡಲು ಶಿವನ ಆಸ್ಥಾನವೇ ತೊಯ್ದು ನೆನೆಯುವುದು. ಆಗ ಶಿವನ ಆಕೆಯನ್ನು ಮೇಲೆ ತೆಗೆದುಕೊಳ್ಳುವನು. ತತ್‌ಕ್ಷಣದಲ್ಲಿಯೇ ಕಾರಿಕಾಲಮ್ಮೆ ಕೈಲಾಸದ ಬಾಗಿಲಲ್ಲಿರುವಳು. ಪಾರ್ವತಿಯ ಪ್ರೇತವೇ ಬಂದಿತೆಂದು ಅಂಜಿ ಶಿವನ ಬೆನ್ನಹಿಂದೆ ಅಡಗಿ ಕೊಳ್ಳುವಳು. ಈಕೆ ನಿಮ್ಮತ್ತೆ, ನಮ್ಮವ್ವೆಯೆಂದು ಹೇಳಿ ಪರಶಿವನು ಕಾರಿಕಾಲಮ್ಮೆಗೆ ಗಣಪದವಿಯನ್ನೀಯುವನು.

2. ಕಣ್ಣಪ್ಪನ ರಗಳೆ :

ಕಣ್ಣಪ್ಪನ ರಗಳೆ, ಮೂಲ ತಮಿಳಿನಲ್ಲಿ ಭಿನ್ನವಾಗಿದೆ. ಇಲ್ಲಿ ಅನೇಕ ವ್ಯತ್ಯಾಸಗಳಿವೆ.

(ಅ) ಹರಿಹರನ ರಗಳೆಯಲ್ಲಿ ಶಿವ ಕಣ್ಣಪ್ಪನಿಗೆ ಎಡೆಯನ್ನು ತಾನೇ ಸ್ವೀಕರಿಸಿದ ಭ್ರಮೆ ಹುಟ್ಟಿಸಿ, ಭೂತಗಳಿಗೆ ಕೊಟ್ಟು ಬಿಡುತ್ತಾನೆ.

'ಎನ್ನವನೆ ಎನ್ನಾಣೆ ಉಣ್ಣವನೆ ಎನ್ನವನೆ

ನಿನ್ನಾಣ್ವೆ ಸವಿಸವಿದು ನೋಡು ನೋಡೆನ್ನವನೆ
ಎನಲಲ್ಲಿ ಶಂಕರಂ ಕೈಕೊಂಡ ಮೊಳ್ಕೆಯಿಂ
ತನತನಗೆ ಭೂತಕ್ಕೆ ಕೊಟ್ಟನೊಲಿದರ್ತಿಯಿಂ
ಆತುರದ ಪ್ರೇಮಮಂ ತಾನೆಯಾರೋಗಿಪಂ
ಭೂತ ಸಂಕುಲಕ್ಕೆ ಮಾಂಸವನಿತ್ತುರಾಗಿಪಂ
ಭಕ್ತನ ಮನಕ್ಕೆ ತಾನುಂಡಂತೆ ಮಾಡುತಂ
ಭಕ್ತಿಯಿಂದವೆ ತಣಿದು ತೇಗಿ ತೂಗಾಡುತಂ'.

ಪೆರಿಯ ಪುರಾಣದ ಶಿವ ಕಣ್ಣಪ್ಪನಿಂದ (ಹೆಸರು – ತಿಣ್ಣನಾರ್) ಎಂಜಲಾದ ಮಾಂಸದ ತುಣುಕುಗಳನ್ನು ನೇರವಾಗಿ ತಿಂದು ಸವಿಯುತ್ತಾನೆ. ಇಷ್ಟೇ ಅಲ್ಲ ಶಿವ, ತಿಣ್ಣನಾರ್‌ನನ್ನು ತನ್ನ ಬಲ ಭಾಗದಲ್ಲಿ ನಿಲ್ಲಿಸಿಕೊಳ್ಳುತ್ತಾನೆ.

ಹರಿಹರನ 'ಕಣ್ಣಪ್ಪ'ನ ರಗಳೆಯಲ್ಲಿ ಶಿವನ ಕಣ್ಣ ರಕ್ತಧಾರೆ ನಿಲ್ಲಿಸಲು ತನ್ನ ಕಣ್ಣುಗಳನ್ನು ಕಿತ್ತು ಅರ್ಪಿಸಿದಾಗ, ಶಿವ ಸಂಪ್ರೀತನಾಗಿ ಒಲಿದು ದರ್ಶನ ಕೊಡುತ್ತಾನೆ. ಇಷ್ಟೇ ಅಲ್ಲದೆ ಕೈಲಾಸಕ್ಕೆ ಕರೆಯುತ್ತಾನೆ. ಆಗ

'ದೇವ ಬೆಸಸಲು ವೇಳ್ಕು ತನುವೆರಸಿ ಬರ್ಪೆನೇ
ಭಾವಿಪಡೆ ಈ ದೇಹವೆರಸಿ ಬರಲಾರ್ಪನೇ
ಎನಲೊಂದು ದೇಹವಿಲ್ಲಿಗೆ ಮೆರೆಯಬೇಕೆಂದು
ಮನವೊಸೆತುವೊಂದು ನಿರ್ಮಳ ದೇಹವ ತಂದು
ಕಣ್ಣಪ್ಪನಂ ಹೊಗಿಸಿ ಸರ್ವ ಸಂಭ್ರಮದಿಂದೆ
ಕಣ್ಣಿತ್ತನಂ ವಿಮಾನದೊಳಿಸಿರಿ ನಲವಿಂದೆ
ನೆಗೆದನೀಶ್ವರನೆಂದು ಕೈಲಾಸಪುರದತ್ತ'.

ಎಂದು ಹರಿಹರ ಹೇಳುತ್ತಾನೆ. ಶಿವನ ಕೈಲಾಸ ಪ್ರವೇಶಕ್ಕೆ ಕಣ್ಣಪ್ಪನ ಹುಟ್ಟಿನ ಜಾತಿಯ ದೇಹ ಅಡ್ಡ ಬರುತ್ತದೆ. ಹರಿಹರನ ಶಿವ ಕಣ್ಣಪ್ಪನಿಗೆ ನಿರ್ಮಲ ದೇಹ ತಂದು ಕಣ್ಣಪ್ಪನನ್ನು ಹೊಗಿಸಿ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ವಿದ್ವಾಂಸರಾದ ಹಿರೇಮಲ್ಲೂರ್ ಈಶ್ವರನ್ ಅವರ ಪ್ರಕಾರ ಈ ಬದಲಾವಣೆ ಅತ್ಯಂತ ಚಮತ್ಕಾರಿಕವಾಗಿಯೂ ಹಾಗೂ ಕಲಾತ್ಮಕವಾಗಿದೆ.

ಆದರೆ ವಿಮರ್ಶಕರಾದ ಡಿ. ಆರ್. ನಾಗರಾಜ್ ಅವರ ಅಭಿಪ್ರಾಯ ಆಸಕ್ತಿಕರವಾಗಿದೆ. ಅವರ ಪ್ರಕಾರ ಹರಿಹರನಿಗೆ ಬೇಡರ ಕಣ್ಣಪ್ಪನ ಭಾವಸ್ಥಿತಿಗಳು ಮಾತ್ರ ಮುಖ್ಯ. ಈ ಹಿನ್ನೆಲೆಯಲ್ಲಿ ಪೆರಿಯ ಪುರಾಣದ ಬಹುಮುಖಿ ನೆಲೆ ಹೆಚ್ಚು ಸಮೃದ್ಧವಾಗಿದೆ.

ಪರಾಮರ್ಶನ ಗ್ರಂಥಗಳು :

1. ಡಾ. ಸಂಗಮೇಶ ಸವದತ್ತಿ ಮಠ – 'ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ'
2. ಮೂಲ ಲೇಖಕರು ಶ್ರೀ ಶ್ರೀ ಸ್ವಾಮಿ ಶಿವಾನಂದ ಸರಸ್ವತಿ. ಕೃತಿ – 'ಅರವತ್ಮೂರು ಸಂತರು'. ಅನುವಾದಕರು – ಕುಮಾರಿ. ಎ. ವಿಜಯ ಮತ್ತು ಕುಮಾರಿ. ಎ. ಉಮಾ – 1975 – ಮೂಲ ಗ್ರಂಥ ಪ್ರಕಾಶಕರು: ಶಿವಾನಂದ ಪಬ್ಲಿಕೇಷನ್ ಲೀಗ್, ಶಿವಾನಂದ ನಗರ, ಹೃಷಿಕೇಶ, (ಹಿಮಾಲಯ) ಕನ್ನಡ ಮುದ್ರಕರು: ಆಕಳವಾಡಿ ಪ್ರಿಂಟಿಂಗ್ ಪ್ರೆಸ್, ಮಂಗಳವಾರ ಪೇಟ, ಧಾರವಾಡ.
3. ಸಂಪಾದಕರು – ಡಾ. ಶಿವಾನಂದ. ಎಸ್. ವಿರಕ್ತಮಠ – ಕೃತಿ– ಹರಿಹರನ ರಗಳೆಗಳು ಸಾಂಸ್ಕೃತಿಕ ಮುಖಾಮುಖಿ – ಮೊದಲ ಮುದ್ರಣ 2003 – ಪ್ರಕಾಶಕರು– ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಲೇಖಕರು : ಇಂದಿರಾ ಶರಣ ಜಮ್ಮಲದಿನ್ನಿ
ಸಂಶೋಧನಾ ವಿದ್ಯಾರ್ಥಿನಿ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ಇಟ್ಟಗಾಲ ಪುರ, ಯಲಹಂಕ,
ಬೆಂಗಳೂರು – 64

ಮಾರ್ಗದರ್ಶಕರು : ಡಾ. ಮಲರ್‌ವಿಳಿ ಕೆ.
ಕನ್ನಡ ಪ್ರಾಧ್ಯಾಪಕರು, ಬಹು ಭಾಷಾ ವಿಭಾಗ
ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ಇಟ್ಟಗಾಲ ಪುರ, ಯಲಹಂಕ,
ಬೆಂಗಳೂರು – 64

ತತ್ವಪದಗಳಲ್ಲಿ ಬಹುತ್ವ

¤ ಡಾ. ಸಂಗನಗೌಡ ಹಿರೇಗೌಡ

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಚರಿತ್ರೆಯಲ್ಲಿ 17–18ನೇ ಶತಮಾನದ ಕಾಲಟ್ಟವನ್ನು 'ಕತ್ತಲೆಯುಗ' ಎಂದು ಸಾಹಿತ್ಯ ಚರಿತ್ರೆಗಾರರು ಮುದ್ರೆ ಒತ್ತಿದ್ದಾರೆ. ಹೀಗೆ ಒತ್ತಲಾದ ಮುದ್ರೆಯ ಕುರಿತು ಇತ್ತೀಚಿನ ವಿದ್ವಾಂಸರು ವಿಷಾದ ವ್ಯಕ್ತಪಡಿಸುವುದಷ್ಟೇ ಅಲ್ಲದೆ, ಆ ಕಾಲಘಟ್ಟಕ್ಕೆ ಹಿಂದುರಿಗಿ ವಿಶ್ಲೇಷಿಸುವ, ವಿಮರ್ಶಿಸುವ ಮತ್ತು ಸಂಶೋಧಿಸುವ ಕೆಲಸ ಮಾಡುತ್ತಿದ್ದಾರೆ. ಈ ಕುರಿತು ಕಿರಂ ನಾಗರಾಜ್, ಓ. ಎಲ್ ನಾಗಭೂಷಣ ಸ್ವಾಮಿ, ನಟರಾಜ ಬೂದಾಳು, ರಹಮತ್ ತರೀಕೆರೆ, ಎಚ್. ಎಸ್ ಶಿವಪ್ರಕಾಶ್, ಮೀನಾಕ್ಷಿ ಬಾಳಿ, ಜಿ.ಪ್ಹಿ ಆನಂದಮೂರ್ತಿ ಮುಂತಾದವರು ವಿಭಿನ್ನವಾಗಿ ಚಿಂತಿಸುತ್ತಿದ್ದಾರೆ.

ಬಹುತ್ವ ಎಂದರೇನು?

ಬಹುತ್ವವೆಂದರೆ, ಕೂಡಿಬಾಳುವುದು, ಸಹಬಾಳ್ವೆಯಿಂದ ಬದುಕುವುದೆಂದು ಕರೆಯಬೇಕಾಗುತ್ತದೆ. ಇದನ್ನೇ ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಎಲ್ಲಾ ಸಮುದಾಯಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ಕುರಿತು ಹೇಳುತ್ತಲೇ **'ಎಲ್ಲರಲ್ಲಿ ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ'** ಎಂದು ಹೇಳಲಾಗಿದೆ. ಇಂಥ ಪರಿಕಲ್ಪನೆಯುಳ್ಳಂಥ 'ಬಹುತ್ವ' ಎನ್ನುವ ಪದ 17–18ನೇ ಶತಮಾನದ ತತ್ವಪದಕಾರರ ಕಾಲಕ್ಕಿಟ್ಟು ನೋಡುವುದು ಸೂಕ್ತವೇ? ಸಂವಿಧಾನದ ಆಶಯಗಳು ತತ್ವಪದಗಳಲ್ಲಿ ಇದ್ದಾವೆಯೇ? ಎಂದು ಕೇಳಿಕೊಳ್ಳಬೇಕಾಗುತ್ತದೆ. ಕನ್ನಡ ಸಾಹಿತ್ಯದ ಸಾಂಸ್ಕೃತಿಕತೆಯನ್ನು ಗುರುತಿಸುವಲ್ಲಿ ತತ್ವಪದಕಾರರ ಕುರಿತು ಮೊದಲಿಗೆ ಚರ್ಚೆಗೆ ಎತ್ತಿಕೊಂಡವರು ಡಿ. ಆರ್. ನಾಗರಾಜ ಮತ್ತು ಕಿರಂ ನಾಗರಾಜ ಅವರಾಗಿದ್ದಾರೆ. ನಂತರ ಎಚ್. ಎಸ್ ಶಿವಪ್ರಕಾಶ್ ಅವರು **'ಎಲ್ಲಾ ಜಾತಿಯ ಮರಗಳ ಕಾಡು: ತತ್ವಪದಕಾರರು'** ಲೇಖನ

ಮೂಲಕ ಚರ್ಚಿಸಿದ್ದಾರೆ. ಈ ಲೇಖದ ಶೀರ್ಷಿಕೆಯೇ 'ಬಹುತ್ವ'ದ ಆಶಯವನ್ನು ಒಳಗೊಂಡಿದೆ. ಈ ಲೇಖನದಲ್ಲಿ ಶಿವಪ್ರಕಾಶ್ ಅವರು ಮುಖ್ಯವಾಗಿ ಆರು ಭಾಗಗಳಾಗಿ ಮಾಡಿಕೊಳ್ಳುತ್ತಾರೆ. 1. ಮತ ದೇಗುಲಗಳಾಚೆಗಿನ ಧರ್ಮ, 2. ತತ್ವಪದಗಳು: ಒಂದು ಸಂಸ್ಕೃತಿ, 3. ತತ್ವಪದಗಳ ಭಿತ್ತಿ, 4. ವಾಗ್ರೂಪದ ಕಾರಣಿಕಗಳು, 5. ಸಾಂಸ್ಕೃತಿಕ ನಾನಾತ್ವಗಳಲ್ಲಿ ತತ್ವಪದಗಳು ಮತ್ತು ಕೊನೆಯದಾಗಿ 6. ಸಾಹಿತ್ಯ ಚರಿತ್ರೆ ಮೀಮಾಂಸೆ ಮತ್ತು ತತ್ವಪದಗಳು. ಮುಖ್ಯವಾಗಿ ತತ್ವಪದಗಳು ಸಂವಿಧಾನದಲ್ಲಿ ಬಳಸಲಾದ ಪರಿಭಾಷೆಗಳ ಮೂಲಕ ಅಭಿವ್ಯಕ್ತಿಸುವುದಿಲ್ಲವಾದರೂ ಕೂಡು ಸಂಸ್ಕೃತಿಯನ್ನು ಅಥವ ಸಂಕರ ಸಂಸ್ಕೃತಿಯನ್ನು ಹೇಳುತ್ತವೆ.

ಯಾವುದೇ ಕಾಲದ ಸಾಹಿತ್ಯವಾಗಿರಲಿ ತಮ್ಮ ಹಿಂದಿನ ಪರಂಪರೆಯನ್ನು ಹಾಯ್ದು ಅಲ್ಲಿಯ ಸ್ಥಿತಿಯನ್ನು ಸಂಪೂರ್ಣವಾಗಿ ನಿರಾಕರಿಸಿದೆ, ವ್ಯವಧಾನದಿಂದ ನಿವಾರಿಸಿಕೊಂಡು ತನ್ನ ಕಾಲಕ್ಕೆ ಬೇಕಾದ ಮೌಲ್ಯವನ್ನು ಕಟ್ಟಿಕೊಳ್ಳುತ್ತದೆ. ಉದಾಹರಣೆಗೆ: ವೇದವ್ಯಾಸರು ಬರೆದ **'ಮಹಾಭಾರತ'**ವನ್ನು ಪಂಪ ಮತ್ತು ರನ್ನರಂಥವರು ತಮ್ಮ ಕಾಲಕ್ಕೆ ಬೇಕಾದಂತೆ ಮುರಿದು ಕಟ್ಟಿಕೊಂಡಿದ್ದಾರೆ. ಮಹರ್ಷಿ ವಾಲ್ಮೀಕಿ ಬರೆದ **'ರಾಮಾಯಣ'**ವನ್ನು ನಾಗಚಂದ್ರ, ಲಕ್ಷ್ಮೀಶ, ಕುವೆಂಪುರಂಥವರೂ ಸಾಧಿಸಿ ತೋರಿಸಿದ್ದಾರೆ. ತತ್ವಪದಕಾರರೂ ತಮ್ಮ ಹಿಂದಿನ ಪರಂಪರೆಯನ್ನು ನಿರಾಕರಿಸದೇ, ನಿವಾರಿಸಿಕೊಂಡಿದ್ದಾರೆ. ಹಾಗಾಗಿಯೇ ಎಚ್. ಎಸ್ ಶಿವಪ್ರಕಾಶ್ ಅವರು "ಹನ್ನೆರಡನೇ ಶತಮಾನದ ಶರಣರು ಶೈವಧರ್ಮದ ಕೆಲವು ಪರಿಕರಗಳನ್ನು ಉಳಿಸಿಕೊಂಡು ಇನ್ನೂ ಕೆಲವು ನವೀಕರಿಸಿಕೊಂಡು ಉಳಿದೆಲ್ಲ ಸಂಸ್ಕೃತಿಗಳ ನಂಬಿಕೆ ಆಚರಣೆಗಳನ್ನು ನಿವಾರಿಸಿಯಾಗ, ದಾನ, ಬಲಿ, ದೇವಾಲಯ, ಗ್ರಾಮದೇವತೆ ಮುಂತಾದ ಕೆಳಸಂಸ್ಕೃತಿಗಳ ಬಹುದೇವೋಪಾಸನೆ ಪ್ರವೃತ್ತಿಗಳು ಈ ಎಲ್ಲವುಗಳ ಮೇಲೆ ವಚನಕಾರರು ಉರಿವ ನಾಲಿಗೆ ಹರಿಬಿಟ್ಟಿದ್ದಾರೆ. ನಂತರದ ದಾಸ ಪಂಥದವರು ಹರಿಭಕ್ತರಾದರೂ ಹರಿಹರೈಕ ಭಾವವನ್ನು ನಿರಾಕರಿಸದೆ ಮೇಲು ಸಂಸ್ಕೃತಿಯ ಕುರುಹುಗಳಾದ ದೇವಾಲಯ, ದಾನ, ಧರ್ಮ, ಯಜ್ಞ–ಯಾಗ ಇವೆಲ್ಲವನ್ನು ಸ್ವೀಕರಿದರು. ಆದರೆ ಇವರ ನಿರಾಕರಣೆ ಇದ್ದದ್ದು ಕನಕದಾಸರ ಮಾತಿನಲ್ಲಿ ಹೇಳಬೇಕೆಂದರೆ 'ಬಣಗು ದೈವಗಳ' ಬಗ್ಗೆ. ಹೀಗೆ ದಾಸ ಪಂಥದವರು ಬಹುಮಟ್ಟಿಗೆ ಕೆಳಸಂಸ್ಕೃತಿಯನ್ನು ನಿರಾಕರಿಸಿದರು. ಶರಣ ಚಳುವಳಿ ಮತ್ತು ದಾಸಪಂಥಗಳೆರಡು ಮೂಲಭೂತವಾಗಿ ಏಕದೇವೋಪಾಸನೆಯ ಮಾದರಿಗಳು. ಆದರೆ ತತ್ವಪದಕಾರರು ಮೇಲು/ಕೆಳ ಸಂಸ್ಕೃತಿಗಳ ಸಂಕೇತಗಳ ವಿಚಾರದಲ್ಲಿ ಸ್ವೀಕಾರ ಭಾವವನ್ನು ತಾಳಿ ಎಲ್ಲಾ ಬಾಹ್ಯ ಆಚರಣೆಗಳ ವೈವಿಧ್ಯದಲ್ಲಿ ಅಂತರಂಗದ ಅನುಭವದ ಏಕತೆಯನ್ನು ಹುಡುಕುತ್ತಾರೆ. ಶಿಶುನಾಳ ಶರೀಫ ಎಲ್ಲಮ್ಮನ

ಜಾತ್ರೆಯ ಬಗ್ಗೆ, ಪಂಚಮಿ ಹಬ್ಬದ ಬಗ್ಗೆ ಮನದುಂಬಿ ಹಾಡಿದ ಹಾಗೆ ಬಸವಾದಿ ಶರಣರು ಹಾಡುವುದನ್ನು ಊಹಿಸುವುದೂ ಕಷ್ಟ".[1] ಎನ್ನುವ ಮಾತು ತತ್ವಪದಗಳಲ್ಲಿ 'ಬಹುತ್ವ' ಎನ್ನುವ ವಿಷಯಕ್ಕೆ ಪ್ರಾರಂಭದ ಹಾದಿಯನ್ನು ತೋರುತ್ತದೆ.

ಸಾಕುಬೇಕು ಏಕಮಾಡಿದ ತತ್ವಪದಕಾರರು:

ತತ್ವಪದಕರರು ಏನನ್ನೂ ನಿರಾಕರಿಸದೇ ಎಲ್ಲವನ್ನೂ ಒಳಗೊಂಡು ತಮಗೆ ಬೇಕಾದದ್ದನ್ನು ನಿವಾರಿಸಿಕೊಂಡು ಹೊಸ ಅರ್ಥ ಸಾಧ್ಯತೆಗಳಿಗೆ ಸಮಾಜವನ್ನು ದಾಟಿಸಿಕೊಂಡು ಹೋಗಿದ್ದಾರೆ. 'ಸಾಕು' ಎನ್ನುವ ಮತ್ತು 'ಬೇಕು' ಎನ್ನುವ ಈ ಎರಡೂ ಸ್ಥಿತಿಗಳನ್ನು ಹೊಂದುಗೂಡಿಸಿಕೊಂಡು ಸಮಾಜಕ್ಕೆ ಬೇಕಾದ ಸ್ವಾಸ್ಥ್ಯವನ್ನು ಲಯಭರಿತವಾಗಿ ಹಿಡಿದಿದ್ದಾರೆ. ಹಾಗಾಗಿಯೇ ಮಡಿವಾಳಪ್ಪನ ಶಿಷ್ಯನಾದ ಚೆನ್ನೂರು ಜಲಾಲ್ ಸಾಬನು ತನ್ನದೊಂದು ತತ್ವಪದದಲ್ಲಿ,

"ಹಮ್ ಬೀ ಕಹತೆ ತುಮ್ ಬೀ ಕಹತೆ
ಮಾಡಬ್ಯಾಡರಿ ಮ್ಯಾಲಿನ ಶೀಲ
ಗುರು ಮಡಿವಾಳಪ್ಪ ಹೋಕರ್ ಬೋಲೆ
ತೊಳಿಯಬೇಕರಿ ಒಳಗಿನ ಮೈಲಾ"[2]

ಎಂದು ಬರೆಯುತ್ತಾನೆ. ಮನಸ್ಸಿನ ಮೈಲಿಗೆಯನ್ನು ತೊಳಿದುಕೊಳ್ಳುವುದೆಂದರೆ, ಎಲ್ಲಾ ಸಮುದಾಯಗಳನ್ನು, ಸಂಸ್ಕೃತಿಗಳನ್ನು ಏಕಮಾಡಿ ಒಳಗೊಳ್ಳುವುದೇ ಆಗಿದೆ. ಇದು ಭಾಷೆಯ ದೃಷ್ಟಿಯಿಂದಲೂ ಸತ್ಯವಾಗಿದೆ.

ವಿದ್ವಾಂಸರು ಭಾರತೀಯ ಇಪ್ಪತ್ತೆರಡು ಪಂಥಗಳನ್ನು ಗುರುತಿಸಿದ್ದಾರೆ. ಓ.ಎಲ್.ಎನ್ ಅವರು 'ನವೋದಯ ಪೂರ್ವದ ಸಾಹಿತ್ಯ' ಲೇಖನದಲ್ಲಿ ಸೂಚ್ಯವಾಗಿ ಗುರುತಿಸುತ್ತಾರೆ. ಆಯಾ ಪ್ರದೇಶದ ಸಾಧಕರು ತಮ್ಮ ನೆಲದಲ್ಲಿದ್ದ ಪಂಥಗಳ ಜೊತೆಗೆ ವಿಚಿತ್ರವಾದಂಥ ಒಡನಾಟ ಮಾಡಿದ್ದಾರೆ. ಉದಾ: ಮಹಾರಾಷ್ಟ್ರದ ವಾರಕರಿ ಪಂಥ. ಬಂಗಾಳದ ಚೈತನ್ಯ ಪಂಥ ಇತ್ಯಾದಿ. ತತ್ವಪದಕಾರರು ತಮ್ಮ ನೆಲದಲ್ಲಿದ್ದ ನಾಥ, ಶಾಕ್ತ, ಅಮನಸ್ಕ, ಶರಣ, ಸೂಫಿ ಮುಂತಾದ ಪಂಥಗಳನ್ನು ತಮ್ಮ ತತ್ವಪದಗಳಲ್ಲಿ ಸಂಕೇತಗಳಾಗಿ ತರುತ್ತಾರದ್ದರಿಂದ ಇದು ಕೂಡ ವಿಶಿಷ್ಟವಾದ ಬಹುತ್ವವೆಂದೇ ಹೇಳಬೇಕಾಗುತ್ತದೆ. ನಾಥಪಂಥದ ಆಚರಣೆ ಕುರಿತು ರಮಮತ್ ತರೀಕೆರೆ ಅವರು 'ಕರ್ನಾಟಕದ ನಾಥಪಂಥ' ಕೃತಿಯಲ್ಲಿ "ನಾಥಪಂಥದಲ್ಲಿ ಕುರಿಯ ಉಣ್ಣೆಗೆ ಬಹಳ ಮಹತ್ವವಿದೆ. ನಾಥರು ದೀಕ್ಷೆಯಲ್ಲಿ ಹಾಕಿಕೊಳ್ಳುವ ಶೈಲಿ 'ಕುರುಬದಾರ'ದಿಂದಲೇ ಮಾಡಬೇಕು. ಶಿವನು ಬ್ರಹ್ಮಹತ್ಯೆಯ ದೋಷದಿಂದ ಪಾರಾಗಲು ಕೂದಲು ಜನಿವಾರ

ಹಾಗೂ ಕಪಾಲ ಮಾಲೆ ಧರಿಸಿ ತೀರ್ಥಯಾತ್ರೆ ಮಾಡಬೇಕಾಯಿತು ಎಂದು ಹೇಳಲಾಗುತ್ತದೆ. ಈಗಲೂ ಕಾಶಿಯಲ್ಲಿ ಕಪಾಲ ಮೋಚನ ಮೈದೊಳೆದು ಕಪ್ಪನೆಯ ಕಾಶಿದಾರ ತರುವ ಸಂಪ್ರದಾಯವಿದೆ. ಇದು ನಾಥರ ಶೈಲಿಯ ಅವಶೇಷ ರೂಪ".[3] ಎಂದು ಬರೆದುಕೊಳ್ಳುತ್ತಾರೆ. ಈ ಪರಂಪರೆಯಿಂದಲೇ ಬಂದಂಥ ಅಲ್ಲಮ ಪ್ರಭು, ಸಿದ್ಧರಾಮ, ರೇವಣಸಿದ್ಧರಂಥವರಿಗೆ ನಾಥಪರಂಪರೆಯ ಪ್ರಭಾವವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ತರೀಕೆರೆ ಅವರ ಮೇಲಿನ ಮಾತಿಗೆ ಸಾಮಿಪ್ಯವಿರುವ ದ್ಯಾಗಾಯಿ ಗುಂಡಪ್ಪನವರ ತತ್ವಪದ ಹೀಗಿದೆ.

"ಇಲ್ಲೇ ಇಟ್ಟಿದ ಕಳೆದು ಹೋಯಿತು ಧಾರಾ
ಎಲ್ಲಿ ಹೋಯಿತು ಧಾರಾ
ಸೋಲಾಪುರದ ಮೂಲದ ಧಾರಾ
ಅಲ್ಲಮ ಪ್ರಭುವಿನ ಬಲ್ಲಿದ್ದ ಧಾರಾ"[4]

ದ್ಯಾಗಾಯಿ ಗುಂಡಪ್ಪನ ಊರು ಕಲಬುರಗಿ ಜಿಲ್ಲೆಯ ಈಗಿನ ದೇಗಾಂವ್ ಆಗಿರುವುದರಿಂದ ಮತ್ತು ಈ ತತ್ವಪದದಲ್ಲಿರುವ ನುಡಿಗಟ್ಟುಳು ತರೀಕೆರೆ ಅವರ ಮಾತಿಗೆ ಸಾಮಿಪ್ಯವಿರುವುದರಿಂದ ಹಾಗೂ ಅಲ್ಲಮಪ್ರಭು, ಸಿದ್ಧರಾಮನಂಥ ಶರಣರು ದೇಗಾಂವ್ ಊರಿಗೆ ಹಾಯ್ದು ಕಲ್ಯಾಣಕ್ಕೆ ಹೋಗಿರಬೇಕು. ಜೊತೆಗೆ ಅಲ್ಲಮನ ಗುರು 'ಅನಿಮಿಶಿಯಾ' (ಕಣ್ಣ ರೆಪ್ಪೆಯಿಲ್ಲದ್ದ–ಮೀನು) ಆಗಿರುವುದರಿಂದ. ಗುಂಡಪ್ಪನಿಗೆ ಇವೆಲ್ಲವೂ ಗೊತ್ತಿರುವಂತೆ ತೋರುತ್ತದೆ. ಯುಗಾದಿ ಹಬ್ಬದ ಹದಿನೈದು ದಿನ ಮುಂಚೆಯೇ ಜನರು ಶ್ರೀಶೈಲಕ್ಕೆ ಪಾದಯಾತ್ರೆ ಹೋಗುತ್ತಾರೆ. ಬರುವಾಗ ಕಪ್ಪು ದಾರ, ವಿಭೂತಿ, ರುದ್ರಾಕ್ಷಿ ಮುಂತಾದವುಗಳನ್ನು ತರುತ್ತಾರೆ. ಬೋರಮ್ಮನನ್ನು ಕಳುಹಿಸುವ ಕಾರ್ಯಕ್ರಮದಲ್ಲಿ ಈ ಎಲ್ಲಾ ವಸ್ತುಗಳನ್ನಿಟ್ಟು ಪೂಜಿಸಿ ನಂತರ ಕೈಯಲ್ಲಿ, ಕೊರಳಲ್ಲಿ ಕಟ್ಟಿಕೊಳ್ಳುವ ಪದ್ಧತಿ ಇದೆ. ಇದು ನಾಥಪಂಥದ ಧೀಕ್ಷೆಯಾಗಿ ತೋರುತ್ತದೆ. ಹೀಗೆ ನಾಥಪಂಥದ ಸಂಕೇತಗಳು ಹೊಳಲಗುಂದಿ ಸಾಯಿಬಣ್ಣ ತಾತ, ಕಡಕೋಳ ಮಡಿವಾಳಪ್ಪ, ರಾಚಪ್ಪಯ್ಯ, ಮೂಡಬೂಳ ರಂಗಲಿಂಗೇಶ್ವ, ಸಿದ್ಧಪ್ರಭು ಮುಂತಾದವರ ತತ್ವಪದಗಳಲ್ಲಿ ಸಿಗುತ್ತದೆ.

ನಾಥಪಂಥದಷ್ಟೇ, ಶಾಕ್ತಪಂಥವನ್ನೂ ತತ್ವಪದಕಾರರು ತತ್ವಪದಗಳ ಮೂಲಕ ಒಳಗೊಳ್ಳುತ್ತಾರೆ. ಈ ಧಾರೆಯ ಜೊತೆಗೆ ತತ್ವಪದಕಾರರು ವಿಶಿಷ್ಟವಾದ ಸಂಬಂಧವನ್ನು ಹೊಂದಿದ್ದಾರೆ. ಚಿದಾನಂದಾವಧೂತರಂಥವರು 'ಶ್ರೀದೇವಿ ಮಹಾತ್ಮೆ' ಎನ್ನುವಂಥ ಕೃತಿಯನ್ನು ಬರೆದಿದ್ದಾರೆ. ಜೊತೆಗೆ 'ಬಂಗಳಾಂಬ' ಎನ್ನುವ ಹೆಣ್ಣು ದೈವವನ್ನು ತತ್ವಪದಗಳಲ್ಲಿ ಯತ್ಥೇಚ್ಚವಾಗಿ ತರುತ್ತಾರೆ. ಶಿಶುನಾಳ ಶರೀಫನು 'ಎಲ್ಲಮ್ಮ'ನನ್ನು,

ನವಲಗುಂದ ನಾಗಲಿಂಗ ಸ್ವಾಮಿಗಳು 'ಸಮಗಾರ ಭೀಮವ್ವ'ನನ್ನು, ಕಡಕೋಳದ ಮಡಿವಾಳಪ್ಪನು 'ಶಕ್ತಿಯ ರೇಖೆ'ಯ ಮೂಲಕ ಪಾರ್ವತಿಯನ್ನು, ಕೂಡಲೂರು ಬಸವಲಿಂಗ ಶರಣರು 'ಮಾತಂಗಿ'ಯನ್ನು ತಮ್ಮ ತತ್ವಪದಗಳಲ್ಲಿ ಪ್ರೇಮ, ಭಕ್ತಿ, ದೈವಗಳಾಗಿ ಕಾಣುತ್ತಾರೆ. ಚಿದಾನಂದಾವದೂತರು ಶಾಕ್ತರಾಗಿರುವುದರಿಂದ ಗುರುಮುಟ್ಟಿ ಗುರುವಿನಂತಾಗಲು ಚಡಪಡಿಸುತ್ತಾರೆ. ಇಂಥ ಚಡಪಡಿಕೆಯ ತೀವ್ರತೆ ಇರುವ ತತ್ವಪದವೊಂದು ಹೀಗಿದೆ.

"ಓಡಿ ಬಂದು ಅಪ್ಪಬೇಕು ಅಂಬನ
ಕುದುರೆ ಮಾಡಿ ಹಡಗಲನೇರಬೇಕು ಅಂಬನ
ಓಡಬೇಕು ಒಡನೆ ಮುಟ್ಟಿ ಅಂಬನ'
ಸಾಕ್ಷಿ ಚಿದಾನಂದ ಬಂಗಳಾಂಬನ"[5]

ಹೀಗೆ ಪ್ರೇಮಕ್ಕೆ ಸಂಬಂಧಿಸಿದ ಲೌಕಿಕ ಪರಿಭಾಷೆಗಳನ್ನು ಬಳಸಿಕೊಂಡು ಅಲೌಕವಾದ ಸಂಗತಿಗಳನ್ನು ಹೇಳುತ್ತಾರೆ. ಇಂಥ ತತ್ವಪದಳು ಚಿದಾನಂದಾವದೂತರ ರಚನೆಯಲ್ಲಿ ಸಾಕಷ್ಟು ಸಿಗುತ್ತಾವೆ. ಉದಾ: ದೂತ ಸಂವಾ ದೇವಿಯೊಡನಾದುದು, ನಾದದಿ ಬೆರೆತಿರು ಮುಕ್ತಾ ವಿರಕ್ತಾ, ನಾದದಿ ಮಲಗ್ಯಾನೆ ಯೋಗಿ ನಿತ್ಯಾನಂದ ಭೋಗಿ, ನಾದನಾದ ಸುನಾದವ ತಿಳಿದವ, ಇತ್ಯಾದಿ. ಇವರ ಇನ್ನೊಂದು ತತ್ವಪದದಲ್ಲಿ ಅದ್ವೈತದ ತತ್ವವನ್ನು ಹೀಗೆ ತರುತ್ತಾರೆ.

"ನೀನು ನಾನಾಗಿಹೆ ದೇವರೆ
ನೀನು ನಾನೆ ಎಂದು ಪೂಜಿಸುವೆ ದೇವರೆ" [6]

ಶಿಶುನಾಳ ಶರೀಫನು ತನ್ನದೊಂದು ತತ್ವಪದದಲ್ಲಿ ಎಲ್ಲಮ್ಮನ ಕುರಿತು ಹೀಗೆ ಬರೆಯುತ್ತಾನೆ.

"ಎಕ್ಕಲಿಗೆ ಜೋಗು ಒಕ್ಕಲಿರಿಸಿ ಪೋಗುವೆ
ಚಿಕ್ಕ ತೊಡರು ಎಲ್ಲ ಕಳೆದು
ಸಾಧರ ಪಾದಕೆ ಬಾಗುವೆ
ಕಡಬು ಗುಗ್ಗರಿ ಮನಯಲಿ ಮಾಡಿ
ಹಡಗಲಿ ತುಂಬಿಟ್ಟು ನನು
ಬೇವಿನ ತಪ್ಪಲಿ ಉಡುಗಿ ಉಟ್ಟು
ಗಂಡು ದೀಪವ ಎತ್ತುವೆ"[7]

ಹನ್ನರೆಡನೇ ಶತಮಾನದ ಶರಣರು ವ್ಯಂಗ್ಯ–ವಿಡಂಬನೆ ಮಾಡಿ ತಿರಸ್ಕರಿಸಿದ ಜಾನಪದ ದೈವಗಳನ್ನು ತತ್ವಪದಕಾರರು ಸ್ವೀಕರಿಸಿತ್ತ ಬರುವುದರಲ್ಲಿಯೇ ಬಹುತ್ವವನ್ನು

ಉಳಿಸಿಕೊಳ್ಳುವ ತಾತ್ವಿಕತೆ ಇದೆ. ಶರೀಫನ ತತ್ವಪದಗಳಲ್ಲಿ ಶಾಕ್ತಪರಂಪರೆಯ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಉದಾ: ಹೌದೆ ನಮ್ಮವ್ವ ನೀನು ಹೌದೆ, ದೇವಿ ನಿನ್ನ ಸೇವಕನೆಂದು, ನಾ ಕಂಡೇನೀಗ ಶಾಕಾಂಬರಿ ಮುಂತಾದ ತತ್ವಪದಗಳಲ್ಲಿ ಸಶಕ್ತವಾಗಿ ಹಿಡಿದಿದ್ದಾನೆ.

ತತ್ವಪದಗಳು ನಾಥ, ಶಾಕ್ತದಷ್ಟೇ ಸೂಫಿ ಪರಂಪರೆಯನ್ನು ಆಗು ಮಾಡಿಕೊಳ್ಳುತ್ತವೆ. ಮಡಿವಾಳಪ್ಪನು ತನ್ನ ಶಿಷ್ಯನಾದ ಚನ್ನೂರು ಜಲಾಲ್ ಸಾಬನ ಕುರಿತು.

"ಫಕೀರನಾಗಬೇಕೆಂದರೆ ಈ ಮನ
ವಿಕಾರವನೆಲ್ಲಾ ತೊಳಿದಿರಬೇಕೋ
ನಕಾರ ಮಕಾರ ಶಿಕಾರ ವಕಾರ
ಯಕಾರ ಓಂಕಾರ ತಿಳಿದಿರಬೇಕೋ"[8]

ಹೀಗೆ ಮುಂದುವರೆಯುವ ತತ್ವಪದವು 'ನಾಮ ಶೀಮೆ ಬಿಟ್ಟೇನೆಂಬ ದೃಢ ಪ್ರೇಮದ ಲುಂಗಿ ತೊಟ್ಟಿರಬೇಕೋ' ಎನ್ನುವ ಲಯದಲ್ಲಿಯೇ ಎಲ್ಲಾ ಎಲ್ಲೆಗಳನ್ನು ಮೀರಿ ಬಹುತ್ವವನ್ನು ಒಳಗೊಳ್ಳುವ ಸ್ಥಿತಿಯಾಗಿ ಕಂಡುಬರುತ್ತದೆ. ಈತನಂತೆ ಜಂಬಗಿ ಶರಣರ ಒಂದು ತತ್ವಪದ ಹೀಗಿದೆ.

"ಜಲ್ಲೆ ಬರುತಾವಂತ ಜಲ್ದಿಲೆ ನಾ ಬಂದೆ
ಜಲ್ಲ್ಯಾಕ ಜಲ್ದಿ ಬರಲಿಲ್ಲ॥ ಬಂದೇನವಾಜ
ನಿಂತಲ್ಲೆ ಕೈಯ್ಯ ಮುಗಿದೇನೋ॥

ಜಂಬಗಿ ಶರಣ ಕಲಬುರಗಿ ಶರಣಬಸಪ್ಪನವರು ಮತ್ತು ಅವರ ಸ್ನೇಹಿತನಾದ ಖಾಜಾ ಬಂದೇನವಾಜರನ್ನು ತನ್ನ ತತ್ವಪದಗಳಲ್ಲಿ ಸಾಕಷ್ಟು ಗುಣಗಾನ ಮಾಡಿದ್ದಾನೆ. ಲಿಂಗಾಯತನಾಗಿದ್ದ ಶರಣಬಸವ, ಸೂಫಿಯಾಗಿದ್ದ ಬಂದೇನವಾಜ, ದಲಿತನಾಗಿದ್ದ ಜಂಬಗಿ ಶರಣ ಈ ಮೂರು ಜನ ಕೂಡುವಿಕೆಯಲ್ಲಿಯೇ ಬಹುತ್ವದ ಭಾರತ ಎದ್ದುಕಾಣುತ್ತದೆ. ಬಸವಕಲ್ಯಾಣದ ಫೈಮುದಾ ಫಾತಿಮಾ ತನ್ನ ತತ್ವಪದದಲ್ಲಿ,

"ನಮಾಜು ಮಾಡೋ ನಿಮ್ಮ ಒಳಗ
ನಾದ ಬರುತಾವ ಅದರಿಂದೊಳಗ
ನಾದದೊಳಗ ಕಾಣೋ ನೀ ಅಲ್ಲಾಗ
ಕಂಡು ನೀ ಆಗು ಎಲ್ಲಾ"[9]

ಎನ್ನುವ ತತ್ವಪದಕ್ಕೂ ಮತ್ತು ಇರಾಕ್ ದೇಶದ ರಾಬಿಯಾ ಅಲ್ ಬಸ್ರಾಳ ಪದ್ಯಕ್ಕೂ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಅವಳದೊಂದು ಪದ್ಯ,

"ನನ್ನಾತ್ಮದಲ್ಲೊಂದು ಮಂದಿರವಿದೆ ಪವಿತ್ರ ಸಮಾಧಿಯಿದೆ
ಮಸೀದಿಯೊಂದಿದೆ ಮತ್ತು ಚರ್ಚೊಂದು ಎಲ್ಲಾ
ತೊರೆದಿದೆ ಎಲ್ಲಾ ಮುರಿದಿದೆ ಎಲ್ಲಾ
ಇಲ್ಲವಾಗಿದೆ ಅಲ್ಲಿ"[10]

ಎನ್ನುವ ಇಲ್ಲಿಯ ಪದ್ಯ ಮತ್ತು ಫೈಮುದಾ ಫಾತಿಮಾ ತತ್ವಪದಕ್ಕೂ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ಏಕೆಂದರೆ ಫಾತಿಮಾಳ ಮಾತಿನಲ್ಲಿ 'ಎಲ್ಲಾ ಆಗುವುದು' ಮತ್ತು ರಬಿಯಾ ಅಲ್ ಬಸ್ರಾಳ ಮಾತಿನಲ್ಲಿ 'ಎಲ್ಲಾ ಇಲ್ಲವಾಗುವುದು' ಇವೆರಡೂ ಬಹುತ್ವವನ್ನೇ ಹೇಳುತ್ತವೆ.

ಕೊನೆಯದಾಗಿ ಬಹುತ್ವವೆಂದರೆ? ತೀರಾ ಸರಳವಾಗಿ ಹೇಳುವುದಾದರೆ, ಸಾಮನ್ಯವಾಗಿ ಅತೀ ಸಣ್ಣ ರೈತರಿಗೆ ಜಮೀನು ಸ್ವಲ್ಪವೇ ಇರುತ್ತದೆ. ಎಲ್ಲಾ ಬೆಳೆಗಳನ್ನು ತಮಗಿರುವಷ್ಟು ಜಮೀನಿನಲ್ಲಿಯೇ ಬೆಳೆಯುತ್ತಾರೆ. ಉದಾಹರಣೆಗೆ: ವರ್ಷದ ಬೆಳೆಯಾದ ತೊಗರಿಯ ನಡುಸಾಲುಗಳಲ್ಲಿ ಆರು ತಿಂಗಳ ಬೆಳೆಗಳಾದ ಸಜ್ಜೆ, ಸೂರ್ಯಪಾನ, ಶೇಂಗಾ ಇತ್ಯಾದಿ ಬೆಳೆಗಳನ್ನು ಹಾಕುತ್ತಾರೆ. ಉಳಿದಂತೆ ತಲೆ ಸಾಲಿಗೆ ಅಗಸಿ, ಕಾರೆಳ್ಳು, ಎಳ್ಳು ಇತ್ಯಾದಿ ಬಾಯಿ ಚಟದ ಬೆಳೆಗಳನ್ನು ಒಳಗೊಂಡು ಹುತ್ತಿ ಬಿತ್ತಿದ ಎತ್ತುಗಳಿಗೆಂದು ಭಾಟಿ ಹಾಕುತ್ತಾರೆ. ಏಕಕಾಲಕ್ಕೆ ಬಹು ಬೆಳೆಗಳಿಂದ ಮಣ್ಣು ಹದಕ್ಕೆ ಬರುತ್ತದೆನ್ನುವ ವೈಜ್ಞಾನಿಕ ಸ್ಕಾಲರ್ಶಿಪ್ ನಮಗಿಲ್ಲವಾದರೂ ಈ ತರಹದ ಬಹು ಬೆಳೆಯ ಸಂಸ್ಕೃತಿ ಬದುಕಿಗೆ ಮುಖ್ಯವಾಗಿದೆಯೆಂದು ಹೇಳಬೇಕಾಗುತ್ತದೆ. ಏಕ ಬೆಳೆಯ ಗೋಜಿಗೆ ಅತೀ ಸಣ್ಣ ರೈತರು ಹೋಗುವುದಿಲ್ಲ. ಇದು ಸಾಹಿತ್ಯಕ್ಕೂ ಅನ್ವಹಿಸಬಹುದು. ಇಂಥ ಅರಿವಿರುವ ತತ್ವಪದಕಾರರು ಶರಣರಿಗಿಂತ ವಿಭಿನ್ನವಾಗಿ ಚಿಂತಿಸುತ್ತಾರೆ. ಎಲ್ಲಾ ಅನ್ಯ ದೈವಗಳನ್ನೂ ತಮ್ಮ ಕಾವ್ಯದಲ್ಲಿ ರೂಪಕ ಪ್ರತಿಮೆಗಳಾಗಿ ತರುತ್ತಾರೆ. ಈಗಾಗಲೇ ಹೇಳಿದಂತೆ ನಾಥ, ಶಾಕ್ತ, ಸೂಫಿ, ಶರಣ ಮುಂತಾದ ಪಾಂಥಿಕತೆಗಳನ್ನು ಮತ್ತು ಜಾನಪದ ಮೌಖಿಕ ಪರಂಪರೆಗಳಲ್ಲಿರುವ ಆಚರಣೆಗಳನ್ನು ಒಳಗೊಳ್ಳುವುದರಿಂದ ತತ್ವಪದಗಳಿಗೆ ಅತಿ ಹೆಚ್ಚು ಒತ್ತು ಕೊಡಬೇಕಾದ್ದು ಅನಿವಾರ್ಯವಾಗುತ್ತದೆ.

***

ಆಕರ ಗ್ರಂಥಗಳು :

1. ತತ್ವಪದ ಪ್ರವೇಶಿಕೆ., ಸಂಪುಟ.1 ಸಂ.ರಹಮತ್ ತರೀಕೆರೆ ಮತ್ತು ಅರುಣ್ ಜೋಳದಕೂಡ್ಲಿಗಿ. ಪು.ಸಂ.183
2. ತತ್ವಪದ ಸಂಪುಟ.3 ಮೀನಾಕ್ಷಿ ಬಾಳಿ., ಪು.ಸಂ.312
3. ಕರ್ನಾಟಕ ನಾಥಪಂಥ. ಲೇ.ರಹಮತ್ ತರೀಕೆರೆ., ಪು.ಸಂ.209
4. ತತ್ವಪದ ಸಂಪುಟ.17., ಸಂ.ಪ್ರಭುಖಾನಾಪುರೆ., ಪು.ಸಂ.95
5. ತತ್ವಪದ ಸಂಪುಟ.07., ಸಂ.ಕೃಷ್ಣಮೂರ್ತಿ ಹನೂರು., ಪು.ಸಂ.18
6. ಅದೇ, ಪು.ಸಂ.19–20
7. ತತ್ವಪದ ಸಂಪುಟ.02., ಸಂ. ಶಿವಾನಂದ ಗುಬ್ಬಣ್ಣವರ., ಪು.ಸಂ. 17–18
8. ತತ್ವಪದ ಸಂಪುಟ.03. ಸಂ. ಮೀನಾಕ್ಷಿ ಬಾಳಿ. ಪು.ಸಂ.205
9. ತತ್ವಪದ ಸಂಪುಟ.27. ಸಂ.ಮೀನಾಕ್ಷಿ ಬಾಳಿ. ಪು.ಸಂ.158
10. ನಿರಹಂ. ಸಂ. ಪೀರ್ ಬಾಷಾ ಮತ್ತು ಡಾ.ಅನುಪಮಾ. ಪು.ಸಂ.41

ಅಧ್ಯಯನ ಕೃತಿಗಳು :

1. ತತ್ವಪದ ಪ್ರವೇಶಿಕೆ. ಸಂಪುಟ–01. ಸಂ. ರಹಮತ್ ತರೀಕೆರೆ ಮತ್ತು ಅರುಣ್ ಜೋಳದಕೂಡ್ಲಿಗಿ. ಪ್ರ. ಸಂತ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು. ಹಾಗೂ ಪುಸ್ತಕ ಪ್ರಾಧಿಕಾರ–2017
2. ತತ್ವಪದ ಸಂಪುಟ–03. ಸಂ. ಮೀನಾಕ್ಷಿ ಬಾಳಿ.
3. ಕರ್ನಾಟಕ ನಾಥಪಂಥ. ಲೇ. ರಹಮತ್ ತರೀಕೆರೆ. ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2017
4. ತತ್ವಪದ ಸಂಪುಟ–04. ಸಂ. ಪ್ರಭು ಖಾನಾಪುರೆ.
5. ತತ್ವಪದ ಸಂಪುಟ–07. ಸಂ. ಕೃಷ್ಣಮೂರ್ತಿ ಹನೂರು
6. ಅದೇ.
7. ತತ್ವಪದ ಸಂಪುಟ–02. ಸಂ. ಶಿವಾನಂದ ಗುಬ್ಬಣ್ಣನವರ
8. ತತ್ವಪದ ಸಂಪುಟ–27. ಮಹೀಳಾ ತತ್ವಪದಕಾರರು. ಸಂ. ಮೀನಾಕ್ಷಿ ಬಾಳಿ.
9. ನಿರಹಂ. ಸಂ. ಪೀರ್ ಬಾಷಾ ಮತ್ತು ಡಾ. ಅನುಪಮಾ. ಪ್ರ. ಲಡಾಯಿ ಪ್ರಕಾಶನ–2021

10. ಲೋಕಾಯತ ಶಾಕ್ತ–ಶೈವ: ಸಂಶೋಧನಾ ಸಮೀಕ್ಷೆ–2. ಬಸವರಾಜ ತೂಲಹಳ್ಳಿ. ಪ್ರ. ನಿವೇದಿತ ಪ್ರಕಾಶನ–2013

11. ಗುಂಡಿಗೆಯ ಬಿಸಿ ರಕ್ತ. ಲೇ. ಕೇಶವ ಮಳಗಿ. ಪ್ರ. ದೀಪಂಕರ ಪ್ರಕಾಶನ–2021

ಡಾ. ಸಂಗನಗೌಡ ಹಿರೇಗೌಡ

ಮು: ಅಂಬರಖೇಡ. ತಾಲ್ಲೂಕ: ಯಡ್ರಾಮಿ

ಜಿಲ್ಲೆ: ಕಲಬುರಗಿ, ಪೋ: ಬಳಬಟ್ಟಿ – 585309

ChatGPT: A creative tool or a threat to creativity?

¤ Dr. Maithri Bhat

"If computers are bicycles for the mind, ChatGPT is a motor-bike letting us go creatively further, faster with less effort."
- Will Lion, Joint Officer at BBH London

In recent times, there has been a noticeable convergence between the seemingly unrelated fields of AI and literature. This convergence has created new opportunities for analysis and creative writing as well as for how we view and engage with literature. This paper examines the complex connections between artificial intelligence(AI) and literature, emphasizing how these connections affect accessibility, analysis, and creativity.

AI has also had a significant impact on the field of literary creativity. AI-driven tools have been created to help writers create content and inspire creativity. Examples of these tools are chat bots and text generators. For example, poetry, stories, and even entire books have been generated by OpenAI's GPT-3. Although these texts produced by AI might not have the same human touch, they have demonstrated the ability to help writers who are experiencing writer's block or serve as inspiration.

AI has also entered the field of literary analysis, assisting researchers and readers in discovering fresh perspectives on previously published works. Large text can be analyzed by Natural Language Processing (NLP) algorithms, which can find themes and patterns that human readers might miss. AI can offer quantitative information on themes, language usage, and even authorial influences by studying an author's complete body of work or a particular literary era, for example. This can enhance our knowledge of the development and history of literature.

AI increased the accessibility to literature: AI-powered text-to-speech technology has made it possible for people who are blind or visually impaired to access literature in new ways. By reading books and articles aloud, these systems effectively remove obstacles to reading written material. Furthermore, real-time text translation made possible by AI-driven translation tools has increased accessibility to world literature by removing language barriers from readers' interactions with works from many cultures.

But it becomes more difficult to distinguish between human and machine creativity, which raises questions about authenticity and originality. In the context of AI and literature, ethical issues like copyright concerns and the possible misuse of content generated by AI are crucial subjects of discussion. The fusion of AI and literature is reshaping the creative, analytical and accessible dimensions of the literary world. AI-powered tools have the potential to enhance human creativity, offer new perspectives on literary works, and make literature more inclusive. However, these advancements come with a set of ethical

challenges that require thoughtful consideration. As AI continues to advance, its role in literature will undoubtedly evolve, and the literary community must navigate this transformation with a balanced approach to fully harness its potential while preserving the essence of human creativity in literature.

ChatGPT as a powerful language model that has the potential to completely change the way we approach creative writing. ChatGPT's sophisticated algorithms and profound linguistic comprehension enable it to produce remarkably compelling and coherent writings that are interchangeable with human-written works.

The "Conversational Generative Pre-training Transformer," or ChatGPT, is a large language model that creates text that appears human by utilizing deep learning algorithms. It can comprehend and produce a broad variety of language because it has been trained on an enormous text dataset. ChatGPT is capable of producing extremely compelling and coherent writing that is indistinguishable from human writing due to its advanced understanding of grammar, vocabulary, and style.

It can produce text in a variety of formats and styles, ranging from a single sentence to an entire novel. Additionally, it can be adjusted for particular jobs like content creation, text summarization, and question answering. It can also be used to generate other languages besides English.

Writers can find inspiration for their next poem or story by using ChatGPT's seed text or topic generator, which produces a plethora of possible ideas. Depending on the desired level of detail, ChatGPT can also be used to generate character descriptions, plot summaries, and even entire scenes or chapters. For

writers who are stuck or experiencing writer's block, this can be especially helpful. Screenplays, poetry, and song lyrics have all been produced using ChatGPT. As evidence of ChatGPT's potential, some users have even used it to create entire novels.

It's important to remember that ChatGPT enhances human creativity rather than replaces it. Though the technology is still in its infancy, the possibilities are virtually limitless. Writers are already using ChatGPT to help them with different stages of the creative process, from coming up with ideas to finishing a piece of writing. Because the technology can be applied to a variety of formats and genres, it will also highlight its adaptability and versatility.

The ability to create customized writing exercises or prompts for specific writers is one possible future use for ChatGPT in creative writing. ChatGPT can provide personalized writing exercises or prompts based on an author's past work and writing style, thereby enhancing their distinctive voice and skills. The ability of ChatGPT to help writers with editing and revising their work is another possible future use. ChatGPT can analyze a piece of writing to pinpoint problem areas and recommend specific adjustments that will improve the work's overall coherence and impact.
In the future, ChatGPT may also be used to produce multilingual literature. This would be especially helpful for writers who wish to write in more than one language or who want to reach a worldwide readership.

Additionally, a writer can improve their grammar, vocabulary, and writing ability by using ChatGPT. ChatGPT can assist writers in adding complexity and depth to their work by offering

recommendations for fresh and intriguing words and phrases. ChatGPT can assist writers in experimenting with various writing formats and styles. ChatGPT can assist writers in discovering their individual voice and exploring new creative avenues by producing text in a variety of formats and styles.

The issue of authorship is one ethical factor. Who should be given credit as the author of a work of writing if it was created or substantially edited by an AI? One could contend that the AI is merely a tool and that the real author is the human writer; on the other hand, one could contend that the AI contributed significantly to the work and ought to be acknowledged as a co-author.

The possibility that AI will eventually supplant human writers raises additional ethical concerns. AI could cause job losses and economic disruption in the writing industry if it can produce high-quality writing more quickly and cheaply than human writers. Furthermore, the number of distinctive voices and viewpoints in literature may decline if AI-generated writing proliferates.

Another worry is that writing produced by AI might not have the same emotional complexity and nuance as writing produced by humans. Some contend that the homogenization of literature and the loss of the distinctive viewpoints and emotions that give human writing its potency could result from the use of AI in creative writing.

ChatGPT has the potential to change the publishing industry by expediting and streamlining the editing and proofreading procedures. Publishers and editors could find problems with a

manuscript much faster and make the necessary adjustments than they could if they used ChatGPT to analyze it. This might result in quicker turnaround times and the capacity to release more books more quickly. Prices may drop as a result, making it harder for human writers to support themselves.

Making the writing process more efficient is one way that the use of AI in creative writing could impact the role of human authors. Human writers could focus more of their time on the creative aspects of writing and less time on administrative duties like editing, proofreading, and research with ChatGPT. This might give human writers more time to devote to coming up with new ideas and creating characters, settings, and stories.

However, there's a chance that the demand for human writers will decline if AI is used in creative writing. AI could cause job losses and economic disruption in the writing industry if it can produce high-quality writing more quickly and cheaply than human writers.

In spite of this, the process of creative writing will always require human authors. Artificial intelligence (AI) can help with editing, proofreading, and research, but it cannot take the place of human authors' distinctive voices, perspectives, and emotional depth in their writing. Artificial intelligence (AI) writing cannot compare to the expressive power of human writers, who are able to convey their own thoughts and feelings while crafting tales that authentically capture the human condition.

Furthermore, by granting access to individuals who might find difficult to write the application of AI in creative writing also has the potential to increase the scope of writing and enhance authors' craft by offering a variety of options.

Drawbacks of ChatGPT are –

♦ It occasionally produces text that is irrelevant or nonsensical.

♦ Its text-generating capabilities are limited to the data it has been trained on. This indicates that ChatGPT lacks the ability to generate truly original or unique ideas.

♦While ChatGPT can produce text that is grammatically and coherently correct, it might not have the same emotional resonance or creative flair as writing created by a human author.

To sum up, ChatGPT is an effective language model that could help authors to create new works of literature. When applying it in creative writing, one must take into account its limitations as well as ethical issues. With the ongoing advancement of technology, ChatGPT and other AI-assisted writing tools are probably going to get even more advanced and user-friendly.

We may anticipate seeing more writers and publishers test out ChatGPT in their works in the future. This might inspire the development of brand-new, immersive, interactive, and open-ended literary genres. Furthermore, ChatGPT can be used to create multiple versions of the same story, which could result in the development of a brand-new genre of literature that is more flexible and leaves room for the reader's interpretation.

Usage of AI assisted writing tools in publishing sector for editing, proof reading and content generation results in more productive and economical methods of producing literature. It's crucial to remember that artificial intelligence shouldn't completely replace human writers when it comes to creative writing. Since human authors infuse their writing with their distinct viewpoints, feelings, inventiveness, and imagination, their role in the creation of literature will never diminish.

Reference :

1. Margaret A. Boden. "Creativity and artificial intelligence". Artificial Intelligence., Volume 103, Issues 1-2, 1998., Pages 347-356.
2. Smith, J. R., Joshi, D., Huet, B., Hsu, W., & Cota, J. (2017). Harnessing A.I. for augmenting creativity: Application to movie trailer creation. Proceedings of the 25th ACM International Conference on Multimedia.

Dr. Maithri Bhat
W/o Ravishankara K
5-392, Jayadurga
Nethrekere, Vittal Post
Bantwal Taluk, DK - 574243
bhatmaithri@gmail.com

